ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಎಂ.ಫಿಲ್. ಪದವಿಯ ಸಂಪ್ರಬಂಧ

ಹಸ್ತಪ್ರತಿಶಾಸ್ತ್ರಕ್ಕೆ ಬಿ.ಎಂ.ಶ್ರೀ ಪ್ರತಿಷ್ಠಾನದ ಕೊಡುಗೆ : ಒಂದು ಅಧ್ಯಯನ

ಸಂಶೋಧನ ವಿದ್ಯಾರ್ಥಿ

ಬಿ.ಕೆ.ದೇವರಾಜ್

ಮಾರ್ಗದರ್ಶಕರು

ಡಾ|| ನಾ.ಗೀತಾಚಾರ್ಯ

ಎಂ.ವಿ.ಸಿ. ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ
ಬೆಂಗಳೂರು

430

ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಎಂ.ಫಿಲ್. ಪದವಿಯ ಸಂಪ್ರಬಂಧ

ಹಸ್ತಪ್ರತಿಶಾಸ್ತ್ರಕ್ಕೆ ಬಿ.ಎಂ.ಶ್ರೀ ಪ್ರತಿಷ್ಠಾನದ ಕೊಡುಗೆ : ಒಂದು ಅಧ್ಯಯನ

ಸಂಶೋಧನ ವಿದ್ಯಾರ್ಥಿ

ಬಿ.ಕೆ.ದೇವರಾಜ್

ಮಾರ್ಗದರ್ಶಕರು

ಡಾ॥ ನಾ.ಗೀತಾಚಾರ್ಯ

ಎಂ.ವಿ.ಸಿ. ಸ್ನಾತಕೋತ್ತರ ಸಂಶೋಧನ ಕೇಂದ್ರ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ

ಬೆಂಗಳೂರು.

ಅಭ್ಯರ್ಥಿಯ ಪ್ರಮಾಣ ಪತ್ರ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರಿನ ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ 2006–2007ನೇ ಸಾಲಿನ ಎಂ.ಫಿಲ್ ಪದವಿಗಾಗಿ **"ಹಸ್ತಪ್ರತಿಶಾಸ್ತ್ರಕ್ಕೆ ಬಿ.ಎಂ.ಶ್ರೀ ಪ್ರತಿಷ್ಠಾನದ ಕೊಡುಗೆ– ಒಂದು ಅಧ್ಯಯನ"** ಎಂಬ ಸಂಪ್ರಬಂಧವನ್ನು ಡಾ॥ ನಾ. ಗೀತಾಚಾರ್ಯ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಸಲ್ಲಿಸುತ್ತಿದ್ದೇನೆ.

ಈ ಸಂಪ್ರಬಂಧ ನನ್ನ ಸ್ವಂತ ಬರವಣಿಗೆ ಆಗಿದ್ದು ಇದರ ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ : 26/07/08

ಸ್ಥಳ : ಬೆಂಗಳೂರು

ಸಹಿ

(ಬಿ.ಕೆ. ದೇವರಾಜ)

ಮಾರ್ಗದರ್ಶಕರ ಪ್ರಮಾಣಪತ್ರ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರಿನ ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ 2006–2007ನೇ ಸಾಲಿನ ಎಂ.ಫಿಲ್ ಪದವಿಗಾಗಿ **"ಹಸ್ತಪ್ರತಿಶಾಸ್ತ್ರಕ್ಕೆ ಬಿ.ಎಂ.ಶ್ರೀ ಪ್ರತಿಷ್ಠಾನದ ಕೊಡುಗೆ– ಒಂದು ಅಧ್ಯಯನ"** ಎಂಬ ಸಂಪ್ರಬಂಧವನ್ನು ಬಿ.ಕೆ. ದೇವರಾಜ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ.

ಈ ಸಂಪ್ರಬಂಧ ವಿದ್ಯಾರ್ಥಿಯ ಸ್ವಂತ ಬರವಣಿಗೆಯಾಗಿದ್ದು ಇದರ ಯಾವುದೇ ಭಾಗವನ್ನು ಬೇರೆಲ್ಲೂ ಪ್ರಕಟಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ : ೨೬/೦೭/೦೮ ಸಹಿ:

ಸ್ಥಳ : ಬೆಂಗಳೂರು

(ಡಾ॥ ನಾ. ಗೀತಾಚಾರ್ಯ)

ಪರಿವಿಡಿ

ಅಧ್ಯಾಯ – 1
ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಪೀಠಿಕೆ

ನಮ್ಮ ಪ್ರಾಚೀನ ಸಂಸ್ಕೃತಿಯನ್ನು ಮತ್ತು ಪರಂಪರೆಯನ್ನು ಅರಿತುಕೊಳ್ಳಬೇಕಾದ ಸಾಧನಗಳಲ್ಲಿ 'ಇತಿಹಾಸ' ಹಾಗೂ 'ಸಾಹಿತ್ಯ' ಮುಖ್ಯವಾದವುಗಳಾಗಿವೆ. ಇತಿಹಾಸ ಮತ್ತು ಸಾಹಿತ್ಯವನ್ನು ನಿಷ್ಕರ್ಷಿಸಿ ಹೇಳುವುದಾದರೆ ಇತಿಹಾಸ ಇದ್ದುದನ್ನು ಹೇಳಿದರೆ ಸಾಹಿತ್ಯ ಇರುವುದನ್ನು ಇರಬಹುದಾದುದನ್ನು ಭಾವನಾತ್ಮಕವಾಗಿ ತಿಳಿಸುತ್ತದೆ. ಈ ಕಾರಣದಿಂದ ಪುರಾತನ ಕಾಲದ ಹಸ್ತಪ್ರತಿಗಳ ಅಧ್ಯಯನಕ್ಕೆ ಸಾಹಿತ್ಯದ ಪುರಾವೆ ಪ್ರಸ್ತುತ ಎಂದು ತಿಳಿಯಬಹುದು. ಸುಮಾರು 1500 ವರ್ಷಗಳಿಗಿಂತಲೂ ಹಿಂದಿನಿಂದ ಕನ್ನಡ ಸಾಹಿತ್ಯ ಅಸ್ತಿತ್ವದಲ್ಲಿದ್ದುದು ಸರ್ವವಿಧಿತ. ಸಾಹಿತ್ಯ "ಸಮಾಜದ ಕೈಗನ್ನಡಿ", ಪಾಂಡಿತ್ಯ, ಪ್ರತಿಭೆ, ಲೋಕಾನುಭವಗಳನ್ನು ಪಡೆದ ನಮ್ಮ ಕವಿಗಳು ಕಾಲಾತೀತವಾಗಿ ನಿಲ್ಲುವಂತಹ ಶ್ರೇಷ್ಠಮಟ್ಟದ ಮಹಾಗ್ರಂಥಗಳನ್ನು ರಚಿಸಿದ್ದಾರೆ. ಉದಾಹರಣೆಗೆ ಶ್ರೀವಿಜಯನ 'ಕವಿರಾಜಮಾರ್ಗ' ಸಾರ್ವಕಾಲಿಕವಾಗಿ ನಿಲ್ಲುವಂತಹ ಲಕ್ಷಣಗ್ರಂಥ. ಪ್ರಾಚೀನ ಋಷಿಮುನಿಗಳು ಮತ್ತು ಕವಿಗಳು ಕಾಲದ ಜೊತೆಗೆ ಕಾಳಗ ಮಾಡುತ್ತಲೇ ಸಾರ್ವಕಾಲಿಕವಾದಂತಹ ಸತ್ಯಾಂಶಗಳನ್ನು ತಿಳಿಸಿದ್ದಾರೆ. ಅಲ್ಲದೆ ನಮ್ಮ ಸಂಸ್ಕೃತಿಯಲ್ಲಿ ಅಡಗಿರುವ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ವಿಚಾರಗಳನ್ನು ತಿಳಿಸುವ ಮೂಲಕ ಹಿಂದಿನ ಚರಿತ್ರೆ ಮತ್ತು ಪರಂಪರೆ ಅರಿಯಲು ಹಸ್ತಪ್ರತಿಶಾಸ್ತ್ರದ ಅಧ್ಯಯನ ಅರ್ಥಪೂರ್ಣವಾಗಿದೆ.

ಹಸ್ತಪ್ರತಿಗಳು ತಲೆತಲಾಂತರಗಳಿಂದ ಸಾಗಿಬಂದ ಬೌದ್ಧಿಕ ಮತ್ತು ಸಾಂಸ್ಕೃತಿಕ ಜ್ಞಾನಸಂಪತ್ತು. ಒಂದು ಕಾಲದಲ್ಲಿ ಶ್ರುತಿಪಾಳಿಯಾಗಿದ್ದು, ನಂತರ ಲಿಪಿಮಾಧ್ಯಮದ ಮೂಲಕ ಕೃತಿಪಾಳಿಗೆ ಇಳಿದು ಬಂದಿತು. ಹಸ್ತಪ್ರತಿ ಎಂದರೆ ತಾಳೆಗರಿ, ಕೋರಿಕಾಗದ, ಕಡತ ಮತ್ತು ಆಧುನಿಕ ಕಾಗದದ ಪ್ರತಿ ನಾಲ್ಕನ್ನು ಒಳಗೊಳ್ಳುತ್ತದೆ. ಇವುಗಳನ್ನು ಸಂಗ್ರಹಿಸಲು ಕ್ಷೇತ್ರಕಾರ್ಯ ಮುಖ್ಯ ಮತ್ತು ಮೊದಲು ಹಸ್ತಪ್ರತಿಗಳು ಇದ್ದರಲ್ಲವೆ ಮುಂದಿನ ಕೆಲಸ? ಹಸ್ತಪ್ರತಿ ಎಂದರೇನು? ಎಂ.ವಿ.ಸೀತಾರಾಮಯ್ಯನವರು ಹೇಳುವಂತೆ "ನಮ್ಮ ಪೂರ್ವಜರು ನಮ್ಮ ಉಪಯೋಗಕ್ಕಾಗಿ ಬಿಟ್ಟುಹೋಗಿರುವ ಕೈಬರಹಗಳಿಗೆ

ಹಸ್ತಪ್ರತಿಗಳು ಎಂದು ಮತ್ತೊಂದು ಹೆಸರು. ಕನ್ನಡದಲ್ಲಿ ಬರೆದಿಟ್ಟಿರುವ ಕಾವ್ಯ, ಶಾಸ್ತ್ರ ಪುರಾಣಾದಿಗಳಿಗೆ ಕನ್ನಡ ಹಸ್ತಪ್ರತಿ ಎಂದು ಕರೆದಿದ್ದಾರೆ."[1]

ಮಾನವನ ಭೌದ್ಧಿಕ ಬೆಳವಣಿಗೆಯನ್ನು ಮೂರು ಮುಖ್ಯ ಹಂತಗಳನ್ನಾಗಿ ವಿಭಾಗಿಸಲು ಸಾಧ್ಯವಿದೆ. ಹೇಗೆಂದರೆ ಮಾತನಾಡುವಿಕೆ, ರೇಖಾಚಿತ್ರಗಳನ್ನು ಬರೆಯುವಿಕೆ, ಹಾಗೂ ಬಣ್ಣದ ಚಿತ್ರಗಳನ್ನು ಬಿಡಿಸುವಿಕೆ. ಹೀಗೆ ಮನುಷ್ಯ ಅನಾಗರೀಕತೆಯಿಂದ ನಾಗರೀಕತೆಯ ಕಡೆ ಹೊರಳಿದಂತೆ ಅವನ ಭೌದ್ಧಿಕಮಟ್ಟ ಕೂಡ ಬದಲಾಗುತ್ತ ಸಾಗುತ್ತಿತ್ತು. ಮನುಷ್ಯ ಮೊದಲು ಮೌಖಿಕವಾಗಿ ಅಭಿವ್ಯಕ್ತಿಸಿ ನಂತರ ಮಾತನಾಡಲು ಪ್ರಾರಂಭಿಸಿದ. ಹಾಗಾದರೆ ಮಾತನಾಡಲು ಕಲಿತ ನಂತರ ಚಿತ್ರಗಳನ್ನು ರಚಿಸಲು ಪ್ರಾರಂಭಿಸಿದನೋ ಅಥವಾ ಮಾತಾನಾಡಲು ಬಾರದಿದ್ದಾಗ ತನ್ನ ಅಭಿವ್ಯಕ್ತಿಯನ್ನು ಮತ್ತೊಬ್ಬರಿಗೆ ವಿಶದಪಡಿಸಲು ರೇಖಾಚಿತ್ರಗಳನ್ನು ಬರೆದು ತೋರಿಸುವುದರ ಮೂಲಕ ಆರಂಭವಾಯಿತೋ ಎಂಬುದು ಇಲ್ಲಿ ಮುಖ್ಯ ಅಲ್ಲ. ಮಾನವನು ಕಲಿತ ಮಾತನ್ನು, ಹೊಳೆದ ಭಾವವನ್ನು ತನಗಾದ ಅನುಭವವನ್ನು ಇನ್ನೊಬ್ಬರಿಗೆ ತಿಳಿಸುವ ಚಿಂತನೆಯಿಂದ ಅವುಗಳನ್ನು ಬರೆದಿಡಲು ಪ್ರಯತ್ನಿಸಿದನು. ಕಾಲದಿಂದ ಕಾಲಕ್ಕೆ ಒಂದೆಡೆಯಿಂದ ಇನ್ನೊಂದೆಡೆಗೆ ತನ್ನ ಅಭಿಪ್ರಾಯಗಳನ್ನು ಕಾಯ್ದಿಡುವಲ್ಲಿ ಅಥವಾ ವಿನಿಮಯ ಮಾಡಿಕೊಳ್ಳುವಲ್ಲಿ ಒಂದು ವಿಷಯವನ್ನು ಹಲವು ಜನ ಓದಿ ತಿಳಿಯುವಲ್ಲಿ ಬರವಣಿಗೆಯು ಮುಖ್ಯವಾದ ಅಸ್ತ್ರವಾಗಿ ಮನುಷ್ಯನಿಗೆ ಉಪಯೋಗವಾಯಿತು. ರಾಜಮಹಾರಾಜರುಗಳು ತಾವು ಮಾಡಿದ ಕಾಯಿದೆ ಕಟ್ಟಳೆಗಳನ್ನು, ದಾನ-ಧರ್ಮಗಳನ್ನು ಶಾಶ್ವತವಾಗಿ ಮುಂದಿನ ಪೀಳಿಗೆಗಳಿಗೆ ದಾಖಲಿಸುವಲ್ಲಿ ಬರವಣಿಗೆ ಮುಖ್ಯವಾಯಿತು. ಈ ಎಲ್ಲ ಪ್ರಯತ್ನಗಳ ಫಲವಾಗಿ ಮೇಲೆ ಹೇಳಿದಹಾಗೆ ವಿವಿಧರೂಪದ ವಸ್ತುಗಳಲ್ಲಿ ಬರವಣಿಗೆ ಹೊಸರೂಪ ಪಡೆದುಕೊಂಡಿತು. ಹೀಗೆ ಪ್ರಾರಂಭವಾದ ಬರವಣಿಗೆ ತನಗೆ ಅನುಕೂಲವಾದ ಆಕರವಸ್ತುಗಳನ್ನು ಬಳಸಿಕೊಂಡು ಹಸ್ತದಿಂದ ಅಂದರೆ ಕೈಯಿಂದ ಬರೆದ ಕೃತಿಗೆ ಅಥವಾ ಪ್ರತಿಗೆ 'ಹಸ್ತಪ್ರತಿ' ಎಂದು ಕರೆಯುತ್ತಾರೆ.

"ಇಂತಹ ಹಸ್ತಪ್ರತಿಗಳ ಹುಟ್ಟು, ಬೆಳವಣಿಗೆ, ಸ್ವರೂಪ, ಮಹತ್ವ, ಸಂಗ್ರಹ, ಸಂರಕ್ಷಣೆ, ಸಂಪಾದನೆ, ಪ್ರಕಟಣೆ ಮೊದಲಾದೆಲ್ಲ ಸಂಗತಿಗಳನ್ನು ಒಳಗೊಂಡಿರುವ ಶಾಸ್ತ್ರವೇ "ಹಸ್ತಪ್ರತಿಶಾಸ್ತ್ರ" ಎಂದು ಗುರುತಿಸುವ ಮೂಲಕ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಇದಕ್ಕೆ ಚಾಲನೆ ನೀಡಿ ಇದರ ಬೆಳವಣಿಗೆಯನ್ನೆ ಸಂಸ್ಥೆಯ ಒಂದು ಮುಖ್ಯ ಉದ್ದೇಶವನ್ನಾಗಿ ಇಟ್ಟುಕೊಂಡಿತು. ಇದಕ್ಕೆ ಪೂರಕವಾಗಿ 1981ರಲ್ಲಿ ನಡೆದ ವಚನ ಸಾಹಿತ್ಯ ಪಿತಾಮಹ ಡಾ.ಫ.ಗು.ಹಳಕಟ್ಟಿ ಅವರ ಶತಮನೋತ್ಸವ ಸಂದರ್ಭದಲ್ಲಿ ಹಸ್ತಪ್ರತಿ, ಹಸ್ತಪ್ರತಿಶಾಸ್ತ್ರದ ಬಗ್ಗೆ ವ್ಯಾಪಕವಾದ ದೀರ್ಘ ಚರ್ಚೆಯ ಮೂಲಕ ಈ

ಶಾಖೆಯ ಉದಯಕ್ಕೆ ನಾಂದಿ ಹಾಕಲಾಯಿತು. ಇಂಗ್ಲೀಷ್ ನಿಘಂಟಿಗೆ "ಹಸ್ತಪ್ರತಿಶಾಸ್ತ್ರ" (Manuscriptology) ಎಂಬ ನೂತನ ಪದ ಸೇರ್ಪಡೆಯಾಯಿತು. ಈ ಪದದ ಸೃಷ್ಟಿಯೂ ಕರ್ನಾಟಕದ ಅದರಲ್ಲೂ ಬಿ.ಎಂ.ಶ್ರೀ ಪ್ರತಿಷ್ಠಾನದ ಕೊಡುಗೆಯಾಯಿತು."[2] ಹೀಗೆ 'ಹಸ್ತಪ್ರತಿಶಾಸ್ತ್ರ' ತನ್ನ ಅಂತರಂಗದಲ್ಲಿದ್ದ ವಿದ್ವತ್‌ಶಕ್ತಿಯಿಂದ ಕನ್ನಡ ನಾಡಿನಾದ್ಯಂತ ವಿದ್ವಾಂಸರ ಮೌಲ್ಯಯುತ ಕಾರ್ಯಕ್ಕೆ ಪ್ರೇರಣೆಯಾಯಿತು.

ಹಸ್ತಪ್ರತಿಶಾಸ್ತ್ರ ಎಂಬ ಪಾರಿಭಾಷಿಕ ಪದ ಹೆಚ್ಚು ಬಳಕೆಯಲ್ಲಿರಲಿಲ್ಲ. 1974ರ ನಂತರ ಹೆಚ್ಚು ಬಳಕೆಗೆ ಬಂದಿದೆ. ಇದು ವ್ಯಾಪಕಾರ್ಥದ ಪದವಾಗಿದ್ದು, ಹಸ್ತಪ್ರತಿಗಳ ಸಂಗ್ರಹ ಕಾರ್ಯದಿಂದ ಮೊದಲಾಗಿ, ಸಂಗ್ರಹಿಸಿದ ಹಸ್ತಪ್ರತಿಗಳನ್ನು ಸಂರಕ್ಷಿಸಿ ಕಾಪಾಡುವುದು, ನಂತರ ಹಸ್ತಪ್ರತಿ ಸೂಚಿಗಳನ್ನು ತಯಾರಿಸುವುದು ಮೊದಲಾದೆಲ್ಲ ಅಂಶಗಳು ಹಸ್ತಪ್ರತಿಶಾಸ್ತ್ರದ ಅಂಗವೇ ಆಗಿವೆ. ಹಸ್ತಪ್ರತಿ ರೂಪದ ಕೃತಿಯನ್ನು ಪರಿಷ್ಕರಿಸಿ ಕವಿಪಾಠಕ್ಕೆ ಸಮೀಪತಮವಾದ ಪಾಠವನ್ನು ಸಕಲ ವಿದ್ವತ್ ಪರಿಕರಣೆಗಳೊಂದಿಗೆ ಪ್ರಕಟಿಸುವುದರಲ್ಲಿ ಈ ಶಾಸ್ತ್ರ ತನ್ನ ಕಡೆಯ ಹಂತವನ್ನು ಮುಟ್ಟುತ್ತದೆ. ಇದರ ಮುಂದಿನ ಹಂತ ಗ್ರಂಥಸಂಪಾದನಶಾಸ್ತ್ರ (Textual criticism) ಹಸ್ತಪ್ರತಿಶಾಸ್ತ್ರದಲ್ಲಿಯೇ ಸಮಾವೇಶಗೊಳ್ಳುತ್ತದೆ. "ಒಂದು ಪೂರ್ವಕಾಂಡ, ಇನ್ನೊಂದು ಉತ್ತರಕಾಂಡ"[3] ಎಂಬ ಪ್ರೊ॥ಎಂ.ವಿ.ಸೀತಾರಾಮಯ್ಯರವರ ಮಾತನ್ನು ಇಲ್ಲಿ ಗಮನಿಸಬಹುದು. ಮೇಲಿನ ಮಾತಿನಿಂದ ಹಸ್ತಪ್ರತಿಶಾಸ್ತ್ರದ ಮಹತ್ವ ಮತ್ತು ಅದರೊಂದಿಗೆ ಗ್ರಂಥಸಂಪಾದನಾ ಶಾಸ್ತ್ರಗಳ ಭಾಂದವ್ಯವನ್ನು ಅರಿಯಬಹುದು. ಒಟ್ಟಾರೆ ಹಸ್ತಪ್ರತಿ, ಹಸ್ತಪ್ರತಿಶಾಸ್ತ್ರಗಳ ಅಧ್ಯಯನಕ್ಕೆ ಬಿ.ಎಂ.ಶ್ರೀ ಪ್ರತಿಷ್ಠಾನದ ಕೊಡುಗೆ ಮಹತ್ವದ್ದಾಗಿದೆ.

ಉದ್ದೇಶ :–

"ದೇಶದಲ್ಲಿ ಹುಳು ತಿಂದುಹೋಗದೆ ಇರುವ ಗ್ರಂಥಗಳನ್ನೆಲ್ಲ ಒಂದೆಡೆ ಶೇಖರಿಸಿ ಒಂದನ್ನು ಬಿಡದಂತೆ ಅಚ್ಚುಹಾಕುವುದು. ಅಚ್ಚಾದ ಮೇಲೆ ಎಲ್ಲವನ್ನೂ ಕೊನೆಮುಟ್ಟಿ ಶೋಧಿಸಿ ಹೊಸದಾಗಿ ಲಕ್ಷಣ ಗ್ರಂಥಗಳನ್ನು ಕಾಲಕ್ಕೆ ತಕ್ಕಂತೆ ರಚಿಸುವುದು." ಎಂದು 1911ರಲ್ಲಿ ಬಿ.ಎಂ.ಶ್ರೀಕಂಠಯ್ಯನವರು ಹೇಳಿದ ವಾಣಿಯನ್ನು ಧ್ಯೇಯವಾಗಿಟ್ಟುಕೊಂಡು ಮೇ 6, 1979ರಂದು ಎಂ.ವಿ.ಸೀತಾರಾಮಯ್ಯರವರು ಸ್ಥಾಪನೆ ಮಾಡಿದ, ರಾಷ್ಟ್ರಕವಿ ಕುವೆಂಪುರವರು ಉದ್ಘಾಟನೆ ಮಾಡಿದ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಇಂದು ಕನ್ನಡ ನಾಡಿನಲ್ಲಿ ಸಾಹಿತ್ಯಿಕವಾಗಿ, ಸಾಂಸ್ಕೃತಿಕವಾಗಿ ಮುಂಚುಣಿಯಲ್ಲಿರುವ ಸಾಹಿತ್ಯ ಸಂಸ್ಥೆ ಎನಿಸಿದೆ.

ಪ್ರೊ॥ ಎಂ.ವಿ.ಸೀತಾರಾಮಯ್ಯನವರ ಆಶ್ರಯದಲ್ಲಿ ಅವರ ಮನೆಯಲ್ಲೇ ಹತ್ತು ವರ್ಷಗಳನ್ನು ಪೂರೈಸಿ ಅನೇಕ ವಿಚಾರಗೋಷ್ಠಿಗಳನ್ನು, ವಿದ್ವತ್ ಚರ್ಚೆಗಳನ್ನು, ಮೌಲಿಕ ಪ್ರಕಟಣೆಗಳನ್ನು ಪ್ರಕಟಿಸಿದೆ. ವಿಶೇಷವಾಗಿ "ಕರ್ನಾಟಕ ಲೋಚನ" ವಿದ್ವತ್ ಪತ್ರಿಕೆ ಎಂಬ ಸಂಶೋಧನಾ ಸಾಹಿತ್ಯ ಪತ್ರಿಕೆಯನ್ನು ಕನ್ನಡ ನಾಡಿಗೆ ಪರಿಚಯಿಸುವ ಮೂಲಕ ತಮ್ಮ ಪಾಂಡಿತ್ಯ, ವ್ಯಕ್ತಿತ್ವ ಮತ್ತು ಪರಿಶ್ರಮದಿಂದ ಕರ್ನಾಟಕದ ಪ್ರತಿಷ್ಠಿತ "ಸಂಶೋಧನ ಸಂಸ್ಥೆ" ಎಂಬ ಹೆಗ್ಗಳಿಕೆ ಪಡೆದುಕೊಂಡಿರುವ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ನಮ್ಮ ನಾಡಿನಲ್ಲಿ ತನ್ನದೇ ಹಿರಿಮೆಯನ್ನು ಉಳಿಸಿಕೊಂಡಿದೆ.

ಇಂತಹ ಹೆಗ್ಗಳಿಕೆಯನ್ನು ಒಳಗೊಂಡಿರುವ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಅದಕ್ಕೆ ಪೂರಕವೆಂಬಂತೆ "ಪ್ರಾಚೀನ ಹಸ್ತಪ್ರತಿ ಭಂಡಾರ"ವನ್ನು ಹೊಂದಿದೆ. ಈ ಭಂಡಾರ ಸಂಸ್ಥೆಯ ಸ್ಥಾಪನೆಯೊಂದಿಗೆ ಅಂದರೆ 1979 ರಿಂದಲೇ ಪ್ರಾರಂಭವಾಗಿದ್ದು ಇದುವರೆಗೆ 3000ಕ್ಕೂ ಅಧಿಕ ಓಲೆಗರಿ, ತಾಳೆಗರಿ ಮತ್ತು ಕಾಗದದ ಅಮೂಲ್ಯ ಹಸ್ತಪ್ರತಿಗಳನ್ನು ಸಂಗ್ರಹಿಸಿ ವೈಜ್ಞಾನಿಕವಾಗಿ ಕಾಪಾಡಿಕೊಂಡು ಬಂದಿದೆ. ಅತಿ ಸಣ್ಣ ಹಸ್ತಪ್ರತಿಯಿಂದ ಹಿಡಿದು 2-ಅಡಿ ಉದ್ದದ ದೊಡ್ಡ ಹಸ್ತಪ್ರತಿಗಳವರೆಗೆ ಸಂಗ್ರಹಿಸಿ ಕಾಪಾಡುತ್ತಿದೆ. ಭಂಡಾರದಲ್ಲಿರುವ ಹಸ್ತಪ್ರತಿಗಳಲ್ಲಿ ವಿಶೇಷವಾದ ವಸ್ತು, ವಿಷಯಗಳನ್ನು ಒಳಗೊಂಡಿರುವುದರ ಜೊತೆಗೆ ಹಲವು ವೈವಿಧ್ಯತೆಗಳು ಅಡಗಿವೆ. ಇಷ್ಟೇ ಅಲ್ಲದೆ ಗ್ರಂಥಭಂಡಾರದಲ್ಲಿ ಹಲವು ಬೃಹತ್ ಹಸ್ತಪ್ರತಿಗಳು, ರೇಖಾ-ವರ್ಣಚಿತ್ರಗಳಿರುವ ಹಸ್ತಪ್ರತಿಗಳು, ಸನ್ನದುಗಳು, ಕೈಫಿಯತ್ತುಗಳೂ ಇವೆ. ಇವೆಲ್ಲವುಗಳಲ್ಲಿ ಇರುವ ಪಾಂಡಿತ್ಯ ಮತ್ತು ಪುರಾತನ ಕಾಲದ ಸಂಸ್ಕೃತಿಯನ್ನು ಪರಿಚಯಿಸಲು ಮತ್ತು ಉಳಿಸಲು ಸಂಸ್ಥೆ ದುಡಿಯುತ್ತಿದೆ.

ಬಿ.ಎಂ.ಶ್ರೀ ಪ್ರತಿಷ್ಠಾನ ಸಂಶೋಧನ ಸಂಸ್ಥೆಯ ಹೆಗ್ಗಳಿಕೆಯನ್ನು ಪಡೆದುಕೊಂಡಿದೆ. ಇಂತಹ ಸಂಶೋಧನಾ ಸಂಸ್ಥೆಯ ಮುಖ್ಯವಾದ ಭಾಗ ಗ್ರಂಥಭಂಡಾರ. ಸಂಸ್ಥೆ ಪ್ರಾರಂಭದಿಂದಲೂ ತನ್ನ ಗ್ರಂಥಭಂಡಾರ - ಹಸ್ತಪ್ರತಿ - ಗ್ರಂಥಗಳನ್ನು ಸಂಗ್ರಹಿಸಿ, ಸಾಹಿತ್ಯಾಸಕ್ತರ ಬಯಕೆಯನ್ನು ಈಡೇರಿಸುವ ಭವ್ಯವಾದ ಗ್ರಂಥಭಂಡಾರ ಹೊಂದಿದೆ. ಇಲ್ಲಿಯವರೆಗೆ ಕನ್ನಡ ನಾಡಿನ ಹಿರಿಯ ಸಾಹಿತಿಗಳು ಪ್ರೀತಿಯಿಂದ ಮಾಡಿದ ಗ್ರಂಥದಾನದ ಜೊತೆಗೆ ಬೇರೆ ಬೇರೆ ಮೂಲಗಳಿಂದ ಸಂಗ್ರಹಿಸಿದ 12,000ಕ್ಕೂ ಅಧಿಕ ಗ್ರಂಥಗಳಿವೆ. ಮೂರು ಸಾವಿರಕ್ಕೂ ಅಧಿಕ ಪ್ರಾಚಿನ ಹಸ್ತಪ್ರತಿಗಳಿವೆ, ಇಲ್ಲಿ ಹೆಚ್ಚಾಗಿ ಸಂಶೋಧನೆಗೆ ಪ್ರಾಮುಖ್ಯತೆ ಇರುವುದರಿಂದ ಅದಕ್ಕೆ ಬೇಕಾಗಿರುವ ಆಕರ ಗ್ರಂಥಗಳನ್ನೆಲ್ಲ ಈ ಭಂಡಾರ ಒಳಗೊಂಡಿರುವುದು ಸಂಶೋಧಕ ವಿದ್ಯಾರ್ಥಿಗಳಿಗೆ ಹೆಮ್ಮೆಯ ವಿಷಯವಾಗಿದೆ. ಒಂದು ಸಂಶೋಧನಾ ಸಂಸ್ಥೆಗೆ ಮೂಲಭೂತವಾಗಿ ಇರಬೇಕಾದ

ಅನೂಕೂಲತೆಗಳನ್ನು ಪ್ರತಿಷ್ಠಾನ ಒದಗಿಸಿಕೊಟ್ಟಿದೆ. ಇವುಗಳ ಜೊತೆಗೆ ವಿಶೇಷವಾಗಿ ನಿಘಂಟು, ಹಸ್ತಪ್ರತಿ, ಗ್ರಂಥಸೂಚಿ, ಪ್ರಾಚೀನ ಗ್ರಂಥಗಳಿಗೆ ಸಂಬಂಧಿಸಿದ ಅಮೂಲ್ಯ ಆಕರ ಗ್ರಂಥಗಳನ್ನು ಪ್ರತಿಷ್ಠಾನ ಹೊಂದಿದ್ದು ಸಾಹಿತ್ಯ ಸಂಶೋಧನೆಯ ಆಸಕ್ತರು ಮತ್ತು ಉನ್ನತ ವ್ಯಾಸಂಗದ ವಿದ್ಯಾರ್ಥಿಗಳು ನಿರಂತರವಾಗಿ ಇದರ ಪ್ರಯೋಜನ ಪಡೆಯಲು ಅನುಕೂಲ ಮಾಡಿಕೊಟ್ಟಿದೆ.

"ಜ್ಞಾನದ ಅವಶ್ಯಕತೆ ಹವ್ಯಾಸವಾಗಿಯೂ ಬೆಳೆಯುವಲ್ಲಿ ಅದರ ವಾಹಕವಾದ ಹಸ್ತಪ್ರತಿಗಳನ್ನು ಸ್ವ-ಅನ್ಯ ಪ್ರಯೋಜನಾರ್ಥ ಬೆಳಸಿಕೊಂಡುಬಂದವರು ಸಮಾಜದ ನೇತಾರರಾದ ರಾಜರು, ಆಚಾರ್ಯರು, ವಿದ್ವಾಂಸರು. ಆಚಾರ್ಯರ ಸ್ವಾಧ್ಯಾಯ-ಪ್ರವಚನಗಳಿಗಾಗಿ ಮಠ ಮಂದಿರಗಳ ಧಾರ್ಮಿಕ ಹಸ್ತಪ್ರತಿ ಭಂಡಾರಗಳು. ಅಧ್ಯಯನ ಹವ್ಯಾಸ ಕಾರಣವಾಗಿ ಖಾಸಗಿ ಗ್ರಂಥಭಂಡಾರಗಳು ನಾಡಿನಲ್ಲಿ ಸಂವರ್ಧಿಸಿದವು".[4] ಎಂಬ ಡಾ.ಎಂ.ಎಂ.ಕಲಬುರ್ಗಿಯವರ ಅಭಿಪ್ರಾಯವನ್ನು ಅವಲೋಕಿಸಿದಾಗ ಹಸ್ತಪ್ರತಿ ಗ್ರಂಥ ಭಂಡಾರಗಳ ಸಾರ್ಥಕ ಕಾರ್ಯದ ಬಗ್ಗೆ ಅರಿಯಬಹುದು. ಇಂತಹ ಗ್ರಂಥಭಂಡಾರಗಳಲ್ಲಿ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಹಸ್ತಪ್ರತಿ ಭಂಡಾರದ ಕಾರ್ಯಚಟುವಟಿಕೆಗಳು ಅದರ ಜೊತೆಗೆ ಸಂಸ್ಥೆ ಸಂಗ್ರಹಿಸಿ ಅದರಲ್ಲಿರುವ ವಿದ್ವತ್ ವಿಚಾರಗಳನ್ನು ನಾಡಿಗೆ ಪರಿಚಯಿಸುತ್ತಿರುವುದರಿಂದ ಅದರ ಈ ಕಾರ್ಯಗಳೇ ಈ ಪ್ರಬಂಧವನ್ನು ಬರೆಯಲು ಪ್ರೇರಣೆ ಎಂದು ಅರಿಯಲಾಗಿದೆ. ಮುಖ್ಯವಾಗಿ ಪ್ರತಿಷ್ಠಾನ ಹಸ್ತಪ್ರತಿಶಾಸ್ತ್ರವನ್ನು ಒಂದು ಶಿಸ್ತನ್ನಾಗಿ ರೂಪಿಸಿರುವುದಲ್ಲದೆ, ಅವುಗಳ ಪ್ರಚಾರವನ್ನು ಮಾಡುತ್ತಾ ಇದೆ. ಇವುಗಳೊಂದಿಗೆ ಹಸ್ತಪ್ರತಿ ಸಂಗ್ರಹ, ಸಂರಕ್ಷಣೆಗಳ ಸಾಂಘಿಕ ಪ್ರಯತ್ನ ಮಾಡುತ್ತಿದೆ. ಸಂಗ್ರಹಿಸಿದ ಹಸ್ತಪ್ರತಿಗಳಲ್ಲಿರುವ ವಿದ್ವತ್ತನ್ನು ವಿದ್ವಾಂಸರ ಮೂಲಕ ಪಠ್ಯ ನಿಷ್ಕರ್ಶಿಸಿ ಪ್ರಾತಿನಿಧಿಕ ಪುಸ್ತಕ ಪ್ರಕಟಣೆ ಮಾಡುತ್ತಿದೆ. ಇಂತಹ ಘನ ಉದ್ದೇಶವನ್ನೊಳಗೊಂಡ ಸಂಸ್ಥೆಯ ವಿದ್ವತ್‌ಕಾರ್ಯಗಳನ್ನು ಅರಿಯುವ ಉದ್ದೇಶದಿಂದ ಪ್ರಬಂಧ ಬರೆಯಲು ಪ್ರಯತ್ನಿಸಿದೆ. ಈ ಪ್ರಬಂಧದಲ್ಲಿ ವಿಷಯಕ್ಕೆ ಸೂಕ್ತವಾಗಿ ಆರು ಅಧ್ಯಾಯಗಳಾಗಿ ವಿಂಗಡಿಸಿಕೊಳ್ಳಲಾಗಿದೆ.

ಸ್ವರೂಪ :-

ನಾಶದ ಅಂಚಿನಲ್ಲಿದ್ದ ಹಸ್ತಪ್ರತಿಗಳನ್ನು ಕಂಡು ಅವುಗಳ ಜೀರ್ಣವಾಸ್ಥೆಯ ಪರಿಸ್ಥಿತಿಯನ್ನು ಅರಿತು ಬಿ.ಎಂ.ಶ್ರೀಕಂಠಯ್ಯನವರು 1911ರಲ್ಲಿ ಹೇಳಿದ ವಾಣಿಯನ್ನೇ ಎಂ.ವಿ.ಸೀತಾರಾಮಯ್ಯನವರು ಮನಸ್ಸಿನಲ್ಲಿ ಗಟ್ಟಿಮಾಡಿಕೊಂಡು ಉತ್ತಮವಾದ ಉದ್ದೇಶದಿಂದ ಅಂದರೆ ಪ್ರಾಚೀನ ಹಸ್ತಪ್ರತಿಗಳನ್ನು ಸಂಗ್ರಹಿಸಿ, ಸಂರಕ್ಷಣೆ ಮಾಡುವ ಮೂಲಕ ಅವುಗಳಲ್ಲಿನ ವಿಚಾರಗಳನ್ನು ನಾಡಿಗೆ ಪರಿಚಯಿಸುವ ಕೆಲಸವನ್ನು ಪ್ರಾರಂಭಿಸಿದ

ಈ ಸಂಸ್ಥೆ ತನ್ನ ಆರಂಭದ ಉದ್ದೇಶವನ್ನು ಚಾಚೂ ತಪ್ಪದೇ ಕಾರ್ಯನಿರ್ವಹಿಸುತ್ತಲೇ ಇದೆ. ಈ ಅಧ್ಯಯನದಲ್ಲಿ ಅದರ ಉದ್ದೇಶಗಳಿಗೆ ಅನುಗುಣವಾಗಿ "ಹಸ್ತಪ್ರತಿಶಾಸ್ತ್ರಕ್ಕೆ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಕೊಡುಗೆ"ಯ ವಿಚಾರಗಳನ್ನು ಒಟ್ಟು ಆರು ಅಧ್ಯಯಗಳಿಗೆ ಮಿತಿಗೊಳಿಸಲಾಗಿದೆ. ಮುಂದೆ ಈ ಅಧ್ಯಾಯಗಳು ಹಾಗೂ ಅದರ ಉಪವಿಭಾಗಗಳ ಸಂಕ್ಷಿಪ್ತ ಪರಿಚಯ ಮತ್ತು ಉದ್ದೇಶವನ್ನು ಇಲ್ಲಿ ಮಾಡಲಾಗಿದೆ.

1. ಅಧ್ಯಾಯ-ಒಂದು :- ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ :- ಈ ಅಧ್ಯಾಯದಲ್ಲಿ ಹಸ್ತಪ್ರತಿಶಾಸ್ತ್ರಕ್ಕೆ ಬಿ.ಎಂ.ಶ್ರೀ ಪ್ರತಿಷ್ಠಾನದ ಕೊಡುಗೆ' ಎಂಬ ವಿಷಯದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿಯ ಬಗ್ಗೆ ಚರ್ಚಿಸಲಾಗಿದೆ. ಏಕೆಂದರೆ ಚದುರಿಹೋಗಿರುವ ಜನರ ಬಳಿ ಅಜ್ಞಾತವಾಗಿರುವ ಹಸ್ತಪ್ರತಿಗಳನ್ನು ಕಾಡಿ-ಬೇಡಿ ತಂದು ಅವುಗಳನ್ನು ಸಂರಕ್ಷಿಸಿ - ಸಂಪ್ರತಿಮಾಡಿ ಗ್ರಂಥ ಪ್ರಕಟಣೆಗೆ ಸಿದ್ಧಪಡಿಸಿ, ಗ್ರಂಥ ಪ್ರಕಟಿಸುವುದೇ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಮುಖ್ಯವಾದ ಕೆಲಸವಾಗಿದೆ. ಈ ಕಾರ್ಯವನ್ನು ಪ್ರತಿಷ್ಠಾನ ನಿರಂತರವಾಗಿ ಮಾಡಿಕೊಂಡು ಬರುತ್ತಿದೆ. ಇಲ್ಲಿಯವರೆಗೂ 3000ಕ್ಕೂ ಹೆಚ್ಚು ಹಸ್ತಪ್ರತಿಗಳನ್ನು ಸಂಗ್ರಹಿಸಿ ವೈಜ್ಞಾನಿಕವಾಗಿ ಸಂರಕ್ಷಿಸಿಕೊಂಡು ಬರುತ್ತಿದೆ. ಹಸ್ತಪ್ರತಿಗಳನ್ನು ಸಂಗ್ರಹಿಸುವುದಷ್ಟೇ ಅಲ್ಲದೇ 1990ರಿಂದ 'ಹಸ್ತಪ್ರತಿಶಾಸ್ತ್ರ' ತರಗತಿಗಳನ್ನು ನಡೆಸುತ್ತಲಿದೆ. ಇದರ ಜೊತೆಗೆ 'ಹಸ್ತಪ್ರತಿಶಾಸ್ತ್ರ' ಎಂಬ ನೂತನ ಶಿಸ್ತನ್ನು ಪ್ರಾರಂಭಿಸಿದೆ. ಇದರೊಂದಿಗೆ ಪ್ರಾಚೀನ ಪರಂಪರೆಯ ಅಪರೂಪದ ಈ ಕಲೆಯಲ್ಲಿ ತರಬೇತಿ ನೀಡುತ್ತಿರುವ ಕರ್ನಾಟಕದ ಏಕೈಕ ಸಂಸ್ಥೆ ಎಂಬ ಹೆಗ್ಗಳಿಕೆ ಪ್ರತಿಷ್ಠಾನಕ್ಕಿದೆ. ಇಂತಹ ಘನ ಉದ್ದೇಶಗಳನ್ನು ಒಳಗೊಂಡಿರುವ ಸಂಸ್ಥೆಯ ಚಟುವಟಿಕೆಗಳನ್ನು ನಾಡುನುಡಿಯ ಅಭಿವೃದ್ಧಿಯ ಹಿನ್ನಲೆಯಲ್ಲಿ ಚರ್ಚಿಲಾಗಿದೆ.

2. ಅಧ್ಯಾಯ ಎರಡು :- ಹಸ್ತಪ್ರತಿಶಾಸ್ತ್ರದ ಸ್ವರೂಪ ಮತ್ತು ವ್ಯಾಪ್ತಿ :- ಬಹಳ ಮುಖ್ಯವಾಗಿ ಈ ಅಧ್ಯಯದಲ್ಲಿ ಗಮನಿಸಿರುವುದು ಪ್ರಾಚೀನ ಸಾಹಿತ್ಯದಲ್ಲಿ ಗ್ರಂಥ ಸಂಪಾದನೆ ತನ್ನ ಶಕ್ತಿ ಕಳೆದುಕೊಳ್ಳುತ್ತಿದ್ದ ಕಾಲದಲ್ಲಿ ಅಂದರೆ ವಿಶ್ವವಿದ್ಯಾಲಯಗಳಲ್ಲಿ ಗ್ರಂಥ ಸಂಪಾದನಾಶಾಸ್ತ್ರ ತನ್ನ ಬೆಳವಣಿಗೆ ಕುಂಟಿತವಾಗುತ್ತಾ, ನಿರ್ಲಕ್ಷ್ಯಕ್ಕೆ ಒಳಗಾಗುತ್ತಿದ್ದ ಸಂದರ್ಭಕ್ಕೆ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ 'ಹಸ್ತಪ್ರತಿಶಾಸ್ತ್ರ' ಎಂಬ ನೂತನ ಶಿಸ್ತನ್ನು ರೂಪಿಸಿ ಅದರೊಂದಿಗೆ ವಿವಿಧ ಸೆಲೆಯಲ್ಲಿ ಹಸ್ತಪ್ರತಿಶಾಸ್ತ್ರವನ್ನು ಅಧ್ಯಯನಕ್ಕೆ ಅಳವಡಿಸಿರುವುದು ವಿಶೇಷವಾಗಿದೆ. ಈ ಅಧ್ಯಾಯದಲ್ಲಿ ಮುಖ್ಯವಾಗಿ ನಾಲ್ಕು ಉಪವಿಭಾಗಗಳನ್ನು ಮಾಡಿಕೊಳ್ಳಲಾಗಿದೆ.

(ಅ). ಹಸ್ತಪ್ರತಿಶಾಸ್ತ್ರ ಎಂದರೇನು? ಈ ಪದ ಪಾರಿಭಾಷಿಕ ಶಬ್ದ ಈವರೆಗೆ ಬಳಕೆಯಲ್ಲಿರಲಿಲ್ಲ. ಇದು ವ್ಯಾಪಕಾರ್ಥದ ಪದ. ಇದರ ವಿವರಣೆ, ಹಸ್ತಪ್ರತಿಗಳ ಸಂಗ್ರಹ, ಸಂಗ್ರಹಿಸಿದ ಹಸ್ತಪ್ರತಿಗಳನ್ನು ಜೋಪಾನ ಮಾಡುವುದು, ಸಂಗ್ರಹಕಾರ್ಯ ಒಂದು ಹಂತವನ್ನು ಮುಟ್ಟಿದ ಮೇಲೆ ಹಸ್ತಪ್ರತಿಗಳ ಸೂಚಿಯನ್ನು ತಯಾರಿಸುವುದು ಇವೆಲ್ಲವುಗಳನ್ನೊಳಗೊಂಡ ಶಾಸ್ತ್ರವೇ ಹಸ್ತಪ್ರತಿಶಾಸ್ತ್ರ ಎಂದು ಕರೆಯಲಾಗಿದೆ. ಈ ವಿಚಾರಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

(ಆ) ಹಸ್ತಪ್ರತಿಶಾಸ್ತ್ರ ಮತ್ತು ಗ್ರಂಥಸಂಪಾದನೆಯಶಾಸ್ತ್ರ :- ಹಸ್ತಪ್ರತಿರೂಪದ ಕೃತಿಯನ್ನು ಪರಿಷ್ಕರಿಸಿ ಕವಿಪಾಠಕ್ಕೆ ಸಮೀಪತಮವಾದ ಪಾಠವನ್ನು ಸಕಲ ವಿದ್ವತ್ ಪರಿಕರಣಗಳೊಂದಿಗೆ ಪ್ರಕಟಿಸುವುದರಲ್ಲಿ ಹಸ್ತಪ್ರತಿಶಾಸ್ತ್ರ ತನ್ನ ಕಡೆಯ ಹಂತ ಮುಟ್ಟುತ್ತದೆ. ಆದರೆ ಗ್ರಂಥಸಂಪಾದನಾಶಾಸ್ತ್ರ ಹಸ್ತಪ್ರತಿಶಾಸ್ತ್ರದಲ್ಲಿಯೇ ಸಮವೇಶಗೊಳ್ಳುತ್ತದೆ. ಅಂದರೆ ಹಸ್ತಪ್ರತಿಶಾಸ್ತ್ರದ ಮುಂದುವರಿದ ಭಾಗವೇ ಗ್ರಂಥ ಸಂಪಾದನಾಶಾಸ್ತ್ರವಾಗಿದೆ. ಎಂಬ ವಿದ್ವಾಂಸರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಹಸ್ತಪ್ರತಿಶಾಸ್ತ್ರ ಮತ್ತು ಗ್ರಂಥಸಂಪಾದನಶಾಸ್ತ್ರಗಳ ಸ್ವರೂಪ ಮತ್ತು ವ್ಯಾಪ್ತಿಯನ್ನು ಇಲ್ಲಿ ನಿಷ್ಕರ್ಷಿಸಿದೆ.

(ಇ) ಹಸ್ತಪ್ರತಿ ಅಧ್ಯಯನದ ಪ್ರಗತಿ :- ಹಸ್ತಪ್ರತಿಶಾಸ್ತ್ರ ಮತ್ತು ಗ್ರಂಥಸಂಪಾದನೆಗಿಂತ ಭಿನ್ನವಾದ ಅಧ್ಯಯನವೇ ಹಸ್ತಪ್ರತಿ ಅಧ್ಯಯನವೆನಿಸಿದ್ದು ಬಿ.ಎಂ.ಶ್ರೀ ಪ್ರತಿಷ್ಠಾನವೇ ರೂಪಿಸಿದೆ. ಹಸ್ತಪ್ರತಿಯನ್ನೆ ಗುರಿಯಾಗಿಟ್ಟುಕೊಂಡು ಹಸ್ತಪ್ರತಿ ಅಧ್ಯಯನವೆಂಬ ಶಾಸ್ತ್ರವನ್ನು ಒಂದು ನೂತನ ಶಿಸ್ತಿನ ಆವಿಷ್ಕಾರ ಮಾಡಿರುವ ಬಗ್ಗೆ ಇಲ್ಲಿ ಚರ್ಚಿಸಿದೆ.

(ಈ) ಬಿ.ಎಂ.ಶ್ರೀ ಪ್ರತಿಷ್ಠಾನ ಮತ್ತು ಹಸ್ತಪ್ರತಿಶಾಸ್ತ್ರ :- ಬಿ.ಎಂ.ಶ್ರೀ ಪ್ರತಿಷ್ಠಾನವು ಹಸ್ತಪ್ರತಿಶಾಸ್ತ್ರ ಎಂಬ ನೂತನ ಶಿಸ್ತನ್ನು ಆವಿಷ್ಕರಿಸಿ ಹಾಗೂ ನಾಡಿಗೆ ಪರಿಚಯಿಸಿದ ರೀತಿಯನ್ನು ಮತ್ತು ಅದರ ಪ್ರಭಾವ ಪ್ರೇರಣೆಗಳನ್ನು ಇಲ್ಲಿ ಬಹಳ ಮುಖ್ಯವಾಗಿ ಚರ್ಚಿಸಿದೆ.

3. ಅಧ್ಯಾಯ ಮೂರು :- ಬಿ.ಎಂ.ಶ್ರೀ ಪ್ರತಿಷ್ಠಾನ ಒಂದು ನೋಟ :- ಈ ಅಧ್ಯಾಯದಲ್ಲಿ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಒಟ್ಟಾರೆ ಚಿತ್ರವನ್ನು ಕೊಡಲು ಪ್ರಯತ್ನಿಸಿದೆ. ಏಕೆಂದರೆ ಈ ಅಧ್ಯಯದಲ್ಲಿ ಮುಖ್ಯವಾಗಿ ಪ್ರತಿಷ್ಠಾನದ ಹಸ್ತಪ್ರತಿಶಾಸ್ತ್ರ ಕ್ಷೇತ್ರವೊಂದನ್ನೇ ಅಧ್ಯಯನದ ವಸ್ತುವಾಗಿ ಸ್ವೀಕರಿಸಿರುವುದರಿಂದ ಪ್ರತಿಷ್ಠಾನದ ಇತರೆ ಚಟುವಟಿಕೆಗಳನ್ನು ಬೇರೆ ಅಧ್ಯಯಗಳಲ್ಲಿ ಪರಿಚಯಿಸಲು ಆದ್ದರಿಂದ ನನ್ನ ಅಧ್ಯಯನದ ವಿಷಯಕ್ಕೆ ಪೂರಕವಾಗಿ ಸಂಸ್ಥೆಯ ಪೂರ್ಣಚಿತ್ರವನ್ನು ಸಂಕ್ಷಿಪ್ತವಾಗಿ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ, ಒಟ್ಟು ಏಳು ಉಪವಿಭಾಗಗಳಲ್ಲಿ ವಿವರಿಸಲಾಗಿದೆ.

(ಅ) ಬಿ.ಎಂ.ಶ್ರೀ ಮತ್ತು ಎಂ.ವಿ.ಸೀ :– ಬಿ.ಎಂ.ಶ್ರೀ ಯವರ ನುಡಿಯನ್ನೇ ಪಾಲಿಸಿದ ಅವರ ಶಿಷ್ಯರಾದ ಎಂ.ವಿ.ಸೀತಾರಾಮಯ್ಯನವರು ಕಟ್ಟಿಸಿದ ಗುರುಸ್ಮಾರಕದ ನೆನಪಿನ ಹಿನ್ನೆಲೆಯಲ್ಲಿ ಬಿ.ಎಂ.ಶ್ರೀ ಮತ್ತು ಎಂ.ವಿ.ಸೀ ಅವರ ಕಿರುಪರಿಚಯವನ್ನು ಮಾಡಲಾಗಿದೆ.

(ಆ) ಬಿ.ಎಂ.ಶ್ರೀ ಪ್ರತಿಷ್ಠಾನದ ಪ್ರಾರಂಭ, ಉದ್ದೇಶ :– ಅಂದರೆ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಬಿ.ಎಂ.ಶ್ರೀಯವರ ವಾಣಿಯನ್ನು ಧ್ಯೇಯವಾಕ್ಯವಾಗಿಟ್ಟುಕೊಂಡು ಪ್ರಾರಂಭಿಸಿದ ಈ ಸಂಸ್ಥೆಯನ್ನು ರಾಷ್ಟ್ರಕವಿ ಕುವೆಂಪುರವರಿಂದ ಉದ್ಘಾಟನೆ ಮಾಡಿಸಿದ ಶ್ರೀಯುತ ಎಂ.ವಿ.ಸೀತಾರಾಮಯ್ಯನವರ ಮನಸ್ಸಿನಲ್ಲಿ ಮೂಡಿದ ನಿರ್ಧಾರವಾಗಿದೆ. ಹಾಗೂ ಅವರು ಪ್ರಾರಂಭಿಸಿದ ಉದ್ದೇಶ ನಾಶವಾಗುತ್ತಿದ್ದ ಹಸ್ತಪ್ರತಿಗಳನ್ನು ಸಂಗ್ರಹಿಸಿ, ಸಂರಕ್ಷಿಸಿ, ಗ್ರಂಥ ಸಂಪಾದನೆಗೆ ಸಿದ್ಧಪಡಿಸುವುದೇ ಆಗಿತ್ತು. ಇದನ್ನು ಎಂ.ವಿ.ಸೀ ಅವರು ಮಾಡಿ ತೋರಿಸಿದರು ಈ ವಿಚಾರಗಳ ಬಗ್ಗೆ ಇಲ್ಲಿ ಚರ್ಚಿಸಲಾಗಿದೆ.

(ಇ) ಸಾಂಸ್ಕೃತಿಕವಾಗಿ, ಸಾಹಿತ್ಯಕವಾಗಿ, ಸಾಮಾಜಿಕವಾಗಿ :– ಸಂಸ್ಥೆ ಕನ್ನಡ ನಾಡಿನಲ್ಲಿ ಕೇವಲ ಪ್ರಾಚೀನ ಹಸ್ತಪ್ರತಿಗಳ ಸಂರಕ್ಷಣೆಯನ್ನೇ ಮಾಡದೆ ನಾಡಿನ ಸಂಸ್ಕೃತಿಯನ್ನು ಬಿಂಬಿಸುವ ಬೇರೆ ಬೇರೆ ಚಟುವಟಿಕೆಗಳನ್ನೂ ಮಾಡುತ್ತಾ ಇದೆ. ಉದಾ:– 'ಸಿರಿಕಂಟ' ವೇದಿಕೆಯಲ್ಲಿ ನಡೆಯುವ ಕಾರ್ಯಕ್ರಮಗಳಾಗಿರಬಹುದು, ಸಾಹಿತ್ಯಕವಾಗಿ ಹಳಗನ್ನಡ ಕಾವ್ಯಾಭ್ಯಾಸ ಶಿಬಿರಗಳಾಗಿರಬಹುದು, ಶತಮನೋತ್ಸವ ಕಾರ್ಯಕ್ರಮಗಳಾಗಿರಬಹುದು. ಸ್ಪರ್ಧೆಗಳು–ದತ್ತಿಉಪನ್ಯಾಸ, ಬಹುಮಾನ–ಪ್ರಶಸ್ತಿಗಳಾಗಿರಬಹುದು ಇವುಗಳಿಂದ ನಾಡಿನ ಸಾಂಸ್ಕೃತಿಕ, ಸಾಹಿತ್ಯಿಕ, ಸಾಮಾಜಿಕ, ಕ್ಷೇತ್ರದ ಮೇಲಾದ ಪರಿಣಾಮ–ಪ್ರಭಾವವನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

(ಈ) ವಾಚನಾಲಯ ಮತ್ತು ಗ್ರಂಥಾಲಯ :– ಪ್ರತಿಷ್ಠಾನದಲ್ಲಿ ಒಟ್ಟು 3000ಕ್ಕೂ ಹೆಚ್ಚು ವಿಶೇಷ ಹಸ್ತಪ್ರತಿಗಳನ್ನು ಸಂಗ್ರಹಿಸಲಾಗಿದ್ದು ಅವುಗಳಲ್ಲಿ ವಿಶೇಷವಾಗಿರುವ ಹಸ್ತಪ್ರತಿಗಳನ್ನು ಕುರಿತು ಚರ್ಚಿಸಲಾಗಿದೆ. ಜೊತೆಗೆ 14,000ಕ್ಕೂ ಹೆಚ್ಚು ಮೌಲಿಕ ಗ್ರಂಥಗಳನ್ನು ಸಂಗ್ರಹಿಸಿ ಯುವ ಸಾಹಿತ್ಯ ಸಂಶೋಧಕರಿಗೆ ಉಪಯುಕ್ತವಾದ ಗ್ರಂಥ ಭಂಡಾರವಾಗಿದೆ ಇವುಗಳ ಬಗ್ಗೆ ಇಲ್ಲಿ ಚರ್ಚಿಸಲಾಗಿದೆ.

(ಉ) ಕರ್ನಾಟಕ ಲೋಚನ ವಿದ್ವತ್ ಪತ್ರಿಕೆ :– 1982ರಲ್ಲಿ ಪ್ರಾರಂಭಗೊಂಡು ನಿಯತವಾಗಿ ಪ್ರಕಟವಾಗುತ್ತಿರುವ ಏಕೈಕ ವಿದ್ವತ್‌ಸಂಶೋಧನಾ ಪತ್ರಿಕೆ ಎಂಬ ಹೆಗ್ಗಳಿಕೆಯನ್ನು ಪಡೆದುಕೊಂಡಿರುವ ಈ ಪತ್ರಿಕೆಯನ್ನು ಆರು ತಿಂಗಳಿಗೊಮ್ಮೆ ಪ್ರತಿಷ್ಠಾನ ಪ್ರಕಟಿಸುತ್ತಿದೆ. ಇದರ ಮುಖ್ಯ ಉದ್ದೇಶ ಮೌಲಿಕ ಗ್ರಂಥಗಳ ಮೌಲ್ಯಮಾಪನ ಮಾಡುವ ಲೇಖನಗಳು, ಟಿಪ್ಪಣಿಗಳು, ಸಂಶೋಧನ ಗ್ರಂಥಗಳ ವಿಮರ್ಶೆ, ಟೀಕೆ–

ಟಿಪ್ಪಣಿ ಅಲ್ಲದೆ ವಿದ್ವಾಂಸರ ವಿಶೇಷವಾದ ಲೇಖನಗಳನ್ನು ಪ್ರಕಟಿಸಲಾಗುತ್ತಿದೆ. ಇಂತಹ ಸಂಶೋಧನಾ ಪತ್ರಿಕೆಯ ಬಗ್ಗೆ ಇಲ್ಲಿ ಪರಿಚಯಿಸಲಾಗಿದೆ.

(ಊ) ಬಿ.ಎಂ.ಶ್ರೀ ಪ್ರತಿಷ್ಠಾನದ ಪ್ರಕಟಣೆಗಳು :– ಪ್ರತಿಷ್ಠಾನ ಈವರೆಗೆ 70ಕ್ಕೂ ಹೆಚ್ಚು ಮೌಲಿಕ ಗ್ರಂಥಗಳನ್ನು ಪ್ರಕಟಿಸಿದೆ. ಎಲ್ಲವೂ ಸಾಹಿತ್ಯ ಸಂಶೋಧನೆ, ಪಾಂಡಿತ್ಯ ಸಂವರ್ಧನೆಗೆ ಸಂಬಂಧಿಸಿದ ಆಕರ ಗ್ರಂಥಗಳಾಗಿ ಜನಪ್ರಿಯವಲ್ಲದ, ಸಾಹಿತ್ಯ ವಿದ್ಯಾರ್ಥಿಗಳು, ಅಧ್ಯಾಪಕರು, ಸಂಶೋಧಕರಿಗೆ ಸಹಾಯವಾಗುವ ಗ್ರಂಥಗಳನ್ನು ಪ್ರತಿಷ್ಠಾನ ಪ್ರಕಟಿಸುತ್ತಿದೆ. ವಿದ್ವತ್ ವಲಯದಲ್ಲಿ ಮುಖ್ಯವೆನಿಸಿರುವ ಪ್ರತಿಷ್ಠಾನದ ಮೌಲಿಕ ಪ್ರಕಟನೆಗಳ ಬಗ್ಗೆ ಇಲ್ಲಿ ಚರ್ಚಿಸಲಾಗಿದೆ.

(ಋ) ಲಕ್ಷಣ ಗ್ರಂಥಗಳ ರಚನೆ ಮತ್ತು ಪ್ರಕಟಣೆ :– ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಸಂಶೋಧನಾ ಚಟುವಟಿಕೆಗಳಲ್ಲಿ ಕಾಲಕಾಲಕ್ಕೆ ಆವಿಷ್ಕಾರಗೊಳ್ಳುವ ನೂತನ ಅಧ್ಯಯನ ಶಿಸ್ತುಗಳಿಗೆ ಅಗತ್ಯ ಲಕ್ಷಣ ಗ್ರಂಥಗಳನ್ನು ಸಿದ್ಧಪಡಿಸುವುದೂ ಒಂದಾಗಿದೆ. 1980ರ ದಶಕದಲ್ಲಿ "ಹಸ್ತಪ್ರತಿಶಾಸ್ತ್ರ" ಎಂಬ ನೂತನ ಶಿಸ್ತನ್ನು ರೂಪಿಸಿದ್ದಲ್ಲದೆ "ಮಣಿಹ", "ಹಸ್ತಪ್ರತಿ ಶಾಸ್ತ್ರ ಪರಿಚಯ" ಎಂಬ ಶಾಸ್ತ್ರ ಗ್ರಂಥಗಳನ್ನು ಸಿದ್ಧಪಡಿಸಿ ಪ್ರಕಟಿಸಿದೆ. ಇವುಗಳ ಬಗ್ಗೆ ಅಧ್ಯಾಯ ಐದರಲ್ಲಿ ಚರ್ಚಿಸಿದೆ.

4. ಅಧ್ಯಾಯ ನಾಲ್ಕು :– ಬಿ.ಎಂ.ಶ್ರೀ ಪ್ರತಿಷ್ಠಾನದ ಹಸ್ತಪ್ರತಿಗಳ ವಿಶೇಷತೆ :– ಪ್ರತಿಷ್ಠಾನದ ಹಸ್ತಪ್ರತಿ ಭಂಡಾರದಲ್ಲಿರುವ ವಿಶೇಷವಾದ ಹಸ್ತಪ್ರತಿಗಳ ವಿಶೇಷತೆಗಳ ಬಗ್ಗೆ ಇಲ್ಲಿ ಚರ್ಚಿಸಲಾಗಿದೆ.

(ಅ) ಹಸ್ತಪ್ರತಿ ಭಂಡಾರ :– ಎಂ.ಎ.ಸೀತಾರಾಮಯ್ಯರವರ ತಮ್ಮ ವಂಶಸ್ಥರಲ್ಲಿದ್ದ 300 ಹಸ್ತಪ್ರತಿಗಳನ್ನು ದಾನಮಾಡಿ ಸಂಸ್ಥೆಯ ಭಂಡಾರದ ಪ್ರಾರಂಭವನ್ನು ಮಾಡಿದರು. ಕ್ಷೇತ್ರಕಾರ್ಯ, ವಿಚಾರಗೋಷ್ಠಿ, ಪುಸ್ತಕ ಪ್ರಕಟನೆಗಳೊಂದಿಗೆ ನಿರಂತರವಾಗಿ ಸಂಗ್ರಹ ಸಂರಕ್ಷಣೆ ಕಾರ್ಯ ನಡೆಯುತ್ತಲೇ ಇರುವುದರಿಂದ ಪ್ರತಿಷ್ಠಾನದ ಹಸ್ತಪ್ರತಿ ಭಂಡಾರದಲ್ಲಿ ಸಂಗ್ರಹವಾಗಿರುವ ಒಟ್ಟು ಓಲೆಗರಿ-ಕಾಗದದ ಹಸ್ತಪ್ರತಿಗಳ ಸಂಖ್ಯೆ 1600 ಆಗಿವೆ. ಅವುಗಳ ವಿಶೇಷತೆಗಳ ಬಗ್ಗೆ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

(ಆ) ಸಂಗ್ರಹಿಸಿದ ಹಸ್ತಪ್ರತಿಗಳು :– "ಹಸ್ತಪ್ರತಿ ಭಂಡಾರದಲ್ಲಿರುವ ಅತಿಸಣ್ಣ ಹಸ್ತಪ್ರತಿಯಾದ 'ಗೌಳಿಶಕುನ' (ಓ 475) ಎಂಟು ಸೆಂ.ಮೀ.ಉದ್ದ ಎರಡೂವರೆ ಸೆಂ.ಮೀ ಅಗಲವಿದೆ. ಅತಿದೊಡ್ಡ ಹಸ್ತಪ್ರತಿ "ಶ್ರೀ ಮದ್ಭಾಗವತ ಭಾವಾರ್ಥ ದೀಪಿಕಾ ಶ್ರೀಧರೀಯ ವ್ಯಾಖ್ಯಾನ" (ಓ 411) ಇದ್ದು 90 ಸೆಂ.ಮೀ.ಉದ್ದ 5ಸೆಂ.ಮೀ ಅಗಲವಿದೆ"[5] ಹೀಗೆ ಪ್ರತಿಷ್ಠಾನದಲ್ಲಿ ಸಂಗ್ರಹವಾಗಿರುವ ಇನ್ನೂ ಅನೇಕ ಹಸ್ತಪ್ರತಿಗಳ ಬಗ್ಗೆ ಇಲ್ಲಿ ಚರ್ಚಿಸಿದೆ.

(ಇ) ಸೂಚಿ ಮಾಡಿರುವ, ಮಾಡಬೇಕಿರುವ ಹಸ್ತಪ್ರತಿಗಳು :– ಸೂಚಿ ಎಂದರೇನು? ಸೂಚಿಯ ಉದ್ದೇಶವೇನು? ಸೂಚಿ ಮಾಡುವ ವಿಧಾನ ಹೇಗೆ, ಬೇರೆ ಸೂಚಿಗಳಿಗೂ ಪ್ರತಿಷ್ಠಾನದ ಸೂಚಿಗಳಿಗೂ ಇರುವ ವ್ಯತ್ಯಾಸವೇನು? ಇನ್ನೂ ಸೂಚಿ ಮಾಡಬೇಕಿರುವ ಹಸ್ತಪ್ರತಿಗಳು ಎಷ್ಟು ಇವೆ ಎನ್ನುವ ವಿಚಾರಗಳ ಬಗ್ಗೆ ಇಲ್ಲಿ ಚರ್ಚಿಸಿದೆ.

(ಈ) ಹಸ್ತಪ್ರತಿ ತರಗತಿಗಳು :– ಪ್ರತಿಷ್ಠಾನ ನಶಿಸುತ್ತಿರುವ ಪ್ರಾಚೀನ ಹಸ್ತಪ್ರತಿಗಳನ್ನು ಓದುವ, ಪ್ರತಿಮಾಡುವ ಕಲೆಯನ್ನು ಇಲ್ಲಿ ಕಲಿಸಿಕೊಡುವುದಲ್ಲದೆ, ವೈಜ್ಞಾನಿಕವಾಗಿ ಓಲೆಗರಿ ಗ್ರಂಥಗಳನ್ನು ಸಂರಕ್ಷಿಸುವುದರಲ್ಲೂ, ಶಾಸ್ತ್ರೀಯವಾಗಿ ಸಂಪಾದಿಸುವುದಕ್ಕೆ ಸಂಬಂಧಿಸಿದ ಹಾಗೆ ತರಬೇತಿ ನೀಡುವ ನಾಲ್ಕು ತಿಂಗಳ ಪ್ರಶಿಕ್ಷಣವನ್ನು ಪ್ರತಿಷ್ಠಾನ ತನ್ನ ದಶಮನೋತ್ಸವ ಸ್ಮರಣೆಗಾಗಿ 1990ರಿಂದ ನಡೆಸುತ್ತಿದೆ. ಕರ್ನಾಟಕದಲ್ಲೇ ಪ್ರಾಯಶಃ ಭಾರತದಲ್ಲೇ ಏಕೈಕ ತರಬೇತಿ ಕೇಂದ್ರ ಇದಾಗಿದೆ. ಈ ಎಲ್ಲ ವಿಚಾರಗಳ ಬಗ್ಗೆ ಚರ್ಚಿಸಿದೆ.

(ಉ) ಸಂಚಾರಿ ಹಸ್ತಪ್ರತಿ ಸೇವೆ :– ರಜತೋತ್ಸವ ಸಂದರ್ಭದಲ್ಲಿ ಆರಂಭಿಸಿದ ಈ ಯೋಜನೆಯಲ್ಲಿ ನಾಡಿನಾದ್ಯಂತ ಶಾಲೆ–ಕಾಲೇಜು, ಸಂಘ–ಸಂಸ್ಥೆಗಳ ಬಳಿಗೆ ಹೋಗಿ ಪ್ರಾಚೀನ ಹಸ್ತಪ್ರತಿ ಪ್ರದರ್ಶನವನ್ನು ನಡೆಸುವ ಕಾರ್ಯವನ್ನು ಪ್ರತಿಷ್ಠಾನ ಹಾಗೇ ಪ್ರತಿಷ್ಠಾನಕ್ಕೆ ಬರುವ ಹಸ್ತಪ್ರತಿಗಳನ್ನು ಸಂರಕ್ಷಿಸಿ–ಸಂಪ್ರತಿ ಮಾಡಿಕೊಡುವ ಸೇವೆಯನ್ನು ಒದಗಿಸುತ್ತಿದೆ, ಅದರ ಸಾರ್ಥಕತೆ ಬಗ್ಗೆ ಇಲ್ಲಿ ಚರ್ಚಿಸಿದೆ.

5. ಅಧ್ಯಾಯ ಐದು :– ಬಿ.ಎಂ.ಶ್ರೀ ಪ್ರತಿಷ್ಠಾನದ ಹಸ್ತಪ್ರತಿ ಗ್ರಂಥಗಳು : ಒಂದು ಸಂಶೋಧನಾ ಸಂಸ್ಥೆಯಾಗಿ ಪ್ರತಿಷ್ಠಾನ ಸಂಶೋಧನೆಗೆ ಮೀಸಲಾದ ಪಾಂಡಿತ್ಯ ಪ್ರಧಾನ ಗ್ರಂಥಗಳನ್ನೇ ಪ್ರಕಟಿಸುತ್ತಿದೆ. ಇಲ್ಲಿಯವರೆಗೆ ಸುಮಾರು 70ಕ್ಕೂ ಹೆಚ್ಚು ಗ್ರಂಥಗಳನ್ನು ಪ್ರಕಟಿಸಿದೆ. ವಿವಿಧ ಸಾಂದರ್ಭಿಕ ವಿಶೇಷಗಳ ಮೂಲದಲ್ಲಿ ಪುಸ್ತಕ ಪ್ರಕಟಿಸುತ್ತಿದೆ. ಅವುಗಳ ಬಗ್ಗೆ ಇಲ್ಲಿ ಚರ್ಚಿಸುವುದಕ್ಕಾಗಿ ಈ ಅಧ್ಯಾಯದಲ್ಲಿ ಮೂರು ಉಪವಿಭಾಗಗಳನ್ನು ಮಾಡಿಕೊಂಡು ಚರ್ಚಿಸಿದೆ.

(ಅ) ಸೂಚಿ ಗ್ರಂಥಗಳು :– ಪ್ರತಿಷ್ಠಾನ ಪ್ರಕಟಿಸಿರುವ ಸೂಚಿಗ್ರಂಥಗಳನ್ನು ಇಲ್ಲಿ ವಿಶ್ಲೇಷಿಸಿದೆ. ಇವುಗಳೊಂದಿಗೆ ಬೇರೆ ಬೇರೆ ವಿಶ್ವವಿದ್ಯಾಲಯಗಳ ಸೂಚಿಗಳಿಗೂ, ಖಾಸಗಿ ಸಂಘಸಂಸ್ಥೆಗಳ ಸೂಚಿಗಳಿಗೂ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಸೂಚಿಗಳಿಗೂ ಇರುವ ವಿಶೇಷವಾದ ವ್ಯತ್ಯಾಸಗಳ ಬಗ್ಗೆ ಇಲ್ಲಿ ಚರ್ಚಿಸಿದೆ.

(ಆ) ಸಂಪಾದಿತ ಗ್ರಂಥಗಳು :– ಇಲ್ಲಿಯವರೆಗೂ 15ಕ್ಕೂ ಹೆಚ್ಚು ಪ್ರಾಚೀನ ಗ್ರಂಥಗಳನ್ನು ಸಂಪಾದಿಸಿ ಪರಿಷ್ಕರಿಸಿ ಪ್ರಕಟಿಸಿ, ಪ್ರತಿಷ್ಠಾನದ ಹಸ್ತಪ್ರತಿಭಂಡಾರದಲ್ಲೇ ಇದ್ದ ಹಲವಾರು ಅಪ್ರಕಟಿತ ಗ್ರಂಥಗಳನ್ನು ಪ್ರಕಟಿಸಿದೆ. ಸೂತಭಾರತ, ಧ್ರುವಚರಿತೆ, ಶ್ರೀಕೃಷ್ಣದೇವರಾಯ, ಚಂದ್ರಚೂಡಾಮಣಿ ಶತಕ, ಹೀಗೆ ಇನ್ನೂ ಹಲವು ಗ್ರಂಥಗಳನ್ನು ಗ್ರಂಥಸಂಪಾದನಾ ಶಿಸ್ತಿಗೆ ಅನುಗುಣವಾಗಿ ಸಂಪಾದಿಸಲಾಗಿದ್ದು, ಪಾಠಂತರಗಳ ನಿಷ್ಕರ್ಷೆ, ವಿಸ್ತೃತ ಪ್ರಸ್ತಾವನೆ,

ಕವಿಕಾವ್ಯವಿಚಾರ ಮತ್ತು ಸೂಕ್ತ ಅನುಬಂಧಗಳೊಂದಿಗೆ ಶಾಸ್ತ್ರೀಯವಾಗಿ ಸಂಪಾದಿಸಲಾಗಿದೆ. ಈ ಸಂಪಾದಿತಗ್ರಂಥಗಳ ಬಗ್ಗೆ ಇಲ್ಲಿ ವಿವರವಾಗಿ ಚರ್ಚಿಸಲಾಗಿದೆ.

(ಇ) ಹಸ್ತಪ್ರತಿಶಾಸ್ತ್ರ ಗ್ರಂಥಗಳು :– ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ತನ್ನ ಸಂಶೋಧನಾ ಚಟುವಟಿಕೆಗಳಿಗೆ ಅನುಗುಣವಾಗಿ ಕಾಲಕಾಲಕ್ಕೆ ಅವಿಷ್ಕಾರಗೊಳ್ಳುವ ನೂತನ ಅಧ್ಯಯನ ಶಿಸ್ತುಗಳಿಗೆ ಅಗತ್ಯ ಲಕ್ಷಣ ಗ್ರಂಥಗಳನ್ನು ಸಿದ್ಧಪಡಿಸುವುದೂ ಒಂದಾಗಿದೆ. 1980ರ ದಶಕದಲ್ಲಿ "ಹಸ್ತಪ್ರತಿಶಾಸ್ತ್ರ" ಎಂಬ ನೂತನ ಶಿಸ್ತನ್ನು ರೂಪಿಸಿ 'ಮಣಿಹ', 'ಹಸ್ತಪ್ರತಿಶಾಸ್ತ್ರ', 'ಹಸ್ತಪ್ರತಿಶಾಸ್ತ್ರಪರಿಚಯ' ಎಂಬ ಶಾಸ್ತ್ರ ಗ್ರಂಥಗಳನ್ನು ಪ್ರಕಟಿಸಿದೆ. ಈ ಮೌಲ್ಯಾಧಾರಿತ ಗ್ರಂಥಗಳ ಬಗ್ಗೆ ವಿವರವಾಗಿ ಇಲ್ಲಿ ಚರ್ಚಿಸಿದೆ.

6. ಅಧ್ಯಾಯ ಆರು :– ಸಮಾರೋಪ :– ಈ ಅಧ್ಯಾಯದಲ್ಲಿ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಪ್ರಾರಂಭವಾಗುವುದಕ್ಕಿಂತ ಮೊದಲೇ ಪ್ರಾರಂಭವಾದ ಹಸ್ತಪ್ರತಿಸಂಸ್ಥೆಗಳಿಗೂ, ಪ್ರತಿಷ್ಠಾನ ಪ್ರಾರಂಭವಾದ ನಂತರದ ಹಸ್ತಪ್ರತಿಗಳಿಗೂ ಇರುವ ವ್ಯತ್ಯಾಸಗಳನ್ನು ಗಮನಿಸಲಾಗಿದೆ. ಅಂದರೆ ಮೊದಲು ಮತ್ತು ನಂತರದ ಹಸ್ತಪ್ರತಿಗಳಿಗಿಂತ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಹೇಗೆ ಭಿನ್ನ ಎಂಬ ವಿಶೇಷ ಅಂಶಗಳ ಬಗ್ಗೆ ಚರ್ಚಿಸಿದೆ.

ವ್ಯಾಪ್ತಿ :–

ಬಿ.ಎಂ.ಶ್ರೀ ಪ್ರತಿಷ್ಠಾನದ ಮುಖ್ಯ ಉದ್ದೇಶವೇ ಪ್ರಾಚೀನ ಹಸ್ತಪ್ರತಿಗಳನ್ನು ಸಂಗ್ರಹಿಸಿ, ಸಂರಕ್ಷಿಸಿ, ಅವುಗಳಲ್ಲಿರುವ ಮೌಲಿಕ ವಿಷಯಗಳನ್ನು ಗ್ರಂಥರೂಪದಲ್ಲಿ ಪ್ರಕಟಿಸಿ ನಾಡಿಗೆ ಪರಿಚಯಿಸುವ ಸ್ವಾರ್ಥರಹಿತ ಕಾರ್ಯವನ್ನು ನಿರಂತರವಾಗಿ ನಿರ್ವಹಿಸುತ್ತಿದೆ. ಇಂತಹ ಸತ್ಕಾರ್ಯವನ್ನು ಒಳಗೊಂಡಿರುವ ಅಂದರೆ ಹಸ್ತಪ್ರತಿಗಳ ಅಧ್ಯಯನವನ್ನೇ ತನ್ನ ಗುರಿಯಾಗಿ ಹೊಂದಿರುವ ಪ್ರತಿಷ್ಠಾನದ ಕಾರ್ಯ ಚಟುವಟಿಕೆಗಳ ಕಡೆ ಈ ಅಧ್ಯಯನ ಹೆಚ್ಚು ಗಂಭೀರವಾಗಿ ಚರ್ಚಿಸಲು ಪ್ರಯತ್ನಿಸಿದೆ. ಇವುಗಳನ್ನೊಳಗೊಂಡ ಹಸ್ತಪ್ರತಿಶಾಸ್ತ್ರವನ್ನು ಅಧ್ಯಯನ ಶಿಸ್ತನ್ನಾಗಿ ಪ್ರತಿಷ್ಠಾನ ರೂಪಿಸಿರುವ ರೀತಿಯನ್ನಷ್ಟೇ ಇಲ್ಲಿ ಕೇಂದ್ರೀಕರಿಸಲಾಗಿದೆ. ಪ್ರತಿಷ್ಠಾನದ ಕಾರ್ಯ ಚಟುವಟಿಕೆಗಳು ವ್ಯಾಪಕತೆಯನ್ನು ಪಡೆದಿದ್ದು ಬಹುಮುಖವಾಗಿದೆ. ಬೇರೆ ಬೇರೆ ಕಾರ್ಯಕ್ರಮಗಳಾದ 'ಕರ್ನಾಟಕ ಲೋಚನ ವಿದ್ವತ್ ಪತ್ರಿಕೆ' ಪ್ರಕಟಣೆ, ದತ್ತಿ ಉಪನ್ಯಾಸ ಕಾರ್ಯಕ್ರಮಗಳು, ಸಾಹಿತ್ಯ ಪ್ರಶಸ್ತಿಗಳು, ವಿಚಾರ ಗೋಷ್ಠಿಗಳು, ಸಾಂಸ್ಕೃತಿಕ ಚಟುವಟಿಕೆಗಳು, ಗ್ರಂಥಪ್ರಕಟಣೆಗಳು ಮುಂತಾದ ಅನೇಕ ಚಟುವಟಿಕೆಗಳು ಪ್ರತ್ಯೇಕವಾದ ಅಧ್ಯಯನವಾಗುವಷ್ಟು ವಿಷಯ ವಿಸ್ತಾರವಾಗಿರುವುದರಿಂದ ಅ ಎಲ್ಲ ಚಟುವಟಿಕೆಗಳೂ ಈ ಅಧ್ಯಯನ ವ್ಯಾಪ್ತಿಗೆ ಬರುವುದಿಲ್ಲ. ಅಧ್ಯಯನದ ಮಿತಿಗೆ ಅನುಗುಣವಾಗಿ "ಹಸ್ತಪ್ರತಿಶಾಸ್ತ್ರಕ್ಕೆ ಬಿ.ಎಂ.ಶ್ರೀ ಪ್ರತಿಷ್ಠಾನದ ಕೊಡುಗೆ" ಇದಕ್ಕೆ ಪೂರಕವಾದ ಕಾರ್ಯಚಟುವಟಿಕೆಯನ್ನು ಮಾತ್ರ ಈ ಪ್ರಬಂಧದ ವ್ಯಾಪ್ತಿಯನ್ನಾಗಿ ಗುರಿತಿಸಿದೆ.

ಅಡಿಟಿಪ್ಪಣಿಗಳು

1. ಕನ್ನಡ ಹಸ್ತಪ್ರತಿ ರಚನೆ ಭಾಷಿಕ ವಿವೇಚನೆ, 2006 ಡಾ॥ ಎಸ್.ಎಸ್.ಅಂಗಡಿ, ಕ.ವಿ.ಹಂಪಿ, ಭಾಷೆ ಮತ್ತು ಲಿಪಿ, ಪುಟ–207

2. ಪ್ರೊ॥ನಾ.ಗೀತಾಚಾರ್ಯ, ಕನ್ನಡದಲ್ಲಿ ಗ್ರಂಥಸಂಪಾದನೆಯ ಇತಿಹಾಸ: ಒಂದು ಪರಿಶೀಲನೆ, ಸುಕೃತಿ: ಪ್ರೊ॥ಟಿ.ಕೇಶವ ಭಟ್ಟರ ಸಂಸ್ಮರಣ ಗ್ರಂಥ, ಬೆಂಗಳೂರು, 226–ಪುಟ.

3. ಪ್ರೊ॥ಎಂ.ವಿ.ಸೀತಾರಾಮಯ್ಯ, ಹಸ್ತಪ್ರತಿಶಾಸ್ತ್ರದ ಸಮಸ್ಯೆಗಳು, ಹಸ್ತಪ್ರತಿಶಾಸ್ತ್ರ, ಬೆಂಗಳೂರು, 1983, ಪುಟ–4

4. ಡಾ॥ಎಂ.ಎಂ.ಕಲಬುರ್ಗಿ, ಹಸ್ತಪ್ರತಿಶಾಸ್ತ್ರ: ಅದರ ವಿವಿಧ ಮೂಲಗಳು, ಹಸ್ತಪ್ರತಿಶಾಸ್ತ್ರ, ಬೆಂಗಳೂರು, 1983 ಪುಟ–26

5. ಪ್ರೊ॥ನಾ.ಗೀತಾಚಾರ್ಯ, ಹಸ್ತಪ್ರತಿಭಂಡಾರ, ರಜತಸಿರಿ, ಬೆಂಗಳೂರು, 2004, ಪುಟ–42

ಅಧ್ಯಾಯ – 2

ಹಸ್ತಪ್ರತಿಶಾಸ್ತ್ರದ ಸ್ವರೂಪ ಮತ್ತು ವ್ಯಾಪ್ತಿ

ಶೋಭಾಯಮಾನವಾದ ಭಾರತೀಯ ವಿಚಾರಶಕ್ತಿಯ ಇತಿಹಾಸ ಮೂರು ಸಾವಿರ ವರ್ಷಗಳು ನಿರರ್ಗಳವಾಗಿ ನಡೆದು ಬಂದಿದೆ. ಅಲ್ಲದೇ ಭಾರತೀಯ ನಾಗರೀಕತೆ ಒಂದು ಕಾಲದಲ್ಲಿ ಬಹಳ ಮುಂದುವರಿದಿತ್ತೆಂಬುದು ನಿರ್ವಿವಾದ. ಆ ನಾಗರೀಕತೆಯ ಕಾಲದಲ್ಲಿ ನಮ್ಮಲ್ಲಿದ್ದ ಬಹುಮುಖ ಪ್ರೌಢಿಮೆಯು ನಾನಾ ಉಪಯುಕ್ತ ಗ್ರಂಥಗಳ ರಚನೆಯಲ್ಲಿ ಮುಂದುವರಿಯಿತು. ಆ ಪ್ರಕಾರವಾಗಿ ವೇದಾಂತ, ಧರ್ಮ, ರಾಜಕೀಯ, ಸಾಹಿತ್ಯ ಮತ್ತು ಇತರ ಲಲಿತಕಲೆಗಳು ಹಾಗೂ ಇತಿಹಾಸ, ಪುರಾಣ, ನಿಘಂಟು, ವ್ಯಾಕರಣ, ಗಣಿತ, ವೈಧ್ಯ ಮುಂತಾದ ಶಾಸ್ತ್ರೀಯ ಗ್ರಂಥಗಳು ರಚಿಸಲ್ಪಟ್ಟವು. ಈ ಗ್ರಂಥಗಳ ಬಹುಭಾಗದ ಮೂಲ ಆಕರ ಹಸ್ತಪ್ರತಿ, ತಾಳಪತ್ರ ಆಗಿದ್ದು ಅವುಗಳನ್ನೆಲ್ಲಾ ಕೂತೂಹಲವಾಗಿ ಅಭ್ಯಸಿಸಿ, ಸಂಶೋಧಿಸಿ, ಪ್ರಕಟಪಡಿಸುವುದು ಇಂದಿನ ಪೀಳಿಗೆಯ ಆದ್ಯ ಕರ್ತವ್ಯವಾಗಿದೆ. ಈ ದೃಷ್ಟಿಯಲ್ಲಿ ಭಾರತೀಯ ಪ್ರಾಚ್ಯ ಸಂಶೋಧನಾಲಯಗಳು, ವಿಶ್ವವಿದ್ಯಾನಿಲಯಗಳು ಖಾಸಗಿ ಸಾಂಸ್ಕೃತಿಕ ಸಾಹಿತ್ಯ ಸಂಘ ಸಂಸ್ಥೆಗಳು ಮಾಡುತ್ತಿರುವ ಸೇವೆ–ಸ್ತುತ್ಯರ್ಹ. ಅಳಿದು ಹೋಗುತ್ತಿರುವ ನಮ್ಮ ಜ್ಞಾನಭಂಡಾರವನ್ನು ನೋಡಿ ಎಚ್ಚೆತ್ತುಕೊಂಡು ಪುನಃ ಅದರ ಪುರೋಭಿವೃಧ್ಧಿಗೆ ಶ್ರಮಿಸಬೇಕಾದರೆ ಅವರಿಗೆ ಮುಖ್ಯವಾಗಿ ಸಂಸ್ಕೃತ ಭಾಷೆ, ಪ್ರಾಕೃತ, ಪಾಳಿ ಮತ್ತು ದ್ರಾವಿಡಭಾಷೆಗಳಲ್ಲಿ ಪಾಂಡಿತ್ಯವಿರಬೇಕಾಗಿತ್ತು ಇಂತಹ ಪಾಂಡಿತ್ಯದಿಂದ ಪ್ರಾಚೀನ ಗ್ರಂಥಗಳು ಹೊರಬರಲು ಸಾಧ್ಯವಾಯಿತು.

ಪ್ರಾಚೀನ ಭಾರತದಲ್ಲಿ ಅಧ್ಯಯನ ಮತ್ತು ವಿದ್ಯಾಭ್ಯಾಸ ಕ್ರಮಗಳು ಗುರುಕುಲ ಕೇಂದ್ರಗಳಲ್ಲಿ, ಮಠಗಳಲ್ಲಿ ಗುರುವಿನಿಂದ ಶಿಷ್ಯರಿಗೆ ಬೋಧಿಸಲ್ಪಡುತ್ತಿದ್ದವು. ಅಂದರೆ ಈಗಿನಂತೆ ಪಠ್ಯಪುಸ್ತಕಗಳಾಗಲಿ, ಪರಿಕರ ಗ್ರಂಥಗಳಾಗಲಿ ಇರಲಿಲ್ಲ. ಶಿಷ್ಯರು ಕೂಡ ಈಗಿನಂತೆ ಟಿಪ್ಪಣಿಗಳನ್ನು ಗುರುತು ಹಾಕಿಕೊಳ್ಳುತ್ತಿರಲ್ಲಿಲ್ಲ. ಕೇವಲ ಗುರುಮುಖೇನ ಕಿವಿಗೆ ಬಿದ್ದ ವಿಷಯಗಳು ಶಿಷ್ಯರ ಸ್ಮೃತಿಪಟಲದಲ್ಲಿ ವಿಕಾಸ ಹೊಂದಿ ಸಂಸ್ಕಾರವಾಗುತ್ತಿತ್ತು. ಕಾಲಕ್ರಮೇಣ ಈ ಶಕ್ತಿಯು ಕುಗ್ಗುತ್ತಾ ಹೋದುದರಿಂದಲೋ ಅಥವಾ ಬರವಣಿಗೆಯು ರೂಢಿಗೆ ಬಂದ ಕಾರಣದಿಂದಲೋ ಜ್ಞಾನಕ್ಕೆ ಸಂಬಂಧಪಟ್ಟ ವಿಷಯಗಳನ್ನು ಬರೆದಿಡುವ ಪದ್ಧತಿ ಪ್ರಾರಂಭವಾಯಿತು. ಕಾಗದವು ಬರವಣಿಗೆಯ ಸಾಧನವಾಗಿ ಬರುವುದಕ್ಕೆ ಮುಂಚೆ ಪ್ರಕೃತಿದತ್ತವಾದ ಅನೇಕ ಪರಿಕರಗಳನ್ನು ಬರವಣಿಗೆಗೆ ಬಳಸಿರುವ ದಾಖಲೆಗಳಿವೆ. ಇಂತಹ ದಾಖಲೆಗಳನ್ನೇ ಇಂದು ಹಸ್ತಪ್ರತಿಗಳು ಎಂದು ಕರೆಯುವುದು.

ಅ) ಹಸ್ತಪ್ರತಿಶಾಸ್ತ್ರ ಎಂದರೇನು? :-

ಹಸ್ತಪ್ರತಿಯನ್ನು ಪ್ರಾಚೀನ ಕೃತಿ ಎಂದು ಅರ್ಥೈಸಿದರೆ, ಹಸ್ತಪ್ರತಿಗಳ ಅಧ್ಯಯನ ಶಿಸ್ತನ್ನು "ಹಸ್ತಪ್ರತಿಶಾಸ್ತ್ರ" ಎಂದು ಕರೆಯಲಾಗುತ್ತದೆ. ಪ್ರಾಚೀನ ಕಾಲದ ಹಸ್ತಪ್ರತಿಗಳ ಬಗ್ಗೆ ಪ್ರೊ.ನಾ.ಗೀತಾಚಾರ್ಯರು "ಕೈಬರಹದ ಎಲ್ಲ ಗ್ರಂಥಗಳನ್ನೂ 'ಹಸ್ತಪ್ರತಿಗಳು' ಎಂದು ಕರೆಯಬಹುದಾದರೂ ಪ್ರಾಚೀನ ಕಾಲದ ಗ್ರಂಥಗಳನ್ನು ಮಾತ್ರ ಹಸ್ತಪ್ರತಿಗಳು ಎಂದು ನಿರ್ಧರಿಸಲಾಗಿದೆ. ಎಲ್ಲ ಕೈಬರಹದ ದಾಖಲೆಗಳೂ, ಹಸ್ತಪ್ರತಿಗಳೇ ಆದರೂ ಮುದ್ರಣಕ್ಕೆ ಅಣಿಮಾಡುವ ಇಂದಿನ ಹಸ್ತಪ್ರತಿಗಳು, ಆಧುನಿಕರು ಬರೆಯುವ ಕಾಗದ ಪ್ರತಿಗಳು ಇವುಗಳನ್ನು ಹೊರತುಪಡಿಸಿ ಪ್ರಾಚೀನ ಕಾಲದ ತಾಳೆಗರಿ, ಭೂರ್ಜಪತ್ರಗಳಲ್ಲಿ ಬರೆದಿಡುವ ಗ್ರಂಥಪ್ರತಿಗಳನ್ನು ಮಾತ್ರ ಹಸ್ತಪ್ರತಿಗಳು ಎಂದು ತಿಳಿಯಲಾಗುತ್ತದೆ"[1] ಎಂದು ಹೇಳಿರುವ ಹೇಳಿಕೆಯನ್ನು ನೋಡಿದಾಗ ಹಸ್ತಪ್ರತಿಗಳು ಪ್ರಾಚೀನ ಕಾಲದ ದಾಖಲೆಗಳೆಂದು ತಿಳಿಯುತ್ತದೆ.

ಪ್ರಾಚೀನ ಓಲೆಗರಿ ಮತ್ತು ಕಾಗದದಲ್ಲಿ ಬರೆದಿರುವ ಗ್ರಂಥಗಳನ್ನು ಸಾಮಾನ್ಯವಾಗಿ ಹಸ್ತಪ್ರತಿಗಳು ಎನ್ನಲಾಗಿದೆ. ಈ ಹಸ್ತಪ್ರತಿಗಳ ಸ್ವರೂಪ, ಮಹತ್ವ, ಸಂಗ್ರಹ, ಸಂರಕ್ಷಣೆ, ಸಂಪ್ರತೀಕರಣ, ಸೂಚೀಕರಣ ಇತ್ಯಾದಿಗಳನ್ನು ಒಳಗೊಂಡಿದ್ದೇ ಹಸ್ತಪ್ರತಿಶಾಸ್ತ್ರ. ಬ್ರಿಟಾನಿಕಾ ವಿಶ್ವಕೋಶದಲ್ಲಿ ಕೊಟ್ಟ ವಿವರಣೆ ಹೀಗಿದೆ.

"ಬ್ರಿಟಾನಿಕಾ ವಿಶ್ವಕೋಶವು ಬರಹಗಳೆಲ್ಲವನ್ನು ದಾಖಲೆಗಳು (Documnets) ಎಂದು ಒಟ್ಟಾಗಿ ಗ್ರಹಿಸಿ "ಯಾವುದೇ ಒಂದು ಸಂಗತಿಯನ್ನು ನಿವೇದಿಸಲು ಅಥವಾ ದಾಖಲೆಗೊಳಿಸಿ ರಕ್ಷಿಸಲು ಶಾಶ್ವತವಾದ ಮತ್ತು ಬಿರುಸಾದ ಸಾಮಗ್ರಿಗಳ ಮೇಲೆ ಕೆತ್ತಿದುದನ್ನು ಶಾಸನ" ವೆಂದು ವಿವರಿಸಿದರೆ "ಮೃದುವಾದ ಸಮತಲದ ಸಸಿರಸ್, ಹದಮಾಡಿದ ಚರ್ಮಕಾಗದ ಮತ್ತು ಕಾಗದ ಇತ್ಯಾದಿ ಸಾಮಗ್ರಿಗಳ ಮೇಲೆ ವರ್ಣವನ್ನುಪಯೋಗಿಸಿಕೊಂಡು ಕುಂಚ, ಲೇಖನಿ ಇಲ್ಲವೆ ಅಲಗಿನಿಂದ ಬರೆಯಲಾದವುಗಳನ್ನು ಹಸ್ತಪ್ರತಿ" ಗಳೆಂದು ಗುರುತಿಸಿ ಇವು ಶಾಸನಗಳಿಂದ ಭಿನ್ನವಾದವುಗಳು"[2] ಎನ್ನುತ್ತದೆ.

ಶ್ರಿ.ಎಸ್.ಎಮ್.ಕತ್ರೆಯವರು "ಗ್ರಂಥಗಳನ್ನು ಹಲವಾರು ಪ್ರತಿಗಳನ್ನಾಗಿ ಪಡೆಯುವ ತಾಂತ್ರಿಕ ಸೌಲಭ್ಯವು ಇಲ್ಲದಂತಹ ಕಾಲದಲ್ಲಿ ಕೈಯಿಂದ ಬರೆಯಲಾದ ಮೂಲ ಮಾತೃಕೆ ಮತ್ತು ಅದನ್ನು ಎದುರಿಟ್ಟುಕೊಂಡು ಅಕ್ಷರಶಃ ಶಬ್ದಶಃ ಮಾಡಲಾದ ಅದೇ ಮಾತೃಕೆಯ ಮುಂದಿನ ಪ್ರತಿಗಳು ಇವೆಲ್ಲವನ್ನು ಒಟ್ಟಿಗೆ ಹಸ್ತಪ್ರತಿಗಳೆಂದು ಕರೆಯಲಾಗುತ್ತದೆ ಎನ್ನುತ್ತಾರೆ".[3]

ಭಾರತೀಯರು ಸಾವಿರಾರು ವರ್ಷಗಳ ಹಿಂದಿನಿಂದ ತಮ್ಮ ಅನುಭವ, ಅನಿಸಿಕೆ, ಆಲೋಚನೆ, ಆಚಾರ–ವಿಚಾರ, ವೇದ–ವೇದಾಂತಗಳು, ಶಾಸ್ತ್ರ–ಪುರಾಣ, ಕಾವ್ಯ, ಕಥೆ, ಕಾಣ್ಕೆಗಳನ್ನು ತಮ್ಮ ಮುಂದಿನ ಪೀಳಿಗೆಯವರಿಗೆ ಮುಖ್ಯವಾಗಿ ಭೂರ್ಜಪತ್ರಗಳ ಮೇಲೆ, ತಾಳೆಯ ಗರಿಗಳ ಮೇಲೆ ಲೆಕ್ಕಣಿಕೆ, ಉಳಿ, ಕೈವಾರ, ರೇಖಾಪಟ್ಟಿ, ಕಪ್ಪುಮಸಿ ಇನ್ನೂ ಮುಂತಾದ ಲೇಖನೋಪಕರಣಗಳನ್ನು ಬಳಸಿ ಕೊರೆದಿರುವ, ಬರೆದಿರುವ ಹಸ್ತಪ್ರತಿಗಳು ಇಂದು ನಮ್ಮ ಮುಂದಿವೆ. ಅಂತಹ ಪ್ರತಿಗಳನ್ನು ಹುಡುಕಿ, ಸಂರಕ್ಷಿಸಿ ಅದರಲ್ಲಿರುವ ಭೌದ್ಧಿಕ ಜ್ಞಾನವನ್ನು ಬಳಸಿಕೊಳ್ಳುವುದು ಸಹ ನಮ್ಮ ಕೆಲಸಗಳಲ್ಲಿ ಒಂದಾಗಿದೆ. ಇಂತಹ ವಿಶೇಷವಾದ ಪುರಾತನ ಕಾಲದ ಸಂಪತ್ತನ್ನು ಉಳಿಸಿ ಬೆಳೆಸುವ ಕೆಲಸ ಕರ್ನಾಟಕದಲ್ಲಿ ಅವ್ಯಾಹತವಾಗಿ ನಡೆದಿದೆ. ಹಸ್ತಪ್ರತಿಗಳ ಆಂತರಿಕ ಶಕ್ತಿ ಹೇಗಿದೆ ಎಂಬುದು ಇಂತಹ ಮೌಲ್ಯಯುತ ಹಸ್ತಪ್ರತಿಗಳನ್ನು ಕಾಪಾಡುವ ಹಸ್ತಪ್ರತಿ ಭಂಡಾರವನ್ನು ಹಾಗೂ ಹಸ್ತಪ್ರತಿಗಳಲ್ಲಿರುವ ವಿಷಯವನ್ನು ಪರಿಚಯಿಸುವ ಕಾರ್ಯದಲ್ಲಿ 1979ರಿಂದ ನಿರತವಾಗಿರುವ ಬೆಂಗಳೂರಿನ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಶ್ರದ್ಧೆ, ಗೌರವಗಳಿಂದ ಈ ಕೆಲಸ ಮಾಡುತ್ತಲಿದೆ. ಇದರಿಂದ ಉಂಟಾದ ಜಾಗೃತಿಯ ಪರಿಣಾಮವಾಗಿ ಶ್ರೀಯುತ ಡಾ॥ ಹಾ.ಮಾ.ನಾಯಕ ಅವರು ಗದುಗಿನ ಶ್ರೀ ತೊಂಟದಾರ್ಯ ಮಠದಲ್ಲಿ ಅತಿಥಿಯಾಗಿ ಮಾತನಾಡುತ್ತ "1981ನೆಯ ವರ್ಷವನ್ನು "ಹಸ್ತಪ್ರತಿವರ್ಷ ಎಂದು ಸರ್ಕಾರ ಘೋಷಿಸಬೇಕು".[4] ಎಂದು ಹೇಳಿದ ಮಾತನ್ನು ನೆನಪಿಸಿಕೊಂಡರೆ ತಿಳಿಯುತ್ತದೆ.

"ಕೈ–ಬರವಣಿಗೆಯಾದ ಶಾಸನ ಪ್ರತಿಗಳನ್ನು ಕುರಿತು 'ಶಾಸನಶಾಸ್ತ್ರ' ಹೆಸರಿನ ಅಧ್ಯಯನಶಾಖೆಯ ಕಳೆದ ಎರಡನೂರು ವರ್ಷಗಳಿಂದ ನಮ್ಮಲ್ಲಿ ಬೆಳೆದುಬಂದಿದೆ. ಅನೇಕ ಅರ್ಥಗಳಲ್ಲಿ ತುಂಬ ಭಿನ್ನವಾಗಿರುವ ಇದು, 'ಹಸ್ತಪ್ರತಿಶಾಸ್ತ್ರ' (Manuscriptology)ದ ರಚನೆಗೆ ಆದರ್ಶವಾಗಲಾರದು. ದಾಖಲು ಪ್ರತಿಗಳನ್ನು ಕುರಿತು 'ದಾಖಲು ಶಾಸ್ತ್ರ', ಮುದ್ರಾಪ್ರತಿ (Press copy) ಯನ್ನು ಕುರಿತ 'ಮುದ್ರಾಪ್ರತಿಶಾಸ್ತ್ರ'ಗಳು ಇನ್ನೂ ಸ್ಪಷ್ಟ ಆಕಾರ ಪಡೆದಿಲ್ಲವೆಂದೇ ಹೇಳಬೇಕು. ಒಂದು ವೇಳೆ ಆಕಾರ ಪಡೆದರೂ ಆ ಶಾಸ್ತ್ರಗಳು ಹಸ್ತಪ್ರತಿಶಾಸ್ತ್ರಕ್ಕೆ ಏನೂ ನೆರವು ನೀಡುವಂತಿಲ್ಲ ಒಟ್ಟಿನಲ್ಲಿ ಈ ನಾಲ್ಕು ಸ್ವತಂತ್ರ ಸ್ವರೂಪದ ಕ್ಷೇತ್ರಗಳಾಗಿವೆ."[5]

ವಿದ್ವಾಂಸರು, ಸಂಘಸಂಸ್ಥೆಗಳು ಈ ಕ್ಷೇತ್ರದಲ್ಲಿ ವಿಶೇಷ ಆಸಕ್ತಿ ವಹಿಸಿದರ ಪರಿಣಾಮವಾಗಿ ಹಸ್ತಪ್ರತಿಶಾಸ್ತ್ರದ ಜೊತೆಗೆ ಗ್ರಂಥಸಂಪಾದನಾ ಶಾಖೆ ಇನ್ನೂ ವಿಸ್ತಾರಗೊಂಡು ವಿಶಾಲವಾದ ಅಧ್ಯಯನ ವ್ಯಾಪ್ತಿಯನ್ನು ಒಳಗೊಂಡು 80ರ ದಶಕದಲ್ಲಿ ಇನ್ನೊಂದು ಶಾಖೆಯ ಹುಟ್ಟಿಗೆ ಕಾರಣವಾಗಿದೆ. ಈವರೆಗೆ ಹಸ್ತಪ್ರತಿಗಳನ್ನು ಬಳಸಿಕೊಂಡು

ಗ್ರಂಥಗಳ ಸಂಪಾದನೆಗೆ ಪ್ರಾಧಾನ್ಯತೆ ನೀಡಲಾಗುತ್ತಿತ್ತೇ ವಿನಾ: ಅವುಗಳ ಸಂಗ್ರಹ, ಸಂರಕ್ಷಣೆಗೆ ಅಷ್ಟು ಮಹತ್ವ ಇರಲಿಲ್ಲ. ಈ ಬಗ್ಗೆ ವಿಶೇಷ ಗಮನ ಹರಿಸಿದ ಬಿ.ಎಂ.ಶ್ರೀ ಪ್ರತಿಷ್ಠಾನದ ವಿದ್ವಾಂಸರ ವರ್ಗ ಮತ್ತು ಸಂಘ ಸಂಸ್ಥೆಗಳ ಕಾರ್ಯಶೀಲತೆಯ ಫಲವಾಗಿ ಗ್ರಂಥಸಂಪಾದನೆಗೆ ಪೂರ್ವಭಾವಿಯಾದ ಈ ಹಸ್ತಪ್ರತಿಗಳ ಸಂಗ್ರಹಣ, ಸಂರಕ್ಷಣ, ಸಂಪ್ರತಿ ವಿಧಾನವನ್ನೇ ಮುಖ್ಯವಾಗಿ ಒಳಗೊಂಡ 'ಹಸ್ತಪ್ರತಿಶಾಸ್ತ್ರ'ದ ನಿರ್ಮಾಣವಾಯಿತು.

ಕನ್ನಡ ಹಸ್ತಪ್ರತಿಗಳಲ್ಲಿ ಕಾವ್ಯ, ಪುರಾಣ, ಪುಣ್ಯಕಥೆ– ಇಷ್ಟೇ ಇರುವುದು; ಹೆಚ್ಚಿಗೆ ಇನ್ನೇನೂ ಇರುವುದಿಲ್ಲವೆಂಬ ಭಾವನೆ ವಿದ್ಯಾವಂತರೆನ್ನಿಸಿಕೊಂಡಿರುವ ಅನೇಕ ಕನ್ನಡಿಗರ ಮನೆಗಳಲ್ಲಿ ನಿಗೂಢವಾಗಿ ಹುದುಗಿರುತ್ತದೆ. ಇದು ಅವರ ಅಜ್ಞಾನದ ಫಲ. ಕನ್ನಡಿಗರು ವಿವೇಕಿಗಳೂ ದೂರದೃಷ್ಟಿಯುಳ್ಳವರೂ ಆಗಿದ್ದರು, ಇತರ ಭಾರತೀಯರಂತೆ, ಕನ್ನಡವೊಂದನ್ನೇ ಓದಲೂ ಬರೆಯಲೂ ಬಲ್ಲವರು ಕಾವ್ಯರಾಮಗಳಲ್ಲಿಯೇ ಪುರಾಣ ಪುಣ್ಯಕಥೆಗಳ ಪ್ರಪಂಚದಲ್ಲಿಯೇ ವಿಹರಿಸುತ್ತಿದ್ದರೆ ಸಾಲದು, ಶಾಸ್ತ್ರ, ವೇದ, ಉಪನಿಷತ್ತುಗಳ ಅಧ್ಯಯನದಿಂದ ದೈಹಿಕ, ಬೌದ್ಧಿಕ, ಆಧ್ಯಾತ್ಮಿಕ ಬಲಗಳನ್ನು ಗಳಿಸಿಕೊಂಡು ಜೀವನಾನೂಕೂಲಗಳನ್ನು ಕಲ್ಪಿಸಿಕೊಂಡು ಇಹಪರಗಳೆರಡರಲ್ಲಿಯೂ ಸೊಗಸು, ಸೊಬಗು ಸೌಂದರ್ಯಗಳನ್ನು ಸಾಧಿಸಿಕೊಳ್ಳಬೇಕೆಂಬುದು ಪ್ರಾಚೀನರ ನಂಬಿಕೆಯಾಗಿತ್ತು. ಕನ್ನಡ ಜನರ ಜೀವನವು ವೈವಿಧ್ಯಪೂರ್ಣವೂ ವರ್ಣರಂಜಿತವೂ ವಿವಿಧ ಧಾತುಸಮನ್ವಿತವೂ ಸುಸಂಸ್ಕೃತವೂ ಆಗಿದ್ದಿತೆಂಬುದಕ್ಕೆ, ಹನ್ನೊಂದು ಹನ್ನೆರಡನೆಯ ಶತಮಾನಗಳಲ್ಲಿಯೇ ಹುಟ್ಟಿದ ವಿಜ್ಞಾನ ಗ್ರಂಥಗಳೇ ಸಾಕ್ಷಿ. ಇಂತಹ ಅಮೂಲ್ಯ ಆಸ್ತಿಯನ್ನು ಸಂರಕ್ಷಿಸಲು ಕರ್ನಾಟಕದ ಸಾಹಿತ್ಯ ವಲಯ ಸಜ್ಜಾಯಿತು.

"1981ರಲ್ಲಿ ನಡೆದ 'ವಚನ ಸಾಹಿತ್ಯ ಪಿತಾಮಹ' ಫ.ಗು.ಹಳಕಟ್ಟಿ ಅವರ ಜನ್ಮ ಶತಮನೋತ್ಸವ ಸಂದರ್ಭದಲ್ಲಿ ಹಸ್ತಪ್ರತಿಗಳ ಪ್ರಾಮುಖ್ಯತೆಯ ಬಗ್ಗೆ ದೀರ್ಘ ಚರ್ಚೆ ನಡೆದು ಈ ಶಾಖೆಯ ಉದಯಕ್ಕೆ ನಾಂದಿ ಹಾಕಲಾಯಿತು. ಇಂಗ್ಲೀಷ್ ನಿಘಂಟಿಗೆ 'ಹಸ್ತಪ್ರತಿಶಾಸ್ತ್ರ' (Manuscriptology) ಎಂಬ ನೂತನ ಪದದ ಸೃಷ್ಟಿಯಲ್ಲಿ ಕನ್ನಡ ನಾಡಿನ ಕೊಡುಗೆಯಿದೆ. ಅಲ್ಲದೆ ಈ ಶಾಸ್ತ್ರವನ್ನು ಕುರಿತಂತೆ ಪ್ರಮುಖವಾಗಿ ಎರಡು ಕೃತಿಗಳು ಈ ಅವಧಿಯಲ್ಲಿ ಪ್ರಕಟವಾದವು. ಅವುಗಳೆರಡು ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಪ್ರಕಟಣೆಗಳು. ಅವುಗಳೆಂದರೆ "ಮಣಿಹ" ಮತ್ತು "ಹಸ್ತಪ್ರತಿಶಾಸ್ತ್ರ". ಈ ಮಹತ್ವದ ಕೃತಿಗಳಲ್ಲಿ ಹಸ್ತಪ್ರತಿಶಾಸ್ತ್ರದ ಬಹುಮುಖ ಪರಿಚಯ ವಿಶ್ಲೇಷಣೆಗಳನ್ನೊಳಗೊಂಡ ವಿವಿಧ ವಿದ್ವಾಂಸರ ಲೇಖನಗಳಿವೆ. ಈ ಅಧ್ಯಯನ ಶಾಖೆಯ ಶಿಸ್ತುಬದ್ಧ ಅಧ್ಯಯನಕ್ಕೆ ಬಿ.ಎಂ.ಶ್ರೀ ಪ್ರತಿಷ್ಠಾನ ತನ್ನದೇ ಆದ ವಿಶಿಷ್ಟ ಕೊಡುಗೆಯನ್ನು ಸಲ್ಲಿಸಿದೆ. ಹಸ್ತಪ್ರತಿಶಾಸ್ತ್ರದಲ್ಲಿ

ನಾಲ್ಕು ತಿಂಗಳ ಅಲ್ಪಾವಧಿ ತರಬೇತಿ ತರಗತಿಗಳನ್ನು 1990 ರಿಂದ ನಡೆಸುತ್ತಿದ್ದು, ಅನೇಕ ಆಸಕ್ತರನ್ನು ಈ ಕ್ಷೇತ್ರದತ್ತ ಆಕರ್ಷಿಸುತ್ತಿದೆ. ಅದಕ್ಕಾಗಿ 'ಹಸ್ತಪ್ರತಿಶಾಸ್ತ್ರ ಪರಿಚಯ' ಎಂಬ ಗ್ರಂಥವನ್ನು ಬಿ.ಎಂ.ಶ್ರೀ ಪ್ರತಿಷ್ಠಾನ ಪ್ರಕಟಿಸಿದೆ. ಡಾ॥ ಎಂ.ಎಂ.ಕಲಬುರ್ಗಿ ಅವರು 'ಕನ್ನಡ ಹಸ್ತಪ್ರತಿಶಾಸ್ತ್ರ' ಎಂಬ ಗ್ರಂಥ ಪ್ರಕಟಿಸುವ ಮೂಲಕ ಹಸ್ತಪ್ರತಿಶಾಸ್ತ್ರ ತನ್ನ ನೂತನ ಶಿಸ್ತಿಗೆ ಒಳಪಟ್ಟು ಒಂದು ಅಧಿಕೃತತೆಯನ್ನು ತಂದುಕೊಂಡರೆ, ಹಂಪಿ ಕನ್ನಡ ವಿಶ್ವವಿದ್ಯಾಲಯ 'ಹಸ್ತಪ್ರತಿಶಾಸ್ತ್ರ' ವಿಭಾಗವನ್ನೇ ತೆರೆದು ವ್ಯಾಪಕ ಅಧ್ಯಯನಕ್ಕೆ ದಾರಿ ಮಾಡಿಕೊಟ್ಟಿದೆ. ಈ ನಿಟ್ಟಿನಲ್ಲಿ ಪ್ರೊ॥ ನಾ.ಗೀತಾಚಾರ್ಯ ಹಸ್ತಪ್ರತಿಶಾಸ್ತ್ರ ವಿವೇಚನೆ ಈ ಶಾಸ್ತ್ರಕ್ಕೊಂದು ನಿರ್ದಿಷ್ಟ ಸ್ವರೂಪವನ್ನು ಕೊಡುವ ಗ್ರಂಥವಾಗಿದೆ".[6]

"19ನೇ ಶತಮಾನದಲ್ಲಿ ಹಸ್ತಪ್ರತಿಗಳ ಸಂಗ್ರಹಣ ಕಾರ್ಯವು ಭರದಿಂದ ಸಾಗಿತು. ಗ್ರಂಥಸಂಪಾದನ ಶಾಸ್ತ್ರದ ತಿಳುವಳಿಕೆ ಹೆಚ್ಚು ವಿಸ್ತಾರವಾಗುತ್ತಿದ್ದಂತೆಯೇ ಹಸ್ತಪ್ರತಿಗಳು ಹೆಚ್ಚು ಹೆಚ್ಚು ಸಂಗ್ರಹವಾಗ ತೊಡಗಿದವು. ವಿಶ್ವವಿದ್ಯಾನಿಲಯಗಳು, ಸಂಘ ಸಂಸ್ಥೆಗಳು ಮತ್ತು ಆಸಕ್ತ ವ್ಯಕ್ತಿಗಳು ತಮ್ಮ ತಮ್ಮ ಮಿತಿಯಲ್ಲಿ ಸಂಗ್ರಹಕಾರ್ಯದಲ್ಲಿ ತೊಡಗಿ ಹೊಸಹೊಸ ಹಸ್ತಪ್ರತಿಗಳನ್ನು ಕಲೆಹಾಕಿದರು. ವಿಶ್ವವಿದ್ಯಾನಿಲಯದ ಕನ್ನಡ ವಿಭಾಗಗಳು ಪ್ರತ್ಯೇಕವಾದ ಸಂಪಾದನಾ ವಿಭಾಗಗಳನ್ನು ತೆರೆದವು. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಯನ ಸಂಪಾದನ ವಿಭಾಗಕ್ಕೆ ಪ್ರಾಚ್ಯವಸ್ತು ಸಂಗ್ರಹಾಲಯದ ಕನ್ನಡ ಹಸ್ತಪ್ರತಿಗಳು ಸೇರ್ಪಡೆಯಾದವು ಮತ್ತು ಮದರಾಸು ಓರಿಯೆಂಟಲ್ ಲೈಬ್ರರಿಯ ಕೆಲವು ಕನಾಟಕ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ವಿಭಾಗಕ್ಕೆ ಸೇರಿದೆ. ಈ ವಿಭಾಗಕ್ಕೆ ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯ ಸಂಗ್ರಹವೂ ಸೇರಿದೆ. ಬೆಂಗಳೂರು, ಮಂಗಳೂರು, ಶಿವಮೊಗ್ಗ, ಗುಲ್ಬರ್ಗ ವಿಶ್ವವಿದ್ಯಾನಿಲಯಗಳಲ್ಲಿರುವ ಕನ್ನಡ ವಿಭಾಗಗಳೂ ಹಸ್ತಪ್ರತಿಸಂಗ್ರಹಾಲಯಗಳನ್ನು ಹೊಂದಿವೆ. ಜೊತೆಗೆ ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತು, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಧರ್ಮಸ್ಥಳದ ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನ, ಶ್ರವಣಬೆಳಗೊಳದ ಪ್ರಾಕೃತ ಅಧ್ಯಯನ ಸಂಸ್ಥೆ, ಕೆಳದಿಯ ವಸ್ತುಸಂಗ್ರಹಾಲಯ ಸಂಸ್ಥೆ, ಮೇಲುಕೋಟೆಯ ಸಂಸ್ಕೃತ ಸಂಶೋಧನ ಸಂಸತ್ ಮುಂತಾದ ಸಂಸ್ಥೆಗಳು ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ ಮತ್ತು ಅಧ್ಯಯನಕ್ಕೆ ವ್ಯವಸ್ಥಿತ ಸಂಸ್ಥೆಯ ರೂಪವನ್ನು ನೀಡಿದವು. ಕೆಲವು ಧಾರ್ಮಿಕ ಮಠಗಳು, ಕೆಲವು ವ್ಯಕ್ತಿಗಳು ಖಾಸಗಿಯಾಗಿ ಹಸ್ತಪ್ರತಿಗಳನ್ನು ಸಂಗ್ರಹಿಸುವ ಯೋಜನೆಗಳಲ್ಲಿ ತೊಡಗಿರುವುದು ಕಂಡುಬಂದಿದೆ. ಒಟ್ಟಾರೆ ಅಧಿಕ ಸಂಖ್ಯೆಯ ಹಸ್ತಪ್ರತಿಗಳನ್ನು ಕರ್ನಾಟಕದಲ್ಲಿ ಸಂಗ್ರಹಿಸಲಾಗಿದೆ. ಕರ್ನಾಟಕದಲ್ಲಿ ಇಂದು ಸುಮಾರು ಹದಿನೈದು ಸಂಸ್ಥೆಗಳು ಹಸ್ತಪ್ರತಿ ಸಂಗ್ರಹ-ಸಂರಕ್ಷಣೆ-ಸಂಪಾದನೆಯ ಕಾರ್ಯದಲ್ಲಿ ತೊಡಗಿದ್ದು

ಗ್ರಂಥಸಂಪಾದನೆ ಮತ್ತು ಹಸ್ತಪ್ರತಿಶಾಸ್ತ್ರಗಳ ಬೆಳವಣಿಗೆಯಲ್ಲಿ ಗಣನೀಯ ಪಾತ್ರವಹಿಸುತ್ತಿವೆ".[7] ಎಂಬ ಪ್ರೊ॥ನಾ.ಗೀತಾಚಾರ್ಯರವರ ಅಭಿಪ್ರಾಯವನ್ನು ಅವಲೋಕಿಸಿದಾಗ ಹಸ್ತಪ್ರತಿಶಾಸ್ತ್ರ ತನ್ನ ಬೆಳವಣಿಗೆಯನ್ನು ಹೇಗೆ ವಿಸ್ತರಿಸಿಕೊಂಡಿದೆ ಎಂಬುದನ್ನು ತಿಳಿಯಲು ಸಾಧ್ಯವಾಗಿದೆ.

ಆ) ಹಸ್ತಪ್ರತಿಶಾಸ್ತ್ರ ಮತ್ತು ಗ್ರಂಥಸಂಪಾದನಶಾಸ್ತ್ರ :-

"ಹಸ್ತಪ್ರತಿಶಾಸ್ತ್ರವು ಗ್ರಂಥಸಂಪಾದನಾಶಾಸ್ತ್ರದ ಭಾಗವಾಗಿ ಬೆಳೆದಿದೆ. ಈಗ ಅದರಿಂದ ಬೇರ್ಪಟ್ಟು ಸ್ವತಂತ್ರವಾಗಿ ಬೆಳೆಯಬೇಕಾಗಿರುವ ಈ ಶಾಸ್ತ್ರಕ್ಕೆ 'ಗ್ರಂಥಸಂಪಾದನಾಶಾಸ್ತ್ರ' ದಿಂದಲೂ ಅಷ್ಟಾಗಿ ನೆರವು ಸಿಗುವುದಿಲ್ಲವೆಂದೇ ಹೇಳಬೇಕು. ಏಕೆಂದರೆ ಹಸ್ತಪ್ರತಿಯಲ್ಲಿ ಕೃತಿ ಮತ್ತು ಪ್ರತಿ ಅಡಗಿದ್ದು, 'ಪ್ರತಿ'ಯ ಅಧ್ಯಯನ ಹಸ್ತಪ್ರತಿಶಾಸ್ತ್ರದ ವಿಷಯವಾದರೆ, 'ಕೃತಿ'ಯ ಅಧ್ಯಯನ ಗ್ರಂಥಸಂಪಾದನಶಾಸ್ತ್ರದ ವಿಷಯವಾಗಿದೆ. 'ಪ್ರತಿ'ಯ ಉತ್ಪಾದನೆ, ಪ್ರಸರಣ, ವ್ಯವಸ್ಥಾಪನ, ಪ್ರಯೋಜನ ಈ ದಿಕ್ಕಿನಲ್ಲಿ ಹಸ್ತಪ್ರತಿಶಾಸ್ತ್ರ ಬೆಳೆದರೆ, 'ಕೃತಿ'ಯ ಭಿನ್ನಪಾಠ ಸ್ವರೂಪ, ಸಂಕಲನ, ಅವುಗಳ ನಿಜಪಾಠನಿರ್ಣಯ ಇತ್ಯಾದಿ ದಿಕ್ಕಿನಲ್ಲಿ ಗ್ರಂಥಸಂಪಾದನಶಾಸ್ತ್ರ ಬೆಳೆಯಬೇಕಾಗುತ್ತದೆ. ಆದುದರಿಂದ ಇನ್ನು ಮೇಲೆ ಗ್ರಂಥಸಂಪಾದನಾಶಾಸ್ತ್ರದಿಂದ ಹಸ್ತಪ್ರತಿಶಾಸ್ತ್ರಕ್ಕೆ ಸಂಬಂಧಿಸಿದ ವಿಷಯವನ್ನು ಪ್ರತ್ಯೇಕಿಸಿ, ಎರಡೂ ಶಾಸ್ತ್ರಗಳೂ ಸ್ವತಂತ್ರವಾಗಿ ಬೆಳೆಯುವುದರತ್ತ ನಾವು ಗಮನಕೊಡಬೇಕಾಗಿದೆ."[8]

ಈ ಒಂದೊಂದು ಶಿಸ್ತೂ ತನಗೆ ಪ್ರತ್ಯೇಕ ಅಧ್ಯಯನದ ವಿಷಯವಾಗಿದ್ದು ಇವುಗಳಲ್ಲೆಲ್ಲ ಹಸ್ತಪ್ರತಿಶಾಸ್ತ್ರವೇ ಗ್ರಂಥಸಂಪಾದನೆಗೆ ಬಹು ಮುಖ್ಯವಾದದ್ದು ಎಂದು ಹೇಳಬಹುದಾಗಿದೆ. ಗ್ರಂಥಸಂಪಾದನೆಗೆ ತೊಡಗುವವರಿಗೆ ಒಳ್ಳೆಯ ಭಾಷೆ ಸಾಹಿತ್ಯಗಳ ಸಂವೇದನೆ ವ್ಯುತ್ಪತ್ತಿಗಳಿರಬೇಕಾಗುತ್ತವೆ. ಕಾವ್ಯಾಸ್ವಾದದ ಸೊಗಸು ಸ್ವಾರಸ್ಯಗಳ ವ್ಯಾಮೋಹವಿರಬೇಕಾಗುತ್ತದೆ. ಪ್ರಾಚೀನಸಾಹಿತ್ಯದಲ್ಲಿ ಒಳ್ಳೆಯ ಪ್ರವೇಶವಿಲ್ಲದೆ, ತೌಲನಿಕಸಾಹಿತ್ಯದ ವಿಮರ್ಶನಪಟುತ್ವವಿಲ್ಲದೆ ಗ್ರಂಥಸಂಪಾದನೆಯ ಕ್ಷೇತ್ರವನ್ನು ಯಾರಿಗಾದರೂ ಪ್ರವೇಶಿಸುವುದು ಕಷ್ಟದ ಕೆಲಸ. ಈ ಕ್ಷೇತ್ರದ ವ್ಯಾಪ್ತಿ ವಿಸ್ತಾರಗಳು, ವೈಲಕ್ಷಣಗಳು ಬಲುಮಟ್ಟಿಗೆ ಹಸ್ತಪ್ರತಿಶಾಸ್ತ್ರದ ಖಚಿತವಾದ ತಿಳಿವಳಿಕೆಯ ಮೇಲೆ ನಿಲ್ಲುತ್ತವೆ.

"ಹಸ್ತಪ್ರತಿಶಾಸ್ತ್ರದ ವಿಷಯವ್ಯಾಪ್ತಿಯ ಬಗೆಗೆ ಅಭಿಪ್ರಾಯಭೇದಗಳಿವೆ. ಕೆಲವರು ಇದನ್ನು ಗ್ರಂಥಸಂಪಾದನೆಯ ಪೂರ್ವಭಾಗವಾಗಿ, ಒಂದು ಅಂಗಭಾಗವಾಗಿ ತಿಳಿಯಬೇಕಲ್ಲದೆ ಒಂದು ವಿಶಿಷ್ಟವಾದ, ಪ್ರತ್ಯೇಕವಾದ ಅಧ್ಯಯನವಿಷಯವನ್ನಾಗಿ ವಿಭಜಿಸಬೇಕಾಗಿಲ್ಲ ಎನ್ನುತ್ತಾರೆ. ಆದರೆ ಹಸ್ತಪ್ರತಿಶಾಸ್ತ್ರಕ್ಕೆ ಅದರದೇ ಆದ ವಿಧಿ ವಿಧಾನಗಳು ವ್ಯಾಪ್ತಿ ವಿಸ್ತಾರಗಳು ಉಂಟು ಎನ್ನುವವರೂ ಇದ್ದಾರೆ. ಅವನ್ನು

ಗುರುತಿಸುವುದೂ ವೈಜ್ಞಾನಿಕವಾಗಿ ಅಧ್ಯಯನಮಾಡುವುದೂ ಫಲಪ್ರದವಾದುವೆಂದೂ ಗ್ರಂಥಸಂಪಾದನೆಗೆ ಅದರ ಅನ್ವಯದಿಮದ ಖಚಿತತೆ ಸಾಧ್ಯವೆಂದೂ ಅವರು ಭಾವಿಸುತ್ತಾರೆ. ಇದನ್ನು ಒಪ್ಪಬಹುದಾಗಿದೆ"[9] ಎಂದು ಟಿ.ವಿ.ವೆಂಕಟಾಚಲಶಾಸ್ತ್ರಿಗಳು ಹೇಳಿದ್ದಾರೆ.

"ಕನ್ನಡದಲ್ಲಿ ಗ್ರಂಥಸಂಪಾದನಾಶಾಸ್ತ್ರ ಸಾಕಷ್ಟು ಬೆಳಿದಿದೆ. ಡಿ.ಎಲ್.ನರಸಿಂಹಚಾರ್‌ರ 'ಕನ್ನಡ ಗ್ರಂಥಸಂಪಾದನೆ' (1964)ಯ ನಂತರ ಇನ್ನೂ ಹಲವು ಗ್ರಂಥಗಳು ಬಂದಿದ್ದು ಉತ್ತಮ ಮತ್ತು ಶಾಸ್ತ್ರೀಯ ಗ್ರಂಥಸಂಪಾದನಾ ಕಾರ್ಯವೂ ಸಾಕಷ್ಟು ನಡೆದಿದೆ. ಇತ್ತೀಚೆಗೆ ಗ್ರಂಥತ್ವದ ಅಧ್ಯಯನ ಮತ್ತು ಪ್ರಯೋಜನ ದೃಷ್ಟಿಯಿಂದ ಗ್ರಂಥಾಲಯಶಾಸ್ತ್ರ (Library scince) ಹೆಸರಿನ ಹೊಸ ಶಾಸ್ತ್ರವೇ ಆಕಾರ ಪಡೆದಿದೆ. ದೇಶ-ವಿದೇಶಗಳ ಖ್ಯಾತ ವಿದ್ವಾಂಸರು ಹೊಸ ಹೊಸ ಸಿದ್ಧಾಂತಗಳನ್ನು ಶೋಧಿಸಿ, ಗ್ರಂಥಾಲಯಶಾಸ್ತ್ರವನ್ನು 'ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ' (Library and Information) ಅರ್ಥಕ್ಕೆ ಮುಟ್ಟಿಸಿದರೆ ಈ ಶಾಸ್ತ್ರದ ಮುಖ್ಯ ಉದ್ದೇಶ ಯಾವುದೇ ಬಗೆಯ ಗ್ರಂಥತ್ವದ ಅಧ್ಯಯನವಾಗಿದ್ದರೂ ಅದು ಯಂತ್ರಪ್ರತಿರೂಪದ ಗ್ರಂಥಗಳಿಗೆ ಮಾತ್ರ ಹೆಚ್ಚು ಒತ್ತುಕೊಟ್ಟು ಹಸ್ತಪ್ರತಿ ರೂಪದ ಗ್ರಂಥಗಳನ್ನು ಉಪೇಕ್ಷಿಸುತ್ತ ಬಂದಿದೆ. ಹೀಗಾಗಿ ಆಧುನಿಕ ಹೊಂದಲಾರದೆಂದೇ ತೋರುತ್ತದೆ. ಈವರೆಗೆ ಗ್ರಂಥಾಲಯಶಾಸ್ತ್ರಜ್ಞರು ಯಂತ್ರ ಪ್ರತಿಗಳನ್ನು ಖಾಸಾಮಗನಂತೆ, ಹಸ್ತಪ್ರತಿಗಳನ್ನು ಮಲಮಗನಂತೆ ನೋಡುತ್ತ ಬಂದಿರುವುದು ಇದಕ್ಕೆ ನಿದರ್ಶನವೆನಿಸಿದೆ. ಹಾಗೆ ನೋಡಿದರೆ ಇವೆರಡೂ ಕ್ಷೇತ್ರಗಳ ಲಕ್ಷಣ ವಿಭಿನ್ನವಾಗಿರುವುದರಿಂದ ಗ್ರಂಥಾಲಯಶಾಸ್ತ್ರದಿಂದ ಹಸ್ತಪ್ರತಿಶಾಸ್ತ್ರ ಪ್ರತ್ಯೇಕವಾಗಿ ಬೆಳೆಯುವುದೇ ನ್ಯಾಯ ಸಮ್ಮತವೆನಿಸುತ್ತದೆ.[10]

ಕನ್ನಡದಲ್ಲಿ ಗ್ರಂಥಸಂಪಾದನೆಯ ಇತಿಹಾಸ ಪ್ರಾರಂಭವಾಗುವುದು 19ನೇ ಶತಮಾನದ ಮಧ್ಯಭಾಗದಿಂದ ವಿದೇಶಿ ಕ್ರೈಸ್ತ ವಿದ್ವಾಂಸರು ಸ್ವಾತಂತ್ರ ಪೂರ್ವದಲ್ಲಿ ಕರ್ನಾಟಕ್ಕೆ ಕ್ರೈಸ್ತ ಮತ ಪ್ರಚಾರಕ್ಕಾಗಿ ಇಲ್ಲವೇ ಬ್ರಿಟೀಷ್ ಸರ್ಕಾರದ ಅಧಿಕಾರಿಗಳಾಗಿ ಬಂದರು. ಇವರೇ ಕನ್ನಡ ಸಾಹಿತ್ಯ ಪ್ರಕಟನೆಯ ಉದಯಗೀತೆಯನ್ನು ಹಾಡಿದವರು. ತಾವು ಬಂದು ನೆಲಸಿದ ನೆಲದ ಇತಿಹಾಸ, ಸಂಸ್ಕೃತಿ, ಭಾಷೆ, ಸಾಹಿತ್ಯಗಳ ಬಗೆಗೆ ವಿಶೇಷ ಆಸಕ್ತಿಯನ್ನು ಬಳಸಿಕೊಂಡ ಇವರು ತಮ್ಮ ಕೃತಿಗಳ ಮೂಲಕ ಗ್ರಂಥ ಪ್ರಕಟನೆಗೆ ಮೊದಲು ಪ್ರಯತ್ನಮಾಡಿದರು. ಮುದ್ರಣದ ಅಭಿಯೋಗ ಇವರಿಂದ ಕ್ರಿ.ಶ.1817ರಲಿ ಕರ್ನಾಟಕದಲ್ಲಿ ಪ್ರಾರಂಭವಾಯಿತು. ಮುದ್ರಣ ಕಲೆ ಬೆಳೆದಂತೆ ಹಸ್ತಪ್ರತಿಗಳ ಪ್ರಭಾವ ಕಡಿಮೆಯಾಗುತ್ತಾ ಹೋದುದರಿಂದ ಗ್ರಂಥಸಂಪಾದನೆ ಸ್ವಲ್ಪಮಟ್ಟಿಗೆ ಮಂದಗತಿಯಲ್ಲಿ ಕಾರ್ಯನಿರ್ವಹಿಸುತ್ತಿರುವುದು ವಾಸ್ತವ ಸಂಗತಿಯಾಗಿದೆ.

"ಗ್ರಂಥಸಂಪಾದನಾಶಾಸ್ತ್ರ ಪ್ರಮುಖವಾಗಿ ಗ್ರಂಥಸಂಪಾದನೆಯ ಕಡೆಗೆ ಒತ್ತುಕೊಡುತ್ತದೆ. ಉನ್ನತ ವಿಮರ್ಶೆ ಮತ್ತು ಪಾಠನಿಷ್ಕರ್ಷೆಯ ಹಿನ್ನೆಲೆಯಲ್ಲಿ ಹಸ್ತಪ್ರತಿಗಳ ಸ್ವರೂಪ, ಲಿಪಿಕಾರರ ಆದರ್ಶ ಮುಂತಾದ ವಿವರಗಳು ಇಲ್ಲಿ ಬರುತ್ತವೆ. ಗ್ರಂಥಸಂಪಾದನಾ ಕ್ಷೇತ್ರವು ಶ್ರಮದಾಯಕವು ಹೌದು, ಪಾಂಡಿತ್ಯ ಪೂರ್ಣ ಕ್ಷೇತ್ರವೂ ಹೌದು. ಈ ಕ್ಷೇತ್ರದಲ್ಲಿ ಮೂಲಭೂತ ಕಾರ್ಯವೂ ಮತ್ತು ಮೌಲಿಕ ಕಾರ್ಯವೂ ನಡೆದಿದೆ, ನಡೆಯುತ್ತಲಿದೆ. ಸತ್ಯಾನ್ವೇಷಣೆ ಮತ್ತು ಸಂಶೋಧನೆಯ ಕಾರ್ಯವಾಗಿದೆ. ಈ ಸಂಶೋಧನೆಯನ್ನು ಅನುಸರಿಸಿ ಭಾಷೆ, ಸಾಹಿತ್ಯ, ಸಮಾಜ, ಇತಿಹಾಸ ಮತ್ತು ಸಂಸ್ಕೃತಿಗೆ ಸಂಬಂಧಪಟ್ಟ ಸಂಶೋಧನೆಗಳು ಮುಂದುವರಿಯುತ್ತವೆ. ಈ ದೃಷ್ಟಿಯಿಂದ ಉತ್ತಮ ರೀತಿಯಲ್ಲಿ ಸಂಪಾದಿತವಾದ ಕೃತಿ ಅನೇಕ ಹೊಸ ಹೊಸ ಆವಿಷ್ಕಾರಗಳಿಗೆ ಅಡಿಪಾಯವನ್ನು ಒದಗಿಸುತ್ತದೆ. ಈ ಕಾರಣದಿಂದ ಗ್ರಂಥಸಂಪಾದನೆ ಆಕರ ಸಂಶೋಧನೆಯಾಗಿದೆ. ಈಗಿನಂತೆ ಕಾಗದ ಹಾಗೂ ಮುದ್ರಣದ ಸೌಕರ್ಯವಿಲ್ಲದ ಆಕಾಲದಲ್ಲಿ ನಮ್ಮ ಕವಿಗಳು ತಮ್ಮ ಕೃತಿಗಳನ್ನು ತಾಳೆಗರಿಗಳ ಮೇಲೆ ಉಕ್ಕಿನ ಕಂಟದಿಂದ ಕೊರೆದು ಬರೆದಿಡುತ್ತಿದ್ದರು. ಆದರೆ ತಾಳೆಗರಿಗಳು ಹೆಚ್ಚು ವರ್ಷಗಳವರೆಗೆ ತಾಳುವುದಿಲ್ಲ. ಅವು ಜೀರ್ಣವಾಗಿ ಮುರಿದುಹೋಗುತ್ತವೆ, ಇಟ್ಟಲ್ಲೇ ಪುಡಿಯಾಗಿ ಹೋಗುತ್ತವೆ. ಈ ಕಾರಣದಿಂದ ನಮ್ಮ ಕವಿಗಳು ತಾಳೆಗರಿಗಳನ್ನು ಕಾಲಕಾಲಕ್ಕೆ ಪ್ರತಿ ಮಾಡಿಕೊಂಡು ಬರುವುದು ಅನಿವಾರ್ಯವಾಗಿತ್ತು. ಹೀಗೆ ಪ್ರತಿ ಮಾಡಿಕೊಂಡು ಬಂದ ನಮ್ಮ ಕವಿಗಳ ಕೃತಿಗಳು ಮಠಗಳಲ್ಲಿ, ಪಾಂಡಿತ್ಯ ಪರಂಪರೆಯುಳ್ಳ ಮನೆತನಗಳಲ್ಲಿ ದೊರೆತಿವೆ, ಇನ್ನೂ ದೊರೆಯುತ್ತಲಿವೆ. ಆದರೆ ಈ ಕೃತಿಗಳು ಎಲ್ಲರಿಗು ಓದಲಿಕ್ಕೆ ಬರುವುದಿಲ್ಲ. ಅವುಗಳ ಲಿಪಿ ಹಾಗೂ ಭಾಷೆ ಮುಂತಾದವುಗಳನ್ನು ಬಲ್ಲ ಪಂಡಿತರು ನಮ್ಮ ಪ್ರಾಚೀನ ಕವಿಗಳು ಹಳೆಯ ಹಸ್ತಪ್ರತಿಗಳನ್ನು ಸಂಗ್ರಹಿಸುವ ಹಾಗೂ ಅವುಗಳನ್ನು ಪರಿಷ್ಕರಿಸಿ, ವಿಮರ್ಶಿಸಿ ಅವುಗಳ ಮಹತ್ವವನ್ನು ಇಂದಿನ ಪೀಳಿಗೆಗೆ ಪರಿಚಯ ಮಾಡಿಕೊಡುವ ಕಾರ್ಯವನ್ನು ಕೈಗೊಂಡರು. ಹೀಗೆ ಹಳೆಯ ಕೃತಿಗಳನ್ನು ಅಭ್ಯಸಿಸಿ ಪಾಠನಿಷ್ಕರ್ಶಿಸಿ ಪ್ರಕಟಪಡಿಸುವುದನ್ನೇ "ಗ್ರಂಥಸಂಪಾದನೆ" ಎಂದು ಕರೆಯಲಾಗುತ್ತಿದೆ"[11] ಎಂಬ ಡಾ॥ ಬಿ.ಎಸ್.ಕುಲಕರ್ಣಿಯವರ ಅಭಿಪ್ರಾಯ ಅದರ ಕಾರ್ಯ ವೈಖರಿಯನ್ನು ಸ್ಪಷ್ಟಪಡಿಸುತ್ತದೆ.

ಗ್ರಂಥ ಸಂಪಾದನೆಯ ಕಾರ್ಯದಲ್ಲಿ ಹಸ್ತಪ್ರತಿ ಸಂಗ್ರಹವನ್ನು ಮೊದನೆಯ ಹಂತವೆಂದೂ, ಪರಿಷ್ಕರಣವನ್ನು ಎರಡನೆಯ ಹಂತವೆಂದೂ ಕರೆಯಬಹುದು. ಇವುಗಳಲ್ಲಿ ಎರಡೂ ಹಂತಗಳು ಭಿನ್ನ ಮನೋಧರ್ಮ, ಪ್ರಭಾವ, ಭಿನ್ನವ್ಯಕ್ತಿತ್ವ, ಪಾಂಡಿತ್ಯ ಮತ್ತು ಪ್ರತಿಭೆಯನ್ನು ನಿರೀಕ್ಷಿಸುವಂಥವು. ಹಸ್ತಪ್ರತಿ ಸಂಗ್ರಹ ಹಂತದಲ್ಲಿ ಜನಸಂಪರ್ಕ,

ಜನರೊಂದಿಗೆ ಬೆರೆಯುವ ಮನೋಧರ್ಮ, ಉಪಾಯದಿಂದ ತಿಳುವಳಿಕೆ ಹೇಳಿ ಜನರನ್ನು ಒಲಿಸಿಕೊಳ್ಳುವ ಬುದ್ಧಿವಂತಿಕೆ, ಬಹುಬೇಗ ಜನರಲ್ಲಿ ವಿಶ್ವಾಸ ಮೂಡಿಸುವ ವ್ಯಕ್ತಿತ್ವ ಅಗತ್ಯವಾಗಿದೆ. ಎರಡನೆಯ ಹಂತ ಪಾಂಡಿತ್ಯವನ್ನು ಗ್ರಂಥ ಸಂಪಾದನೆಯ ಶಿಸ್ತನ್ನು, ವಿಮರ್ಶನ ಶಕ್ತಿಯನ್ನು, ಪ್ರತಿಭೆಯನ್ನು ನಿರೀಕ್ಷಿಸುವಂಥದು. ಹಲವು ವಿದ್ವಾಂಸರು ಅನೇಕ ಗ್ರಂಥಗಳನ್ನು ಸಂಪಾದಿಸಿ ಅವುಗಳಲ್ಲಡಗಿದ ನಮ್ಮ ನಾಡಿನ ಸಂಸ್ಕೃತಿಯನ್ನು ಬೆಳಕಿಗೆ ತಂದ ಗೌರಕ್ಕೆ ಹಿರಿಯ ವಿದ್ವಾಂಸರು ಪಾತ್ರರಾಗಿದ್ದಾರೆ. ಅಂತಹ ಮಹನೀಯರಲ್ಲಿ ಡಾ॥ ಫ.ಗು.ಹಳಕಟ್ಟಿಯವರು ಒಬ್ಬರು. ನಿರಂತರವಾದ ಹಸ್ತಪ್ರತಿ ಸಂಗ್ರಹ ಕಾರ್ಯದಲ್ಲಿ ನಿರತರಾಗಿ ತದನಂತರ ಗ್ರಂಥಸಂಪಾದನಾ ಕಾರ್ಯದಲ್ಲಿ ತೊಡಗಿಸಿಕೊಂಡು ತಪಸ್ಸಿನಂತೆ ಮಾಡಿದ ಗ್ರಂಥಸಂಪಾದನಾ ಕ್ಷೇತ್ರದ ಕೆಲಸ ಸ್ಮರಣೀಯವಾದುದು. ಅಲ್ಲದೆ ಗ್ರಂಥಸಂಪಾದನೆಯೊಂದಿಗೆ ವಚನ ಸಾಹಿತ್ಯವನ್ನು ನಾಡಿಗೆ ಪರಿಚಯಿಸಿದ ಹಿರಿಮೆ ಶ್ರೀಯುತ ಫ.ಗು.ಹಳಕಟ್ಟಿಯವರಿಗೆ ಸಲ್ಲುತ್ತದೆ, ಇದು ಗ್ರಂಥ ಸಂಪಾದನೆಯ ಬೆಳವಣಿಗೆಯ ಬಹು ಮುಖ್ಯವಾದ ಬೆಳವಣಿಗೆಯಾಗಿದೆ.

"ವಿವಿಧ ವಿದ್ವಾಂಸರು ಕನ್ನಡ ಗ್ರಂಥಗಳ ಶಾಸ್ತ್ರೀಯ ಸಂಪಾದನ ಕಾರ್ಯವನ್ನು ಕೈಗೊಳ್ಳುತ್ತಿದ್ದಂತೆ ಈ ಕ್ಷೇತ್ರ ವಿಸ್ತಾರವಾಗುತ್ತಾ ಹೋಯಿತು. ಒಂದು ಕಡೆ ಕೃತಿಗಳ ಸಂಪಾದನೆ ಇನ್ನೊಂದು ಕಡೆ ಅವುಗಳನ್ನು ತರಗತಿಗಳಲ್ಲಿ ಪಠ್ಯವಾಗಿ ಅಭ್ಯಾಸ ಮತ್ತೊಂದು ಕಡೆ ಅವುಗಳನ್ನು ವಿವಿಧ ದೃಷ್ಟಿಕೋನಗಳಿಂದ ಅಭ್ಯಸಿಸುವ, ಆಸ್ವಾದಿಸುವ, ಸಂಶೋಧನೆ, ವಿಮರ್ಶೆ, ವಿಶ್ಲೇಷಣೆ ಮಾಡುವ ಅಧ್ಯಯನ ಕಾರ್ಯ ಹೀಗೆ ಪ್ರಾಚೀನ ಕೃತಿಗಳ ಕಲಿಕೆಗೆ ಗ್ರಂಥ ಸಂಪಾದನಾಶಾಸ್ತ್ರ ವಿಷಯವೂ ಅಗತ್ಯವಾಯಿತು. ಮೈಸೂರು ವಿಶ್ವವಿದ್ಯಾಲಯ 1961 ರಿಂದ ಈ ವಿಷಯದ ಒಂದು ಪತ್ರಿಕೆಯನ್ನೇ ಅಭ್ಯಾಸಕ್ಕೆ ಅಳವಡಿಸಿದ್ದರಿಂದ ಒಂದು ಪಠ್ಯದ ಅನಿವಾರ್ಯತೆಯೂ ಕಂಡುಬಂದಿತು. ಈ ವಿಷಯವನ್ನು ಭೋದಿಸುತ್ತಿದ್ದ ಡಾ॥ ಡಿ.ಎಲ್. ನರಸಿಂಹಚಾರ್ ಅವರು ನಾಲ್ಕು ವರ್ಷಗಳ ಸತತ ಅಧ್ಯಯನ ಪರಿಶ್ರಮ ಅಧ್ಯಾಪನಗಳ ಫಲವಾಗಿ 1964ರಲ್ಲಿ 'ಕನ್ನಡ ಗ್ರಂಥ ಸಂಪಾದನೆ' ಎಂಬ ಗ್ರಂಥ ಪ್ರಕಟಿಸಿದರು. ಈ ಗ್ರಂಥ ಪ್ರಕಟನೆಯ ಮೂಲಕ ಕನ್ನಡ ಗ್ರಂಥಸಂಪಾದನೆಗೆ ನಿರ್ದಿಷ್ಟ ಅಧ್ಯಯನ ಶಿಸ್ತೊಂದು ರೂಪುಗೊಂಡಿತು."[12] ಎಂದು ಪ್ರೊ॥ನಾ.ಗೀತಾಚಾರ್ಯ ಹೇಳಿರುವ ಅಂಶ ಗ್ರಂಥಸಂಪಾದನೆಯ ಬೆಳವಣಿಗೆಗೆ ಪೂರಕವಾಗಿದೆ ಎನ್ನಬಹುದು.

ಹೀಗೆ ಗ್ರಂಥ ಸಂಪಾದನೆಯಲ್ಲಿ ಯಾವುದೇ ಗ್ರಂಥವನ್ನು ಸಂಪಾದಿಸಬೇಕೆಂದಾಗ ಅದಕ್ಕೆ ಸಂಬಂಧಿಸಿದ ಹಸ್ತಪ್ರತಿಗಳನ್ನು ಪರಿಶೀಲಿಸುವುದು ಸಂಪಾದಕನ ಕರ್ತವ್ಯವಾಗಿದೆ. ಇವುಗಳಲ್ಲಿ ಶುದ್ಧಪ್ರತಿ ಯಾವುದು? ಕಾಲ ನಮೂದಿತ ಪ್ರತಿ ಯಾವುದು? ಕಾಲ ನಮೂದಿತ ಪ್ರತಿ ಇದೆಯೆ? ಕಾಲ ನಿರ್ಧಾರವಾಗಿದ್ದರೆ ಕವಿಯ ಕಾಲಕ್ಕೆ ಎಷ್ಟು

ಹತ್ತಿರದ ಪ್ರತಿ? ಕವಿವಾಸವಾಗಿದ್ದ ಸ್ಥಳದಲ್ಲಿ ದೊರೆತ ಪ್ರತಿಯೆ? ಪ್ರಾಚೀನ ಕಾವ್ಯಗಳಲ್ಲಿ 'ಱ', 'ೞ' ಕಾರಗಳನ್ನು ಉಪಯೋಗಿಸಲಾಗಿದೆಯೇ? ಉಪಯೋಗಿಸಿದ್ದರೆ ಅದರ ಶುದ್ಧತೆಯೆಷ್ಟು? ಮೊದಲಾದ ಎಲ್ಲ ವಿವರಗಳನ್ನು ಪರಿಶೀಲಿಸಿ ಶುದ್ಧಪ್ರತಿಯನ್ನು ಆಯ್ಕೆಮಾಡುವುದರ ಮೂಲಕ ಗ್ರಂಥಸಂಪಾದಕರು ಕಾಲ, ವಿಷಯ, ಇನ್ನಿತರ ವಿಚಾರಗಳೊಂದಿಗೆ ಗ್ರಂಥಸಂಪಾದನೆ ಮಾಡುತ್ತಾರೆ.

ಹಸ್ತಪ್ರತಿಶಾಸ್ತ್ರ ಮತ್ತು ಗ್ರಂಥಸಂಪಾದನಾ ಶಾಸ್ತ್ರ ಒಂದಕ್ಕೊಂದು ಪೂರಕವೆಂಬಂತೆ ಕಾರ್ಯನಿರ್ವಹಿಸುತ್ತಿವೆ. 21ನೇ ಶತಮಾನದಲ್ಲಿ ಇವೆರಡೂ ತನ್ನ ಜೀವಂತಿಕೆಯನ್ನು ಸಾಕ್ಷೀಕರಿಸುವ ರೀತಿಯಲ್ಲಿ ಕಾರ್ಯನಿರತವಾಗಿರುವುದು ಕಂಡು ಬರುತ್ತಿದೆ. ಹಲವಾರು ಕಡೆ ವಿಶ್ವವಿದ್ಯಾಲಯಗಳಲ್ಲಿ ತನ್ನದೇ ಆದ ಶಾಖೆಗಳನ್ನು ತೆರೆದಿರುವುದನ್ನು ಕಂಡರೆ ಇವುಗಳ ಮಹತ್ವ ಎಷ್ಟರ ಮಟ್ಟಿಗೆ ಎಂಬುದನ್ನು ಅರಿಯಲು ಸಾಧ್ಯವಾಗಿದೆ. ತನ್ನ ಮೇಲಿದ್ದ ಪೂರ್ವ ಕಾಲದ ದೂಳನ್ನು ಕೊಡವಿಕೊಂಡು ಹೊಸ ಹೊಸ ರೂಪ ಪಡೆಯುತ್ತಿರುವುದು ಸಹ ವಿಶೇಷವಾಗಿ ಗಮನಿಸಬೇಕಾದ ಅಂಶವಾಗಿದೆ.

ಇ) ಹಸ್ತಪ್ರತಿ ಅಧ್ಯಯನದ ಪ್ರಗತಿ :-

ಇತ್ತೀಚಿನ ದಿನ ಹಸ್ತಪ್ರತಿಶಾಸ್ತ್ರವು ತನ್ನ ಅಭಿವೃದ್ಧಿಯೊಂದಿಗೆ 'ಹಸ್ತಪ್ರತಿ ಅಧ್ಯಯನ' ಎಂಬ ಇನ್ನೊಂದು ಶಿಸ್ತನ್ನು ಹುಟ್ಟುಹಾಕುತ್ತಿದೆ. ಈ ನಿಟ್ಟಿನಲ್ಲಿ ಈಗಾಗಲೇ ಹಲವಾರು ವಿದ್ವಾಂಸರು ತಮ್ಮ ವಿದ್ವತ್ತಿನಿಂದ ವಿಭಿನ್ನರೀತಿಯಲ್ಲಿ ಹಸ್ತಪ್ರತಿ ಅಧ್ಯಯನಕ್ಕೆ ಸಂಬಂಧ ಪಟ್ಟ ಲೇಖನಗಳನ್ನು ಮಂಡಿಸಿದ್ದಾರೆ. "ಹಸ್ತಪ್ರತಿಗಳನ್ನೇ ನೇರವಾಗಿ ಅಧ್ಯಯನಕ್ಕೆ ಒಳಪಡಿಸುವುದೇ ಹಸ್ತಪ್ರತಿ ಅಧ್ಯಯನ" ಎಂದು ಕರೆಯಲಗುತ್ತದೆ. ನೇರವಾಗಿ ಹಸ್ತಪ್ರತಿಗಳನ್ನೇ ಅಧ್ಯಯನ ವಸ್ತುಗಳನ್ನಾಗಿಸಿ ಭಾಷೆ, ಸಾಹಿತ್ಯ, ಸಂಸ್ಕೃತಿ, ಸಮಾಜ, ಕಲೆ, ಇತಿಹಾಸ, ಧರ್ಮ, ಶಾಸ್ತ್ರ, ವೈದ್ಯ, ವಿಜ್ಞಾನ, ತಂತ್ರಜ್ಞಾನ, ಜ್ಯೋತಿಷ್ಯ ಹೀಗೆ ಹಲವು ದೃಷ್ಟಿಕೋನಗಳಿಂದ ಅಧ್ಯಯನಕ್ಕೆ ಒಳಪಡಿಸುವ ಪ್ರಯತ್ನಗಳು ನಡೆಯುತ್ತಿವೆ. ಇವುಗಳ ಅಧ್ಯಯನವೆಂದರೆ ಹಸ್ತಪ್ರತಿಗಳ ಮೂಲಕವೇ ನಡೆಸುವ ಬಹುಶಿಸ್ತೀಯ ಅಧ್ಯಯನವೇ ಇದಾಗಿದೆ.

"ಹಸ್ತಪ್ರತಿ ಅಧ್ಯಯನ ಎಂಬುದು ಹಸ್ತಪ್ರತಿಶಾಸ್ತ್ರದ ಮುಂದುವರೆದ ಭಾಗ. ಹಸ್ತಪ್ರತಿಶಾಸ್ತ್ರದಲ್ಲಿ ಹಸ್ತಪ್ರತಿಗಳ ಸಂಗ್ರಹ-ಸಂರಕ್ಷಣೆ-ಸಂಪ್ರತಿ ಮತ್ತು ದಾಖಲೀಕರಣ ಹಾಗೂ ಹಸ್ತಪ್ರತಿಗಳ ಮಹತ್ವಗಳು ಮಾತ್ರ ಮನವರಿಕೆಯಾಗಲಿದ್ದು ಹಸ್ತಪ್ರತಿ ಅಧ್ಯಯನವು ಇದರ ತಿಳುವಳಿಕೆಯ ಆಧಾರದ ಮೇಲೆ ನಡೆಯುವ ಹಸ್ತಪ್ರತಿಗಳ ವಿವಿಧ ದೃಷ್ಟಿಕೋನಗಳ ಅಧ್ಯಯನದ ವಸ್ತುವನ್ನು ಒಳಗೊಂಡಿರುತ್ತದೆ. 80ರ ದಶಕದಿಂದ ಹಸ್ತಪ್ರತಿಶಾಸ್ತ್ರದಲ್ಲಿ

ಪರಿಣಿತರಾಗಿರುವ ಯುವವಿದ್ವಾಂಸರು ಪಡೆಯೊಂದು ಈ ಕ್ಷೇತ್ರದಲ್ಲಿ ತಯಾರಾಗಿದ್ದು ಅವರೆಲ್ಲರ ದೃಷ್ಟಿ ಈಗ ಹಸ್ತಪ್ರತಿಗಳ ಅಧ್ಯಯನದತ್ತ ಮುಖ ಮಾಡಿವೆ"[13] ಎಂದು ಪ್ರೊ॥ ನಾ.ಗೀತಾಚಾರ್ಯರು ಹಸ್ತಪ್ರತಿ ಅಧ್ಯಯನದ ಬೆಳವಣಿಗೆಯನ್ನು ತಿಳಿಸಿದ್ದಾರೆ.

ಹಸ್ತಪ್ರತಿ ಅಧ್ಯಯನ ಬೆಳೆಯುವದರ ಜೊತೆಗೆ ಅದರ ವಿಭಿನ್ನ ಮುಖಗಳು ಹಲವಾರು ವಿದ್ವಾಂಸರ ಆಸಕ್ತಿಯಿಂದ ಇನ್ನಷ್ಟು ವಿಭಿನ್ನತೆಯನ್ನು ಗುರುತಿಸುವ ಅನೇಕ ಸಾಹಿತಿಗಳು, ಸಂಶೋಧಕರ ಗ್ರಂಥಗಳು ಪ್ರಕಟಗೊಂಡಿವೆ. ಉದಾ:– "ಕನ್ನಡ ಹಸ್ತಪ್ರತಿಗಳ ಒಂದು ಅಧ್ಯಯನ" (ಪಿಎಚ್.ಡಿ.ಗ್ರಂಥ) ಬಿ.ಕೆ.ಹಿರೇಮಠರವರದು. ಹಸ್ತಪ್ರತಿಶಾಸ್ತ್ರ ವಿವೇಚನೆ – ಪ್ರೊ॥ ನಾ.ಗೀತಚಾರ್ಯರವರ ಗ್ರಂಥ, 'ಹಸ್ತಪ್ರತಿ ಕ್ಷೇತ್ರಕಾರ್ಯ' – ಎಫ್.ಟಿ.ಹಳ್ಳಿಕೇರಿಯವರದು ಮೇಲಿನ ಗ್ರಂಥಗಳಲ್ಲಿರುವ ಲೇಖನಗಳೆಲ್ಲಾ ಬಹುಪಾಲು ಹಸ್ತಪ್ರತಿಗಳ ಸಾಂಸ್ಕೃತಿಕ ಅಧ್ಯಯನಕ್ಕೆ ಸಂಬಂಧಿಸಿದವುಗಳೇ ಆಗಿವೆ. ಇದೇ ರೀತಿ ಹಸ್ತಪ್ರತಿ ಸೂಚಿಗಳನ್ನು ಕುರಿತಂತೆ, ಹಸ್ತಪ್ರತಿ ಭಂಡಾರಗಳ ಬಗ್ಗೆ, ಹಸ್ತಪ್ರತಿ ಅಧ್ಯಯನ ಸಂಸ್ಥೆಗಳ ಬಗ್ಗೆ, ಹಸ್ತಪ್ರತಿ ವಿದ್ವಾಂಸರ ಬಗ್ಗೆ ಮಾಹಿತಿ ಒದಗಿಸುವ ಅನೇಕ ಲೇಖನಗಳಿವೆ. ಹಸ್ತಪ್ರತಿಗಳನ್ನು ಇನ್ನೂ ವೈವಿಧ್ಯಮಯವಾಗಿ ವಿಶ್ಲೇಷಿಸುವ ಲೇಖನಗಳೂ ಉಂಟು. ಕನ್ನಡ ವಿಶ್ವವಿದ್ಯಾಲಯ 'ಹಸ್ತಪ್ರತಿ ಅಧ್ಯಯನ' ಎಂಬ ಅರ್ಧವಾರ್ಷಿಕ ಸಂಶೋಧನಾ ಪತ್ರಿಕೆಯನ್ನು ಆರಂಭಿಸಿದ್ದು ಅದರಲ್ಲಿ ಈ ಬಗೆಯ ಅನೇಕ ಅಧ್ಯಯನಗಳನ್ನು ಕುರಿತ ಲೇಖನಗಳು ಪ್ರಕಟವಾಗುತ್ತಿವೆ. ಪ್ರತಿವರ್ಷ ಹಂಪಿ ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿ ವಿಭಾಗ, ಹಸ್ತಪ್ರತಿ ಸಮ್ಮೇಳನಗಳನ್ನು ನಡೆಸುತ್ತಿದ್ದು ಹಸ್ತಪ್ರತಿಗಳ ಸಾಂಸ್ಕೃತಿಕ ಅಧ್ಯಯನದತ್ತ ಬೆಳಕು ಚೆಲ್ಲುವ ಪ್ರಯತ್ನಮಾಡುತ್ತಿದೆ.

ಒಟ್ಟಾರೆ ಹಸ್ತಪ್ರತಿ ಅಧ್ಯಯನದ ಬಗ್ಗೆ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಹಸ್ತಪ್ರತಿಶಾಸ್ತ್ರವನ್ನು ಚಾಲ್ತಿಗೆ ತಂದಿರುವಂತೆಯೇ ಇದೀಗ 'ಹಸ್ತಪ್ರತಿ ಅಧ್ಯಯನ'ವನ್ನು ರೂಪಿಸುತ್ತಿದೆ ಎನ್ನಬಹುದು. ಈ ನಿಟ್ಟಿನಲ್ಲಿ 2006–07ನೇ ಸಾಲಿನಿಂದ ಇದೇ ಹೆಸರಿನ ಡಿಪ್ಲೊಮೊ ಮತ್ತು ಎಂ.ಫಿಲ್ ಪದವಿಗಳನ್ನು ಆರಂಭಿಸಿದೆ. ಪ್ರತಿ ವರ್ಷ ಹಸ್ತಪ್ರತಿಶಾಸ್ತ್ರ ತರಗತಿಯ ವಿದ್ಯಾರ್ಥಿಗಳ ವೇದಿಕೆ ಸಿರಿಕಂಟದ ಮೂಲಕ ಹಸ್ತಪ್ರತಿ ಸಮಾವೇಶವನ್ನು ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ನಡೆಸಿ, ಆಸಕ್ತರಿಂದ ಹಸ್ತಪ್ರತಿಗಳನ್ನು ಕುರಿತಂತೆ ಲೇಖನ ಟಿಪ್ಪಣಿಗಳನ್ನು ಮಂಡಿಸಲು ಮುಕ್ತ ಅವಕಾಶ ನೀಡಲು ಮುಂದಾಗಿದೆ. ಕಳೆದ ಹದಿನೈದು ವರ್ಷಗಳಿಂದ ನಡೆಸುತ್ತಿರುವ ಹಸ್ತಪ್ರತಿಶಾಸ್ತ್ರ ತರಗತಿಯಲ್ಲಿ ಹಸ್ತಪ್ರತಿ ಅಧ್ಯಯನವನ್ನು ಪಠ್ಯ ವಿಷಯವಾಗಿ ಬೋಧಿಸುತ್ತಿರುವುದು ಕೂಡ ಗಮನಿಸಿದರೆ ಹಸ್ತಪ್ರತಿ ಅಧ್ಯಯನದ ಪ್ರಗತಿಯಲ್ಲಿ ಪ್ರತಿಷ್ಠಾನದ ಪಾತ್ರ ಪ್ರಮುಖವಾಗಿದೆ ಎಂಬುದನ್ನು ಅರಿಯಬಹುದು.

ಈ ಎಲ್ಲಾ ಅವಕಾಶಗಳನ್ನು ಬಳಸಿಕೊಂಡು ಮುಂದಿನ ದಿನಗಳಲ್ಲಿ ಹಸ್ತಪ್ರತಿ ಅಧ್ಯಯನ ವ್ಯಾಪಕವಾಗಿ ನಡೆಯಲಿದೆ. ಈ ಅಧ್ಯಯನ ಶಿಸ್ತಿನಲ್ಲಿ ಹಸ್ತಪ್ರತಿಗಳೇ ಮುಖ್ಯ ಆಕರಗಳು. ನೇರವಾಗಿ ಹಸ್ತಪ್ರತಿಗಳನ್ನೇ ಅಧ್ಯಯನಕ್ಕೆ ಒಳಪಡಿಸುವ ಮೂಲಕ ಅವುಗಳಲ್ಲಿರುವ ವಿಷಯ ವೈವಿಧ್ಯವನ್ನು, ಲಿಪಿ ವೈವಿಧ್ಯವನ್ನು, ಕಲಾ ವೈವಿಧ್ಯವನ್ನು ಹೊರ ತೆಗೆಯಬಹುದಾಗಿದೆ. ಶಾಸನಗಳ ಸಾಂಸ್ಕೃತಿಕ ಅಧ್ಯಯನದಂತೆ ಹಸ್ತಪ್ರತಿಗಳನ್ನು ಸಾಂಸ್ಕೃತಿಕವಾಗಿ ಅಧ್ಯಯನ ಮಾಡಲು ವಿಪುಲ ಅವಕಾಶಗಳಿವೆ. ಇತಿಹಾಸ, ಭಾಷೆ, ಜನಪದ, ಸಾಹಿತ್ಯ, ಸಂಗೀತ, ಚಿತ್ರಕಲೆ, ಶಿಕ್ಷಣ, ರಾಜಕೀಯ, ಸಾಮಾಜಿಕ, ಧಾರ್ಮಿಕ ಹೀಗೆ ಹಲವು ದೃಷ್ಟಿಕೋನಗಳಿಂದ ಅಧ್ಯಯನಕ್ಕೆ ಒಳಪಡಿಸಲು ಹಸ್ತಪ್ರತಿಗಳಲ್ಲಿ ವೈವಿಧ್ಯಮಯ ಮಾಹಿತಿಗಳಿವೆ. ಇದರಿಂದ ಮೂಲೆಗುಂಪಾಗಿರುವ ಅಮೂಲ್ಯ ಹಸ್ತಪ್ರತಿಗಳು ಹೊರಬರುತ್ತವೆ. ಅಧ್ಯಯನಕ್ಕೆ ಆಧುನಿಕ ತಂತ್ರಜ್ಞಾನಗಳು ಅಳವಡಿಸಲ್ಪಡುತ್ತಿವೆ. ಆ ಮೂಲಕ ಅವುಗಳ ಸಂರಕ್ಷಣೆ, ಸಂಗ್ರಹದ ಕಾರ್ಯ ಚುರುಕುಗೊಳ್ಳುತ್ತಿದೆ. ಆಯಾಕ್ಷೇತ್ರಗಳ ತಜ್ಞರು, ಪರಿಚಿತರು, ಆಸಕ್ತರು ಮುಂದೆ ಬಂದು ಹಸ್ತಪ್ರತಿಗಳಲ್ಲಿರುವ ಸಾಂಸ್ಕೃತಿಕ ಭಂಡಾರವನ್ನು ಹೆಕ್ಕಿ ಹೊರ ಜಗತ್ತಿಗೆ ತೋರ್ಪಡಿಸಿ ಅವುಗಳ ಮೌಲ್ಯ, ಮಹತ್ವಗಳನ್ನು ಜಾಗತಿಕ ಮಟ್ಟದಲ್ಲಿ ಬಿಂಬಿಸಲು ಅವಕಾಶವಾಗುತ್ತದೆ. ಈ ಮೂಲಕ ನಿಜವಾದ ಭಾರತೀಯ ಜ್ಞಾನನಿಧಿಯನ್ನು ಸಂಚಯಿಸಲು ಈ ಹಸ್ತಪ್ರತಿ ಅಧ್ಯಯನ ಸೂಕ್ತ ವೇದಿಕೆಯಾಗಲಿದೆ. ಎಂಬ ಮಾತಿನ ಮೂಲಕ ಹಸ್ತಪ್ರತಿ ಅಧ್ಯಯನದ ವೈವಿಧ್ಯತೆಯನ್ನು, ಬಹುಮುಖತೆಯನ್ನು ತಿಳಿಯಬಹುದು.

ಈ) ಬಿ.ಎಂ.ಶ್ರೀ ಪ್ರತಿಷ್ಠಾನ ಮತ್ತು ಹಸ್ತಪ್ರತಿಶಾಸ್ತ್ರ :-

ಪ್ರಾಚೀನ ಹಸ್ತಪ್ರತಿ, ಸಾಹಿತ್ಯ, ಸಂಸ್ಕೃತಿ, ಕಲೆ, ನಾಟ್ಯ ಮುಂತಾದವುಗಳ ಸಂಶೋಧನೆ ಮತ್ತಿತರ ಚಟುವಟಿಕೆಗಳ ಕೇಂದ್ರವಾಗಬೇಕು ಹಾಗೂ ತಮ್ಮ ಗುರುಗಳ ಹೆಸರು ಅಜರಾಮರವಾಗಿ ಇರಬೇಕೆಂದು ಎಂ.ವಿ.ಸೀ ಅವರು ವೈಯಕ್ತಿಕ ಆಸಕ್ತಿಯಿಂದ ತಮ್ಮ ಗುರುಗಳ ಹೆಸರಿನಲ್ಲಿ ಸಂಸ್ಥೆ ಸ್ಥಾಪಿಸಿದರು. ಎಂ.ವಿ.ಸೀಯವರಿಗೆ "ಕವಿರಾಜಮಾರ್ಗ"ದ ಕಾರ್ಯದ ನಂತರ ತಮ್ಮ ಬಾಲ್ಯದಲ್ಲಿ ಕಂಡ ಈ ತಾಳೆಗರಿಗಳ ನೆನಪಾಯಿತು. ಅರಿವಿಲ್ಲದೆ ಅವುಗಳು ಹಾಳಾದ ದಿನಗಳನ್ನು ನೆನೆದು ಮನಸ್ಸಿಗೆ ನೋವಾಗಿತ್ತು. ಕೂಡಲೇ ಹೋಗಿ ಅಳಿದುಳಿದ ದಾಖಲೆಗಳನ್ನೆಲ್ಲಾ ಸಂಗ್ರಹಿಸಿ ತಂದರು. ತಮ್ಮ ನೆಚ್ಚಿನ ಕೆಲವು ಶಿಷ್ಯರು ಸಹಾಯ ಪಡೆದು ಅವನ್ನೆಲ್ಲ ಕ್ರಮ ಬದ್ಧವಾಗಿ ಸಂಗ್ರಹಿಸಿದರು. ಹೀಗೆ ತಮ್ಮ ಮನೆತನದಲ್ಲಿ ದೊರೆತ ಹಸ್ತಪ್ರತಿಯೊಂದರಿಂದಲೇ ಇಂತಹ ಅಮೂಲ್ಯ ಚಾರಿತ್ರಿಕ ಅಂಶಗಳು ಬೆಳಕಿಗೆ ಬಂದಿದೆಯೆಂದ ಮೇಲೆ ಈ ರೀತಿ ಅದೆಷ್ಟೋ ಕಡೆಗಳಲ್ಲಿ ಮೂಲೆಗುಂಪಾಗಿ ಬಿದ್ದಿರುವ ಹಸ್ತಪ್ರತಿಗಳನ್ನು ಸಂಗ್ರಹಿಸಿ ಪ್ರಕಟಿಸಿದರೆ ಕನ್ನಡ ಸಾಹಿತ್ಯ

ಮತ್ತಷ್ಟು ಶ್ರೀಮಂತಗೊಳ್ಳುತ್ತದೆ ಎನ್ನಿಸಿತು. ಆದರೆ ಇದೊಂದು ಮಹಾನ್ ಕೆಲಸ ಇಂತಹ ಕಾರ್ಯದಲ್ಲಿ ಸಮಾನ ಮನುಸ್ಸುಳ್ಳ ಆಸಕ್ತರನ್ನು ಒಗ್ಗೂಡಿಸಲು ಒಂದು ಕೇಂದ್ರವಿರಬೇಕೆಂದು ಕೊಂಡರು. ತಮ್ಮ ಗುರುಗಳಾದ ಬಿ.ಎಂ.ಶ್ರೀಕಂಠಯ್ಯರವರು 1911ರಲ್ಲಿ ಹೇಳಿದ್ದ ಶ್ರೀವಾಣಿ ನೆನಪಿನಲ್ಲಿತ್ತು. ಆದ್ದರಿಂದ ಅವರ ನೆನಪಿನಲ್ಲೇ ಪ್ರಾಚೀನ ಹಸ್ತಪ್ರತಿಗಳ ಸಂಗ್ರಹದ ಜೊತೆಗೆ ಇತರ ಪೂರಕ ಸಂಶೋಧನಾ ಕ್ಷೇತ್ರಗಳಲ್ಲಿ ಅಳಸಿ ಹೋಗುತ್ತಿರುವ ಸಂಶೋಧಕ ಪ್ರವೃತ್ತಿಗಳನ್ನು ಉಳಿಸಿ ಬೆಳೆಸುವ ಸಲುವಾಗಿ 1979ರ ಮೇ 6ರಂದು "ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ"ವನ್ನು ಸ್ಥಾಪಿಸಿದರು. ರಾಷ್ಟ್ರಕವಿ ಕುವೆಂಪು ಇದನ್ನು ಉದ್ಘಾಟಿಸಿದರು. ಎಂ.ವಿ.ಸೀ ಅವರು ಇದನ್ನು ಸ್ಥಾಪಿಸಿದಾಗ ಅವರಿಗೆ 69 ವರ್ಷಗಳಾಗಿತ್ತು. ಆರೋಗ್ಯವೂ ಅಷ್ಟೊಂದು ಸರಿಯಿರಲಿಲ್ಲ. ಆದರೆ ಅವರ ಆಸಕ್ತಿ, ಉತ್ಸಾಹಗಳಿಗೆ ಕೊರತೆಯಿರಲಿಲ್ಲ. ಹನುಮಂತನಗರದ ಗವೀಪುರ ಬಡಾವಣೆಯಲ್ಲಿದ್ದ ತಮ್ಮ ಮನೆಯಲ್ಲಿಯೇ ಪ್ರಾಚೀನ ಗ್ರಂಥ ಮತ್ತು ಹಸ್ತಪ್ರತಿ ಸಂಗ್ರಹ ಕಾರ್ಯವನ್ನು ಪ್ರಾರಂಭಿಸಿಬಿಟ್ಟರು. ಕ್ರಮೇಣ ಇವರ ಕಾಳಜಿ ಪ್ರಾಮಾಣಿಕ ಪ್ರಯತ್ನಗಳಿಂದಾಗಿ ಬಹಳ ಅಪರೂಪವಾದ ತಾಳೇಗರಿಗಳು, ಗ್ರಂಥಗಳು ಸಂಗ್ರಹವಾಗತೊಡಗಿದವು. ಈ ಸಂಸ್ಥೆ ಮುಂದೆ ದೊಡ್ಡದಾಗಿ ಬೆಳೆಯುವುದು ಎಂಬ ಮುಂದಾಲೋಚನೆಯಿಂದ ಎನ್.ಆರ್.ಕಾಲೋನಿಯಲ್ಲಿ ನಗರಪಾಲಿಕೆಯ ನೆರವಿನಿಂದ ಒಂದು ನಿವೇಶನಕ್ಕೆ ಜಾಗ ಪಡೆದಿದ್ದರು. ಬಿ.ಎಂ.ಶ್ರೀ ಪ್ರತಿಷ್ಠಾನದ ಈಗಿನ ನೂತನ ಕಟ್ಟಡವಿರುವುದು ಇಲ್ಲಿಯೇ. ಕನ್ನಡ ನಾಡಿನಲ್ಲಿ ಅಷ್ಟೇ ಅಲ್ಲದೇ ಭಾರತದಲ್ಲಿ ಮೊಟ್ಟ ಮೊದಲ ಸಂಶೋಧನ ಸಂಸ್ಥೆ ಎಂಬ ಹೆಗ್ಗಳಿಕೆ ಪಾತ್ರವಾಗಿದೆ. ಅದಕ್ಕೆ ಪೂರಕವಾದ ವಿಷಯವೆಂದರೆ ಪ್ರತಿಷ್ಠಾನ ಹಸ್ತಪ್ರತಿಗಳನ್ನೇ ತನ್ನ ಅಮೂಲ್ಯವಾದ ವಸ್ತು ಎಂದು ನಿರ್ಧರಿಸಿ 'ಹಸ್ತಪ್ರತಿಶಾಸ್ತ್ರದ ನೂತನ ಆವಿಷ್ಕಾರ'ವನ್ನು ಮಾಡಿದ ನೂತನ ಸಂಸ್ಥೆಯಾಗಿದೆ. ಈ ಉದ್ದೇಶದೊಂದಿಗೆ ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆಗಳ ಸಾಂಘಿಕ ಪ್ರಯತ್ನದೊಂದಿಗೆ ಹಸ್ತಪ್ರತಿ ಪ್ರಚಾರವನ್ನು ಮನೆಬಾಗಿಲಿಗೆ ಹಸ್ತಪ್ರತಿ ದರ್ಶನವನ್ನು ಮಾಡುತ್ತಿದೆ. ಅಲ್ಲದೆ ಹಸ್ತಪ್ರತಿಗಳಲ್ಲಿರುವ ವಿಚಾರಗಳನ್ನು ಗ್ರಂಥ ರೂಪದಲ್ಲಿ ವಿದ್ವಾಂಸರ ಮೂಲಕ ಪ್ರಕಟಿಸುವ ಕಾರ್ಯವನ್ನು ಮಾಡುತ್ತಿದೆ. ಇಂತಹ ಕಾರ್ಯ ಚಟುವಟಿಕೆಗಳ ಮೂಲಕ ಪ್ರತಿಷ್ಠಾನ ಹಸ್ತಪ್ರತಿಶಾಸ್ತ್ರಕ್ಕೆ ಹೊಸ ಚೌಕಟ್ಟನ್ನು ರೂಪಿಸುತ್ತಿದೆ. ಇಂತಹ ವಿಶೇಷ ಸಂಗತಿಗಳಿಂದ ಹಸ್ತಪ್ರತಿಶಾಸ್ತ್ರಕ್ಕೂ ಬಿ.ಎಂ.ಶ್ರೀ ಪ್ರತಿಷ್ಠಾನಕ್ಕೂ ಒಂದು ಅವಿನಾಭಾವ ಸಂಬಂಧ ಬೆಳೆದಿರುವುದನ್ನು ಗಮನಿಸಲು ಸಾಧ್ಯವಾಗಿದೆ. ಈ ಅಂಶಗಳಿಂದ ಬಿ.ಎಂ.ಶ್ರೀ ಪ್ರತಿಷ್ಠಾನದ ಹಸ್ತಪ್ರತಿಶಾಸ್ತ್ರ ಒಂದು ಅಧ್ಯಯನದ ವಸ್ತುವಾಗಲು ಸಾಧ್ಯವಾಗಿದೆ. ಈ ಹಿನ್ನೆಲೆಯಲ್ಲಿ ಮುಂದೆ ಚರ್ಚಿಸಿದೆ.

ಅಡಿಟಿಪ್ಪಣಿಗಳು

1. ಡಾ॥ ನಾ.ಗೀತಾಚಾರ್ಯ, ಕನ್ನಡ ಹಸ್ತಪ್ರತಿಶಾಸ್ತ್ರ, ಹಸ್ತಪ್ರತಿಶಾಸ್ತ್ರದ ವಿವೇಚನೆ, ಬೆಂಗಳೂರು, 2000, ಪುಟ-26.
2. ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕಾ ಸಂಪುಟ-12, ಪುಟ-277 (ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನದಿಂದ ಉದ್ಧೃತ)
3. ಭಾರತೀಯ ಗ್ರಂಥಸಂಪಾದನಾ ಶಾಸ್ತ್ರ, ಪುಟ-16 (ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನದಿಂದ ಉದ್ಧೃತ)
4. ಡಾ॥ ಎಂ.ಎಂ.ಕಲಬುರ್ಗಿ, ಕನ್ನಡ ಹಸ್ತಪ್ರತಿಶಾಸ್ತ್ರ, ಬೆಂಗಳೂರು, ಪುಟ-3, 1993.
5. ಡಾ॥ ಎಂ.ಎಂ.ಕಲಬುರ್ಗಿ, ಕನ್ನಡ ಹಸ್ತಪ್ರತಿಶಾಸ್ತ್ರ, ಬೆಂಗಳೂರು, ಪುಟ-3, 1993.
6. ಡಾ॥ ನಾ.ಗೀತಾಚಾರ್ಯ, ಕನ್ನಡದಲ್ಲಿ ಗ್ರಂಥಸಂಪಾದನೆಯ ಇತಿಹಾಸ: ಒಂದು ಪರಿಶೀಲನೆ, ಸುಕೃತಿ. ಪ್ರೊ॥ ಟಿ.ಕೇಶವಭಟ್ಟರ ಸಂಸ್ಮರಣಗ್ರಂಥ, ಉಡುಪಿ ಪುಟ-226, 227 ವರ್ಷ-2006.
7. ಡಾ॥ ನಾ.ಗೀತಾಚಾರ್ಯ, ಕನ್ನಡದಲ್ಲಿ ಗ್ರಂಥಸಂಪಾದನೆಯ ಇತಿಹಾಸ: ಒಂದು ಪರಿಶೀಲನೆ, ಸುಕೃತಿ. ಪ್ರೊ॥ ಟಿ.ಕೇಶವಭಟ್ಟರ ಸಂಸ್ಮರಣಗ್ರಂಥ, ಉಡುಪಿ, ಪುಟ-227, ವರ್ಷ-2006.
8. ಡಾ॥ ಎಂ.ಎಂ.ಕಲಬುರ್ಗಿ, ಕನ್ನಡ ಹಸ್ತಪ್ರತಿಶಾಸ್ತ್ರ, ಬೆಂಗಳೂರು, ಪುಟ-3, 1993.
9. ಡಾ॥ ಟಿ.ವಿ ವೆಂಕಟಾಚಲಶಾಸ್ತ್ರಿ - ಭೂಮಿಕೆ ಹಸ್ತಪ್ರತಿಶಾಸ್ತ್ರವಿವೇಚನೆ - ಡಾ॥ ನಾ.ಗೀತಾಚಾರ್ಯ ಹಸ್ತಪ್ರತಿಶಾಸ್ತ್ರ ವಿವೇಚನೆ, ಬೆಂಗಳೂರು-2001, ಪುಟ-**Xiii.**
10. ಡಾ॥ ಎಂ.ಎಂ.ಕಲಬುರ್ಗಿ, ಕನ್ನಡ ಹಸ್ತಪ್ರತಿಶಾಸ್ತ್ರ, ಬೆಂಗಳೂರು, ಪುಟ-4, ವರ್ಷ-1993.
11. ಡಾ॥ ಬಿ.ಎಸ್.ಕುಲಕರ್ಣಿ, ಗ್ರಂಥಸಂಪಾದಕನಾಗಿ ನನ್ನ ಅನುಭವ, ಮಣಿಹ, ಬೆಂಗಳೂರು ಪುಟ-90.

12. ಡಾ॥ ನಾ.ಗೀತಾಚಾರ್ಯ, ಕನ್ನಡದಲ್ಲಿ ಗ್ರಂಥಸಂಪಾದನೆಯ ಇತಿಹಾಸ: ಒಂದು ಪರಿಶೀಲನೆ, ಸುಕೃತಿ: ಪ್ರೊ॥ ಟಿ.ಕೇಶವಭಟ್ಟರ ಸಂಸ್ಮರಣ ಗ್ರಂಥ, ಉಡುಪಿ, ಪುಟ-223, ವರ್ಷ-2006.

13. ಡಾ॥ ನಾ.ಗೀತಾಚಾರ್ಯ, ಕನ್ನಡದಲ್ಲಿ ಗ್ರಂಥಸಂಪಾದನೆಯ ಇತಿಹಾಸ: ಒಂದು ಪರಿಶೀಲನೆ, ಸುಕೃತಿ: ಪ್ರೊ॥ ಟಿ.ಕೇಶವಭಟ್ಟರ ಸಂಸ್ಮರಣ ಗ್ರಂಥ, ಉಡುಪಿ, ಪುಟ-228, 229, 233, ವರ್ಷ-2006.

ಅಧ್ಯಾಯ – 3

ಬಿ.ಎಂ.ಶ್ರೀ ಪ್ರತಿಷ್ಠಾನ – ಒಂದು ನೋಟ

ನಮ್ಮ ಪ್ರಾಚೀನ ಭಾರತದ ಮುನಿಗಳು, ಹಳೆಯ ಕಾಲದ ಪಂಡಿತರು ತಾವು ಪಡೆದುಕೊಂಡ ಜ್ಞಾನವನ್ನು ದಾಖಲಿಸುತ್ತಿದ್ದುದು ತಾಳೆಗರಿಗಳಲ್ಲಿ ಈ ಒಂದೊಂದು ಗರಿಗಳಲ್ಲೂ ಅತ್ಯಮೂಲ್ಯವಾದ, ಗಹನವಾದ ಅಂಶಗಳು ಅಡಕವಾಗಿವೆ. ಕಾಲ ಕ್ರಮೇಣ, ಹೆಚ್ಚು ಪ್ರಮಾಣದಲ್ಲಿ ಅವು ಕಳೆದುಹೋದರೂ ಸ್ವಲ್ಪ ಭಾಗವನ್ನಾದರೂ ಉಳಿಸಿಕೊಳ್ಳುವ ಪ್ರಯತ್ನ ನಮ್ಮ ದೇಶ ಹಾಗೂ ನಾಡಿನಲ್ಲಿ ನಡೆದಿದೆ. ಇಂತಹ ಸತ್ಕಾರ್ಯದಿಂದಾಗಿಯೇ ಈ ಸಂರಕ್ಷಿಸಲ್ಪಟ್ಟ ದಾಖಲೆಗಳಲ್ಲಿರುವ ಅಮೂಲ್ಯವಾದ ವಿಷಯಗಳು ನಮಗಿಂದು ದೊರೆಯುವಂತಾಗಿದೆ. ಇಂತಹ ಕಾರ್ಯದಲ್ಲಿ ನಿರತವಾಗಿರುವ ಸಂಸ್ಥೆಯೇ ಬೆಂಗಳೂರಿನ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ. ಇಂತಹ ಒಂದು ಮಹತ್ತರವಾದ ಕಾರ್ಯವನ್ನು ಮಾಡುತ್ತಿರುವ ಅಪರೂಪದ ಸಂಸ್ಥೆ ಇದಾಗಿದೆ. ಈ ಸಂಸ್ಥೆಗೆ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನವೆಂದು ಹೆಸರು ಬರಲು ಕಾರಣ ಸ್ಥಾಪಿಸಿದ ಮಹನೀಯರು, ಬೆಳೆದು ಬಂದ ರೀತಿ ಇವೇ ಮುಂತಾದ ಹಲವಾರು ವಿವರಗಳನ್ನು ತಿಳಿದಾಗ ಇದು ನಾಡಿನ ಒಂದು ಪ್ರಮುಖ ಸಂಶೋಧನಾ ಸಂಸ್ಥೆಯೆಂಬುದು ತಿಳಿದುಬರುತ್ತದೆ. ಇದರ ಸ್ಥಾಪನೆಗೆ ಕಾರಣವಾದ ಮಹನೀಯರಲ್ಲಿ ಆದರ್ಶಗುರುಗಳಾದ ಬಿ.ಎಂ.ಶ್ರೀಯವರು ಮತ್ತು ಅವರ ಭವಿಷ್ಯವಾಣಿ ಮುಖ್ಯವಾಗಿದೆ. ಬಿ.ಎಂ.ಶ್ರೀಯವರು 1911 ರಂದೇ ಹೇಳಿದ ಮಾತು "ದೇಶದಲ್ಲಿ ಹುಳು ತಿಂದುಹೋಗದೆ ಇರುವ ಗ್ರಂಥಗಳನ್ನೆಲ್ಲ ಒಂದೆಡೆ ಶೇಖರಿಸಿ ಒಂದನ್ನು ಬಿಡದಂತೆ ಅಚ್ಚುಹಾಕುವುದು. ಅಚ್ಚಾದ ಮೇಲೆ ಎಲ್ಲವನ್ನೂ ಕೊನೆಮುಟ್ಟಿ ಶೋಧಿಸಿ ಹೊಸದಾಗಿ ಲಕ್ಷಣ ಗ್ರಂಥಗಳನ್ನು ಕಾಲಕ್ಕೆ ತಕ್ಕಂತೆ ರಚಿಸುವುದು." ಎಂಬ ನುಡಿಯನ್ನು ಧ್ಯೇಯವಾಗಿಸಿ ಅವರ ಪ್ರೀತಿಯ ಶಿಷ್ಯರಾಗಿದ್ದ ಎಂ.ವಿ.ಸೀತಾರಾಮಯ್ಯನವರು ಹೃದಯಪೂರ್ವಕವಾಗಿ ಕಟ್ಟಿದ ಈ ಗುರುಸ್ಮಾರಕವೇ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಇಂತಹ ಮಹನೀಯರ ಬಗ್ಗೆ ಒಂದು ಕಿರುನೋಟವನ್ನು ಹರಿಸಿದರೆ ಅದು ಅಪ್ರಸ್ತುತವಾಗದೆನಿಸುತ್ತದೆ.

ಅ) ಬಿ.ಎಂ.ಶ್ರೀ, ಎಂ.ವಿ.ಸೀ ಯವರು :–

(ಅ) ಆಚಾರ್ಯ ಬಿ.ಎಂ.ಶ್ರೀ :– ಕನ್ನಡ ನಾಡು–ನುಡಿಗಳ ಪುನರುಜ್ಜೀವನಕ್ಕೆ, ಅಭ್ಯುದಯಕ್ಕೆ ಆಚಾರ್ಯ ಬಿ.ಎಂ.ಶ್ರೀಯವರು ಸಲ್ಲಿಸಿರುವ ಸೇವೆ ಅಪಾರ. "ಕನ್ನಡದ

ಕಣ್ವ", "ಆಧುನಿಕ ಕರ್ನಾಟಕ ಕವಿಚೂತವನ ಚೈತ್ರ", "ರಾಜಸೇವಾಪ್ರಸಕ್ತ", "ಕನ್ನಡ ನವೋದಯ ಕಾರಣ ಪುರುಷ", ಎಂದೆಲ್ಲಾ ಗೌರವಕ್ಕೆ ಕಾರಣವಾದ "ಶ್ರೀ" ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಬಿ.ಎಂ.ಶ್ರೀ ಅವರು, ಬಿ.ಎಂ.ಶ್ರೀ ಎಂಬ ಮೂರೇ ಅಕ್ಷರಗಳಿಂದ ಪ್ರಖ್ಯಾತರಾದ ಪ್ರೊಫೆಸರ್ ಬೆಳ್ಳೂರು ಮೈಲಾರಯ್ಯ ಶ್ರೀಕಂಠಯ್ಯರವರು ಬಹುಭಾಷಾ ಪಂಡಿತರಾಗಿ, ಅಪ್ರತಿಮ ಭೋಧಕರಾಗಿ, ಕನ್ನಡ ಕಾವ್ಯಕ್ಕೆ ಹೊಸಸಿಂಗಾರ ಉಡಿಸಿ, ಗದ್ಯಕ್ಕೆ ನವಶಕ್ತಿ ತುಂಬಿದರು. ಅಲ್ಲದೆ ನಾಟಕ, ಛಂದಸ್ಸು, ಗ್ರಂಥಸಂಪಾದನೆ, ಲಿಪಿ ಸುಧಾರಣೆ, ಸಾಹಿತ್ಯ ಚರಿತ್ರೆ; ವಿಮರ್ಶೆ, ಜಾನಪದ, ವಯಸ್ಕರ ಶಿಕ್ಷಣ. ಇತ್ಯಾದಿ ಕ್ಷೇತ್ರದಲ್ಲಿ ಹೊಸ ಮಾರ್ಗ ಹಾಕಿಕೊಟ್ಟು ದಾರಿದೀಪವಾದರು. ಅಪಾರ ಶಿಷ್ಯ ಪರಂಪರೆಗೆ ಆಚಾರ್ಯರಾಗಿ, ವಿಶ್ವವಿದ್ಯಾನಿಲಯದ ಇಂಗ್ಲೀಷ್ ಮತ್ತು ಕನ್ನಡ ವಿಭಾಗದ ಮುಖ್ಯಸ್ಥರಾಗಿ ಜ್ಞಾನದಾನ ಮಾಡಿದವರು ಬಿ.ಎಂ.ಶ್ರೀಯವರು.

"ಕನ್ನಡ ನವೋದಯ ಸಾಹಿತ್ಯದ ಅಧ್ವರ್ಯ, ಕನ್ನಡದಕಣ್ವ, ಕನ್ನಡಕಣ್ಮಣಿ, ಕನ್ನಡಿಗರಸ್ಫೂರ್ತಿಸೆಲೆ, ಆಚಾರ್ಯ ಬಿ.ಎಂ.ಶ್ರೀಕಂಠಯ್ಯನವರು ತುಮಕೂರು ಜಿಲ್ಲೆ ಸಂಪಿಗೆಯಲ್ಲಿ 1884 ಜನವರಿ 3 ರಂದು ಜನಿಸಿದರು. ತಿಪಟೂರು ತಾಲೂಕು ಸಂಪಿಗೆ ಅವರ ತಾಯಿಯ ತವರೂರು. ಶ್ರೀಯುತರ ತಂದೆ ಹಾಗೂ ಪೂರ್ವಿಕರ ನೆಲೆ ಮಂಡ್ಯ ಜಿಲ್ಲೆ, ನಾಗಮಂಗಲ ತಾಲೂಕಿನ ಬೆಳ್ಳೂರು. ಹಾಗಾಗಿ ಅವರ ಹೆಸರು 'ಬೆಳ್ಳೂರುಮೈಲಾರಯ್ಯಶ್ರೀಕಂಠಯ್ಯ' ಆಯಿತು. ತಂದೆ ಮೈಲಾರಯ್ಯ ತಾಯಿ ಭಾಗೀರಥಮ್ಮ. ಆ ದಂಪತಿಗಳಿಗೆ ಐದು ಮಂದಿ ಮಕ್ಕಳು. ಅವರಲ್ಲಿ ಹಿರಿಯ ಮಗ ಬಿ.ಎಂ.ಶ್ರೀಯವರು. ತಂದೆ ಶ್ರೀರಂಗಪಟ್ಟಣದಲ್ಲಿ ವಕೀಲರಾಗಿದ್ದುದರಿಂದ ಅವರ ಬಾಲ್ಯ ಅಲ್ಲೆ ಕಳೆದದ್ದು ಹೆಚ್ಚು. ಬಿ.ಎಂ.ಶ್ರೀ ಅವರು "ಶ್ರೀರಂಗಪಟ್ಟಣದ ಕಾವೇರಿಯ ನೀರನ್ನು ಕುಡಿದು ಬೆಳೆದವ ನಾನು" ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು.

ಬಿ.ಎಂ.ಶ್ರೀಯವರಿಗೆ ಚಿಕ್ಕವಯಸ್ಸಿನಿಂದಲೇ ಕನ್ನಡ, ಕನ್ನಡ ಭಾಷೆಯ ಬಗ್ಗೆ ಅಪಾರ ಆಸಕ್ತಿ ಹಾಗು ಕನ್ನಡ ಸಾಹಿತ್ಯವನ್ನು ಬೆಳೆಸುವ ಆಲೋಚನೆ ಮನದಾಳದಲ್ಲಿತ್ತು. ಮಾತೃಭಾಷೆ ಕನ್ನಡದ ಮೇಲೆ ಅನನ್ಯ ಪ್ರೀತಿ, ಹಾಗೆಂದು ಇತರ ಭಾಷೆಗಳನ್ನು ಅಲಕ್ಷ ಮಾಡಲಿಲ್ಲ. ಕನ್ನಡಿಗರು ಕನ್ನಡ, ಇಂಗ್ಲೀಷ್ ಮತ್ತಿತರ ಭಾಷೆಗಳ ಸಾಹಿತ್ಯವನ್ನು ಅಭ್ಯಾಸ ಮಾಡಬೇಕೆಂದು ಹೇಳುತ್ತಿದ್ದರಲ್ಲದೆ ಅವರೆ ತಮಿಳು, ತೆಲುಗು, ಗ್ರೀಕ್, ಸಂಸ್ಕೃತ, ಉರ್ದು–ಮುಂತಾದ ಭಾಷೆಗಳಲ್ಲಿ ಪಾಂಡಿತ್ಯ ಪಡೆದಿದ್ದರು. ಗ್ರೀಕ್ ಭಾಷೆಯ ದುರಂತ ನಾಟಕಗಳ ರೀತಿಯಲ್ಲಿ "ಅಶ್ವತ್ಥಾಮನ್" ನಾಟಕವನ್ನು ಹಳಗನ್ನಡ ಭಾಷೆಯಲ್ಲಿ ರಚಿಸಿದರು. ಅವರ 'ಪಾರಸೀಕರು' ನಾಟಕವೂ ಗ್ರೀಕ್ ರುದ್ರ ನಾಟಕದ ಅನುವಾದ ನೇರ ಭಾಷಾಂತರ ರನ್ನನ "ಗದಾಯುದ್ಧ" ದಲ್ಲಿರುವ ನಾಟಕೀಯ ಗುಣಗಳನ್ನು

ಗುರುತಿಸಿ ಅದನ್ನು ನಾಟಕ ರೂಪಕ್ಕೆ ಅಳವಡಿಸಿದರು.

ಆಚಾರ್ಯ ಬಿ.ಎಂ.ಶ್ರೀಯವರು ಬರೆದದ್ದು ಕೇಲವೇ ಕೃತಿಗಳು ಮಾತ್ರ. ಆದರೆ ಅವೆಲ್ಲವೂ ಅಮೂಲ್ಯವಾದ ಮುತ್ತುಗಳು, ಮೌಲಿಕ ಸಾಹಿತ್ಯ ರತ್ನಗಳು, ನಿಸ್ಸಂದೇಹವಾಗಿ ಹೊಸ ಪ್ರಯೋಗಗಳು. ಇತರರು ಆ ಪ್ರಯೋಗಗಳನ್ನು ಯಶಸ್ವಿಯಾಗಿ ಮುಂದುವರೆಸಿದ ಹಲವಾರು ಉದಾಹರಣೆಗಳಿವೆ.

ಶ್ರೀಯವರ ಕವನ ಸಂಗ್ರಹ "ಇಂಗ್ಲಿಷ್ ಗೀತೆಗಳು"- ಇಂಗ್ಲೀಷ್‌ನಿಂದ ಕನ್ನಡಕ್ಕೆ ಅನುವಾದಿಸಿದ ಕವಿತೆಗಳು. ಈ ಕಾವ್ಯಕೃತಿ ಕನ್ನಡ ಕಾವ್ಯರಂಗದ ಹೊಸ ಸಾಧ್ಯತೆಗಳನ್ನು, ವಸ್ತು ಮತ್ತು ಲಯಗಳಿಗೆ ಸಂಬಂಧಿಸಿದಂತೆ ಪ್ರದರ್ಶಿಸಿ ಯಶಸ್ಸು ಪಡೆಯುವುದರ ಮೂಲಕ ಹೊಸಗನ್ನಡ ಕಾವ್ಯಪ್ರಪಂಚಕ್ಕೆ ಒಂದು ಪರ್ವಕೃತಿ ಎನಿಸಿಕೊಂಡಿದೆ. ಇದರಿಂದಾಗಿ ಒಂದು ಕಾವ್ಯಪರಂಪರೆಯ ನಿರ್ಮಾಣಕ್ಕೆ ಅವರು ಕಾರಣಭೂತರಾದರು. ಬಿ.ಎಂ.ಶ್ರೀ ಅವರ ಕೆಲವು ಅಪ್ರಕಟಿತ ಬಿಡಿ ಕವನಗಳು, ಲೇಖನಗಳು, ವಿಮರ್ಶೆ, ವಿಚಾರ ಇತ್ಯಾದಿ ಬರಹಗಳನ್ನು "ಶ್ರೀ ಸಾಹಿತ್ಯ" ಎಂಬ ಸಮಗ್ರ ಕೃತಿಸಂಪುಟದಲ್ಲಿ ಕುವೆಂಪು ಅಧ್ಯಯನ ಸಂಸ್ಥೆ 1983ರಲ್ಲಿ ಪ್ರಕಟಿಸಿದೆ.

ಕನ್ನಡದ ಕಣ್ವರೆಂದೇ ಕರೆಯಲ್ಪಡುವ ಬಿ.ಎಂ.ಶ್ರೀಯವರ ಶಿಸ್ತುಬದ್ಧ ಸಾಹಿತ್ಯದ ಸಾಧನೆಯನ್ನು ಗಮನಿಸಿದ ನವೋದಯ ಕವಿಗಳು ತಮ್ಮದೇ ಆದ ರೀತಿಯಲ್ಲಿ ತಮ್ಮ ಗುರುಗಳ ಬಗ್ಗೆ ವ್ಯಾಖ್ಯಾನಿಸಿದ್ದಾರೆ. ಕುವೆಂಪು-"ಬಿ.ಎಂ.ಶ್ರೀ ನವಯುಗದ ಪ್ರವರ್ತಕ" ಎಂದರೆ ದ.ರಾ.ಬೇಂದ್ರೆ- "ಶ್ರೀ ಮಾರ್ಗದರ್ಶಿಗಳು, ಮಾರ್ಗಕಾರರು" ಎಂದರು, ಜೊತೆಗೆ ಡಿ.ವಿ.ಗುಂಡಪ್ಪರವರು" ಶ್ರೀ ತೋರಿಸಿದ್ದೇ ಒಳ್ಳೇಯ ದಾರಿ"[2]. ಎಂದು ಹೇಳುವುದರ ಮೂಲಕ ಅವರ ನಂತರದ ತಲೆಮಾರುಗಳಿಗೆ ಜ್ಞಾನದ ದಾರಿ ದೀಪವಾಗಿದ್ದಾರೆ.

ಹೀಗೆ ಬಿ.ಎಂ.ಶ್ರೀ ಅವರನ್ನು ಇಡೀ ಕನ್ನಡನಾಡು ಒಪ್ಪಿಕೊಂಡಿತ್ತು. ಏಕೆಂದರೆ ಹಲವಾರು ಹೊಸ ಹೊಸ ಪ್ರಯೋಗಗಳನ್ನು ಮಾಡಿ ದಾರಿ ತೋರಿದರು. ಅಲ್ಲದೆ ಹೊಸಗನ್ನಡ ಕಾವ್ಯದ ಹೆದ್ದಾರಿಯನ್ನು ತೆರೆದು ಸಾಹಿತ್ಯದ ಅನೇಕ ಪ್ರಕಾರಗಳಿಗೆ ನೂತನ ಮಾರ್ಗ ನಿರ್ಮಿಸಿದ ಅಗ್ರಗಣ್ಯ ಆಚಾರ್ಯರೆನಿಸಿಕೊಂಡ ಧೀಮಂತ ಕವಿ ಬಿ.ಎಂ.ಶ್ರೀಯವರು. ಇವರ ಬಿಡುವಿಲ್ಲದ ಸಾಧನೆಯನ್ನು ಕಂಡ ಡಿ.ವಿ.ಗುಂಡಪ್ಪನವರು ಅವರ ಜ್ಞಾನದ ಆಳವನ್ನು "ಕಾವ್ಯ ತಪಸ್ಸಂಪಾದಿತ

ದಿವ್ಯಯಶಃ ಕಾಯ ಶಾಶ್ವತಂ ಶ್ರೀಕಂಠಂ

ಸೇವ್ಯಂ ಕನ್ನಡ ಮೆಂಬೊ-
ದ ವ್ಯಾಹಕ ಭವ್ಯ ಧೀಕ್ಷೆಯೊಳ್ ಗುರುವಾದಂ."[3]

ಎಂದು ಹೇಳುವ ಮೂಲಕ ಶ್ರೀಕಂಠಯ್ಯನವರ ಕಾವ್ಯದ ಭಾವತೀವ್ರತೆಯನ್ನು ತಿಳಿಯಲು ಸಾಧ್ಯವಾಗುತ್ತದೆ.

ಕನ್ನಡದ ಈಗಿನ ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪರವರು ಹೊಸಗನ್ನಡದಲ್ಲಿ ಶ್ರೀಯವರ ಕುರಿತು-

"ನಾಡಿನುದ್ದಕ್ಕೂ ಕಿರಿಣವ ಹರಡಿತು
ಬೆಳ್ಳೂರಿನ ಬೆಳಗು
ಶ್ರೀ ಪ್ರಭೆಯಲಿ ಕಣ್ತೆರೆದವು ಕೋಟಿ ಕಂಠಗಳು
ನವೋದಯದ ಮೊಳಗು"[4]

ಎಂದು ಹೇಳುವ ಮೂಲಕ ಅವರ ಬದುಕಿನ ಆದಿ-ಅಂತ್ಯಗಳ ಬದುಕಿನ ರೀತಿ-ನೀತಿಗಳನ್ನು ತಿಳಿಸಿದ್ದಾರೆ. ಅಲ್ಲದೆ ಬಿ.ಎಂ.ಶ್ರೀಯವರ ಸಾಹಿತ್ಯ ಶಕ್ತಿ ನಾಡಿನಾದ್ಯಂತ ಉಂಟುಮಾಡಿರುವ ಪ್ರಭಾವವನ್ನು ಗಮನಿಸಬಹುದು. ಬಿ.ಎಂ.ಶ್ರೀಯವರ ಹೆಸರಿನಲ್ಲಿ ಸಂಸ್ಥೆ ಇಂದು ಕನ್ನಡ ನಾಡಿನಾದ್ಯಂತ ತನ್ನ ಪ್ರಭಾವವನ್ನು ಹರಡಿರುವುದನ್ನು ಕಂಡು ಮೇಲಿನ ಸಾಹಿತ್ಯ ದಿಗ್ಗಜರು ಹೇಳಿರುವ ನುಡಿ ವಾಕ್ಯಗಳು ಕೊಡಲಾಗಿದೆ.

(ಆ) ಸಂಸ್ಥಾಪಕರಾದ ಎಂ.ವಿ.ಸೀ :- "ಎಂ.ವಿ.ಸೀತಾರಾಮಯ್ಯರವರು ಶ್ರೇಷ್ಠ ಸಾಹಿತಿಗಳಾಗಿ, ವಿದ್ವಾಂಸರಾಗಿ ನಾಡಿಗೆ ತಮ್ಮದೇ ಆದ ವಿಶಿಷ್ಟ ಕೊಡುಗೆ ನೀಡಿದವರು. ಅಲ್ಲದೇ ಇಲ್ಲಿಯವರೆಗೂ ಯಾರೂ ಮಾಡಲಾಗದ "ಗುರುಸ್ಮಾರಕ" ಕಟ್ಟಿ ಯಶಸ್ವೀ ಸಂಘಟಕರೂ ಆಗಿದ್ದರು. ಇಂದಿನ ಸಂದರ್ಭದಲ್ಲಿ ನಾವು ಅಂಥವರ ಬದುಕನ್ನು ಆದರ್ಶವಾಗಿಟ್ಟುಕೊಂಡು ಮುನ್ನಡೆಯಬೇಕಿದ್ದರೆ, ಅವರು ಕಟ್ಟಿದ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದಂತಹ ಸಂಸ್ಥೆಯನ್ನು ಉಳಿಸಿ ಬೆಳೆಸಬೇಕು".5 ಎಂಬ ಚಿ.ಶ್ರೀನಿವಾಸರಾಜುರವರ ಅಭಿಪ್ರಾಯವನ್ನು ಗಮನಿಸಿದರೆ (ಉದಯವಾಣಿ 17/9/2005) ಎಂ.ವಿ.ಸೀ ರವರು ಒಬ್ಬ ಉತ್ತಮ ಗುರುವಿನ ಆದರ್ಶಗಳನ್ನು ತಮ್ಮಲ್ಲಿ ಹೇಗೆ ರೂಢಿಸಿಕೊಂಡಿದ್ದರು ಎನ್ನುವುದನ್ನು ತಿಳಿಯಬಹುದು.

ಒಂದೇ ತರಗತಿಯಲ್ಲಿ ಕುಳಿತ ಎಲ್ಲ ವಿದ್ಯಾರ್ಥಿಗಳು ಗುರುವಿನ ಮಾರ್ಗದರ್ಶನವನ್ನು, ಆದರ್ಶಗಳನ್ನು ಅಳವಡಿಸಿಕೊಳ್ಳುತ್ತಾರೆಂದು ತಿಳಿಯಲು ಸಾಧ್ಯವಿಲ್ಲ. ಕೇವಲ ಒಬ್ಬಿಬ್ಬರ ಮೇಲಂತೂ ಅದು ಆಳವಾದ ಪರಿಣಾಮ ಉಂಟುಮಾಡಬಹುದು. ಅಂತಹ ಶಿಷ್ಯರು ಗುರುವಿನ ಹೆಸರನ್ನು ಶಾಶ್ವತಾವಗಿ ಉಳಿಸುವಂತಹ ಅಮೂಲ್ಯ ಕಾರ್ಯದಲ್ಲಿ ತೊಡಗುತ್ತಾರೆ. ಬಿ.ಎಂ.ಶ್ರೀಯವರ ಬೃಹತ್ ಶಿಷ್ಯ ವೃಂಧದಲ್ಲಿ ಎಂ.ವಿ.ಸೀತಾರಾಮಯ್ಯರವರು ಅಂತಹವರು.

ತಮ್ಮ ನೆಚ್ಚಿನ ಹಾಗೂ ಆದರ್ಶ ಗುರುವಿನ ಅಪಾರ ಪಾಂಡಿತ್ಯ ಬೋಧನಾಶೈಲಿ. ಚಿಂತನ ಕ್ರಮ ಇವೆಲ್ಲಕ್ಕಿಂತ ಹೆಚ್ಚಾಗಿ ಅವರ ಸಂಶೋಧನಾ ಪ್ರವೃತ್ತಿ ಇವರ ಮೇಲೆ ಅಗಾಧ ಪರಿಣಾಮ ಬೀರಿತ್ತು. ಆಚಾರ್ಯ ಬಿ.ಎಂ.ಶ್ರೀಯವರು 1911ರಲ್ಲೇ "ದೇಶದಲ್ಲಿ ಹುಳು ತಿಂದು ಹೋಗದೆ ಇರುವ ಗ್ರಂಥಗಳನ್ನೆಲಾ ಶೇಖರಿಸಿ, ಒಂದನ್ನು ಬಿಡದಂತೆ ಅಚ್ಚು ಹಾಕುವುದು. ಅಚ್ಚಾದ ಮೇಲೆ ಎಲ್ಲವನ್ನು ಕೊನೆಮುಟ್ಟಿ ಶೋಧಿಸಿ ಹೊಸದಾಗಿ ಲಕ್ಷಣ ಗ್ರಂಥಗಳನ್ನು ಕಾಲಕ್ಕೆ ತಕ್ಕಂತೆ ರಚಿಸುವುದು" ಎಂದು ಹೇಳಿದ್ದರು. ಮೇಲಿನ ಭವಿಷ್ಯವಾಣಿ ಎಂ.ವಿ.ಸೀ ಅವರ ಮನಸ್ಸಿನಲ್ಲಿ ಶಾಶ್ವತವಾಗಿ ನೆಲೆನಿಂತಿತು. ಅದರಿಂದ ಉತ್ತೇಜನಗೊಂಡು ಮುಂದೆ ಒಂದು ವಿಭಿನ್ನ ಸಂಶೋಧನಾ ಸಂಸ್ಥೆಯನ್ನು ಪ್ರಾರಂಭಿಸಲು ಮೂಲಕಾರಣವಾಯಿತು.

ಎಂ.ವಿ.ಸೀತಾರಾಮಯ್ಯನವರು ಹುಟ್ಟಿದ್ದು ಮೈಸೂರಿನಲ್ಲಿ. ತಂದೆ ವೆಂಕಟದಾಸಪ್ಪ ವೃತ್ತಿಯಲ್ಲಿ ಗುಮಸ್ತರು. ದೊಡ್ಡ ಕುಟುಂಬ, ಆರ್ಥಿಕ ಮುಗ್ಗಟ್ಟು, ಇವೆಲ್ಲದರ ನಡುವೆಯೇ ಎಂ.ವಿ.ಸೀ ತಮ್ಮ ಪ್ರೌಢ ಶಿಕ್ಷಣವನ್ನು ಮುಗಿಸಿ ಪದವಿಯನ್ನು ಪಡೆದರು. ನಂತರ ತೀ.ನಂ.ಶ್ರೀ, ಬಿ.ಎಂ.ಶ್ರೀ, ನಾ.ಕಸ್ತೂರಿ ಮುಂತಾದ ಹಿರಿಯರ ಪ್ರೋತ್ಸಾಹದಿಂದ ಎಂ.ಎ. ಪದವಿಯನ್ನು ಗಳಿಸಿದರು. ಟಿ.ಎಸ್.ವೆಂಕಣ್ಣಯ್ಯನವರ ಶಿಫಾರಸಿನಿಂದಾಗಿ 1934ರಲ್ಲಿ ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಸಹಾಯಕ ಕಾರ್ಯದರ್ಶಿಯಾಗಿ ನೇಮಕಗೊಂಡರು. ಈ ಕಾರ್ಯದ ಜೊತೆಗೆ ಸಂಸ್ಥೆಯನ್ನು ಅಭಿವೃದ್ಧಿ ಪಡಿಸುವ ಕೆಲಸವೂ ಇತ್ತು. ಪತ್ರ ವ್ಯವಹಾರ, ಹಣಕಾಸಿನ ಜವಬ್ದಾರಿ, ಎ.ಆರ್.ಕೃಷ್ಣಶಾಸ್ತ್ರಿಗಳು ಸಂಪಾದಕರಾಗಿದ್ದ ಪರಿಷತ್ ಪತ್ರಿಕೆಯ ಸಂಪಾದನೆಗೆ ನೆರವು, ಗ್ರಂಥ ಭಂಡಾರದ ಮೇಲ್ವಿಚಾರಣೆ, ಕಾರ್ಯಸಮಿತಿಯ ಸಭೆಯ ಕಾರ್ಯಕಲಾಪಗಳಿಗೆ ಸಿದ್ಧತೆ ಹೀಗೆ ದಿನಕ್ಕೆ ಸುಮಾರು ಹತ್ತು ಗಂಟೆಗಳ ಕಾಲ ನಿರಂತರವಾಗಿ ಕೆಲಸದಲ್ಲಿ ತೊಡಗಿದ್ದರು.

ಎಂ.ವಿ.ಸೀಯವರು ತಾವು ಬರೆದ ಕಾದಂಬರಿಯೊಂದನ್ನು ಪ್ರೊ.ಡಿ.ಎಲ್. ನರಸಿಂಹಚಾರ್ಯರಿಗೆ ತೋರಿಸಿದಾಗ ಪ್ರೊ.ಡಿ.ಎಲ್.ಎನ್‌ರವರು ಕಥೆ, ಕಾದಂಬರಿಗಳನ್ನು ಬರೆಯುವವರಿದ್ದಾರೆ. ಅವುಗಳನ್ನು ಬಿಟ್ಟು ಗಟ್ಟಿಯಾಗಿ ಉಳಿಯುವಂತಹ ಚಿಂತನಶೀಲ ವಿಚಾರಪೂರ್ಣ ಸಾಹಿತ್ಯ ರಚನೆಗೆ ತೊಡಗಲು ಸೂಚಿಸಿದರು. ಅಲ್ಲದೆ ವಿದ್ಯಾರ್ಥಿಯಾಗಿದ್ದಾಗ ಟಿ.ಎಸ್.ವೆಂಕಣ್ಣಯ್ಯನವರು "ಕವಿರಾಜಮಾರ್ಗ" ಕೃತಿಯನ್ನು ಪರಿಷ್ಕಾರ ಮಾಡಬೇಕಾದ ಅವಶ್ಯಕತೆಯನ್ನು ಹೇಳಿದ್ದು ಇವರ ಮನಸ್ಸಿನಲ್ಲಿತ್ತು. 1963ರಲ್ಲಿ ಬೆಂಗಳೂರಿನ ಸರ್ಕಾರಿ ಕಾಲೇಜಿನಲ್ಲಿ ಕನ್ನಡ ರೀಡರ್ ಆಗಿ, ಬಡ್ತಿಪಡೆದು 1967ರಲ್ಲಿ ನಿವೃತ್ತರಾದರು. ಆ ಸಂದರ್ಭದಲ್ಲಿ ಐಚ್ಛಿಕ ಕನ್ನಡ ವಿಭಾಗಕ್ಕೆ ಪಾಠ ಹೇಳಬೇಕಾಗಿ ಬಂತು. ಆಗ 'ಕವಿರಾಜಮಾರ್ಗದ' ಪರಿಷ್ಕಾರ ಕಾರ್ಯವನ್ನು ಕೈಗೊಂಡು ತಮ್ಮ ಗ್ರಂಥ ಸಂಪಾದನೆಯ

ಅನುಭವವನ್ನು ವಿದ್ವತ್ ಪ್ರೌಢಿಮೆಯನ್ನು ಪ್ರದರ್ಶಿಸಿ ಪಂಡಿತ ಮಂಡಳಿಯಲ್ಲಿ, ವಿದ್ವಂಸರ ಶ್ರೇಣಿಯಲ್ಲಿ ಉತ್ತಮ ಸ್ಥಾನವನ್ನು ಸಂಪಾದಿಸಿದರು. ಈ ಯಶಸ್ಸು ಅವರ ಮನಸ್ಸನ್ನು ಮತ್ತಷ್ಟು ತೀವ್ರವಾಗಿ ಪ್ರಾಚೀನ ಗ್ರಂಥಗಳು ಹಾಗೂ ಪ್ರಾಚೀನ ಹಸ್ತಪ್ರತಿಗಳ ಬಗ್ಗೆ ಆಸಕ್ತಿ ಮೂಡಿ ಅವುಗಳನ್ನು ಸಂಗ್ರಹಿಸಿ ಕಾಪಾಡುವ ಕಾರ್ಯಕ್ಕೆ ಪ್ರೋತ್ಸಾಹ ನೀಡಿತು ಎಂದು ಹೇಳಬಹುದು.

"ಕವಿರಾಜಮಾರ್ಗ" ಕೃತಿ ಎಂ.ವಿ.ಸೀ ಅವರಿಗೆ ಸಂಶೋಧಕರೆಂದು ಹೆಸರು ತಂದುಕೊಟ್ಟ ಕೃತಿ. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಈ ಕೃತಿಗೆ ವಿಶೇಷವಾದ ಸ್ಥಾನವೂ ಇದೆ. ಇದು ಸೀತಾರಾಮಯ್ಯನವರು ತುಂಬಾ ಗಂಭೀರವಾಗಿ ಸಂಪಾದಿಸಿದ ಕೃತಿಯಾಗಿದೆ. ಅವರ ಪಾಂಡಿತ್ಯ, ಪ್ರತಿಭೆ, ವಿದ್ವತ್ತುಗಳಿಗೆ ಈ ಮಹನ್ ಗ್ರಂಥ ಸಾಕ್ಷಿಯಾಗಿದೆ.

ಪ್ರೊ.ಎಂ.ವಿ.ಸೀತಾರಾಮಯ್ಯನವರ ಕೃತಿಗಳ ಬಗ್ಗೆ ಇತರ ವಿದ್ವಾಂಸರು ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು ನೋಡಿದರೆ ಸಾಕು ಅವರ ಸಾಹಿತ್ಯದ ಹಿರಿಮೆ ಅರಿವಾಗುತ್ತದೆ. "ಸೀತಾರಾಮಯ್ಯನವರು ಸಂಪಾದಿಸಿರುವ "ಕವಿರಾಜಮಾರ್ಗಂ" ಅವರ ಪಾಂಡಿತ್ಯಕ್ಕೆ ಹಿಡಿದ ಕನ್ನಡಿಯಾಗಿದೆ. ಅವರ ಬಹುಮುಖ ಪ್ರತಿಭೆಗೆ ಸಾಕ್ಷಿಯಾಗಿದೆ. ಈ ಶ್ರೇಷ್ಠ ಕೃತಿ ಎಲ್ಲ ಕನ್ನಡ ಜನತೆಯ ಮೆಚ್ಚುಗೆಗೆ ಮತ್ತೊಮ್ಮೆ ಪಾತ್ರವಾಗುತ್ತದೆ ಎಂಬುದರಲ್ಲಿ ಸಂದೇಹವಿಲ್ಲ."[6] ಎಂದು ನಿಟ್ಟೂರು ಶ್ರೀನಿವಾಸ್‌ರಾವ್‌ರವರು ಹೇಳಿಕೆಯಿಂದ ಪ್ರೊ.ಎಂ.ವಿ.ಸೀ ರವರ ಸಂಪಾದನ ಕಾರ್ಯದ ವಿದ್ವತ್‌ನ್ನು ತಿಳಿಯಬಹುದು. ಅವರ ಪ್ರಖ್ಯಾತ ಕಾದಂಬರಿ "ಮಾದನ ಮಗಳು" ಬಿಡುಗಡೆಯಾದ ನಂತರ ಅವರ ಕಾದಂಬರಿಗಳನ್ನು ಓದಿದ ಖ್ಯಾತ ವಿಮರ್ಶಕ ಡಾ.ರಂ.ಶ್ರೀ ಮುಗಳಿಯವರು ಹೇಳಿರುವ ಹೇಳಿಕೆ "ಇದು ಹರಿಜನ ಸಮಸ್ಯೆಯನ್ನು ಪ್ರಮುಖವಾಗಿ ಕಥನ ರೂಪದಲ್ಲಿ ವಿಶ್ಲೇಷಿಸುವ ಸಾಮಾಜಿಕ ಕಾದಂಬರಿ ಜಾತಿ ವ್ಯವಸ್ಥೆಯಲ್ಲಿ ನಮ್ಮ ದೇಶದಲ್ಲಿ ಮೂಲ ಸ್ವರೂಪವನ್ನು ಕಳೆದುಕೊಂಡು ಹೊಂದಿರುವ ವಿಕೃತಿಗೆ ಹರಿಜನ ಸಮಸ್ಯೆ ಒಂದು ದಾರುಣವಾದ ನಿದರ್ಶನವಾಗಿದೆ. ಇದನ್ನು ಕಥನ ಮೂಲಕವಾಗಿ ನಿರೂಪಿಸುವುದರಲ್ಲಿ ಇದರ ಅಮಾನವೀಯತೆಯನ್ನು ಎತ್ತಿತೋರಿಸಿ ವಾಚಕರಲ್ಲಿ ಹೃದಯ ಸಂಸ್ಕಾರವನ್ನು ಉಂಟುಮಾಡುವುದು ಲೇಖಕರ ಉದ್ದೇಶವಾಗಿರುತ್ತದೆ".[7] ಎಂದು ಹೇಳಿರುವ ಹೇಳಿಕೆ ನೋಡಿದರೆ ಅವರ ಸಾಮಾಜಿಕ ಕಳಕಳಿ ತಿಳಿಯುತ್ತದೆ.

ಸಾಹಿತ್ಯದ ಎಲ್ಲಾ ಪ್ರಕಾರಗಳಿಗೂ ಸಂಪನ್ನ ಕೊಡುಗೆಯನ್ನು ನೀಡಿರುವ ಶ್ರೀಯುತರು ಮೂಲತಃ ಸೃಜನಾತ್ಮಕ ಸಾಹಿತಿ. ಇವರು ಕಥೆ. ಕಾದಂಬರಿ, ನಾಟಕ, ಕವನ, ಪ್ರಬಂಧ, ಮಕ್ಕಳ ಸಾಹಿತ್ಯ, ಗ್ರಂಥ ಸಂಪಾದನೆ, ಸಂಶೋಧನೆ ಮೊದಲಾದ ಪ್ರಕಾರಗಳಲ್ಲಿ

ಒಟ್ಟು ಸುಮಾರು 75 ಕೃತಿಗಳನ್ನು ರಚಿಸಿರುತ್ತಾರೆ. (ಕಾವ್ಯ 15, ಮಕ್ಕಳ ಸಾಹಿತ್ಯ 7, ಕಥಾಸಂಕಲನ 10, ಕಾದಂಬರಿ 11, ನಾಟಕ 9, ಪ್ರಬಂಧ 3, ವ್ಯಕ್ತಿಚಿತ್ರ 1, ಗ್ರಂಥಸಂಪಾದನೆ 14; ಸಂಕೀರ್ಣ 5. ಇವುಗಳಲ್ಲಿ ಹಲವು ಪ್ರಶಸ್ತಿ / ಪುರಸ್ಕಾರಕ್ಕೆ ಭಾಜನವಾಗಿವೆ. ಆದರೂ ಇವರು ಸಾಹಿತ್ಯ ಕ್ಷೇತ್ರದಲ್ಲಿ ಹೆಚ್ಚು ಖ್ಯಾತಿಗಳಿಸಿರುವುದು ಸಂಶೋಧನೆ, ಗ್ರಂಥ ಸಂಪಾದನೆ ಮತ್ತು ವಿದ್ವತ್ ಕ್ಷೇತ್ರಗಳಲ್ಲಿ.

ಇವರಿಗೆ ಲಭಿಸಿರುವ ಪ್ರಮುಖಬಹುಮಾನಗಳು, ಪ್ರಶಸ್ತಿಗಳು ಹಲವು ಬಿ.ಎಂ.ಶ್ರೀ. ರಜತೋತ್ಸವ ಸ್ವರ್ಣಪದಕ (1933), 'ಹಕ್ಕಿಹಾಡು' ಕವನ ಸಂಕಲನಕ್ಕೆ ದೇವರಾಜ ಬಹದ್ದೂರ್ ಹಾಗೂ ಕನ್ನಡಸಾಹಿತ್ಯಪರಿಷತ್ತಿನ ಬಹುಮಾನ (1946). 'ಮಾದನ ಮಗಳು' ಕಾದಂಬರಿಗೆ ದೇವರಾಜ ಬಹದ್ದೂರ್ ಬಹುಮಾನ (1951). 'ಮುಗಿಯದ ಮಾಯೆ' ಕವನ ಸಂಕಲನಕ್ಕೆ ದೇವರಾಜ ಬಹದ್ದೂರ್ ಬಹುಮಾನ (1957), 'ತೊಟ್ಟಿಲು ತೂಗದ ಕೈ' ನಾಟಕಕ್ಕೆ ರಾಜ್ಯ ಸರ್ಕಾರ ಪ್ರಶಸ್ತಿ (1957); ಜೀವನ ನಾಟಕ (ವ್ಯಕ್ತಿ ಕಥೆಗಳು) ಕೃತಿಗೆ ರಾಜ್ಯ ಸರ್ಕಾರ ಪ್ರಶಸ್ತಿ (1960); ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ (1973); 'ಪ್ರಾಚೀನ ಕನ್ನಡ ವ್ಯಾಕರಣಗಳು' ಪುಸ್ತಕಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1980); ಡಾ॥ ಜ.ಚ.ನಿ.ಯವರಿಂದ 'ವಿಚಾರರತ್ನಾಕರ ಪ್ರಶಸ್ತಿ' (1975); ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರಮಹೋತ್ಸವ ಪ್ರಶಸ್ತಿ (1975); 'ಆಸ್ವಾದ' ಅಭಿನಂದನ ಗ್ರಂಥಸಮರ್ಪಣೆ ಉದಯಭಾನು ಕಲಾ ಸಂಘದಿಂದ (1983).

ಇವರು ಬಳಸುತ್ತಿದ್ದ ಕಾವ್ಯನಾಮಗಳು : ರಾಘವ, ಕವಿಮಿತ್ರ, ವೈ.ವೆಂ.ಸೀ. 'ಎಂ.ವಿ.ಸೀ. ಕನ್ನಡ ಸಾಹಿತ್ಯಕ್ಕೆ, ಕನ್ನಡ ನಾಡಿಗೆ ಗೌರವ ತರುವ ದುಡಿಮೆಯಿಂದ, ಬದುಕಿನಿಂದ ತಮ್ಮ ವ್ಯಕ್ತಿತ್ವವನ್ನು ಬೆಳಸಿಕೊಂಡು ಬಂದಿದ್ದಾರೆ. ದೈವದತ್ತವಾದ ಪ್ರತಿಭೆಯನ್ನು ಸತತಾಭ್ಯಾಸದಿಂದ, ಸಮೃದ್ಧ ಸೇವಾನುರಾಗದಿಂದ ಹೇಗೆ ಪ್ರಕಾಶಪಡಿಸಿದ್ದಾರೆ ಎಂಬುದನ್ನು ಅವರ ಕಾವ್ಯ ಸೃಷ್ಟಿಯಲ್ಲಿ ಕಾಣಬಹುದು.

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನವನ್ನು ತಮ್ಮ ಸ್ವಗೃಹದಲ್ಲಿ ಸ್ಥಾಪಿಸಿ ಅದರ ಅಭ್ಯುದಯಕ್ಕಾಗಿ ಅಹರ್ನಿಶಿ ಶ್ರಮಿಸಿದರು. ಅದೇ ಪ್ರತಿಷ್ಠಾನ ಈಗ ಬೃಹತ್ತಾಗಿ ಬೆಳೆದು ಬೆಳ್ಳೂರಿನಲ್ಲಿ ಸಹ ಒಂದು ಘಟಕವನ್ನು ಹೊಂದಿದ್ದು, ರಜತ ಮಹೋತ್ಸವ ನಡೆದಿದೆ. ಇದು ನಿಜಕ್ಕೂ ಕನ್ನಡ ನಾಡು ಹಾಗೂ ಸಾಹಿತ್ಯಿಕ ಜಗತ್ತು ಹೆಮ್ಮೆಪಡುವ ಅಂಶವಾಗಿದೆ.

ಆ) ಬಿ.ಎಂ.ಶ್ರೀ ಪ್ರತಿಷ್ಠಾನದ ಪ್ರಾರಂಭ, ಉದ್ದೇಶ :–

ಬಿ.ಎಂ.ಶ್ರೀ ಕಂಠಯ್ಯನವರು ಹೇಳಿದ ವಾಣಿಯನ್ನೇ ಧ್ಯೇಯವಾಗಿಟ್ಟುಕೊಂಡು ಮೇ 6,1979ರಂದು ಎಂ.ವಿ.ಸೀತಾರಾಮಯ್ಯನವರು ಸ್ಥಾಪನೆ ಮಾಡಿದ ರಾಷ್ಟ್ರಕವಿ ಕುವೆಂಪು ಅವರು ಉದ್ಘಾಟನೆ ಮಾಡಿದ ಬಿ.ಎಂ.ಶ್ರೀ ಪ್ರತಿಷ್ಠಾನದಲ್ಲಿ ಎಂ.ವಿ.ಸೀ ಅವರ ಮೂಲ ಉದ್ದೇಶವಾದ ಪ್ರಾಚೀನ ಹಸ್ತಪ್ರತಿಗಳ ಸಂಗ್ರಹಕಾರ್ಯ ಇಲ್ಲಿ ವ್ಯವಸ್ಥಿತವಾಗಿ ನಡೆಯುತ್ತಿದೆ. ಈಗಾಗಲೇ ಸುಮಾರು ಮೂರು ಸಾವಿರಕ್ಕಿಂತ ಹೆಚ್ಚು ಅಪರೂಪದ ಹಾಗು ಹಸ್ತಪ್ರತಿಗಳ ಸಂಗ್ರಹ ಇಲ್ಲಿದೆ. ಇವೆಲ್ಲವನ್ನು ಹಾಳಾಗದಂತೆ ವೈಜ್ಞಾನಿಕವಾಗಿ ಸಂರಕ್ಷಿಸಿ ಸಂಗ್ರಹಿಸಲಾಗಿದೆ.

1982ರಲ್ಲಿ ನಡೆದ ಹಸ್ತಪ್ರತಿಶಾಸ್ತ್ರ ವಿಚಾರಗೋಷ್ಠಿಯ ಕಾಲದಿಂದ ಇದನ್ನೊಂದು ಅಧ್ಯಯನ ಕ್ಷೇತ್ರವನ್ನಾಗಿ ಮಾಡಿ ಯುವ ಜನರು ಇದನ್ನು ಆರಿಸಿಕೊಳ್ಳುವಂತೆ ಮಾಡುವ ಯೋಜನೆಯಿತ್ತು. 1990 ರಲ್ಲಿ ಅದು ಕಾರ್ಯಗತಗೊಂಡು ದಶಮಾನೋತ್ಸವದ ನೆನಪಾಗಿ ಹಸ್ತಪ್ರತಿಶಾಸ್ತ್ರ ತರಗತಿಗಳನ್ನು ಪ್ರಾರಂಭಿಸಿತು. ಇಂದು ನಶಿಸುತ್ತಿರುವ ಪ್ರಾಚೀನ ಹಸ್ತಪ್ರತಿಗಳನ್ನು ಓದುವ, ಪ್ರತಿಮಾಡುವ ಕಲೆಯನ್ನು ಕಲಿಸಿಕೊಡುವುದಲ್ಲದೆ, ವೈಜ್ಞಾನಿಕವಾಗಿ ಓಲೆಗರಿ ಗ್ರಂಥಗಳನ್ನು ಸಂರಕ್ಷಿಸುವ ಮತ್ತು ಶಾಸ್ತ್ರೀಯವಾಗಿ ಸಂಪಾದಿಸುವುದರಲ್ಲೂ ತರಬೇತಿ ನೀಡುವ ನಾಲ್ಕು ತಿಂಗಳ ಈ ಪ್ರಶಿಕ್ಷಣ, ಪ್ರಾಯಶಃ ಭಾರತದಲ್ಲೇ ಮೊಟ್ಟ ಮೊದಲ ಬಾರಿಗೆ ಪ್ರಾರಂಭಿಸಿದ ತರಭೇತಿಯಾಗಿದೆ. ನಂತರ ಈ ಹಸ್ತಪ್ರತಿ ಶಾಸ್ತ್ರ ತರಗತಿಯು ಯಶಸ್ವಿ ಹತ್ತು ವರ್ಷಗಳ ನೆನಪಿಗಾಗಿ ಹಸ್ತಪ್ರತಿ ವಿದ್ಯಾರ್ಥಿಗಳ ವೇದಿಕೆ 'ಸಿರಿಕಂಠ'ವನ್ನು ಆರಂಭಿಸಿದೆ. ಇದು ಮುಖ್ಯವಾಗಿ ಈ ಕೆಳಕಂಡ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದೆ. ಅವುಗಳೆಂದರೆ–

(ಅ) ಹಳೆಗನ್ನಡ ಕಾವ್ಯಾಭ್ಯಾಸ ಶಿಬಿರ :– ಹಳೆಗನ್ನಡ ಕಾವ್ಯಗಳ ಪುನರ್ಮನನ ತರಗತಿಯಂತೆ ಮತ್ತು ಅಭ್ಯಾಸ ತರಗತಿಗಳಂತೆ ವರ್ಷದಲ್ಲಿ ಎರಡು ಬಾರಿ ಒಂದು ತಿಂಗಳ ಅವಧಿಯ ಈ ಶಿಬಿರವನ್ನು ನಡೆಸಲಾಗುತ್ತಿದೆ.

(ಆ) ಹಸ್ತಪ್ರತಿ ಸೇವಾ ಕೇಂದ್ರ :– ಅಪೇಕ್ಷಿಸಿದವರಿಗೆ ಪ್ರಾಚೀನ ಹಸ್ತಪ್ರತಿಗಳನ್ನು ವೈಜ್ಞಾನಿಕವಾಗಿ ಸಂರಕ್ಷಿಸಿ, ಸೂಚಿ, ಸಂಪ್ರತಿ, ಸಂಪಾದನೆ ಇತ್ಯಾದಿ ಸೇವೆಯನ್ನು ಒದಗಿಸಲಾಗುತ್ತಿದೆ ಈ ರೀತಿ ಸೇವೆ ಒದಗಿಸುವ ಸುಮಾರು 50ಕ್ಕೂ ಹೆಚ್ಚು ಮಂದಿ ಪರಣಿತರ ತಂಡ ಈಗಾಗಲೇ ಸಿದ್ಧವಾಗಿದೆ.

(ಇ) ಹಸ್ತಪ್ರತಿ ಕಾರ್ಯಾಗಾರ :– ಕಡಿಮೆ ಅವಧಿಯ ಹಸ್ತಪ್ರತಿ ಸಂರಕ್ಷಣೆ ಮತ್ತು ತಿಳುವಳಿಕೆ ಕುರಿತು ಕಾರ್ಯಗಾರಗಳನ್ನು ಆಗಾಗ್ಗೆ ನಡೆಸುತ್ತಿದೆ.

ಪ್ರತಿಷ್ಠಾನದ ಕೆಲವು ವರ್ಷಗಳಿಂದ 'ಸಾಹಿತ್ಯೋಪಾಸಕರು' ಎಂಬ ವಿಶೇಷ ಕಾರ್ಯಕ್ರಮ ಮಾಲೆಯನ್ನು ಆರಂಭಿಸಿದೆ. ಕಳೆದ ಶತಮಾನದಿಂದಲೂ ಹೊಸಗನ್ನಡ ಸಾಹಿತ್ಯಕ್ಕಾಗಿ ದುಡಿದ ಸಾಹಿತಿ, ವಿದ್ವಾಂಸರನ್ನು ಕನ್ನಡ ನಾಡು ನುಡಿ ಕಟ್ಟಿ ಬೆಳೆಸಿದ ಮಹನೀಯರನ್ನು ಈ ಪೀಳಿಗೆಯ ಜನರಿಗೆ ಪರಿಚಯಿಸುವ ವಿಶಿಷ್ಟ ಕಾರ್ಯಕ್ರಮ ಮಾಲೆಯಿದು. ಈಗಾಗಲೇ ಕೆಲವು ಮಹನೀಯರ ಜನ್ಮಶತಾಬ್ಧಿಗಳನ್ನು ನಡೆಸಿ ಸಾಂದರ್ಭಿಕವಾಗಿ ಈ ಕಾರ್ಯವನ್ನು ಮಾಡಿರುವ ಪ್ರತಿಷ್ಠಾನ ಇದನ್ನು ಒಂದು ನಿರಂತರ ಕಾರ್ಯಕ್ರಮವನ್ನಾಗಿ ಕೈಗೊಂಡಿದೆ.

ಪ್ರತಿಷ್ಠಾನದ ಸಂಸ್ಥಾಪಕರಾದ ಎಂ.ವಿ.ಸೀತಾರಾಮಯ್ಯರವರ ಜನ್ಮದಿನದಂದು ಅಂದರೆ ಸೆಪ್ಟೆಂಬರ್–9, 1910 ಅವರ ಸಂಸ್ಮರಣೆಯಿಂದಲೇ ಆರಂಭವಾದ ಈ ಕಾರ್ಯಕ್ರಮ ಮಾಲೆಯಲ್ಲಿ ಪ್ರತಿ ತಿಂಗಳು ಒಬ್ಬೊಬ್ಬ ಸಾಹಿತ್ಯೋಪಾಸಕರನ್ನು ಅವರ ಸೇವೆ ಸಾಧನೆ ವ್ಯಕ್ತಿತ್ವಗಳನ್ನು ಪರಿಚಯಿಸುವ ವಿಶ್ಲೇಷಿಸುವ, ವಿಮರ್ಶಿಸುವ ಉಪನ್ಯಾಸಗಳ ಮೂಲಕ ಸ್ಮರಿಸಲಾಗುತ್ತಿದೆ. ವಿದ್ವಾಂಸ ಮಿತ್ರರು ಈ ಕಾರ್ಯಕ್ರಮಕ್ಕಾಗಿ ಬಹಳ ಕಷ್ಟಪಟ್ಟು ಸಂಗ್ರಹಿಸುವ ಮಾಹಿತಿಗಳು, ಅಂಕಿ ಅಂಶಗಳು ಮತ್ತು ನಡೆಸುವ ಚಿಂತನೆಗಳು ಎಲ್ಲ ಕಾಲಕ್ಕೂ ಎಲ್ಲರಿಗೂ ದಕ್ಕುವಂತಾಗಬೇಕೆಂಬ ಉದ್ದೇಶದಿಂದ ಈ ಉಪನ್ಯಾಸಗಳನ್ನು ಪುಸ್ತಕ ರೂಪದಲ್ಲಿಯೂ ತರಲಾಗುತ್ತಿದೆ. ಈ ಎಲ್ಲ ಉಪನ್ಯಾಸಗಳನ್ನು ಸೇರಿಸಿ ದ್ವಿಶತಮನೋತ್ಸವ ನೆನಪಿನ ಮಾಲೆಯಲ್ಲಿ ಸುಮಾರು 25ಕ್ಕೂ ಹೆಚ್ಚು ಗ್ರಂಥಗಳನ್ನು ಪ್ರಕಟಿಸಲಾಗಿದೆ.

ಎಂ.ವಿ.ಸೀಯವರಿಗೆ "ಕವಿರಾಜಮಾರ್ಗ"ದ ಕಾರ್ಯದ ನಂತರ ತಮ್ಮ ಬಾಲ್ಯದಲ್ಲಿ ಕಂಡ ಈ ತಾಳೆಗರಿಗಳ ನೆನಪಾಯಿತು. ಅರಿವಿಲ್ಲದೆ ಅವುಗಳು ಹಾಳಾದ ದಿನಗಳನ್ನು ನೆನೆದು ಮನಸ್ಸುನೊಂದಿತು, ಕೂಡಲೇ ಹೋಗಿ ಅಳಿದುಳಿದ ದಾಖಲೆಗಳನ್ನೆಲ್ಲಾ ಸಂಗ್ರಹಿಸಿ ತಂದರು. ತಮ್ಮ ನೆಚ್ಚಿನ ಕೆಲವು ಶಿಷ್ಯರ ಸಹಾಯ ಪಡೆದು ಅವನ್ನೆಲ್ಲ ಕ್ರಮಬದ್ಧವಾಗಿ ಸಂಗ್ರಹಿಸಿದರು. ಹೀಗೆ ತಮ್ಮ ಮನೆತನದಲ್ಲಿ ದೊರೆತ ಹಸ್ತಪ್ರತಿಯೊಂದರಿಂದಲೇ ಇಂತಹ ಅಮೂಲ್ಯ ಚಾರಿತ್ರಿಕ ಅಂಶಗಳು ಬೆಳಕಿಗೆ ಬಂದಿದೆಯೆಂದ ಮೇಲೆ ಈ ರೀತಿ ಅದೆಷ್ಟೋ ಕಡೆಗಳಲ್ಲಿ ಮೂಲೆಗುಂಪಾಗಿ ಬಿದ್ದಿರುವ ಹಸ್ತಪ್ರತಿಗಳನ್ನು ಸಂಗ್ರಹಿಸಿ ಪ್ರಕಟಿಸಿದರೆ ಕನ್ನಡ ಸಾಹಿತ್ಯ ಮತ್ತಷ್ಟು ಶ್ರೀಮಂತಗೊಳ್ಳುತ್ತದೆ ಎನ್ನಿಸಿತು. ಆದರೆ ಇದೊಂದು ಮಹಾನ್ ಕೆಲಸ ಇಂತಹ ಕಾರ್ಯದಲ್ಲಿ ಸಮಾನ

ಮನುಸ್ಸುಳ್ಳ ಆಸಕ್ತರನ್ನು ಒಗ್ಗೂಡಿಸಿ ಒಂದೆಡೆ ಈ ಅಧ್ಯಯನವಾಗಬೇಕಾದರೆ ಅದಕ್ಕೆ ಒಂದು ಕೇಂದ್ರವಿರಬೇಕೆಂದು ಕೊಂಡರು. ತಮ್ಮ ಗುರುಗಳಾದ ಬಿ.ಎಂ.ಶ್ರೀಕಂಠಯ್ಯನವರು 1911ರಲ್ಲಿ ಹೇಳಿದ್ದ ಶ್ರೀವಾಣಿ ನೆನಪಿನಲ್ಲಿತ್ತು. ಆದ್ದರಿಂದ ಅವರ ನೆನಪಿನಲ್ಲೇ ಪ್ರಾಚೀನ ಹಸ್ತಪ್ರತಿಗಳ ಸಂಗ್ರಹದ ಜೊತೆಗೆ ಇತರ ಪೂರಕ ಸಂಶೋಧನಾ ಕ್ಷೇತ್ರಗಳಲ್ಲಿ ಅಳಸಿ ಹೋಗುತ್ತಿರುವ ಸಂಶೋಧಕ ಪ್ರವೃತ್ತಿಗಳನ್ನು ಉಳಿಸಿ ಬೆಳೆಸುವ ಸಲುವಾಗಿ 1979ರ ಮೇ 6ರಂದು "ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ"ವನ್ನು ಸ್ಥಾಪಿಸಿದರು. ರಾಷ್ಟ್ರಕವಿ ಕುವೆಂಪು ಇದನ್ನು ಉದ್ಘಾಟಿಸಿದರು. ಎಂ.ವಿ.ಸೀ ಅವರು ಇದನ್ನು ಸ್ಥಾಪಿಸಿದಾಗ ಅವರಿಗೆ 69 ವರ್ಷಗಳಾಗಿತ್ತು. ಆರೋಗ್ಯವೂ ಅಷ್ಟೊಂದು ಸರಿಯಿರಲಿಲ್ಲ. ಆದರೆ ಅವರ ಆಸಕ್ತಿ, ಉತ್ಸಾಹಗಳಿಗೆ ಕೊರತೆಯಿರಲಿಲ್ಲ. ಹನುಮಂತನಗರದ ಗವೀಪುರ ಬಡಾವಣೆಯಲ್ಲಿದ್ದ ತಮ್ಮ ಮನೆಯಲ್ಲಿಯೇ ಪ್ರಾಚೀನ ಗ್ರಂಥ ಮತ್ತು ಹಸ್ತಪ್ರತಿ ಸಂಗ್ರಹ ಕಾರ್ಯವನ್ನು ಪ್ರಾರಂಭಿಸಿಬಿಟ್ಟರು. ಕ್ರಮೇಣ ಇವರ ಕಾಳಜಿ ಮತ್ತು ಪ್ರಾಮಾಣಿಕ ಪ್ರಯತ್ನಗಳಿಂದಾಗಿ ಬಹಳ ಅಪರೂಪವಾದ ತಾಳೇಗರಿಗಳು, ಗ್ರಂಥಗಳು ಸಂಗ್ರಹವಾಗತೊಡಗಿದವು. ಈ ಸಂಸ್ಥೆ ಮುಂದೆ ದೊಡ್ಡದಾಗಿ ಬೆಳೆಯುವುದು ಎಂಬ ಮುಂದಾಲೋಚನೆಯಿಂದ ಎನ್.ಆರ್.ಕಾಲೋನಿಯಲ್ಲಿ ನಗರಪಾಲಿಕೆಯ ನೆರವಿನಿಂದ ಒಂದು ನಿವೇಶನಕ್ಕೆ ಜಾಗ ಪಡೆದಿದ್ದರು. ಬಿ.ಎಂ.ಶ್ರೀ ಪ್ರತಿಷ್ಠಾನದ ಈಗಿನ ನೂತನ ಕಟ್ಟಡವಿರುವುದು ಇಲ್ಲಿಯೇ.

ಪ್ರಾಚೀನ ಹಸ್ತಪ್ರತಿ, ಸಾಹಿತ್ಯ, ಸಂಸ್ಕೃತಿ, ಕಲೆ, ನಾಟ್ಯ ಮುಂತಾದವುಗಳ ಸಂಶೋಧನೆ ಮತ್ತಿತರ ಚಟುವಟಿಕೆಗಳ ಕೇಂದ್ರವಾಗಬೇಕು ಹಾಗೂ ತಮ್ಮ ಗುರುಗಳ ಹೆಸರು ಅಜರಾಮರವಾಗಿ ಇರಬೇಕೆಂದು ಎಂ.ವಿ.ಸೀ ಅವರು ಕಟ್ಟಡಕ್ಕೆ ಬಿ.ಎಂ.ಶ್ರೀ ಕಲಾಭವನವೆಂಬ ಹೆಸರಿಡಬೇಕೆಂದುಕೊಂಡಿದ್ದರು. ಆದರೆ ದುರಂತ ಕಟ್ಟಡವನ್ನು ಕಟ್ಟಿಸುವ ಉತ್ಸಾಹದಲ್ಲಿದ್ದಾಗಲೇ ಅವರು 1990ರಲ್ಲಿ ಇಹಲೋಕವನ್ನು ತ್ಯಜಿಸಿದರು. ಇವರ ನಿಧನದ ನಂತರ ಪ್ರತಿಷ್ಠಾನದ ಕಛೇರಿಯು ಪಕ್ಕದ ರಸ್ತೆಯಲ್ಲಿದ್ದ ಮಾಸ್ತಿವೆಂಕಟೇಶ್ ಅಯ್ಯಂಗಾರ್ ಅವರ ಮನೆಗೆ ವರ್ಗಾಯಿಸಲ್ಪಟ್ಟು ಸುಮಾರು 3 ವರ್ಷಗಳ ಕಾಲ ಅಲ್ಲಿಂದಲೇ ಕಾರ್ಯ ನಿರ್ವಹಿಸಿತು. ಈ ಮಧ್ಯೆ ಕಟ್ಟಡ ನಿರ್ಮಾಣದ ಕಾರ್ಯ ಮುಂದುವರಿದು 24-10-1997ರಂದು ಹಿರಿಯರಾದ ಎ.ಎನ್.ಮೂರ್ತಿರಾಯರು ಭವನದ ಶಂಕುಸ್ಥಾಪನೆ ಮಾಡಿದರು. 3-02-2000ದ ವೇಳೆಗೆ ನೆಲಮಹಡಿ ಸಿದ್ಧವಾಗಿ ಅದನ್ನು ರಾಜ್ಯದ ಹಿರಿಯ ರಾಜಕಾರಿಣಿ 'ರಾಮಕೃಷ್ಣ ಹೆಗಡೆ' ಯವರು ಉದ್ಘಾಟಿಸಿದರು. ಈ ಭವನದಲ್ಲಿ ಸುಸಜ್ಜಿತ ಸಭಾಂಗಣ, ಗ್ರಂಥಾಲಯ, ವಸ್ತು ಸಂಗ್ರಹಾಲಯ, ಹಸ್ತಪ್ರತಿಭಂಡಾರ, ಉಪನ್ಯಾಸ, ಸಮಿತಿಕೊಠಡಿ ಅಲ್ಲದೆ ಇತ್ತೀಚೆಗೆ ಹಂಪಿಯ ಕನ್ನಡ

ವಿಶ್ವವಿದ್ಯಾಲಯದ ಮಾನ್ಯತೆಯ ಎಂ.ವಿ.ಸೀ ಸ್ನಾತಕೋತರ ಕೇಂದ್ರವು ಇದರಲ್ಲಿ ಸೇರಿಕೊಂಡು ಈ ಸಂಸ್ಥೆ ತನ್ನ ನಿತ್ಯ ಕಾರ್ಯವನ್ನು ಶಿಸ್ತುಬದ್ಧವಾಗಿ ಮಾಡುತ್ತಿದೆ.

ಪ್ರತಿಷ್ಠಾನ ಪ್ರಾಚೀನ ಸಾಹಿತ್ಯದ ಪರಿಷ್ಕರಣ ಮಾಡುವಂತೆ, ಆಧುನಿಕ ಸಾಹಿತ್ಯದ ಪುರಸ್ಮರಣೆಗಾಗಿ 'ಸಹೃದಯ ಗೋಷ್ಠಿ' ಎಂಬ ಕಾರ್ಯಕ್ರಮವನ್ನು ಪ್ರಾರಂಭದಿಂದಲೂ ಮಾಡಿಕೊಂಡು ಬಂದಿದೆ ಪ್ರತಿತಿಂಗಳೂ ನಡೆಯುವ ಈ ಕಾರ್ಯಕ್ರಮದಲ್ಲಿ ಸ್ವರಚಿತ ಕವಿತೆ, ಲೇಖನಗಳ ವಾಚನ, ಇತರ ಗಣ್ಯರ ಕೃತಿಕವನಗಳ ವಾಚನ, ವಿಮರ್ಶೆ, ಚರ್ಚೆಗಳು ನಡೆಯುತ್ತವೆ. ಯುವ ಸಾಹಿತಿಗಳಿಗೆ ತಮ್ಮ ಅನುಭವವನ್ನು ವೃದ್ಧಿಪಡಿಸಿಕೊಳ್ಳಲು ಇದೊಂದು ಪ್ರಮುಖ ವೇದಿಕೆಯಾಗಿದೆ.

ಇಷ್ಟೇ ಅಲ್ಲದೆ ಸಾಂದರ್ಭಿಕವಾಗಿ ಪ್ರತಿಷ್ಠಾನವು ಹಲವಾರು ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತದೆ. ಉದಾಹರಣೆಗೆ 8-10-1996ರಂದು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಸಹಯೋಗದೊಂದಿಗೆ ನಡೆದ "ಈ ಶತಮಾನದ ಹಿರಿಯರು ಒಂದು ಸಂವಾದ". ಇದರಲ್ಲಿ ಸಿದ್ಧಗಂಗಾ ಮಠಾಧೀಶರಾದ ಶ್ರಿ ಶಿವಕುಮಾರ ಸ್ವಾಮಿಗಳು, ಪ್ರಸಿದ್ಧ ನೃತ್ಯ ಕಲಾವಿದೆ ಡಾ.ಕೆ.ವೆಂಕಟಲಕ್ಷ್ಮಮ್ಮ, ಪಂಪ ಪ್ರಶಸ್ತಿ ಪುರಸ್ಕೃತ ಡಾ.ಪು.ತಿ.ನರಸಿಂಹಾಚಾರ್, ಕರ್ನಾಟಕ ಜಾನಪದ ಅಕಾಡೆಮಿಯ ಮಾಜಿ ಅಧ್ಯಕ್ಷ ಡಾ.ಎಸ್.ಕೆ. ಕರಿಂಖಾನ್, ನಿವೃತ್ತ ನ್ಯಾಯದೀಶ ನಿಟ್ಟೂರು ಶ್ರೀನಿವಾಸರಾಯರು, ಕನಕ-ಪುರಂದರ ಪ್ರಶಸ್ತಿ ಪುರಸ್ಕೃತ ಕೃಷ್ಣಯ್ಯಂಗಾರ್, ಮಾಜಿಮುಖ್ಯಮಂತ್ರಿ ಎಸ್.ನಿಜಲಿಂಗಪ್ಪ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ.ಕೆ.ಶಿವರಾಮಕಾರಂತ ಹಾಗೂ ಪಂಪಪ್ರಶಸ್ತಿ ಪುರಸ್ಕೃತ ಪ್ರೊ.ಎ.ಎನ್.ಮೂರ್ತಿರಾವ್‌ರಂತಹ ಹಿರಿಯರು ಭಾಗವಹಿಸಿದ್ದು ಅದೊಂದು ಅತ್ಯಂತ ಅಪರೂಪದ, ಹಿರಿಮೆಯ ಕಾರ್ಯಕ್ರಮವಾಗಿತ್ತು. ಈ ಕಾರ್ಯಕ್ರಮ ಎಲ್ಲ ಕಾಲಕ್ಕೂ ನೆನಪಿನಲ್ಲಿ ಉಳಿಯುವಂತದು.

ಇಷ್ಟೇ ಅಲ್ಲದೇ ಪ್ರತಿಷ್ಠಾನವು 1984ರಲ್ಲಿ ನಡೆದ ಆಚಾರ್ಯ ಬಿ.ಎಂ.ಶ್ರೀ ಶತಮಾನೋತ್ಸವ ಕಾರ್ಯಕ್ರಮದ ಸ್ಮರಣೆಗಾಗಿ ಅವರ ಜನ್ಮಸ್ಥಳ ಬೆಳ್ಳೂರಿನಲ್ಲಿ ಸರ್ಕಾರದ ನೆರವಿನೊಂದಿಗೆ ಸ್ಮಾರಕ ಭವನವನ್ನು ನಿರ್ಮಿಸಿ 1995ರಲ್ಲಿ ಉದ್ಘಾಟನೆಮಾಡಿ ಅದರಲ್ಲಿ ಬಿ.ಎಂ.ಶ್ರೀ ವಸ್ತು ಸಂಗ್ರಹಾಲಯ ಮತ್ತು ಶ್ರೀಶತಮಾನ ಗ್ರಂಥಾಲಯವನ್ನು ನಡೆಸುತ್ತಿದ್ದು, ಬಿ.ಎಂ.ಶ್ರೀ ಸಭಾಂಗಣದಲ್ಲಿ ಸಾಹಿತ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

ಇನ್ನು ಪ್ರತಿಷ್ಠಾನವು ಈ ಎಲ್ಲ ಕಾರ್ಯಗಳನ್ನು ಯಶಸ್ವಿಯಾಗಿ ನಿರ್ವಹಿಸಿಕೊಂಡು ಒಂದು ಪ್ರತಿಷ್ಠಿತ ಸಂಶೋಧನಾ ಸಂಸ್ಥೆಯಾಗಿ ಹೆಸರು ಪಡೆಯಲು ಕಾರಣ ಇದರ ಅನುಭವೀ ಪದಾಧಿಕಾರಿಗಳು ಈ ಸಂಸ್ಥೆ ಸೃಜನಶೀಲತೆ ಮತ್ತು ಸಂಶೋಧನೆಗಳೆರಡೂ

ಸಾಹಿತ್ಯಕ್ಷೇತ್ರಗಳಲ್ಲಿ ದುಡಿಯುತ್ತಿದೆ. ಒಂದು ಪ್ರಾಚೀನ ಸಾಹಿತ್ಯದ ಪರಿಷ್ಕಾರಣ ಇನ್ನೊಂದು ಆಧುನಿಕ ಸಾಹಿತ್ಯದ ಪುರಸ್ಕರಣ ಕಾಲಕಾಲಕ್ಕೆ ಚಟುವಟಿಕೆಗಳಿಗೆ ಮತ್ತು ನಿರಂತರ ಯೋಜನೆಗಳಿಗೆ ಉಪಸಮಿತಿ ಹಾಗೂ ಸಂಚಾಲಕತ್ವದ ಮೂಲಕ ಅನೇಕ ಸಾಹಿತಿ ವಿದ್ವಾಂಸರು ಈ ಸಂಸ್ಥೆಗೊಂದು ಶಾಶ್ವತ ಸ್ಥಾನವನ್ನು ತಂದುಕೊಡುವಲ್ಲಿ ಅಪಾರವಾಗಿ ಶ್ರಮಿಸಿದ್ದಾರೆ, ಶ್ರಮಿಸುತ್ತಿದ್ದಾರೆ. ಅವರುಗಳೆಂದರೆ ನ್ಯಾಯಮೂರ್ತಿ ನಿಟ್ಟೂರು ಶ್ರೀನಿವಾಸರಾಯರು ಆರಂಭದಲ್ಲಿ ಅಧ್ಯಕ್ಷರಾಗಿದ್ದು ನಂತರ ಗೌರವ ಅಧ್ಯಕ್ಷರಾಗಿದ್ದರು, ಅವರ ನಂತರ ಪ್ರೊ.ಜಿ.ವೆಂಕಟಸುಬ್ಬಯ್ಯನವರು ಪ್ರಸ್ತುತ ಜಿ.ನಾರಾಯಣರವರು ಗೌರವ ಅಧ್ಯಕ್ಷರಾಗಿದ್ದಾರೆ. ಶ್ರೀಯುತ ಮಾಸ್ತಿವೆಂಕಟೇಶ್ ಅಯ್ಯಂಗಾರರ ಪೋಷಕತ್ವದಲ್ಲಿ ಆರಂಭವಾದ ಈ ಸಂಶೋಧನ ಸಂಸ್ಥೆಗೆ ಶ್ರೀ.ಎಂ.ವಿ.ಸೀತಾರಾಮಯ್ಯನವರು ಸಂಸ್ಥಾಪಕ ಕಾರ್ಯದರ್ಶಿಗಳಾಗಿ ನಂತರ ಅಧ್ಯಕ್ಷರಾಗಿದ್ದರು. ಅವರ ಕಾರ್ಯಾವಧಿ ಮುಗಿದ ನಂತರ ಪ್ರೊ.ಎಲ್.ಎಸ್.ಶೇಷಗಿರಿರಾಯರು ಶ್ರೀ.ಎನ್.ಬಸವರಾಧ್ಯರು, ಡಾ.ಟಿ.ವಿ.ವೆಂಕಟಾಚಲಶಾಸ್ತ್ರಿಗಳು ಅಧ್ಯಕ್ಷರಾಗಿದ್ದರು. ಪ್ರಸ್ತುತ ಶ್ರೀಯುತ ಪ್ರೊ. ಚಿ.ಶ್ರೀನಿವಾಸರಾಜುರವರು ಅಧ್ಯಕ್ಷತೆಯಲ್ಲಿ ಸಂಸ್ಥೆ ಮುನ್ನೆಡೆಯುತ್ತಿದೆ. ದುರಂತವೆಂದರೆ ಸಾಹಿತ್ಯ ಪರಿಚಾರಕರೆಂದೇ ಗುರುತಿಸಿಕೊಂಡಿದ್ದ ಪ್ರೊ. ಚಿ. ಶ್ರೀನಿವಾಸರಾಜು ರವರು 28-12-2007ರಂದು ದೈವಧೀನರಾದರು ನಂತರ ಬಿ.ಎಂ.ಶ್ರೀ ಪ್ರತಿಷ್ಠಾನದ ಮುಂದಿನ ಅಧ್ಯಕ್ಷರಾಗಿ ಡಾ॥ಪಿ.ವಿ.ನಾರಾಯಣರವರು ಆಯ್ಕೆಯಾಗಿ ಸೇವೆಸಲ್ಲಿಸುತ್ತಿದ್ದಾರೆ.

ಮೇಲಿನ ಮಹನೀಯರುಗಳೊಂದಿಗೆ ಡಾ॥ಕೆ.ಆರ್. ಗಣೇಶ್, ಪ್ರೊ. ಕೆ.ಎಸ್. ಮಧುಸೂದನ, ಶ್ರೀ.ವಿ.ವೆಂಕಟರಾವ್, ಡಾ.ದೊಡ್ಡರಂಗೇಗೌಡ, ಪ್ರೊ.ಡಿ.ಲಿಂಗಯ್ಯ. ಶ್ರೀ.ಗೋವಿಂದ ಜಾಲಿಹಾಳ, ಪ್ರೊ.ಎಂ.ವಿ.ಸತ್ಯನಾರಾಯಣ, ಪ್ರೊ.ಜಿ.ಎಸ್.ವೆಂಕಟರಾಜು, ಶ್ರೀ.ಜಿ.ಚೆನ್ನವೀರಸ್ವಾಮಿ, ಪ್ರೊ.ಕೆ.ಆರ್.ಇಕ್ಬಾಲ್ ಅಹಮದ್ ಮುಂತಾದವರು ಗೌರವ್ ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿದ್ದಾರೆ. ಶ್ರೀ.ಎನ್.ಎಸ್.ರಾಮಸ್ವಾಮಿ ಅಯ್ಯರ್ ಅವರು ಗೌರವ ಕೋಶಾಧ್ಯಕ್ಷರಾಗಿ 25ವರ್ಷ ನಿರಂತರವಾಗಿ ಸೇವೆ ಸಲ್ಲಿಸಿದ್ದಾರೆ. ಪ್ರಸ್ತುತ ಡಾ॥ನಾ. ಗೀತಾಚಾರ್ಯ ರವರು ಗೌರವ ಕಾರ್ಯದರ್ಶಿಯಾಗಿದ್ದು ಪ್ರಾರಂಭದಿಂದಲೂ ಕಾರ್ಯಕರ್ತರಾಗಿ ಸಂಸ್ಥೆಯನ್ನು ಕಟ್ಟುವಲ್ಲಿ ಸಂಸ್ಥಾಪಕರ ಕನಸ್ಸನ್ನು ನನಸು ಮಾಡುವಲ್ಲಿ ಅಪಾರವಾಗಿ ಶ್ರಮಿಸುತ್ತಿದ್ದಾರೆ. ಪ್ರಸ್ತುತ ಶ್ರೀ.ಎಸ್.ಟಿ.ರಾಧಕೃಷ್ಣ, ಶ್ರೀ.ಎಸ್.ಟಿ.ಶ್ರೀನಿವಾಸರಾವ್ ವ್ಯವಸ್ಥಾಪಕ ಕಾರ್ಯದರ್ಶಿಗಳಾಗಿದ್ದಾರೆ. ಅಲ್ಲದೆ ಕೋಶಾಧಿಕಾರಿಗಳಾಗಿ ಡಾ.ಎಂ.ಚಿದಾನಂದಮೂರ್ತಿ, ಪ್ರೊ.ಎಲ್.ಎಸ್.ಶೇಷಗಿರಿರಾವ್ ಮುಂತಾದ ನಾಡಿನ ಶ್ರೇಷ್ಠ ವಿದ್ವಾಂಸರು ಕಾರ್ಯಸಮಿತಿ ಸದಸ್ಯರಾಗಿ ಮಾರ್ಗದರ್ಶನ ಮಾಡುತ್ತಿದ್ದಾರೆ. ನಾಡಿನ ಹಿರಿಯ ಗಣ್ಯ ಸಾಹಿತಿ ವಿದ್ವಾಂಸರನೊಳಗೊಂಡ ಗೌರವ

ಸದಸ್ಯರ ಸಮಿತಿಯನ್ನು ಪ್ರತಿಷ್ಠಾನ ರಚಿಸಿದ್ದು ಅದರಲ್ಲಿ ಕಾಲಕಾಲಕ್ಕೆ ಶ್ರೀ.ಜಿ.ನಾರಾಯಣ, ಡಾ॥ ಹಾ.ಮ.ನಾಯಕ್, ಡಾ॥ ಜಿ.ಎಸ್.ಶಿವರುದ್ರಪ್ಪ, ಡಾ॥ ದೇ. ಜವರೇಗೌಡ ಮುಂತಾದ ನಾಡಿನ ಗಣ್ಯ ಸಾಹಿತಿಗಳು ಗೌರವ ಸದಸ್ಯರಾಗಿ ಸಂಸ್ಥೆಯ ಶ್ರೇಯೋಭಿವೃದ್ಧಿಗೆ ಸಲಹೆ ಸೂಚನೆಗಳನ್ನು ನೀಡುತ್ತಿದ್ದಾರೆ.

ಈಗಾಗಲೇ ಈ ಸಂಸ್ಥೆ ರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದೆ. ಕರ್ನಾಟದಲ್ಲಿ ಸಂಶೋಧನೆ ಮತ್ತು ಪಾಂಡಿತ್ಯ ಸಂವರ್ಧನೆಗಳಿಗೆ ಮೀಸಲಾದ ಪ್ರತಿಷ್ಠಿತ ಸಂಶೋಧನಾ ಕೇಂದ್ರವಾಗಿದೆ. ಈವರೆಗೆ ಎಪ್ಪತ್ತೈದಕ್ಕೂ ಹೆಚ್ಚು ಪ್ರಕಟಣೆಗಳನ್ನು ಹೊರತಂದಿದೆ. ಸಂಶೋಧನಾ ಕಾರ್ಯಕ್ಕೆ ಅನುಕೂಲವಾಗುವಂತೆ ಹದಿನೈದುಸಾವಿರಕ್ಕೂ ಅಧಿಕ ಅಮೂಲ್ಯ ಗ್ರಂಥಗಳ ಆಕರ ಗ್ರಂಥಾಲಯವನ್ನು ಸುಮಾರು ಮೂರು ಸಾವಿರಕ್ಕೂ ಅಧಿಕ ಪ್ರಾಚೀನ ಓಲೆಗರಿ ಗ್ರಂಥಗಳ ಹಸ್ತಪ್ರತಿ ಭಂಡಾರವನ್ನು ಹೊಂದಿರುವ ಪ್ರತಿಷ್ಠಾನ ಸದಸ್ಯರು, ಉದಾರದಾನಿಗಳು ಮತ್ತು ಅಭಿಮಾನಿಗಳಿಂದಲೇ ಬೆಳೆದಿದೆ, ಬೆಳೆಯುತ್ತಲಿದೆ.

ಹಂಪಿ ಕನ್ನಡ ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದಿರುವ ಸ್ನಾತಕೋತ್ತರ ಸಂಶೋಧನಾ ಕೇಂದ್ರವಾಗಿರುವ ಪ್ರತಿಷ್ಠಾನದಲ್ಲಿ ಗಣ್ಯ ವಿದ್ವಾಂಸರ ಮಾರ್ಗದರ್ಶನದಲ್ಲಿ 15ಕ್ಕೂ ಹೆಚ್ಚು ಸಂಶೋಧನಾ ವಿದ್ಯಾರ್ಥಿಗಳು ಪಿ.ಎಚ್‌ಡಿ ಅಧ್ಯಯನ ಮಡುತ್ತಿದ್ದಾರೆ. ಹಾಗೂ ಸುಮಾರು 20 ವಿದ್ಯಾರ್ಥಿಗಳು ಮೊದಲ ತಂಡವಾಗಿ, ನಂತರದ ತಂಡದಲ್ಲಿ 30ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಿರಿಯ ವಿದ್ವಾಂಸರ ಮಾರ್ಗದರ್ಶನದಲ್ಲಿ ಎಂ.ಫಿಲ್ ಅಧ್ಯಯನ ನಡೆಸುತ್ತಿದ್ದಾರೆ.

ರಾಷ್ಟ್ರದ ಪ್ರತಿಷ್ಟಿತ ಹಸ್ತಪ್ರತಿ ಅಧ್ಯಯನ ಕೇಂದ್ರವಾಗಿದ್ದು ಅಮೂಲ್ಯ ಓಲೆಗರಿ ಗ್ರಂಥಗಳು, ಕಾಗದ ಪತ್ರಗಳು, ನಮ್ಮ ತಲೆಮಾರಿನ ಸಾಹಿತಿ–ಗಣ್ಯರ ಪತ್ರಗಳು ಮತ್ತು ಹಸ್ತಪ್ರತಿಗಳನ್ನು ಸಂರಕ್ಷಿಸುತ್ತ ನಾಡಿನ ಆಸಕ್ತಿಯನ್ನು ಉಳಿಸಲು ಶ್ರಮಿಸುತ್ತಿರುವ ಸೇವಾ ಸಂಸ್ಥೆಯಾಗಿದೆ.

(ಅ) ಸಾಂಸ್ಕೃತಿಕವಾಗಿ ಪ್ರತಿಷ್ಠಾನ : ಸಾಹಿತ್ಯಿಕ ಸಂಸ್ಥೆಯೆಂದೇ ಪ್ರಸಿದ್ಧಿಯನ್ನು ಗಳಿಸಿಕೊಂಡಿರುವ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಕನ್ನಡ ನಾಡಿನಾದ್ಯಂತ ಸಾಹಿತ್ಯದ ಜೊತೆಗೆ ಸಾಂಸ್ಕೃತಿಕ ಕಂಪನ್ನು ಪ್ರಸರಿಸುವ ಕೆಲಸವನ್ನು ಮಾಡುತ್ತಾ ಬಂದಿದೆ. ಬಿ.ಎಂ.ಶ್ರೀ ಮತ್ತು ಪಿ.ಕಾಳಿಂಗರಾವ್ ಸ್ಮಾರಕ ರಾಜ್ಯ ಮಟ್ಟದ ಸುಗಮ ಸಂಗೀತ ಸ್ಪರ್ಧೆ ಏರ್ಪಡಿಸಿ ಭಾಗವಹಿಸಿ ವಿಜೇತರಾದ ಪ್ರತಿಭೆಗಳಿಗೆ ಬಹುಮಾನ ವಿತರಣೆ ಮಾಡಲಾಗುತ್ತಿದೆ. ರಾಜ್ಯಮಟ್ಟದಲ್ಲಿ ಪ್ರತಿವರ್ಷ ಬಿ.ಎಂ.ಶ್ರೀ ಜನ್ಮದಿನದ ಸಂದರ್ಭದಲ್ಲಿ ಭಾವಗೀತೆ ಮತ್ತು ಜನಪದಗೀತೆ ವಿಭಾಗದಲ್ಲಿ ಹಿರಿಯರು ಮತ್ತು ಕಿರಿಯರಿಗೆ ಸುಗಮ

ಸಂಗೀತ ಸ್ಪರ್ಧೆ ಏರ್ಪಡಿಸುತ್ತಾ ಬಂದಿರುವುದು ವಿಶೇಷವಾಗಿದೆ. ಈ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪನವರು "ಕನ್ನಡದ ಜನಪದ ಮತ್ತು ಭಾವಗೀತೆಗಳನ್ನು ಹಾಡುವುದು ಇತ್ತೀಚಿನ ವಿದ್ಯಮಾನವಾಗಿ ಕಂಡಬರುತ್ತಿದ್ದರೂ ಇದಕ್ಕೊಂದು ಪರಂಪರೆಯೇ ಇದೆ. ಇದು ಸಾಹಿತ್ಯವನ್ನು ಸಮೂಹಕ್ಕೆ ಮುಟ್ಟಿಸುವ ಕ್ರಿಯೆಯಾಗಿ ಬಹಳ ಹಿಂದಿನ ಕಾಲದಿಂದಲೂ ನಡೆದು ಬರುತ್ತಿತ್ತು".[8] ಎಂದು ಸಮನ್ವಯ ಕವಿ ಜಿ.ಎಸ್.ಶಿವರುದ್ರಪ್ಪನವರು ಹೇಳಿರುವುದು ಸಂಸ್ಥೆಯ ಸಾಂಸ್ಕೃತಿಕ ಕಾರ್ಯದ ಬಗ್ಗೆ ಅರಿಯಲು ಸಾಧ್ಯವಾಗಿದೆ.

ಅಷ್ಟೇ ಅಲ್ಲದೆ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಆಧುನಿಕ ಸಾಹಿತ್ಯವನ್ನು ಪರಿಚಯಿಸುವ ಮತ್ತು ಪ್ರೊತ್ಸಾಹಿಸುವ ಉದ್ದೇಶದಿಂದ ಹಲವಾರು ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸುತ್ತಿದೆ. ಜನಪ್ರೀಯವಾಗಿರುವ ಸುಗಮ ಸಂಗೀತ ಕ್ಷೇತ್ರವನ್ನು ಪ್ರೊತ್ಸಾಹಿಸುವ ಉದ್ದೇಶದಿಂದ 2004ರಿಂದ ರಜತೋತ್ಸವದ ನೆನಪಿಗಾಗಿ 'ಸುಗಮ ಸಂಗೀತ ಶಾಲೆ'ಯನ್ನು ಆರಂಭಿಸಲಾಗಿದೆ. ಹಾಗೆಯೇ ಸಾಹಿತ್ಯ ಸಂಸ್ಕೃತಿ ಕಲೆಯಲ್ಲಿ ಅಭಿರುಚಿ ಮೂಡಿಸುವ ಉದ್ದೇಶದಿಂದ 2004ರಿಂದ ಬೇಸಿಗೆ ರಜೆಯಲ್ಲಿ 'ತೋರಣ' ಎಂಬ ಮಕ್ಕಳ ಬೆಸಿಗೆ ಶಿಬಿರವನ್ನು ನಡೆಸಲಾಗುತ್ತಿದೆ. ಇನ್ನೂ ವಿಶೇಷವಾಗಿ ಜನಪ್ರಿಯವಾಗುತ್ತಿರುವ ಸುಗಮ ಸಂಗೀತ ಕ್ಷೇತ್ರಕ್ಕೆ ಸಾಹಿತ್ಯದ ವ್ಯಾಪಕತೆಯನ್ನು ಒದಗಿಸುವ ಉದ್ದೇಶದಿಂದ ಭಾವಗೀತೆ, ಜನಪದಗೀತೆ, ವಚನ, ಕೀರ್ತನೆ, ತತ್ವಪದ ಮತ್ತು ಗಮಕ ಸಂಗೀತ ಕಾರ್ಯಕ್ರಮಗಳನ್ನು ಅನುಕ್ರಮವಾಗಿ ತಿಂಗಳಿಗೊಂದರಂತೆ ನಡೆಸಲಾಗುತ್ತಿದೆ. ಈ ಕಾರ್ಯಕ್ರಮ ಮಾಲೆಯಲ್ಲಿ ಹೊಸ ಹೊಸ ಸಾಹಿತ್ಯವನ್ನು ಸಂಗೀತಕ್ಕೆ ಅಳವಡಿಸುವ ಕಲಾ ತಂಡಗಳಿಗೆ, ವಿಶೇಷವಾಗಿ ಉದಯೋನ್ಮುಖ ಕಲಾವಿದರಿಗೆ ಆದ್ಯತೆ ನೀಡಲಾಗುತ್ತಿದೆ. ಈ ಕಾರ್ಯಕ್ರಮವನ್ನು ರಜತೋತ್ಸವದ ನೆನಪಿಗಾಗಿ 2004ರಿಂದ ಅತ್ತಿಮಬ್ಬೆ ಪ್ರತಿಷ್ಠಾನದ ಸಹಯೋಗದೊಂದಿಗೆ ಪ್ರಾರಂಭಿಸಿರುವ "ಸಿರಿ ಸಂಗೀತ" ಎಂಬ ಸಾಂಸ್ಕೃತಿಕ ಕಾರ್ಯಕ್ರಮ ಮೇಲಿನ ಎಲ್ಲ ಕಾರ್ಯಕ್ರಮಗಳಿಗೆ ವೇದಿಕೆಯಾಗುವಂತಿದೆ.

(ಆ) ಸಾಹಿತ್ಯಕವಾಗಿ ಪ್ರತಿಷ್ಠಾನ :– ಎಂ.ವಿ.ಸೀ ಯವರ ಉದ್ದೇಶದಂತೆ ಸಂಸ್ಥೆಯನ್ನು ಪ್ರಾಚೀನ ತಾಳೆಗರಿಗಳ ಮೂಲಕ ಅವುಗಳಲ್ಲಿರುವ ವಿದ್ವತ್‌ನ್ನು ನಾಡಿಗೆ ಪರಿಚಯಿಸುವ ದೃಷ್ಟಿಯಿಂದ ಆರಂಭಿಸಿದ ಸಂಸ್ಥೆ ಸಾಹಿತ್ಯಕವಾಗಿ ಇಲ್ಲಿಯವರೆಗೆ 70ಕ್ಕೂ ಹೆಚ್ಚು ಮೌಲಿಕ ಗ್ರಂಥಗಳನ್ನು ಪ್ರಕಟಿಸಿದೆ. ಎಲ್ಲವೂ ಸಾಹಿತ್ಯ ಸಂಶೋಧನೆ, ಪಾಂಡಿತ್ಯ ಸಂವರ್ಧನೆಗೆ ಸಂಬಂಧಿಸಿದ ಆಕರ ಗ್ರಂಥಗಳಾಗಿವೆ. ಜನಪ್ರಿಯವಲ್ಲದ, ಸಾಹಿತ್ಯ ವಿದ್ಯಾರ್ಥಿಗಳು ಅಧ್ಯಾಪಕರು, ಸಂಶೋಧಕರಿಗೆ ಸಹಾಯವಾಗುವ ಗ್ರಂಥಗಳನ್ನು ಪ್ರಕಟಿಸುತ್ತಾ ವಿದ್ವತ್‌ವಲಯದಲ್ಲಿ ಮುಖ್ಯವೆನಿಸಿದೆ. ಪ್ರಾಚೀನ ಗ್ರಂಥಮಾಲೆ, ದತ್ತಿಉಪನ್ಯಾಸ

ಮಾಲೆ, ಶತಮಾನೋತ್ಸವ ಮಾಲೆ, ವಿಚಾರಗೋಷ್ಠಿಮಾಲೆ, ದಶಮಾನೋತ್ಸವ ಮಾಲೆ, ದ್ವಿದಶಮಾನೋತ್ಸವ ಮಾಲೆ ಮುಂತಾದ ಮಾಲೆಗಳಲ್ಲಿ ಹಲವು ಮಹತ್ವದ ಕೃತಿಗಳನ್ನು ಪ್ರಕಟಿಸಲಾಗಿದೆ. ಅಲ್ಲದೆ ಮಕ್ಕಳ ಸಾಹಿತ್ಯ ಮತ್ತು ಮಹಿಳಾ ಸೃಜನೇತರ ಸಾಹಿತ್ಯ ಕೃತಿಗಳಾಗಿ ಸಾವಿತ್ರಮ್ಮ ದತ್ತಿ ಸಾಹಿತ್ಯ ಪ್ರಶಸ್ತಿ ನೀಡುತ್ತಾ ಬಂದಿದೆ. ಇದರ ಮುಖ್ಯ ಉದ್ದೇಶ ಈ ಎರಡು ಸಾಹಿತ್ಯ ಪ್ರಕಾರಗಳನ್ನು ಗುರುತಿಸಿ ಪ್ರೋತ್ಸಾಹಿಸುವುದೇ ಆಗಿದೆ. ಅಲ್ಲದೇ ಸಾಹಿತ್ಯದ ವಿಮರ್ಶಾಲೇಖನಗಳಿಗೆ ಸಮೇತನಹಳ್ಳಿ ರಾಮರಾಯರು ಸ್ಥಾಪಿಸಿರುವ ರಾಸಾ ಸಾಹಿತ್ಯ ವಿಮರ್ಶಾ ಬಹುಮಾನ ನೀಡಲಾಗುತ್ತಿದೆ. ಜೊತೆಗೆ ವರ್ಷದ ಉತ್ತಮ ಸಂಶೋಧನಾ ಕೃತಿಗೆ ಕಟ್ಟೆ ಗುರುರಾಜ್ ಅವರು ಸ್ಥಾಪಿಸಿರುವ ಅನಂತರಂಗ ಸಂಶೋಧನಾ ಸಾಹಿತ್ಯ ಪ್ರಶಸ್ತಿ ನೀಡಲಾಗುತ್ತಿದೆ. ಇವುಗಳೊಂದಿಗೆ ಸಾಹಿತ್ಯದ ಪ್ರಮುಖ ವಿದ್ವಾಂಸ-ಲೇಖಕ-ಸಂಘಟಕರನ್ನು ವರ್ಷಕ್ಕೆ ಒಬ್ಬರಂತೆ ಗುರುತಿಸಿ ಗೌರವಿಸುವ ಕಾರ್ಯವನ್ನು ಎಂ.ವಿ.ಸೀತಾರಾಮಯ್ಯ ನವರ ಹೆಸರಿನಲ್ಲಿರುವ ಗೌರಯುತ ಎಂ.ವಿ.ಸೀ ಪುರಸ್ಕಾರವನ್ನು ಮಾಡಲಾಗುತ್ತಿದೆ.

ಹೀಗೆ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಸಾಹಿತ್ಯ ಸಂಶೋಧನಾ ಕ್ಷೇತ್ರಕ್ಕೆ ಗಣನೀಯ ಸೇವೆ ಸಲ್ಲಿಸಿದ ಮಹನೀಯರನ್ನು ತುಂಬು ಹೃದಯದಿಂದ ಗುರುತಿಸಿ ಗೌರವಿಸಿ ಸಾಹಿತ್ಯದ ಸೇವೆ ಮಾಡುತ್ತಾ ಬಂದಿರುವುದು ಕೂಡ ಅದರ ಸಾಹಿತ್ಯದ ಕಳಕಳಿಯನ್ನು ಸೂಚಿಸುತ್ತದೆ.

(ಇ) ಸಾಮಾಜಿಕವಾಗಿ ಪ್ರತಿಷ್ಠಾನ :- ಬೆಳ್ಳಿ ಹಬ್ಬದ ಸಂಭ್ರಮವನ್ನು ಆಚರಿಸಿ ಕೊಂಡಿರುವ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ನಾಡಿನಾದ್ಯಂತ ತನ್ನದೇ ಆದ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಾ ಬಂದಿದೆ. 1979 ಮೇ6 ರಂದು ಸ್ಥಾಪನೆಗೊಂಡು ವಿಶೇಷವಾದ ನೂತನ ಕಾರ್ಯಕ್ರಮಗಳನ್ನು ಮಾಡುವುದರ ಮೂಲಕ ಸಾಮಾಜಿಕವಾಗಿ ಹೆಚ್ಚು ಗೌರವ ಮನ್ನಣೆಗಳನ್ನು ಗಳಿಸಿಕೊಂಡಿರುವ ಸಂಸ್ಥೆಯಾಗಿದೆ. ಪ್ರಾಚೀನ ಹಸ್ತಪ್ರತಿಗಳ ಸಂಗ್ರಹ ಸಂರಕ್ಷಣೆಯ ಉದ್ದೇಶದಿಂದ ಆರಂಭವಾದ ಸಂಸ್ಥೆ ಕರ್ನಾಟಕದಲ್ಲಿ ಸಾಂಸ್ಕೃತಿಕವಾಗಿ, ಸಾಹಿತ್ಯಕವಾಗಿ ಅಷ್ಟೇ ಅಲ್ಲದೆ ಅದಕ್ಕಿಂತ ಹೆಚ್ಚಾಗಿ ಸಾಮಾಜಿಕವಾಗಿ ನಿರಂತರ ಕೆಲಸಮಾಡುತ್ತಿದೆ. ಹಿರಿಯ ವಿದ್ವಾಂಸರ ಮಾರ್ಗದರ್ಶನದಲ್ಲಿ ಸಂಸ್ಥೆ ಸಾಹಿತ್ಯ, ಸಂಗೀತ ಕಾರ್ಯಕ್ರಮಗಳ ಮೂಲಕ ಜನಮನ್ನಣೆ ಗಳಿಸಿದೆ. ಕರ್ನಾಟಕ ಲೋಚನ ಎಂಬ ವಿದ್ವತ್ ಪತ್ರಿಕೆ ಪ್ರಕಟಿಸುತ್ತಿದ್ದು, ಏಕೈಕ ಸಂಶೋಧನಾ ಪತ್ರಿಕೆ ಎಂಬ ಹೆಗ್ಗಳಿಕೆ ಪಡೆದುಕೊಂಡಿರುವುದಲ್ಲದೆ, ಪಂಡಿತ ಲೋಕದ ಮೆಚ್ಚುಗೆಗೆ ಪಾತ್ರವಾಗಿದೆ. ಈ ಮೂಲಕ ಯುವಸಂಶೋಧಕರಿಗೆ ದಾರಿದೀಪವಾಗಿದೆ. ಅಲ್ಲದೆ ಸಿರಿಸಂಗೀತ, ಸುಗಮಸಂಗೀತ ತರಗತಿ, 'ತೋರಣ' ಎಂಬ ಮಕ್ಕಳ ಕಾರ್ಯಕ್ರಮ, ಮಾಡುವುದರ

ಮೂಲಕ ಸಮಾಜದಲ್ಲಿ ತನ್ನ ಸಾಂಸ್ಕೃತಿಕ ಪ್ರಭಾವವನ್ನು ಉಂಟುಮಾಡುತ್ತಿದೆ. ಅಲ್ಲದೆ ಹಿಂದುಳಿದವರು, ಮಹಿಳೆಯರು, ಮಕ್ಕಳು ಎಲ್ಲರಿಗೂ ಸಮಾನ ಅವಕಾಶ ಮಾಡಿಕೊಡುತ್ತಿದೆ. ಇಲ್ಲಿ ಯಾವುದೇ ತಾರತಮ್ಯ ಮಾಡದೆ ಎಲ್ಲರಿಗೂ ಪ್ರತಿಭೆಗಳನ್ನು ಪ್ರಸ್ತುತಪಡಿಸುವ ಸದಾವಕಾಶವನ್ನು ಪ್ರತಿಷ್ಠಾನ ನಿತ್ಯ ಮಾಡುತ್ತಾ ಬಂದಿದೆ. ಇದು ಪ್ರತಿಷ್ಠಾನದ ಸಾಮಾಜಿಕ ಕಳಕಳಿಯ ಬಗ್ಗೆ ಇರುವ ಕಾಳಜಿ ಎಂದು ತಿಳಿಯಬಹುದು. ಇದಕ್ಕಿಂತ ಹೆಚ್ಚಾಗಿ ಸಮಾಜವನ್ನು ತನ್ನ ಉದ್ದೇಶದ ಕೇಂದ್ರವಸ್ತುವಾಗಿಟ್ಟುಕೊಂಡು ಸ್ವಚ್ಚಸಮಾಜದ ನಿರ್ಮಾಣದ ದೃಷ್ಟಿಯಿಂದ ತನ್ನ ವಿಶೇಷ ವಿವಿಧ ಕಾರ್ಯಕ್ರಮಗಳನ್ನು ರೂಪಿಸುತ್ತಿರುವುದು ಸಮಾಜದ ಪ್ರಶಂಸೆಗೆ ಒಳಪಟ್ಟಿರುವುದು ಸಹ ಹೆಮ್ಮೆಯ ವಿಚಾರವಾಗಿದೆ. ಮರದಲ್ಲಿ ಚಿಗುರು ಮೂಡಿದಂತೆ ಹಂಪಿ ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆಯೊಂದಿಗೆ ಪಿ.ಹೆಚ್‌ಡಿ ಎಂ.ಫಿಲ್ ತರಗತಿಗಳನ್ನು ಪ್ರಾರಂಭಿಸಿ ಯುವ ಸಂಶೋಧಕರಿಗೆ ಸಾಮಾಜಿಕವಾಗಿ ಬೆಳೆಯಲು ಪ್ರತಿಷ್ಠಾನ ಪರೋಕ್ಷವಾಗಿ ಬೆಂಬಲಿಸುವ ಮೂಲಕ ಸಮಾಜದ ಬಗ್ಗೆ, ಯುವ ಪೀಳಿಗೆಯ ಮುಂದಿನ ಭವಿಷ್ಯಕ್ಕೆ ಸಹಕರಿಸುವ ನಿಟ್ಟಿನಲ್ಲಿ ಸಂಸ್ಥೆ ಸಮಾಜದಲ್ಲಿ ಉತ್ತಮ ಸೇವಾ ಸಂಸ್ಥೆ ಎಂಬ ಮಾನ್ಯತೆ ಪಡೆದಿದೆ. ಇದು ಸಹ ಒಂದು ಶ್ಲಾಘನೀಯ ಕಾರ್ಯವಾಗಿದೆ.

ಈ) ವಾಚನಾಲಯ ಮತ್ತು ಗ್ರಂಥಾಲಯ :–

ಪ್ರತಿಷ್ಠಾನದ ಪ್ರಾಚೀನ ಹಸ್ತಪ್ರತಿ ಭಂಡಾರ ಸಂಸ್ಥೆಯ ಸ್ಥಾಪನೆಯೊಂದಿಗೆ ಅಂದರೆ 1979ರಿಂದಲೇ ಪ್ರಾರಂಭವಾಗಿದೆ. 3000ಕ್ಕೂ ಅಧಿಕ ಓಲೆಗರಿ, ತಾಳೆಗರಿ ಮತ್ತು ಕಾಗದದ ಅಮೂಲ್ಯ ಹಸ್ತಪ್ರತಿಗಳನ್ನು ಸಂಗ್ರಹಿಸಿ ವೈಜ್ಞಾನಿಕವಾಗಿ ಸಂರಕ್ಷಿಸಲಾಗಿದೆ. 'ಗೌಳಿಶಕುನ' ಎಂಬ ಅತ್ಯಂತ ಸಣ್ಣ ಹಸ್ತಪ್ರತಿಯಿಂದ ಹಿಡಿದು, ಶ್ರೀಮದ್ಭಾಗವತ ಭಾವಾರ್ಥ ದೀಪಿಕಾ ಶ್ರೀಧರೀಯ ವ್ಯಾಖ್ಯಾನ ಎಂಬ 90 ಸೆಂಮೀ ಅಗಲದ ಹಸ್ತಪ್ರತಿಗಳವರೆಗೆ ತನ್ನ ಭಂಡಾರದಲ್ಲಿ ಒಳಗೊಂಡಿದೆ.

ಹಸ್ತಪ್ರತಿ ಶೋಧನೆ, ಸಂಪಾದನಾ ಕಾರ್ಯಗಳಿಗೆ ಪೂರಕವಾಗಿ ಆಕರ ಗ್ರಂಥಾಲಯವು ಅತ್ಯಗತ್ಯ. ಈ ದಿಸೆಯಲ್ಲಿ ಪ್ರತಿಷ್ಠಾನ ಹಿಂದೆ ಬಿದ್ದಿಲ್ಲ. ಕನ್ನಡ–ಕರ್ನಾಟಕ ಸಂಶೋಧನೆಗೆ ಅಗತ್ಯವಾದ ಆಕರ ಗ್ರಂಥಗಳ ಸಂಗ್ರಹ ಅವಿರತವಾಗಿ ಸಾಗಿದೆ. ಸಂಸ್ಥೆಯ ಗ್ರಂತ ಭಂಡಾರದಲ್ಲಿ ಈವರೆಗೂ ಹನ್ನೆರಡು ಸಾವಿರಕ್ಕೂ ಹೆಚ್ಚು ಗ್ರಂಥಗಳು ಸಂಗ್ರಹವಾಗಿದೆ. ಅವೆಲ್ಲವೂ ಸಂಶೋಧನೆಗೆ ಅಗತ್ಯವಾದ ಗ್ರಂಥಗಳು ಮಾತ್ರವಾಗಿವೆ ಎಂಬುದು ಗಮನಾರ್ಹ. ಕರ್ನಾಟಕಾಧ್ಯಯಕ್ಕೆ ಅಗತ್ಯವಾದ ಎಪಿಗ್ರಾಫಿಯ ಕರ್ನಾಟಕ, ಮೈಸೂರು ಆರ್ಕಿಯಲಾಜಿಕಲ್ ವರದಿಗಳು, ವಿವಿಧ ನಿಘಂಟುಗಳು,

ಪ್ರಬುದ್ಧ ಕರ್ಣಾಟಕ, ಕನ್ನಡನುಡಿ, ಪರಿಷತ್ಪತ್ರಿಕೆ, ಸಾಧನೆ, ಕರ್ನಾಟಕ ಭಾರತಿ, ಜೀವನ ಮುಂತಾದ ಪತ್ರಿಕೆಗಳ ಸಂಗ್ರವೂ ಬೇರೆ ಬೇರೆ ಸಂಸ್ಥೆಗಳ ಹಸ್ತಪ್ರತಿ ಗ್ರಂಥ ಸೂಚಿಗಳು ವ್ಯವಸ್ಥಿತವಾಗಿ ಸಂಗ್ರಹವಾಗಿದ್ದು ಸಾಹಿತ್ಯ ಸಂಶೋಧನೆಯ ಆಸಕ್ತರು ಮತ್ತು ಉನ್ನತ ವ್ಯಾಸಂಗದ ವಿದ್ಯಾರ್ಥಿಗಳು ನಿರಂತರವಾಗಿ ಇದರ ಪ್ರಯೋಜನ ಪಡೆಯುತ್ತಿದ್ದಾರೆ. ನಾಡಿನ ಖ್ಯಾತ ವಿದ್ವಾಂಸರಾಗಿದ್ದ ಶ್ರೀ.ಎಂ.ವಿ.ಸೀ., ಎಸ್.ಶ್ರೀಕಂಠಯ್ಯ; ಅನಂತರಂಗಾಚಾರ್ಯ ಮೊದಲಾಸದ ಗಣ್ಯರು ನೀಡಿರುವ ದಾನದ ಪುಸ್ತಕಗಳಿಂದ ಪ್ರತಿಷ್ಠಾನದ ಭಂಡಾರ ಶ್ರೀಮಂತಗೊಂಡಿದೆ.

ಗ್ರಂಥಾಲಯದಲ್ಲಿ ಸಂಶೋಧನೆಗೆ ಅನುಕೂಲವಾಗುವಂತಹ ಗ್ರಂಥಗಳ ಸಂಗ್ರಹ ಇದೆ. ಸಂಶೋಧನಾ ವಿದ್ಯಾರ್ಥಿಗಳಿಗೆ ಇದು ಒಂದು ದೊಡ್ಡ ಕೊಡುಗೆ. ಸುಮಾರು 12 ಸಾವಿರಕ್ಕೂ ಅಧಿಕ ಗ್ರಂಥಗಳು ಇಲ್ಲಿವೆ. ಹಿರಿಯ ವಿದ್ವಾಂಸರು ಪ್ರೀತಿಯಿಂದ ಗ್ರಂಥಾಲಯಕ್ಕೆ ಪುಸ್ತಕಗಳನ್ನು ದಾನಮಾಡಿದ್ದಾರೆ. ಗ್ರಂಥಗಳ ಜೊತೆಗೆ ನಿಘಂಟು, ಪ್ರಾಚೀನ ಗ್ರಂಥಗಳ ಇಂಡಾಲಜಿ ಮತ್ತು ಕನ್ನಡಲಾಜಿಗೆ ಸಂಬಂಧಿಸಿದ ಅಮೂಲ್ಯ ಆಕರ ಗ್ರಂಥಗಳನ್ನು ಪ್ರತಿಷ್ಠಾನದ ಗ್ರಂಥಾಲಯ ಹೊಂದಿದೆ.

ಉ) ಕರ್ನಾಟಕ ಲೋಚನ ವಿದ್ವತ್ ಪತ್ರಿಕೆ :–

ಕರ್ನಾಟಕದ ಕನ್ನಡ ನಾಡಿನಲ್ಲಿ ಬೆರಳೆಣಿಕೆಯಷ್ಟು ಇರುವ ಸಂಶೋಧನೆಗೆ ಸಂಬಂಧಿಸಿದ ನಿಯತಕಾಲಿಕೆಗಳಲ್ಲಿ ಅತ್ಯಂತ ಮಹತ್ವದ ಸ್ಥಾನವನ್ನು ಪಡೆದಿರುವ ಪತ್ರಿಕೆಗಳಲ್ಲಿ 'ಕರ್ನಾಟಕ ಲೋಚನ ವಿದ್ವತ್ ಪತ್ರಿಕೆ' ಮುಖ್ಯವಾದುದು. ಈ ಪತ್ರಿಕೆಯ ಬೆಳವಣಿಗೆಯ ಸಾಧನೆಯನ್ನು ಆದಿಯಿಂದ ನೋಡಿ ಅರಿತಿರುವ ವಿದ್ವಾಂಸರ ಹೇಳಿಕೆಗಳಿಂದ ಅದರ ಆಳ ಅಗಲಗಳನ್ನು ತಿಳಿಯಬಹುದು. ಹಿರಿಯ ವಿದ್ವಾಂಸರಲ್ಲಿ ಒಬ್ಬರಾದ ಎನ್.ಬಸವರಾಧ್ಯ ರವರು "ಲೋಚನ 1983ರಲ್ಲಿ ಪ್ರಾರಂಭವಾದ ವಿದ್ವತ್ ಪತ್ರಿಕೆ. ಪ್ರತಿಷ್ಠಾನದ ಸಂಸ್ಥಾಪಕ ಎಂ.ವಿ.ಸೀತಾರಾಮಯ್ಯನವರ ದೂರದೃಷ್ಟಿಯ ಫಲ. ಯಶಸ್ವೀಯಾಗಿ ಕನ್ನಡ ನಾಡಿನ ವಿದ್ವಾಂಸರಿಗೆ ವೇದಿಕೆಯಾಗಿ, ಮೌಲಿಕ ಚರ್ಚೆಗಳಿಗೆ ಕಾರಣವಾಗಿ ಹೊಸ ಇತಿಹಾಸದ ಆಕರಗಳನ್ನು ಸಾಹಿತ್ಯ ಲೋಕಕ್ಕೆ ನೀಡಿ ತನ್ನ ಪಾಲಿನ ಕರ್ತವ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದೆ. ಇಂದಿಗೂ ಕರ್ನಾಟಕದಲ್ಲಿ 'ನಿಯತವಾಗಿ ಪ್ರಕಟವಾಗುತ್ತಿರುವ ಏಕೈಕ ವಿದ್ವತ್ ಪತ್ರಿಕೆ' ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ".[9]

ಪ್ರತಿಷ್ಠಾನದ ಇನ್ನೆರಡು ಮುಖ್ಯ ಕಾರ್ಯಗಳೆಂದರೆ 'ಕರ್ನಾಟಕ ಲೋಚನ ಎಂಬ ವಿದ್ವತ್ ಪತ್ರಿಕೆಯ ಪ್ರಕಟಣೆ ಇನ್ನೊಂದು 'ಸಹೃದಯ ಗೋಷ್ಠಿ' 1982ರಲ್ಲೇ ಎಂ.ವಿ.ಸೀ ಅವರಿಂದಲೇ 'ಲೋಚನ' ಎಂಬ ನಿಯತಕಾಲಿಕೆ ಪ್ರಾರಂಭವಾಯಿತು. ನಿಯತವಾಗಿ

ಪ್ರಕಟವಾಗುತ್ತಿರುವ ಏಕೈಕ ಸಂಶೋಧನ ಪತ್ರಿಕೆ ಎಂಬ ಹೆಗ್ಗಳಿಕೆಗೆ ಇದು ಪಾತ್ರವಾಗಿದೆ. ಸಂಶೋಧನಾ ಕ್ಷೇತ್ರದ ವಿವಿಧ ಶಾಖೆಗಳಲ್ಲಿ ನುರಿತ ವಿದ್ವಾಂಸರು ಬರೆಯುವ ಸಂಶೋಧನ ಲೇಖನಗಳು, ವಿಮರ್ಶೆಗಳು, ಸಂಶೋಧನ ಗ್ರಂಥಗಳು, ವಿಮರ್ಶೆ, ಟೀಕೆ, ಟಿಪ್ಪಣಿ ಇತ್ಯಾದಿ ರೂಪದಲ್ಲಿ ಇದರಲ್ಲಿರುತ್ತದೆ. ಪಂಡಿತರ ಅಪಾರ ಮೆಚ್ಚುಗೆಗೆ ಕಾರಣವಾದ ಇದರ 1998ರ ಸಂಚಿಕೆಯನ್ನು ದಶವಾರ್ಷಿಕ ವಿಶೇಷಾಂಕವಾಗಿ ಪ್ರಕಟಿಸಿ ಅದರಲ್ಲಿ 1983ರಿಂದ 1998ರವರೆಗಿನ ಹದಿನೈದು ವರ್ಷಗಳ ಲೇಖನ ಸೂಚಿಯನ್ನು ಪ್ರಕಟಿಸಲಾಗಿದೆ. 1982ರಲ್ಲಿ ಲೋಚನ ಪ್ರಾರಂಭಗೊಂಡರೂ 1998ರ ಸಂಚಿಕೆಯನ್ನು ವಿಶೇಷಾಂಕವೆಂದು ಕರೆಯಲು ಕಾರಣ 1987ರಿಂದ ಈ ಪತ್ರಿಕೆ 'ಕರ್ನಾಟಕ ಲೋಚನ' ಎಂಬ ನೂತನ ಸಂಚಿಕೆಯಲ್ಲಿ ಪ್ರಕಟವಾಗಿರುವುದು ವಿಶೇಷಗಳಲ್ಲಿ ವಿಶೇಷವಾಗಿದೆ.

ಲೋಚನ 1983ರಿಂದ ಪ್ರಾರಂಭವಾದ ವಿದ್ವತ್ ಪತ್ರಿಕೆ. ಸಂಸ್ಥಾಪಕ ಎಂ.ವಿ.ಸೀತಾರಾಮಯ್ಯನವರ ದೂರದೃಷ್ಟಿಯ ಫಲ. ಕರ್ನಾಟಕದಲ್ಲಿ ಇಂತಹ ವಿದ್ವತ್ ಪತ್ರಿಕೆಗಳಿಗೇ ಒಂದು ಭವ್ಯ ಪರಂಪರೆ ಇದೆ, ಇತಿಹಾಸವಿದೆ. ಈ ಪತ್ರಿಕೆ ಪ್ರಾರಂಭವಾದ ಕಾಲ ಯಾವ ವಿದ್ವತ್ ಪತ್ರಿಕೆಗಳೂ ಸಕಾಲಕ್ಕೆ ನಿಯತವಾಗಿ ಪ್ರಕಟವಾಗದೆ ಸ್ಥಗಿತವಾಗಿದ್ದ ಕಾಲ. ಇಂತಹ ಸಂದಿಗ್ಧ ಕಾಲದಲ್ಲಿ ವಿದ್ವಜ್ಜನರ ಅಪಾರ ಮೆಚ್ಚುಗೆ–ಮಾನ್ಯತೆ ಪಡೆದು ಈ ಪತ್ರಿಕೆ ಜನಪ್ರಿಯವಾಯಿತು. ಅಂದಿನಿಂದ ಇಂದಿನವರೆಗೆ ಚಾಚೂ ತಪ್ಪದೇ ನಿಯತವಾಗಿ ವರ್ಷಕ್ಕೆ ಎರಡು ಸಂಚಿಕೆಗಳಂತೆ ಪ್ರಕಟಿಸುತ್ತಾ ಬಂದಿದೆ. ಕೆಲವು ಸಂದರ್ಭಗಳಲ್ಲಿ ವಿಶೇಷ ಸಂಚಿಕೆಗಳನ್ನು ಪ್ರಕಟಿಸಲಾಗಿದೆ. 1988ರಿಂದ ಲೋಚನ 'ಕರ್ನಾಟಕ ಲೋಚನ' ಹೆಸರಿನಲ್ಲಿ ಪ್ರಕಟವಾಗುತ್ತಾ ಈಗಾಗಲೇ ಇಪ್ಪತ್ತೈದು ವರ್ಷಗಳನ್ನು ಪೂರೈಸಿ ಇಪ್ಪತ್ತಾರನೇ ವರ್ಷಕ್ಕೆ ಕಾಲಿಟ್ಟಿದೆ. ಅನೇಕ ಹಿರಿಯ ವಿದ್ವಾಂಸರಿಗೆ ಸಾಹಿತ್ಯದ ವೇದಿಕೆಯಾಗಿ ವಿದ್ವತ್ ಲೋಕದಲ್ಲಿ ಮೌಲಿಕ ಚರ್ಚೆಗಳಿಗೆ ಕಾರಣವಾಗಿ ಹೊಸ ಇತಿಹಾಸ, ಆಕರಗಳನ್ನು ಸಾಹಿತ್ಯ ಲೋಕಕ್ಕೆ ನೀಡಿದ ಕರ್ನಾಟಕ ಲೋಚನ ನಿಜಕ್ಕೂ ತನ್ನ ಪಾಲಿನ ಕರ್ತವ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದೆ ಎಂದರೆ ಉತ್ಪ್ರೇಕ್ಷೆಯಲ್ಲ. ಇಂದು ಸ್ಥಾಪಕರ ದೂರದೃಷ್ಟಿ ಫಲ ಕೊಡುತ್ತಿರುವುದಕ್ಕೆ ಸಾಕ್ಷಿಯೇ ಈ ಒಂದು ಪತ್ರಿಕೆ.

ಈ ಪತ್ರಿಕೆ ಹೆಚ್ಚಾಗಿ ಸಂಶೋಧನೆಗೆ, ವಿದ್ವತ್ತಿಗೆ ಮೀಸಲಾಗಿದೆ. ಕರ್ನಾಟಕದ ಸಾಹಿತ್ಯ ಸಂಸ್ಕೃತಿಯಲ್ಲಿ ನಡೆಯುವ ನೂತನ ಆವಿಷ್ಕಾರಗಳು ಹೊಸ ಚಿಂತನೆಗಳು, ವಿದ್ವತ್ ಟಿಪ್ಪಣಿಗಳು, ಅಪ್ರಕಟಿತ ಕೃತಿಯ ಭಾಗಗಳು, ಸಂಶೋಧನಾ ಚಟುವಟಿಕೆಗಳ ವಿವರಗಳು, ಶಾಸ್ತ್ರಗ್ರಂಥಗಳ ವಿಮರ್ಶೆ, ಛಂದೋಬದ್ಧ ಕವಿತೆಗಳು ರಚನೆಗೆ ಪ್ರೋತ್ಸಾಹ ನೀಡುವ ಸಮಸ್ಯಾಪುರಾಣ ಮುಂತಾದ ಸಂಶೋಧನೆ ಪಾಂಡಿತ್ಯಕ್ಕೆ ಪೂರಕವಾದ ಲೇಖನ–ಟಿಪ್ಪಣಿಗಳ ಮೂಲಕ ಕರ್ನಾಟಕ ಲೋಚನ ಕರ್ನಾಟಕದ ಏಕೈಕ ಸಂಶೋಧನಾ

ಪತ್ರಿಕೆಯೆನಿಸಿದೆ. ನಿಯತವಾಗಿ ಪ್ರಕಟವಾಗುತ್ತಿರುವ ಏಕೈಕ ಪತ್ರಿಕೆ ಎಂಬ ಹೆಗ್ಗಳಿಕೆಯೂ ಇದಕ್ಕಿದೆ. ಈಗ 26ನೇ ವರ್ಷದಲ್ಲಿ ಮುನ್ನಡೆಯುತ್ತಿದೆ. ಕಾಲಕಾಲಕ್ಕೆ ಹಲವು ವಿಶೇಷ ಸಂಚಿಕೆಗಳನ್ನು ಪ್ರಕಟಿಸಲಾಗಿದೆ. 15 ವರ್ಷಗಳ ಸೂಚಿಯನ್ನು ಪ್ರಕಟಿಸಲಾಗಿದೆ. ಒಂದು ಸಂಶೋಧನಾ ಸಂಸ್ಥೆಗೆ ಇರಲೇಬೇಕಾದ ಅಗತ್ಯದ ಪ್ರಕಟಣೆಯಾಗಿ ಈ ಪತ್ರಿಕೆ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಮತ್ತೊಂದು ಮೈಲಿಗಲ್ಲಾಗಿದೆ.

ಊ) ಬಿ.ಎಂ.ಶ್ರೀ ಪ್ರತಿಷ್ಠಾನದ ಪ್ರಕಟಣೆಗಳು :-

ಪ್ರತಿಷ್ಠಾನ ಇಲ್ಲಿಯವರೆಗೆ 70ಕ್ಕೂ ಹೆಚ್ಚಿನ ಮೌಲಿಕ ಗ್ರಂಥಗಳನ್ನು ಪ್ರಕಟಿಸಿದೆ. ಎಲ್ಲವೂ ಸಾಹಿತ್ಯ ಸಂಶೋಧನೆ, ಪಾಂಡಿತ್ಯ ಸಂವರ್ಧನೆಗೆ ಸಂಬಂಧಿಸಿದ ಆಕರ ಗ್ರಂಥಗಳಾಗಿವೆ. ಜನಪ್ರಿಯವಲ್ಲದ, ಸಾಹಿತ್ಯ ವಿದ್ಯಾರ್ಥಿಗಳು, ಅಧ್ಯಾಪಕರು, ಸಂಶೋಧಕರಿಗೆ ಸಹಾಯವಾಗುವ ಗ್ರಂಥಗಳನ್ನು ಪ್ರಕಟಿಸುತ್ತ ವಿದ್ವತ್‌ವಲಯದಲ್ಲಿ ಮುಖ್ಯವೆನಿಸಿದೆ. ಪ್ರಾಚೀನ ಗ್ರಂಥಮಾಲೆ, ದತ್ತಿಉಪನ್ಯಾಸಮಾಲೆ, ಶತಮಾನೋತ್ಸವ ಮಾಲೆ, ವಿಚಾರಗೋಷ್ಠಿಮಾಲೆ, ದಶಮಾನೋತ್ಸವ ಮಾಲೆ, ದ್ವಿದಶಮಾನೋತ್ಸವ ಮಾಲೆ ಮುಂತಾದ ಮಾಲೆಗಳ ರೂಪದಲ್ಲಿ ಹಲವು ಮಹತ್ವದ ಕೃತಿಗಳನ್ನು ಪ್ರಕಟಿಸಲಾಗಿದೆ. 'ರಾಘವ' ಪ್ರಕಾಶನ ದತ್ತಿಮಾಲೆಯ ಮೂಲಕ ಎಂ.ವಿ.ಸೀ ಸಮಗ್ರ ಸಾಹಿತ್ಯವನ್ನು ಪ್ರಕಟಿಸಲಾಗುತ್ತಿದೆ. ಹೈದರಾಬಾದಿನ ಕನ್ನಡ ಪ್ರಾಧ್ಯಪಕರೂ ಬಿ.ಎಂ.ಶ್ರೀ ಶಿಷ್ಯರೂ, ಎಂ.ವಿ.ಸೀ ಸಹಪಾಠಿಗಳೂ, ಶ್ರೇಷ್ಠ ವಿದ್ವಾಂಸರೂ ಆದ ಪ್ರೊ.ಬಿ.ರಾಮಸ್ವಾಮಿಗಳ ಸಂಸ್ಮರಣ ಸಂಪುಟ "ಮಧುರ ಸ್ಮೃತಿ" ವಿಶೇಷ ಸಂಪುಟವನ್ನು ಪ್ರಕಟಿಸಲಾಯಿತು.

(ಅ) ಜನ್ಮಶತಾಬ್ದಿ ಸ್ಮೃತಿ ಮಾಲೆ :- ಪ್ರತಿಷ್ಠಾನವು ಉದ್ದೇಶಿತ ಕ್ಷೇತ್ರದಲ್ಲಿ ಸಾಧನೆ ಮಾಡಿ ಸ್ಮರಣೀಯರಾಗಿದ್ದ ವಿದ್ವಾಂಸರ ಶತಮನೋತ್ಸವಗಳನ್ನು ಪ್ರತಿಷ್ಠಾನ ನಿಷ್ಠೆಯಿಂದ ಆಚರಿಸಿ ಅವರ ಜೀವನ-ಸಾಧನೆಗಳನ್ನು ಇಂದಿನ ಪೀಳಿಗೆಗೆ ಪರಿಚಯಿಸುವ ಹಲವು ಕಾರ್ಯಕ್ರಮಗಳನ್ನು ನಡೆಸಿದೆ, ನಡೆಸುತ್ತಲೂ ಇದೆ.

ವಚನ ಪಿತಾಮಹ ಫ.ಗು.ಹಳಕಟ್ಟಿ ಕನ್ನಡದ ಆಚಾರ್ಯ ಪುರುಷ ಬಿ.ಎಂ.ಶ್ರೀಕಂಠಯ್ಯ, ಕನ್ನಡದ ಅಶ್ವಿನಿ ದೇವತೆಗಳೆನಿಸಿದ್ದ ಪ್ರೊ.ಟಿ.ಎಸ್.ವೆಂಕಣ್ಣಯ್ಯ ಮತ್ತು ಪ್ರೊ.ಎ.ಆರ್.ಕೃಷ್ಣಶಾಸ್ತ್ರಿ, ಕರ್ನಾಟಕ ಐತಿಹಾಸಿಕ ರತ್ನ ಎಸ್.ಶ್ರೀಕಂಠಯ್ಯ ಜ್ಞಾನ ಪೀಠ ಪ್ರಶಸ್ತಿ ವಿಜೇತ ಕವಿಗಳಾಗಿದ್ದ ದ.ರಾ.ಬೇಂದ್ರೆ, ಮಾಸ್ತಿವೆಂಕಟೇಶ ಅಯ್ಯಂಗಾರ್, ಶಿವರಾಮಕಾರಂತ್, ಕುವೆಂಪು ಇನ್ನೂ ಮುಂತಾದವರನ್ನು ಈ ಮಾಲೆಯಲ್ಲಿ ಸ್ಮರಿಸಲಾಗಿದೆ. ಇದಕ್ಕೆ ಸಂಬಂಧ ಪಟ್ಟಹಾಗೆ ಹಲವಾರು ಪುಸ್ತಕಗಳನ್ನು ಪ್ರಕಟಸಿಲಾಗಿದ್ದು ಅವುಗಳಲ್ಲಿ ಕೆಲವುಗಳ ಪಟ್ಟಿ ಈ ಕೆಳಗೆ ಕೊಡಲಾಗಿದೆ.

ಕ್ರ.ಸಂ.	ಗ್ರಂಥ	ಪ್ರಕಾರ	ವರ್ಷ	ಸಂಪಾದಕ/ಲೇಖಕ
1	ಮಣಿಹ (ಫ.ಗು:ಹಳಕಟ್ಟಿ ಪುರಾಣಿಕ ಸಂಸ್ಮರಣ ಸಂಪುಟ)	ಹಸ್ತಪ್ರತಿಶಾಸ್ತ್ರ	1982	ಪ್ರ.ಸಂ: ಎಂ.ವಿ.ಸೀ ಸಂ: ಸಿದ್ಧಯ್ಯ ಆರ್.ಶೇಷಶಾಸ್ತ್ರಿ
2.	ಶ್ರೀನಿಧಿ ಸಂಸ್ಮರಣ	ಸಂಪುಟ	1985	ಸಂ: ಜಿ.ಎಸ್.ಎಸ್.
3	**BMS :** The man and his mission	ಜೀವನಚರಿತ್ರೆ	1985	ಸಂ:ಬಿ.ಸಿರಾಮಚಂದ್ರಶರ್ಮ
4.	ಆಚಾರ್ಯ.ಬಿ.ಎಂ.ಶ್ರೀ	ವ್ಯಕ್ತಿಚಿತ್ರ	1984	ಎಲ್.ಎಸ್.ಶೇಷಗಿರಿರಾವ್
5.	ಕನ್ನಡದ ಕಣ್ವ ಬಿ.ಎಂ.ಶ್ರೀ	ಮಕ್ಕಳ ಜೀವನಚಿತ್ರ	1984	ಹೋ.ಶ್ರೀನಿವಾಸಯ್ಯ
6.	ಶ್ರೀವಾಣಿ	ಸೂಕ್ತಿ	1984	ಹಾ.ಮಾ.ನಾಯಕ
7.	ಪ್ರೊ.ಟಿ.ಎಸ್. ವೆಂಕಣ್ಣಯ್ಯ	ವ್ಯಕ್ತಿಚಿತ್ರ	1986	ಜಿ.ವೆಂಕಟಸುಬ್ಬಯ್ಯ
8.	ಮಾಸ್ತಿವೆಂಕಟೇಶ ಅಯ್ಯಂಗಾರ್	ಜೀವನಚರಿತ್ರೆ	1994	ಆರ್.ಎಸ್.ರಾಮರಾವ್
9.	ಶ್ರೀಯವರ ಆಯ್ದ ಕವನಗಳು	ಕವನ	1984	ಸಂ: ನಾ.ಗೀತಾಚಾರ್ಯ
10.	ಶ್ರೀಗಂಧ (ಬಿ.ಎಂ.ಶ್ರೀ ಶತಮಾನ ಸ್ಮರಣ ಸಂಚಿಕೆ)	ಸ್ಮರನಸಂಚಿಕೆ	1985	ಚಿ.ಶ್ರೀನಿವಾಸರಾಜು ಹಾಗೂ ಇತರರು

ಕ್ರ.ಸಂ.	ಗ್ರಂಥ	ಪ್ರಕಾರ	ವರ್ಷ	ಸಂಪಾದಕ/ಲೇಖಕ
11.	ಇಂಗ್ಲೀಷ್ ಗೀತೆಗಳು (ಆಂಗ್ಲ ಮೂಲ ಕವನಗಳೊಂದಿಗೆ	ಕವನ	1985	ಶ್ರೀ
12.	ಅಶ್ವತ್ಥಾಮ (ಶೀ ನಾಟಕದ ಸರಳಾನುವಾದ)	ನಾಟಕ	1987	ಪಿ.ವಿ.ನಾರಾಯಣ
13.	The Improvement of Kannada	ವೈಚಾರಿಕ	1987	ಬಿ.ಎಂ.ಶ್ರೀ
14.	ಭಾರತದ ಶ್ರೀಕೃಷ್ಣ (ಎ.ಆರ್.ಕೃ. ಭಾಷಣ)	ವೈಚಾರಿಕ	1986	ಕೆ.ರಾಜಾರಾವ್
15.	sevenior of vijayanagar seminar (ಎಸ್.ಶ್ರೀಕಂಠಯ್ಯಶತಾಬ್ಧಿ)	ಸ್ಮರಣಸಂಚಿಕೆ	1987	ವಿವಿಧ ಲೇಖಕರು
16.	Early vijayangar, studies, its History & culture.	ಐತಿಹಾಸಿಕ	1988	ಸಂ:ಜಿ.ಎಸ್.ದೀಕ್ಷಿತ್
18.	ಸಂಗಮರ ಕಾಲದ ವಿಜಯನಗರ (ಅನುವಾದ)	ಇತಿಹಾಸ	1991	ಸಂ:ಜಿ.ಎಸ್.ದೀಕ್ಷಿತ್
19.	ಬಸವಪ್ಪ ಶಾಸ್ತ್ರಿಗಳು	ಸಮೀಕ್ಷೆ	1995	ಪಿ.ಮಹದೇವಪ್ಪ ವಿಜಯಾ ಸುಬ್ಬರಾಜ್ ಆಂ.ಆರ್. ಲಕ್ಷ್ಮೀದೇವಿ & ಅಷ್ಟವಧಾನಿ ಆರ್.ಗಣೇಶ್
20.	ಎಂ.ಆರ್.ಶ್ರೀ			
21.	ಶತಮಾನ ಸ್ಮರಣೆ			

(ಆ) ಸಹೃದಯ ಗೋಷ್ಠಿ ಕೃತಿ ಮಾಲೆ :- ಸಾಹಿತ್ಯ ಸಂಶೋಧನೆಗೆ ಗಣನೀಯ ಸೇವೆ ಸಲ್ಲಿಸಿದ ಖ್ಯಾತಿವೆತ್ತ ಹಿರಿಯ ವಿದ್ವಾಂಸರ ಸಾಧನೆಗಳನ್ನು ಜನತೆಗೆ ಪರಿಚಯಿಸುವ ವಿಶೇಷ ಸಂಸ್ಮರಣೆಯ ಗೋಷ್ಠಿ ಕಾರ್ಯಕ್ರಮಗಳನ್ನು ಪ್ರತಿಷ್ಠಾನ ಹಮ್ಮಿಕೊಂಡು ಸಾಹಿತ್ಯ-ಸಂಶೋಧನ ಚಟುವಟಿಕೆಗಳನ್ನು ಜನಮನದಲ್ಲಿ ಬೇರೂರಿರುವಂತೆ ಮಾಡಲಾಗುತ್ತಿದೆ. ಇಡೀ ವರ್ಷ ಪ್ರತಿತಿಂಗಳು ಉಪನ್ಯಾಸ ಮಾಲೆ ವಿಚಾರ ಗೋಷ್ಠಿಗಳನ್ನು ನಡೆಸಿ ಕೊನೆಯಲ್ಲಿ ಇವನ್ನೆಲ್ಲ ಪುಸ್ತಕ ರೂಪದಲ್ಲಿ ಪ್ರಕಟಿಸಲಾಗಿದೆ. ಈವರೆಗೆ ಪ್ರಕಟವಾಗಿರುವ ಪುಸ್ತಕಗಳು ಪಟ್ಟಿ ಈ ರೀತಿ ಇದೆ.

ಕ್ರ.ಸಂ	ಗ್ರಂಥ	ಪ್ರಕಾರ	ವರ್ಷ	ಸಂಪಾದಕ/ಲೇಖಕ
1	ಬೇಂದ್ರೆ ಸ್ಮೃತಿ	ಸ್ಮರಣ ಗ್ರಂಥ	1982	ಪ್ರ.ಸಂ: ಎಂ.ವಿ.ಸೀ ಗೋವಿಂದಅ.ಜಾಲಿಹಾಳ
2.	ಮಾಸ್ತಿ ಸ್ಮರಣೆ	ಸ್ಮರಣ ಗ್ರಂಥ	1987	ಪ್ರೊ.ನಾ.ಗೀತಾಚಾರ್ಯ
3.	ನವ್ಯಸ್ಫೂರ್ತಿ (ಗೋಕಾಕ್‌ಕುರಿತು)	ಸ್ಮರಣ ಗ್ರಂಥ	1995	ಸಂ: ಪ್ರೊ.ಗೀತಾಚಾರ್ಯ
4.	ಶಂಬಾಕೃತಿ ಸಮೀಕ್ಷೆ	ಸಮೀಕ್ಷೆ	1992	ಮಲ್ಲೇಪುರಂ ಜಿ.ವೆಂಕಟೇಶ್
5.	ಎಂ.ವಿ.ಸೀ.ಸಂಸ್ಮರಣೆ	ಸ್ಮರಣ ಗ್ರಂಥ	1992	ಪ್ರೊ.ನಾ.ಗೀತಾಚಾರ್ಯ
6.	ಕುವೆಂಪು ನಮನ	ಅಪ್ರಕಟಿತ		

(ಇ) ಪ್ರಾಚೀನ ಗ್ರಂಥಗಳ ಸಂಪಾದನೆ :- ಇಲ್ಲಿಯವರೆಗೆ 20ಕ್ಕೂ ಹೆಚ್ಚು ಪ್ರಾಚೀನ ಗ್ರಂಥಗಳನ್ನು ಸಂಪಾದಿಸಿ ಪರಿಷ್ಕರಿಸಿ ಪ್ರಕಟಿಸಲಾಗಿದೆ. ಪ್ರತಿಷ್ಠಾನದ ಗ್ರಂಥ ಭಂಡಾರದಲ್ಲೇ ಇದ್ದ ಮತ್ತು ವಿದ್ವಾಂಸರು ಸಂಪಾದಿಸಿ ಸಿದ್ಧಪಡಿಸಿದ್ದ ಈ ಕೆಳಕಂಡ ಅಪ್ರಕಟಿತ ಗ್ರಂಥಗಳನ್ನು ಪ್ರತಿಷ್ಠಾನ ಪ್ರಕಟಿಸಿದೆ.

ಕ್ರ.ಸಂ	ಗ್ರಂಥ	ಪ್ರಕಾರ	ವರ್ಷ	ಸಂಪಾದಕ/ಲೇಖಕ
1	ಸೂತಭಾರತ	ಷಟ್ಪದಿಕಾವ್ಯ	1982	ಪ್ರ.ಸಂ:ಎಂ.ವಿ.ಸೀ ಸಂ: ಶ್ರೀಕೃಷ್ಣಭಟ್, ಎಂ.ಜಿ.ಹೆಗಡೆ
2.	ಶ್ರೀಕೃಷ್ಣದೇವರಾಯ ದಿನಚರಿ	ಗದ್ಯ	1983	ಪ್ರ.ಸಂ: ಎಂ.ವಿ.ಸೀ ಸಂ: ವಿ.ಎಸ್.ಎಸ್. ಆಚಾರ್ಯ

ಕ್ರ.ಸಂ	ಗ್ರಂಥ	ಪ್ರಕಾರ	ವರ್ಷ	ಸಂಪಾದಕ/ಲೇಖಕ
3.	ಚಂದ್ರ ಚೂಡಾಮಣಿ ಶತಕ	ಶತಕ	1989	ಸಂ: ಎಂ.ಎ.ಸೀ
4.	ಶ್ರೀನಿವಾಸ ಕಲ್ಯಾಣ	ಕಾವ್ಯ	1988	ಸಂ: ಕೆ.ಎಂ.ಕೃಷ್ಣರಾವ್
5.	ಮರುನ್ನಂದನ	ಶತಕ	1989	ಆರ್.ತಾತ
6.	ವಾಸವಾಂಬಾಪುರಾಣ	ಪುರಾಣ (ಅನುವಾದ)	2004	ಸಾವಿತ್ರಮ್ಮ ರಾಮಸ್ವಾಮಿ, ಲಕ್ಷ್ಮೀ.
7.	ಸರ್ವಜ್ಞನ ವಚನಗಳು	ತ್ರಿಪದಿ	1980	ಎಂ.ವಿ.ಸೀ
8.	ಪದ್ಮಿನಿ ಕಲ್ಯಾಣ	ಸಾಂಗತ್ಯ	1995	ಸಂ:ಎಸ್.ಶಿವಣ್ಣ
9.	ಹಸ್ತಪ್ರತಿ ಶಾಸ್ತ್ರ	ಹಸ್ತಪ್ರತಿಶಾಸ್ತ್ರ	1983	ಸಂ: ಎಂ.ವಿ.ಸೀ ಚಿದಾನಂದಮೂರ್ತಿ
10.	ಕನ್ನಡಸಾಹಿತ್ಯದಲ್ಲಿಅದ್ವೈತ	ಸಮೀಕ್ಷೆ	1990	ವಿವಿಧ ಲೇಖಕರು
11.	ಕುಮಾರವ್ಯಾಸ ಭಾರತ ಸಂಗ್ರಹ	ಷಟ್ಪದಿ	1990	ಸಂ: ಎಂ.ವಿ.ಸೀ

ಮೇಲಿನ ಎಲ್ಲ ಗ್ರಂಥಗಳನ್ನು ಗ್ರಂಥ ಸಂಪಾದನಾ ಶಿಸ್ತಿಗೆ ಅನುಗುಣವಾಗಿ ಸಂಪಾದಿಸಲಾಗಿದ್ದು ಪಾಠಂತರಗಳ ನಿಷ್ಕರ್ಷೆ, ವಿಸ್ತೃತ, ಪ್ರಸ್ತಾವನೆ, ಕವಿ ಕಾವ್ಯ ವಿಚಾರ ಮತ್ತು ಸೂಕ್ತ ಅನುಬಂಧಗಳೊಂದಿಗೆ ಶಾಸ್ತ್ರೀಯವಾಗಿ ಸಂಪಾದಿಸಲಾಗಿದೆ.

೩ು. ಲಕ್ಷಣ ಗ್ರಂಥಗಳ ರಚನೆ ಮತ್ತು ಪ್ರಕಟಣೆ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಸಂಶೋಧನಾ ಚಟುವಟಿಕೆಗಳಲ್ಲಿ ಕಾಲಕಾಲಕ್ಕೆ ಆವಿಷ್ಕಾರಗೊಳ್ಳುವ ನೂತನ ಅಧ್ಯಯನ ಶಿಸ್ತುಗಳಿಗೆ ಅಗತ್ಯ ಲಕ್ಷಣ ಗ್ರಂಥಗಳನ್ನು ಸಿದ್ಧಪಡಿಸುವುದೂ ಒಂದಾಗಿದೆ. 1980ರ ದಶಕದಲ್ಲಿ "ಹಸ್ತಪ್ರತಿಶಾಸ್ತ್ರ" ಎಂಬ ನೂತನ ಶಿಸ್ತನ್ನು ರೂಪಿಸಿದ್ದಲ್ಲದೆ "ಮಣಿಹ", "ಹಸ್ತಪ್ರತಿ ಶಾಸ್ತ್ರ ಪರಿಚಯ" ಎಂಬ ಶಾಸ್ತ್ರ ಗ್ರಂಥಗಳನ್ನು ಸಿದ್ಧಪಡಿಸಿ ಪ್ರಕಟಿಸಿದೆ. ಇವುಗಳ ಬಗ್ಗೆ ಅಧ್ಯಾಯ 5ರಲ್ಲಿ ಚರ್ಚಿಸಲಾಗಿದೆ.

"ಭಾಷಾಂತರ ಕಲೆ" "ಸೃಜನಶೀಲತೆ ಮತ್ತು ಪಾಂಡಿತ್ಯ" "ಹೊಸಗನ್ನಡ ವ್ಯಾಕರಣ", "ವೈಚಾರಿಕ ಜಾಗೃತಿ" ಮುಂತಾದ ಕೃತಿಗಳು ಹೊಸ ಶಿಸ್ತುಗಳಿಗೆ ಪೂರಕವಾಗಿ ರಚಿಸಿದ

ಪ್ರಕಟಣೆಗಳಾಗಿವೆ. 1990ರ ದಶಕದಲ್ಲಿ ಅಂತರಶಿಸ್ತೀಯ ಸಂಶೋಧನೆಯ ಶಿಸ್ತು ಇದರ ಪರಿಕಲ್ಪನೆಗೆ ಅನುಗುಣವಾಗಿ 'ಅಂತರಶಿಸ್ತೀಯ ಸಂಶೋಧನ ವಿಧಿ ವಿಧಾನ' ಎಂಬ ಲಕ್ಷಣ ಗ್ರಂಥವನ್ನು ಪ್ರಕಟಿಸಲಾಗಿದೆ. "ತೌಲನಿಕ ಸಾಹಿತ್ಯ" ವನ್ನು ಕುರಿತು ಒಂದು ಲಕ್ಷಣ ಗ್ರಂಥ ಪ್ರಕಟಿಸಲಾಗಿದೆ. ಇವೆಲ್ಲವು ಸಾಹಿತ್ಯದ ಹೊಸ ಶಿಸ್ತುಗಳಿಗೆ ಪೂರಕವಾಗಿ ರಚಿಸಲಾಗಿದೆ. ಅವುಗಳ ಪರಿಚಯದ ಕಿರುನೋಟ ಇಲ್ಲಿದೆ.

(ಅ) ಭಾಷಾಂತರ ಕಲೆ :– ಈ ಕೃತಿಯು ಹೊಸ ಶಿಸ್ತುಗಳಿಗೆ ಪೂರಕವಾಗಿ ರಚಿಸಿದ ಒಂದು ಮೌಲಿಕ ಗ್ರಂಥವಾಗಿದೆ. ಬಿ.ಎಂ.ಶ್ರೀ ಪ್ರತಿಷ್ಠಾನದ ದಶಮನೋತ್ಸವ ಕೃತಿ ಮಾಲೆಯಲ್ಲಿ ಪ್ರಕಟಗೊಂಡ ಮೊದಲ ಕೃತಿ ಎಂಬ ಹೆಗ್ಗಳಿಗೆ ಕೂಡ ಇದೆ. ಡಾ.ಪ್ರದಾನ್ ಗುರುದತ್ತರು ಕೃತಿಕಾರರು. 1989ರಲ್ಲಿ ಪ್ರಕಟಗೊಂಡ "ಭಾಷಾಂತರ ಕಲೆ" ಒಂದು ಬಹಳ ಮುಖ್ಯವಾದ ಕೃತಿ. ಈ ಗ್ರಂಥದಲ್ಲಿ ಪರಿಭಾಷೆ, ವೈಜ್ಞಾನಿಕ ಕಲೆ, ಅಗತ್ಯ ಮತ್ತು ಪ್ರಯೋಜನಗಳು, ಆದರ್ಶ ಭಾಷಾಂತಕಾರ ಮತ್ತು ಆದರ್ಶ ಭಾಷಾಂತರ, ಭಾಷಾಂತರದ ತತ್ವಗಳು ಅಥವಾ ಸಿದ್ಧಾಂತಗಳು, ಭಾಷಾಂತರದ ಪ್ರಕಾರಗಳು, ಭಾಷಾಂತರದ ಸಮಸ್ಯೆಗಳು, ಕಾವ್ಯದ ಭಾಷಾಂತರ, ವಿಜ್ಞಾನ ಮತ್ತು ಮಾನವಿಕ ಕೃತಿಗಳ ಭಾಷಾಂತರ, ಪಾರಿಭಾಷಿಕ ಪದಗಳು, ಯಂತ್ರಾನುವಾದ ಎಂಬ ಹನ್ನೊಂದು ಅಧ್ಯಾಯಗಳಿವೆ. ಭಾಷಾಂತರವೆಂದರೇನು? ಎಂಬ ಚರ್ಚೆಗೆ ತೊಡಗುವ ಮೊದಲು ಭಾಷಾಂತರಕ್ಕೂ ಲಿಪ್ಯಂತರಕ್ಕೂ ಇರುವ ವ್ಯತ್ಯಾಸವನ್ನು ಗಮನಿಸಬೇಕು. ಯಾವ ಭಾಷೆಗೆ ಭಾಷಾಂತರ ಮಡುತ್ತೇವೆಯೋ ಆ ಭಾಷೆಯ –ಧ್ವನಿ ಸಂಕೇತಗಳನ್ನು ಅಳವಡಿಸುವುದಕ್ಕೆ ಲಿಪ್ಯಂತರ ಎಂದು ಹೆಸರು. ಭಾಷಾಂತರದಲ್ಲಿ ಉದ್ದಿಷ್ಟ ಭಾಷೆಯ ಜಾಯಮಾನಕ್ಕಾನುಗುಣವಾಗಿ ಮೂಲದ ಅರ್ಥ ಮೈದಳೆಯಬೇಕು. ಲಿಪ್ಯಂತರ ಭಾಷಾಂತರವಾಗಬಹುದು; ಲಿಪ್ಯಂತರವಿಲ್ಲದಿದ್ದರೂ ಭಾಷಾಂತರವಾಗಿರಬಹುದು. ಭಾಷಾಂತರ ಮೂಲ ಕೃತಿಯ ಅನುಸೃಷ್ಟಿ ಎಂದು ಹೇಳಬಹುದು. ಭಾಷಾಂತರ ಕಲೆಯೂ ಹೌದು, ವಿಜ್ಞಾನವೂ ಹೌದು.

(ಆ) ಸೃಜನಶೀಲತೆ ಮತ್ತು ಪಾಂಡಿತ್ಯ :– ಪ್ರತಿಷ್ಠಾನದ ದಶಮನೋತ್ಸವ ಕೃತಿ ಮಾಲೆಯಲ್ಲಿ ಪ್ರಕಟಗೊಂಡ ಎರಡನೇ ಕೃತಿಯೇ ಸೃಜನಶೀಲತೆ ಮತ್ತು ಪಾಂಡಿತ್ಯ. ಡಾ.ಕೆ.ಕೃಷ್ಣಮೂರ್ತಿಯವರು ಕೃತಿಕಾರರು. ಈ ಕೃತಿಯಲ್ಲಿ ಸಂಸ್ಕೃತ ಕಾವ್ಯ ಲಕ್ಷಣ ಗ್ರಂಥಗಳು ಪ್ರತಿಪಾದಿಸುವ ಕಾವ್ಯ ತತ್ವಗಳಾದ ಗುಣ, ರೀತಿ, ಅಲಂಕಾರ, ರಸ, ಧ್ವನಿ, ಈ ಪ್ರಕ್ರಿಯೆಗಳ ಹಿನ್ನೆಲೆಯಲ್ಲಿ ಪ್ರತಿಭೆಯ ಸ್ವರೂಪ; ಕಾವ್ಯ ನಿರ್ಮಿತಿಯಲ್ಲಿ ಪ್ರತಿಭೆ–ಪಾಂಡಿತ್ಯಗಳು ಹೆಚ್ಚು ಕಡಿಮೆ ಸರಿಸಮವಾಗಿ ವಹಿಸುವ ಪಾತ್ರ; ಕಾವ್ಯಾನುಶೀಲನ ರಸಾಸ್ವಾದ ಕ್ರಿಯೆಗಳಲ್ಲಿ ವಿಮರ್ಶಕನಿಗೂ ಸಹೃದಯನಿಗೂ ಇರಲೇಬೇಕಾದ ಪಾಂಡಿತ್ಯದ ಒನ್ನೆಲೆಯ ಅಗತ್ಯ. ಇವೇ ಮುಂತಾದ ವಿಚಾರಗಳನ್ನು ಕನ್ನಡ ಕವಿಗಳು ಮತ್ತು

ಅಂತರ ಶಿಸ್ತೀಯ ಸಂಶೋಧಕರಿಗೆ ಈ ಕೃತಿಯು ಒಂದು ಕೈಪಿಡಿಯಂತಿದೆ. ಇದರಲ್ಲಿ ಸಂಶೋಧನೆ ಅಂತರಶಿಸ್ತೀಯ ಸಂಶೋಧನೆ ಎಂಬ ಪೀಠಿಕೆಯನ್ನು ನಾ.ಗೀತಾಚಾರ್ಯರೂ ಸಮಾಜ ವಿಜ್ಞಾನ ಸಮಾಜ ಕಾರ್ಯದಲ್ಲಿ, ಸಂಶೋಧನಾ ವಿಧಿ–ವಿಧಾನದ ಸ್ವರೂಪ ಪ್ರೊ.ಎಚ್.ಎಂ. ಮರಳುಸಿದ್ಧಯ್ಯ, ಸಾಹಿತ್ಯ ಸಂಶೋಧನೆ; ವಿಧಿ ವಿಧಾನಗಳು ಡಾ.ಶ್ರೀನಿವಾಸ ಹಾವನೂರು; ಅರ್ಥಶಾಸ್ತ್ರದಲ್ಲಿ ಸಂಶೋಧನ ವಿಧಿವಿಧಾನ–ಡಾ.ಅಬ್ದುಲ್ ಅಜೀಜ್; ಸಂಶೋಧನ ವಿಧಿವಿಧಾನ: ಇತಿಹಾಸ ಸಂಶೋಧನೆ–ಡಾ.ಸೂರ್ಯನಾಥ ಕಾಮತ್, ರಾಜ್ಯಶಾಸ್ತ್ರದಲ್ಲಿ ಸಂಶೋಧನೆಯ ವಿಧಿ ವಿಧಾನಗಳು–ಡಾ.ಆರ್.ಎಲ್.ಎಂ.ಪಾಟೀಲ್, ಭಾಷಾ ವಿಜ್ಞಾನದಲ್ಲಿ ಸಂಶೋಧನ ವಿಧಿ ವಿಧಾನದ ಸ್ವರೂಪ–ನಾ.ಗೀತಾಚಾರ್ಯ. ಹೀಗೆ ಬೇರೆ ಬೇರೆ ಉಪನ್ಯಾಸ ಲೇಖನಗಳು ಈ ಕೃತಿಯಲ್ಲಿವೆ. ಅಲ್ಲದೆ ಅಂತರಶಿಸ್ತೀಯ ಸಂಶೋಧನ ವಿಧಿವಿಧಾನ ಉಪನ್ಯಾಸ ಮಾಲಿಕೆಯಲ್ಲಿ 1985ರಲ್ಲಿ ವಿವಿಧ ಶಿಸ್ತುಗಳಿರುವ ಈ ಶಾಸ್ತ್ರ ಲಕ್ಷಣಗಳನ್ನು ದಾಖಲಿಸುವ 8 ಉಪನ್ಯಾಸಗಳನ್ನು ಪ್ರತಿದಿನ ನಡೆಯಿತು.

ಹೀಗೆ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಹಸ್ತಪ್ರತಿಯನ್ನು ಕೇಂದ್ರವಾಗಿಟ್ಟುಕೊಂಡು ಹಲವಾರು ರೀತಿಯ ಹೊಸ ಹೊಸ ಸಾಹಿತ್ಯ ಶಿಸ್ತುಗಳನ್ನು ನಡೆಸುತ್ತಲೇ ಇದೆ. ವಿದ್ವಾಂಸರ ಸಹಾಯ ಸಹಕಾರದೊಂದಿಗೆ, ಗೋಷ್ಠಿಗಳ ಮೂಲಕ ಶಾಸ್ತ್ರ ವಿಷಯಗಳಿಗೆ ಮರುಜೀವ ತುಂಬುವ ಕೈಂಕಾರ್ಯವನ್ನು ನಡೆಸಿಕೊಂಡು ಬರುತ್ತಿರುವ ಸಾಂಸ್ಕೃತಿಕ, ಸಾಹಿತ್ಯಿಕ ಸಂಸ್ಥೆ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನವಾಗಿದೆ.

ಲಾಕ್ಷಣಿಕರನ್ನು ಗಮನದಲ್ಲಿರಿಸಿಕೊಂಡು ಪ್ರಮಾಣವಾಗಿ ಮಾತ್ರವಲ್ಲ. ಸೋದಾಹರಣ ಪೂರ್ವಕವಾಗಿ ಓದುಗರಿಗೆ ಮನಸ್ಸಿಗೆ ಒಪ್ಪುವಂತೆ ಲೇಖಕರಾದ ಡಾ.ಕೆ.ಕೃಷ್ಣಮೂರ್ತಿಯವರು ನಿರೂಪಿಸಿದ್ದಾರೆ.

(ಇ) ವೈಚಾರಿಕ ಜಾಗೃತಿ :– ದಶಮನೋತ್ಸವ ಕೃತಿ ಮಾಲೆಯಲ್ಲಿ ಪ್ರತಿಷ್ಠಾನದಿಂದ ಪ್ರಕಟಗೊಂಡ ನಾಲ್ಕನೇ ಕೃತಿಯಿದು. ಡಾ.ಜಿ.ರಾಮಕೃಷ್ಣರು ಈ ಕೃತಿಯ ಕೃತಿಕಾರರು. ಈ ಕೃತಿಯು 1992ರಲ್ಲಿ ಪ್ರಕಟಣೆಯಾಗಿದೆ. ಭಾರತೀಯ ಸಂಪ್ರದಾಯ ಪದ್ಧತಿ ನಂಬಿಕೆಗಳನ್ನು ಪಾಶ್ಚತ್ಯ ವೈಚಾರಿಕ ದೃಷ್ಟಿಯೊಂದಿಗೆ ತುಲನೆಮಾಡಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಉದ್ದಾಲಕಅರುಣಿ, ವೈಚಾರಿಕತೆಯಲಕ್ಷಣ, ಅಪೌರುಷೇಯವಾದ ಆರ್ಷೆಯ ಸಾಹಿತ್ಯ, ವಿಜ್ಞಾನದ ಮೇಲೆ ಧರ್ಮಶಾಸ್ತ್ರಕಾರರ ಹಲ್ಲೆ, ತತ್ವಶಾಸ್ತ್ರದಲ್ಲಿ ಬಿಡುಗಡೆಯ ನೆಲೆ, ಭಾರತೀಯ ನಿರೀಶ್ವರವಾದ, ಮಹಿಳಾಪ್ರಶ್ನೆ, ವಿಚಾರ ಗುಚ್ಛಾ, ಸಮಾಜದ ನಿಯಂತ್ರಣಕ್ಕೆ ಮೂಢನಂಬಿಕೆ ಎಂಬ ಒಂಭತ್ತು ಅಧ್ಯಾಯಗಳು ಈ ಕೃತಿಯಲ್ಲಿವೆ. ವಿಶ್ವದ ಉಗಮ ಹೇಗಾಯಿತು ಎಂಬ ಪ್ರಶ್ನೆ ಎದುರಾದಾಗ ಅವನು ಕೊಡುವ ಉತ್ತರವೆಂದರೆ ಅದು 'ಸತ್' ನಿಂದ ಹೊರಹೊಮ್ಮುತ್ತದೆ. ಉದ್ದಾಲಕನ ಪ್ರಯೋಗಾತ್ಮಕ ಪದ್ಧತಿ ಸಜೀವ ಮತ್ತು ನಿರ್ಜೀವ ವಸ್ತುಗಳೆಲ್ಲಾ 'ಸತ್'ನಿಂದ ಉದ್ಭವಿಸಿದವು ಎಂದು ನಿರೂಪಿಸುತ್ತದೆ. ಈ ದೃಷ್ಟಿಯಿಂದ ವಾಲ್ಟರ್ ರೂಬೆನ್ ಹೇಳುವಂತೆ ಉದ್ದಾಲಕ ನಮ್ಮ ಮೊದಲ ತತ್ವಜ್ಞಾನಿ, ಕಾರ್ಯ ಕಾರಣ ಸಂಬಂಧ, ಶ್ರದ್ಧೆ ನಂಬಿಕೆಗಳು ವೈಚಾರಿಕತೆಯ ಲಕ್ಷಣಗಳು, ಸತ್ಯದ ಆವಿಷ್ಕಾರವು ತರ್ಕಕ್ಕೆ ನಿಲುಕುವುದಿಲ್ಲ, ವೈಚಾರಿಕತೆಯ ಓರೆಗಲ್ಲಿನ ಮೇಲೆ ಅದನ್ನು ತಿಳಿಯಲು ಸಾಧ್ಯವಾಗಬಹುದಾಗಿದೆ.

(ಈ) ಅಂತರಶಿಸ್ತೀಯ ಸಂಶೋಧನ ವಿಧಿವಿಧಾನ :– ಬಿ.ಎಂ.ಶ್ರೀ ಪ್ರತಿಷ್ಠಾನ ಅಸ್ತಿತ್ವಕ್ಕೆ ಬಂದ ಇಪ್ಪತ್ತು ವರ್ಷಗಳ ನಂತರ ಆಚರಿಸಲಾಗದ ದ್ವಿದಶಮನೋತ್ಸವ ಗ್ರಂಥ ಮಾಲೆಯಲ್ಲಿ "ಅಂತರಶಿಸ್ತೀಯ ಸಂಶೋಧನ ವಿಧಿವಿಧಾನ"ಗಳು ಎಂಬ ಕೃತಿಯು 1999 ರಲ್ಲಿ ಪ್ರಕಟಗೊಂಡಿದೆ. ವಾಸ್ತವವಾಗಿ ಪ್ರತಿಷ್ಠಾನವು 1996ರಲ್ಲಿ ಏರ್ಪಡಿಸಿದ್ದ ಇದೇ ಶೀರ್ಷಿಕೆಯಲ್ಲಿನ ಭಾಷಣಗಳನ್ನು ಧ್ವನಿ ಮುದ್ರಿಸಿಕೊಂಡಿದ್ದು ಅದನ್ನು ಪ್ರೊ.ನಾ.ಗೀತಾಚಾರ್ಯರವರು ಸಂಪಾದಿಸಿ ಲೇಖನಗಳಾಗಿ ಪರಿವರ್ತಿಸಿರುವ ಕೃತಿಯೇ ಇದು. ಇಂದಿನ ಸಂಶೋಧನಾ ಪ್ರಪಂಚದಲ್ಲಿ ಪ್ರತಿಯೊಂದು ಶಿಸ್ತು ತನ್ನ ಅಕ್ಕಪಕ್ಕದ ಮತ್ತು ಸಂಬಂಧಿತ ಶಿಸ್ತುಗಳ ಅಧ್ಯಯನವು ಅತ್ಯಂತ ಅಗತ್ಯ ಹಾಗೂ ಅನಿವಾರ್ಯವಾಗಿರುತ್ತದೆ. ಈ ನಿಟ್ಟಿನಲ್ಲಿ ಪ್ರಸ್ತುತ ಕೃತಿಯು ಸಾಹಿತ್ಯ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಇತಿಹಾಸ, ರಾಜ್ಯಶಾಸ್ತ್ರ, ಮನೋವಿಜ್ಞಾನ ಇವೇ ಮೊದಲಾದ ಅಧ್ಯಯನ ಕ್ಷೇತ್ರಗಳ ಸಂಶೋಧನ ವಿಧಾನದ ರೂಪು ರೇಷಗಳನ್ನೊಳಗೊಂಡ ಉಪಯುಕ್ತ ಕೃತಿ.

ಅಡಿಟಿಪ್ಪಣಿಗಳು

1. ಪ್ರೊ.ಡಿ.ಲಿಂಗಯ್ಯ, ಬಿ.ಎಂ.ಶ್ರೀಕಂಠಯ್ಯ (ವ್ಯಕ್ತಿಚಿತ್ರ ಮತ್ತು ಸೂಕ್ತಿಗಳು) ಬೆಂಗಳೂರು ಪುಟ–1, ವರ್ಷ–2005

2. ಪ್ರೊ.ನಾ.ಗೀತಾಚಾರ್ಯ ಎಸ್.ವಿ.ಶ್ರೀನಿವಾಸರಾವ್, ರಜತಸಿರಿ, ದೊಡ್ಡಪ್ಪ ಬಿ.ಎಂ.ಶ್ರೀ– ಆರ್‍ಯಾಂಬ ಪಟ್ಟಾಭಿ, 2004 ಪುಟ–09

3. ಡಿ.ವಿ.ಗುಂಡಪ್ಪ, ಪತ್ರಿಕಾ ಪ್ರಕಟಣೆ ಬಿ.ಎಂ.ಶ್ರೀಯವರ ಬಗ್ಗೆ,

4. ಜಿ.ಎಸ್.ಶಿವರುದ್ರಪ್ಪ, ಪತ್ರಿಕಾ ಪ್ರಕಟಣೆ, ಬಿ.ಎಂ.ಶ್ರೀಯವರ ಬಗ್ಗೆ.

5. ಚಿ.ಶ್ರೀನಿವಾಸರಾಜು, ಪತ್ರಿಕಾವರದಿ; ಉದಯವಾಣಿ, ದಿನಾಂಕ:18/9/05, ಎಂ.ವಿ.ಸೀತಾರಾಮಯ್ಯನವರ ಬಗ್ಗೆ.

6. ಎಸ್.ವಿ.ಶ್ರೀನಿವಾಸರಾವ್, ಎಂ.ವಿ.ಸೀರಾಮಯ್ಯನವರ ವ್ಯಕ್ತಿಚಿತ್ರ, ರಜತೋತ್ಸವ ಗ್ರಂಥಮಾಲೆ, 2006, ಪುಟ–9

7. ಎಸ್.ವಿ.ಶ್ರೀನಿವಾಸರಾವ್, ಎಂ.ವಿ.ಸೀರಾಮಯ್ಯನವರ ವ್ಯಕ್ತಿಚಿತ್ರ, ರಜತೋತ್ಸವ ಗ್ರಂಥಮಾಲೆ, 2006, ಪುಟ–9

8. ಕರ್ನಾಟಕ ಲೋಚನ, ಪ್ರತಿಷ್ಠಾನವಾರ್ತೆ, 2002, ಪುಟ–83

9. ಪ್ರೊ.ನಾ.ಗೀತಾಚಾರ್ಯ– ಪಿ.ವಿ.ಕೃಷ್ಣಮೂರ್ತಿ, ಲೋಚನ ಲೇಖನ ಸೂಚಿ, ಹೇಳಿಕೆ– ಕೊನೆಯ ಮುಖಪುಟ.

ಅಧ್ಯಾಯ – 4

ಬಿ.ಎಂ.ಶ್ರೀ ಪ್ರತಿಷ್ಠಾನದ ಹಸ್ತಪ್ರತಿಗಳ ವಿಶೇಷತೆ

ಅ) ಹಸ್ತಪ್ರತಿ ಭಂಢಾರ :–

ಬಿ.ಎಂ.ಶ್ರೀ ಪ್ರತಿಷ್ಠಾನದ ಹಸ್ತಪ್ರತಿ ಭಂಡಾರವು ಮೇ 6, 1976ರಂದು ಪ್ರಾರಂಭಗೊಂಡು ಇಂದಿಗು ತನ್ನ ಕಾರ್ಯವನ್ನು ನಿರಂತರವಾಗಿ ಯಾಕುತ್ತಾ ಬಂದಿದೆ. "ಪ್ರಾಚೀನ ಹಸ್ತಪ್ರತಿಗಳನ್ನು ನೋಡುವುದೇ ಒಂದು ಭಾಗ್ಯ ಅದನ್ನು ಹೊಂದಿರುವವರು ಪುಣ್ಯಶಾಲಿಗಳು ಅಂಥವರು ಈ ಪುಣ್ಯವನ್ನು ತಾವೊಬ್ಬರೇ ಇಟ್ಟುಕೊಳ್ಳದೇ ಸಾರ್ವಜನಿಕರಿಗೂ ಹಂಚಬೇಕು. ಈ ಕೆಲಸವನ್ನು ಬಿ.ಎಂ.ಶ್ರೀ ಪ್ರತಿಷ್ಠಾನಾ ಪ್ರಾರಂಭದಿಂದಲೂ ಮಾಡಿಕೊಂಡು ಬಂದಿದೆ, ಬರೀ ಹಂಚುತ್ತಿರುವುದಲ್ಲದೇ ಆಸಕ್ತರಿಗೂ ಉಣಬಡಿಸುತ್ತಿದೆ. ಪ್ರಾಚೀನ ಓಲೆಗರಿ ಗ್ರಂಥಗಳನ್ನು ಸಂರಕ್ಷಿಸುವ, ಓದುವ, ಪ್ರತಿ ಮಾಡುವ ಕಲೆಯನ್ನು ಭೋದಿಸುತ್ತಿದೆ. ವಿಶ್ವವಿದ್ಯಾಲಯಗಳು ಮಾಡಲಾಗದ ಈ ಅಪರೂಪದ ಕಾಯಕವನ್ನು ಪ್ರತಿಷ್ಠಾನ ಶ್ರದ್ಧೆಯಿಂದ ಮಾಡುತ್ತಿದ್ದು ಇದು ನಾಡಿನ ಸಂಸ್ಕೃತಿಯನ್ನು ಕಟ್ಟುವ ನಿಜವಾದ ಕೆಲಸವಾಗಿದೆ"[1] ಒಂದು ವಿ.ಎಸ್.ಕೃಷ್ಣಯ್ಯರ್ ರವರು ಹಸ್ತಪ್ರತಿ ತರಗತಿಗಳ ಹನ್ನೊಂದನೇ ತಂಡವನ್ನು ಉದ್ಘಾಟಿಸುತ್ತಾ ಹೇಳಿದ ಮಾತನ್ನು ಗಮನಿಸಿದರೆ ಬಿ.ಎಂ.ಶ್ರೀ ಹಸ್ತಪ್ರತಿ ಭಂಡಾರ ಪ್ರಾಚೀನ ಸಂಪತ್ತನ್ನು ಕಾಪಾಡುವುದರ ಜೊತೆಗೆ ಅದಕ್ಕೆ ವೈವಿಧ್ಯಮಯವಾದ ರೂಪವನ್ನು ಕೊಡುತ್ತಾ, ಬೇರೆ ಬೇರೆ ನೂತನ ಚಿಂತನೆಗಳಿಗೆ ದಾರಿಮಾಡಿಕೊಡುತ್ತಿದೆ.

ನಾಡಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕನ್ನು ಮುಂದಿನ ತಲೆಮಾರಿಗೆ ಪರಿಚಯಿಸುವ ಹಸ್ತಪ್ರತಿಗಳನ್ನು ತನ್ನ ಭಂಡಾರದಲ್ಲಿ ಸುಸಜ್ಜಿತವಾಗಿ ಕಾಪಾಡುತ್ತಿದೆ. ಹಸ್ತಪ್ರತಿಗಳನ್ನು ಸಂಗ್ರಹಿಸಲು ವಿಶೇಷ ತಂತ್ರಜ್ಞಾನದಿಮದ ತಯಾರಿಸಿರುವ ಬೀರುಗಳನ್ನು ಒಳಗೊಂಡಿದೆ. ಹಸ್ತಪ್ರತಿಗಳು ಸಂಗ್ರಹಿಸಿದಿ ನಂತರ ನಾಶವಾಗದಂತೆ ಕಾಪಾಡಲು ರಾಸಾಯನಿಕ ಚಿಕಿತ್ಸೆ ನೀಡುವ ವೈಜ್ಞಾನಿಕ ಸಾಧನವಾದ ಫ್ಯೂಮಿಗೇಷನ್ ಛೇಂಬರ್ (ಪ್ರಧೂಮನ ಕಪಾಟು)ನ್ನು ಒಳಗೊಂಡಿರುವುದು ವಿಶೇಷವಾಗಿದೆ. ಅಲ್ಲದೇ ಮೈಕ್ರೊಫಿಲಂ ರೀಢರ್‌ಗಳ ಸೌಲಭ್ಯವನ್ನು ಸಹ ಪಡೆದುಕೊಂಡಿದೆ. ಜೊತೆಗೆ ಹಸ್ತಪ್ರತಿಗಳು ಕ್ರಿಮಿ ಕೀಟಗಳಿಂದ ದೂರಮಾಡಲು ಆಧುನಿಕವಾದ ಸಿಟ್ರೆನಲ್ ಆಯಿಲ್ ಅನ್ನು ಬಳಸಲಾಗುತ್ತಿದೆ. ಬಿ.ಎಂ.ಶ್ರೀ ಕಲಾಭವನದಲ್ಲಿ ನೂತನವಾಗದ ಹಸ್ತಪ್ರತಿ ವಿಶೇಷ ವ್ಯವಸ್ಥೆಗಳನ್ನು ಮಾಡಲಾಗಿದೆ.

ಮೇಲಿನ ಗ್ರಂಥ ಭಂಡಾರದ ವ್ಯವಸ್ಥೆಗಳನ್ನು ಅವಲೋಕಿಸಿದಾಗ ಕೆ.ಎನ್.ಸುಬ್ಬಾರೆಡ್ಡಿಯವರು ಹೇಳಿರುವ "ಗ್ರಂಥಾಲಯ, ಪ್ರಾಚೀನ ಹಸ್ತಪ್ರತಿ, ಓಲೆಗರಿ ಸಂಗ್ರಹಾಲಯದಲ್ಲಿ ಸ್ವಲ್ಪ ಹೊತ್ತು ಕಳೆದರೆ ನಮ್ಮ ಜ್ಞಾನ ವೃದ್ಧಿಯಾಗುತ್ತದೆ. ಈ ಭವನದ ಗ್ರಂಥಭಂಡಾರ ನಮ್ಮ ನಾಡಿನ ಸಾಂಸ್ಕೃತಿಕ ಭಂಡಾರದಂತಿದೆ"[2] ಎಂಬ ಅಭಿಪ್ರಾಯ ಗ್ರಂಥ ಭಂಡಾರದ ಉಪಯುಕ್ತತೆ, ಉದ್ದೇಶಗಳು ನಮಗೆ ಅರಿವಾಗುತ್ತದೆ.

ಒಟ್ಟಾರೆ ಗ್ರಂಥಾಲಯ ಮುಂದಿನ ಪೀಳಿಗೆಗೆ ಪ್ರಾಚೀನ ಕಾಲದ ಸ್ಥಿತಿಗತಿಗಳ ಬಗ್ಗೆ ಅಂದಿನ ಸಾಂಸ್ಕೃತಿಕ, ಸಾಮಾಜಿಕ ಜೀವನ ಲಹರಿಯ ಬಗ್ಗೆ ದಾರಿ ದೀಪಗಳಾಗಿವೆ.

ಸಂಸ್ಥಾಪಕರಾದ ಎಂ.ವಿ.ಸೀತಾರಾಮಯ್ಯನವರು ತಮ್ಮ ಮನೆತನದಲ್ಲಿದ್ದ ಪ್ರಾಚೀನ ಹಸ್ತಪ್ರತಿಗಳನ್ನೆಲ್ಲ ನೋಡಿ ಸಂತೋಷದಿಂದ ಅವುಗಳಿಗೆ ಮರುಜೀವ ಕೊಡುವ ಚಿಂತನೆಯಲ್ಲಿರುವಾಗ ತಮ್ಮ ಗುರು ಬಿ.ಎಂ.ಶ್ರೀ ಯವರ ಶ್ರೀವಾಣಿಯಾದ "ದೇಶದಲ್ಲಿ ಹುಳು ತಿಂದು ಹೋಗದೆ ಇರುವ ಗ್ರಂಥಗಳನ್ನೆಲ್ಲ ಸಂಗ್ರಹಿಸಿ ಕೊನೆಮಟ್ಟ ಶೋಧಿಸಿ ಒಂದನ್ನು ಬಿಡದಂತೆ ಅಚ್ಚು ಹಾಕಿಸುವುದು" ಎಂಬ ನುಡಿಯನ್ನು ಧ್ಯೇಯವಾಗಿಟ್ಟುಕೊಂಡು ಈ ಸಂಸ್ಥೆಯನ್ನು ತಮ್ಮಲ್ಲಿದ್ದ 300 ಹಸ್ತಪ್ರತಿಗಳನ್ನು ಹುಡುಕಿ ತೆಗೆದು ಅವುಗಳಲ್ಲಿರುವ ಸಾಂಸ್ಕೃತಿಕ ವಿದ್ವತ್ ಪರಂಪರೆಯನ್ನು ಹೊರತೆಗೆಯಲು ಆರಂಭಿಸಿದರು. ಶ್ರೀವಾಣಿಯ ಜೊತೆಗೆ ಎಂ.ವಿ.ಸೀತಾರಾಮಯ್ಯರವರಿಗೆ ತಮ್ಮ ಕಾಲೇಜಿನ ದಿನಗಳಿಂದಲೂ ಆಸಕ್ತಿ ಇದ್ದ ಕಾರಣ ಅದಕ್ಕೆ ತಮ್ಮ ಅಭಿರುಚಿಯನ್ನು ಮೈಗೂಡಿಸಿಕೊಂಡು ಅಂದಿನಿಂದಲೇ ಕಾರ್ಯನಿರತರಾದರು. ಹೀಗೆ ಸ್ವಆಸಕ್ತಿಯಿಂದ ಆರಂಭಿಸಿದ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಹಸ್ತಪ್ರತಿ ಭಂಡಾರ ಇಂದು ಸಕಲ ವಿದ್ವತ್ ಪಂಡಿತರನ್ನೊಳಗೊಂಡ ಒಂದು ವಿಶ್ವವಿದ್ಯಾನಿಲಯಕ್ಕಿಂತ ಹೆಚ್ಚಿನ ಸ್ಥಾನವನ್ನು ಗಳಿಸಿಕೊಂಡು ಸಮಾಜ, ಸರ್ಕಾರದ ಗೌರವಗಳಿಗೆ ಸಂಸ್ಥೆ ಪಾತ್ರವಾಗಿದೆ. ಇದು ಹೆಮ್ಮೆಯ ವಿಷಯ.

ಆ) ಸಂಗ್ರಹಿಸಿದ ಹಸ್ತಪ್ರತಿಗಳು :-

ಹಸ್ತಪ್ರತಿಗಳು ನಮ್ಮ ನಾಡಿನ ಆಸ್ತಿಯಾಗಿದ್ದು, ಜ್ಞಾನದ ಗಣಿಯಾದ ಇವುಗಳನ್ನು ಸಂಗ್ರಹಿಸುವುದೇ ಒಂದು ಸಾಹಸದ ಕೆಲಸವಾಗಿದೆ. ಏಕೆಂದರೆ ಜನರಲ್ಲಿ ಇರುವ ಮೂಢನಂಬಿಕೆಗಳೇ ಕಾರಣ ಎಂದರೆ ತಪ್ಪಾಗಲಾರದು. ಕೆಲವರು ಆ ಹಸ್ತಪ್ರತಿಗಳಲ್ಲಿ ಊರಿನ ಯಾವುದೋ ದಿಕ್ಕಿನಲ್ಲಿರುವ ಅಥವಾ ದೇವಸ್ಥಾನದ ಬಳಿ ನಿಧಿ ಇರುವ, ಅದರ ರಹಸ್ಯ ವಿಚಾರಗಳಿವೆ ಎಂಬ ಅಂಧನಂಬಿಕೆಯ ಕಾರಣದಿಂದ ಇನ್ನೂ ಕೆಲವರಿಗೆ ತಮ್ಮ ಅದೃಷ್ಟ ದೇವತೆಯೇ ಅದರಲ್ಲಿ ಇದೆಯೆಂದು, ಇನ್ನು ಕೆಲವರು ಅದನ್ನು ಕುರಿತು ಮಾತನಾಡಲಿಕ್ಕೂ ಹೆದರುವ ಸಂದರ್ಭಗಳು ಹೆಚ್ಚು. ಅಂತಹವರು

ಅವುಗಳನ್ನು ಪೂಜೆಯ ಗೂಡುಗಳಲ್ಲಿ ದೇವರ ಜೊತೆಗಿಟ್ಟು ಪೂಜಿಸುತ್ತಾರೆ ಹೊರತು ಅದನ್ನು ತೆಗೆದು ನೋಡುವುದಾಗಲಿ ಅದರ ಸಂರಕ್ಷಣೆಯ ಬಗೆಗಾಗಲಿ ಆಲೋಚಿಸುವುದು ತುಂಬಾ ವಿರಳವಾಗಿತ್ತು. ಅಂತಹ ಸಾಂದರ್ಭಿಕ ಹಿನ್ನೆಲೆಯಿರುವ ಕಾಲದಲ್ಲಿ ಪ್ರತಿಷ್ಠಾನ ಬಹಳ ಪ್ರಾಯಸದಿಂದ ಹಲವಾರು ವಿಶೇಷವಾದ ಹಸ್ತಪ್ರತಿಗಳನ್ನು ಸಂಗ್ರಹಿಸಿರುವುದು ಸಾಧನೆಯ ಕಾರ್ಯವಾಗಿದೆ. ಬಿ.ಎಂ.ಶ್ರೀ ಪ್ರತಿಷ್ಠಾನದ ಹಸ್ತಪ್ರತಿ ಭಂಡಾರದಲ್ಲಿ ಅತಿ ಸಣ್ಣ ಹಸ್ತಪ್ರತಿಯಾದ "ಗೌಳಿಶಕುನ" (ಓ475)ಎಂಟು ಸೆಂ.ಮೀ. ಉದ್ದ ಎರಡೂವರೆ ಸೆಂ.ಮೀ ಅಗಲವಿದೆ. ಅತಿದೊಡ್ಡ ಹಸ್ತಪ್ರತಿ "ಶ್ರೀಮದ್ಭಾಗವತ ಭಾವಾರ್ಥ ದೀಪಿಕಾ ಶ್ರೀಧರೀಯ ವ್ಯಾಖ್ಯಾನ "(ಓ–511) ಇದು 90 ಸೆಂ.ಮೀ ಉದ್ದ, 5ಸೆಂ.ಮೀ ಅಗಲವಿದ್ದು ಸರಾಸರಿ ಒಂದು ಗರಿಯಲ್ಲಿ 9 ಸಾಲುಗಳು, ಒಂದು ಸಾಲಿನಲ್ಲಿ 195 ಅಕ್ಷರಗಳಿವೆ. ಅತ್ಯಂತ ಒತ್ತಟ್ಟಾದ ಆದರೆ ಸ್ಫುಟವಾದ ಸಣ್ಣ ಬರವಣಿಗೆ ಇರುವ ಹಸ್ತಪ್ರತಿ "ಶ್ರೀ ಮದ್ರಾಮಾಯಣ" (ಓ–517) 5ಸೆಂ.ಮೀ. ಅಗಲ 28ಸೆಂ.ಮೀ. ಉದ್ದದ, ಪ್ರತಿಗರಿಯಲ್ಲಿ 16 ಸಾಲುಗಳೂ ಪ್ರತಿ ಸಾಲಿನಲ್ಲಿ 80 ಅಕ್ಷರಗಳೂ ಇವೆ. ಇನ್ನು ಹಲವು ವಿಶೇಷ ಹಸ್ತಪ್ರತಿಗಳನ್ನು ಪ್ರತಿಷ್ಠಾನ ತನ್ನಲ್ಲಿ ಸಂಗ್ರಹಿಸಿದೆ. ಅವುಗಳಲ್ಲಿ "ಕುಮಾರವ್ಯಾಸ ಭಾರತ ಸಂಗ್ರಹದ ಕಾಗದದ ಹಸ್ತಪ್ರತಿ" (ಕಾ–67) ಇದರಲ್ಲಿ ಆಚಾರ್ಯ ಬಿ.ಎಂ.ಶ್ರಿ, ಟಿ.ಎಸ್.ವೆಂಕಣ್ಣಯ್ಯ, ಎ.ಆರ್.ಕೃಷ್ಣಶಾಸ್ತ್ರಿ, ಡಿ.ಎಲ್.ನರಸಿಂಹಾಚಾರ್ ಮುಂತಾದವರು ಪರಿಶೀಲಿಸಿರುವ ಪಾಠಾಂತರ ಸೂಚನೆಗಳಿವೆ. "ಮೈಸೂರು ಶೈಲಿಯ ವರ್ಣಚಿತ್ರಗಳಿರುವ ಹಸ್ತಪ್ರತಿ "ಸ್ತೋತ್ರರತ್ನಾಕರ ಅಥವಾ ದೇವತಾನಾಮ ಕುಸುಮಾಂಜರಿ (ಕಾ–138) ಇದರಲ್ಲಿ 98 ಪುಟಗಳಿದ್ದು 200ಕ್ಕೂ ಹೆಚ್ಚು ವರ್ಣಚಿತ್ರಗಳಿವೆ. ತಿಮ್ಮಪ್ಪದಾಸರ ಸ್ವಹಸ್ತಾಕ್ಷರವಿರುವ 20 ಹಸ್ತಪ್ರತಿಗಳು ಪ್ರತಿಷ್ಠಾನ ಹಸ್ತಪ್ರತಿ ಭಂಡಾರದ ಆಸ್ತಿಯಾಗಿವೆ. ಇವುಗಳಲ್ಲಿ ಇನ್ನೂ ಸುಮಾರು 500ಕೀರ್ತನೆಗಳು ಮತ್ತು ಅವರ ಎಲ್ಲ ಕೃತಿಗಳೂ ಅಪ್ರಕಟಿತವಾಗಿವೆ. ಕೀರ್ತನೆಗಳನ್ನು ಪೂರ್ತಿ ಪ್ರತಿಮಾಡಲಾಗಿದ್ದು ಪ್ರಕಟಣೆಗೆ ಹಸ್ತಪ್ರತಿಯನ್ನು ಸಿದ್ಧಪಡಿಸಿದೆಯಲ್ಲದೆ ಪ್ರಕಟಣೆ ಆಗಿದೆ. "ಶ್ರೀ ಕೃಷ್ಣದೇವರಾಯ ದಿನಚರಿ" ಓಲೆಗರಿಯಲ್ಲಿರುವ ಕೈಫಿಯತ್ತಿನ ರೂಪದ ಹಸ್ತಪ್ರತಿಯಾಗಿದ್ದು ವಿಶೇಷವಾಗಿದೆ. ಈಗಾಗಲೇ ಈ ಕೃತಿ ವಿದ್ವಾಂಸರ ಅಭಿಪ್ರಾಯದಲ್ಲಿ ವಿಜಯನಗರ ಕಾಲದ ಇತಿಹಾಸ ಪುನರಚನೆಗೆ ಒಂದು ಮುಖ್ಯ ಆಕರವಾಗಿ ಪರಿಣಮಿಸಿದೆ. ದಂತದ ಕೆತ್ತನೆಯಿರುವ, ವರ್ಣಚಿತ್ರಗಳಿರುವ ಪಟ್ಟಿಕೆಗಳು; ವೈವಿಧ್ಯಮಯ ಕಂಠಗಳು; ಗ್ರಂಥ, ಅರವ, ತಿಗಳಾರಿ, ಮೋಡಿ, ನಾಗರಿ, ತಮಿಳು, ತೆಲುಗು ಲಿಪಿಯಲ್ಲಿರುವ ಹಸ್ತಪ್ರತಿಗಳು; ಕಡತ, ಸನ್ನದು, ನಿರೂಪಗಳು ಹೀಗೆ ವೈವಿಧ್ಯಮಯವಾದ ಹಸ್ತಪ್ರತಿಗಳನ್ನು ಸಂಗ್ರಹಿಸಿ ವೈಜ್ಞಾನಿಕವಾಗಿ ಸಂರಕ್ಷಿಸಿಕೊಂಡು ಬರುತ್ತಿರುವುದು ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಬಹು ಮುಖ್ಯವಾದ ಕಾರ್ಯವಾಗಿದೆ.

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸಂಯುಕ್ತಾಶ್ರಮದಲ್ಲಿ 30/1/1981ರಿಂದ ಮೂರು ದಿನ ಬೆಂಗಳೂರಿನ ಗೋಖಲೆ ಸಾರ್ವಜನಿಕ ಸಂಸ್ಥೆಯ ಸಭಾಂಗಣದಲ್ಲಿ ಹಸ್ತಪ್ರತಿಶಾಸ್ತ್ರ ವಿಚಾರಗೋಷ್ಠಿ ನಡೆಯಿತು. ಆಗ ಪ್ರತಿಷ್ಠಾನದ ಅಧ್ಯಕ್ಷರಾಗಿದ್ದ ನ್ಯಾಯಮೂರ್ತಿ ನಿಟ್ಟೂರು ಶ್ರೀನಿವಾಸರಾವ್ ಅವರು ವಿಚಾರಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು. ಅಂದಿನ ಸಭೆಗೆ ಆಗಮಿಸಿದ್ದ ವಿದ್ವಾಂಸರು ಬಹಿರಂಗ ಅಧಿವೇಶನದಲ್ಲಿ ಈ ಕೆಳಗಿನ ನಿರ್ಣಯಗಳನ್ನು ಕೈಗೊಂಡರು. ಅಂದು ಮಂಡಿತವಾದ ನಿರ್ಣಯಗಳು ಈ ಕೆಳಗಿನಂತಿವೆ.

1. ಕರ್ನಾಟಕದಲ್ಲಿ ಪ್ರಾಚೀನ ಹಸ್ತಪ್ರತಿಗಳು ಸಾವಿರಗಟ್ಟಲೆ ದೊರೆಯುತ್ತಿದ್ದರೂ ಸರಿಯಾದ ಹಾರೈಕೆಯಲ್ಲಿದೆ. ಹೊಗೆ, ಹುಳು, ಗೆದ್ದಲು ಮತ್ತು ಮೂಢ ನಂಬಿಕೆಗಳಿಗೆ ಒಳಗಾಗಿ ನಶಿಸಿಹೋಗುತ್ತಿವೆ. ಕರ್ನಾಟಕ ರಾಜ್ಯ ಸರ್ಕಾರವು ಬಿ.ಎಂ.ಶ್ರೀ ಜನ್ಮಶತಮನೋತ್ಸವ ವರ್ಷವಾದ 1984ನೇ ವರ್ಷವನ್ನು 'ಹಸ್ತಪ್ರತಿವರ್ಷ' ಎಂದು ಘೋಷಿಸಿ, ವ್ಯಾಪಕವಾಗಿ ತಾನೂ ಬೇರೆ ಬೇರೆ ಸಂಘ ಸಂಸ್ಥೆಗಳ ಮೂಲಕ ಹಸ್ತಪ್ರತಿಗಳ ಬಗ್ಗೆ ಜನರಿಗೆ ಅರಿವು ಮೂಡಿಸಬೇಕಾಗಿ ಈ ಸಭೆ ರಾಜ್ಯ ಸರ್ಕಾರವನ್ನು ಪ್ರಾರ್ಥಿಸುತ್ತದೆ ಎಂದು ತಿಳಿಸಿದರು.

2. ಈ ಕಾರ್ಯಕ್ರಮದ ಅಂಗವಾಗಿ ಕರ್ನಾಟಕದ ರಾಜಧಾನಿಯಾಗಿ ಬೆಂಗಳೂರಿನಲ್ಲಿ ರಾಜ್ಯ ಸರ್ಕಾರವು ಅಗತ್ಯ ಆಧುನಿಕ ಸಲಕರಣೆಗಳೊಡನೆ ಸುಸಜ್ಜಿತವಾದ ಕೇಂದ್ರ ಹಸ್ತಪ್ರತಿ ಭಂಡಾರವನ್ನು ಸ್ಥಾಪಿಸಬೇಕೆಂದು ಈ ಸಭೆ ಸರ್ಕಾರವನ್ನು ಒತ್ತಾಯ ಪೂರ್ವಕವಾಗಿ ಪ್ರಾರ್ಥಿಸುವುದರ ಮೂಲಕ ನಾಡಿನಲ್ಲಿ ಉಪಲಬ್ಧವಾಗಿರುವ ಎಲ್ಲ ಬಗೆಯ ಪ್ರಾಚೀನ ಹಸ್ತಪ್ರತಿಗಳನ್ನು ಅಥವಾ ಅವುಗಳ ಮೈಕ್ರೋಫಿಲಂ ಇಲ್ಲವೆ ಕೈಬರಹ ನಕಲುಗಳನ್ನು ಸಂಗ್ರಹಿಸಿ ಸಂರಕ್ಷಿಸುವ ಕಾರ್ಯವನ್ನು ಕೈಗೊಳ್ಳತಕ್ಕದ್ದು; ಮತ್ತು ಕರ್ನಾಟಕದ ಅಥವಾ ಭಾರತದ ಹೊರಗೆ ಉಳಿದುಕೊಂಡಿರುವ ಹಸ್ತಪ್ರತಿಗಳನ್ನು ತರಿಸಲು ದೃಢ ಹೆಜ್ಜೆ ಇಡಬೇಕು.

3. ಹಾಗೆ ಸ್ಥಾಪಿಸಿದ ಕೇಂದ್ರ ಹಸ್ತಪ್ರತಿ ಭಂಡಾರಕ್ಕೆ ಮುದ್ರಿತ ಪುಸ್ತಕಗಳ ಗ್ರಂಥಾಲಯಕ್ಕೆ ಇರುವ ಸ್ಥಾನಮಾನಗಳು ಇರಬೇಕು ಎಂದು ಒತ್ತಾಯಿಸಿದರು.

4. ರಾಜ್ಯದ ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಮತ್ತು ಅಧಿಕೃತ ಸಂಸ್ಥೆಗಳಲ್ಲಿ ಇರುವ ಹಸ್ತಪ್ರತಿ ಭಂಡಾರಗಳಿಗೆ ಆಯಾ ವಿಶ್ವವಿದ್ಯಾನಿಲಯಗಳೂ ರಾಜ್ಯ ಸರ್ಕಾರವೂ ಮುಕ್ತವಾಗಿ ಧನ ಸಹಾಯನೀಡಿ ಭಂಡಾರಗಳ ಎಲ್ಲ ಬಗೆಯ ನೌಕರರ ಸೌಕರ್ಯಗಳನ್ನು ಸೇವಾ ನಿಯಮಗಳನ್ನು ಉತ್ತಮ ಪಡಿಸಬೇಕು.

5. ವಿಶ್ವವಿದ್ಯಾಲಯಗಳ ಹಸ್ತಪ್ರತಿ ವಿಭಾಗಗಳ ಸಂಶೋಧಕರಿಗೆ ಲೆಕ್ಚರರ್, ರೀಡರ್, ಪ್ರೊಫೆಸರ್‌ರವರ ಸ್ಥಾನಮಾನಗಳನ್ನು, ವೇತನ ಶ್ರೇಣಿಯನ್ನು ಉತ್ತಮ ಪಡಿಸಬೇಕು.

6. ಕರ್ನಾಟಕ ಸಾಹಿತ್ಯ ಅಕಾಡಮಿಯಿಂದ ಪ್ರತಿವರ್ಷ ಪ್ರಕಟವಾದ ಗ್ರಂಥಗಳಲ್ಲಿ ಉತ್ತಮವಾಗಿ ಸಂಪಾದಿತವಾದ ಪ್ರಾಚೀನ ಕೃತಿಗಳಲ್ಲಿ ಬಹುಮಾನ ನೀಡುತ್ತಿರುವುದು ಸ್ತುತ್ಯಾರ್ಹವಾದ ಕಾರ್ಯ ಮತ್ತು ಅದು ಗ್ರಂಥಸಂಪಾದನೆಗೆ ಮತ್ತು ಪ್ರಕಾಶನಕ್ಕೆ ಮುದ್ರಣದ ಕಾಗದ ಮುಂತಾದ ಸಹಾಯಗಳನ್ನು ನೀಡಬೇಕೆಂದು ಈ ಸಭೆ ಪ್ರಾರ್ಥಿಸುತ್ತದೆ.

7. ಈಗ ಕರ್ನಾಟಕದಲ್ಲಿ ಪ್ರಕಟವಾಗುತ್ತಿರುವ ವಿದ್ವತ್ ಪತ್ರಿಕೆಗಳು ಸಕಾಲದಲ್ಲಿ ಹೊರಬರುವುದು ಅಗತ್ಯವಾಗಿದೆಯಲ್ಲದೆ ಅವುಗಳಲ್ಲಿ ಅಪ್ರಕಟಿತ ಪ್ರಾಚೀನ ಕೃತಿಗಳ ಪ್ರಕಾಶನಕ್ಕೆ ಇನ್ನೂ ಹೆಚ್ಚಿನ ಜಾಗವನ್ನು ಮೀಸಲಿಡಬೇಕು.

8. ಗ್ರಂಥಸಂಪಾದನೆಗೆ ಪ್ರತ್ಯೇಕವಾದ ಒಂದು ಪತ್ರಿಕೆಯ ಅಗತ್ಯವಿದೆ. ಇದನ್ನು ಪ್ರಕಟಿಸುವ ಕಾರ್ಯವನ್ನು ಬಿ.ಎಂ.ಶ್ರೀ ಪ್ರತಿಷ್ಠಾನ ಅನುಕೂಲವಾದ ಕೂಡಲೆ ಕೈಗೊಳ್ಳಬೇಕು.

9. ವಿಶ್ವವಿದ್ಯಾಲಯಗಳ ಎಂ.ಎ. ಪಠ್ಯಕ್ರಮದಲ್ಲಿ ಗ್ರಂಥಸಂಪಾದನೆಗೆ ಒಂದು ಸ್ಥಾನವಿದೆಯಾದರೂ ಅದರ ಜೊತೆಗೆ ಹಸ್ತಪ್ರತಿಗಳನ್ನು ಓದುವ ವಿಷಯಗಳನ್ನು ಸೇರಿಸಿ ವಿದ್ಯಾರ್ಥಿಗಳಲ್ಲಿ ಹಸ್ತಪ್ರತಿ–ಗ್ರಂಥಗಳನ್ನು ಸಂಪಾದಿಸುವತ್ತ ಒಲವು ಮೂಡಿಸಬೇಕು.

10. ವಿಶ್ವವಿದ್ಯಾಲಯಗಳು 'ಹಸ್ತಪ್ರತಿಶಾಸ್ತ್ರ' ಮತ್ತು 'ಗ್ರಂಥ ಸಂಪಾದನೆ" ಸಂಬಂಧಿಸಿದ ಡಿಪ್ಲೊಮೊ ತರಗತಿಗಳನ್ನು ಆರಂಭಿಸಿಬೇಕೆಂದು ಈ ಸಭೆ ಪ್ರಾರ್ಥಿಸುತ್ತದೆ.

11. ಶ್ರೇಷ್ಠ ಮಟ್ಟದ ಸಂಶೋಧನಾತ್ಮಕ ಪೀಠಿಕೆ ಮತ್ತು ಟಿಪ್ಪಣಿಗಳೊಡನೆ ಶಾಸ್ತ್ರೀಯವಾಗಿ ಗ್ರಂಥಗಳನ್ನು ಸಂಪಾದನೆ ಮಾಡಿದ ವಿದ್ವಾಂಸರಿಗೆ ಪಿ.ಎಚ್‌ಡಿ ಅಥವಾ ಡಿಲಿಡ್ ಪದವಿಯನ್ನು ವಿಶ್ವವಿದ್ಯಾನಿಲಯಗಳು ಕೊಡಬಹುದೆಂದು ಈ ಸಭೆ ಅಭಿಪ್ರಾಯ ಪಡುತ್ತದೆ.

12. ಪ್ರಕಟಿತ ಪ್ರಾಚೀನ ಕೃತಿಗಳ ಪುನಃಪರಿಷ್ಕೃತ ಪುನರ್‌ಮುದ್ರಣ ಅಗತ್ಯವಾಗಿ ಆಗಬೇಕಾದ ಕೆಲಸ; ಆದರೂ ಅದಕ್ಕಿಂತ ಮಿಗಿಲಾಗಿ ಎಲ್ಲ ಅಪ್ರಕಟಿತ ಹಸ್ತಪ್ರತಿಗಳ ಪ್ರಕಾಶನಕ್ಕೆ ಸಾಧ್ಯವಾದ ಎಲ್ಲ ಆದ್ಯತೆಯನ್ನು ಸಂಬಂಧ ಪಟ್ಟ ಸಂಸ್ಥೆಗಳು ಕೊಡಬೇಕೆಂದು ಈ ಸಭೆ ಅಭಿಪ್ರಾಯಪಡುತ್ತದೆ.

13. ಹಸ್ತಪ್ರತಿಗಳನ್ನು ಉಳ್ಳವರು ಅವು ತಮ್ಮ ಮನೆತನದ ಆಸ್ತಿ ಎಂಬ ಹಳೆಯ ಕಾಲದ ಭಾವನೆಯನ್ನು ತೊರೆದು, ಅವು ನಾಡಿನ ಆಸ್ತಿ ಎಂದು ಭಾವಿಸಿ, ಅವನ್ನು ವಿಶ್ವವಿದ್ಯಾಲಯುಗಳಿಗಾಗಲಿ, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದಂತಹ ಹಸ್ತಪ್ರತಿ ಸಂಗ್ರಹಕಾರ್ಯದಲ್ಲಿ ನಿರತರಾದ ಸಂಸ್ಥೆಗಳಿಗಾಗಲೀ ದಾನವಾಗಿಕೊಡಲು ಮುಂದೆ ಬರುವಂತೆ ಅಂಥವರನ್ನು ಎಲ್ಲರೂ ಪ್ರೋತ್ಸಾಹಿಸಬೇಕು.

14. ಹಸ್ತಪ್ರತಿಗಳ ಸಮಗ್ರ ಸೂಚೀ ನಿರ್ಮಾಣಕ್ಕೆ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಒಂದು ಯೋಜನೆಯನ್ನು ಸಿದ್ಧಪಡಿಸಿ ಆ ದಿಶೆಯಲ್ಲಿ ಪ್ರಯತ್ನ ಮಾಡಬೇಕು; ಮತ್ತು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಆ ಸಂಸ್ಥೆಗೆ ಅಗತ್ಯವಾದ ಧನ ಸಹಾಯವನ್ನು ಇತರ ಬಗೆಯ ಸಹಾಯಗಳನ್ನು ನೀಡಬೇಕು.

15. ಜನವರಿ 30,31 ಫೆಬ್ರವರಿ 1 ಈ ಮೂರು ದಿನ ಹಸ್ತಪ್ರತಿಶಾಸ್ತ್ರದ ಬಗ್ಗೆ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನವು ನಡೆಸಿದ ವಿಚಾರ ಗೋಷ್ಠಿಯ ಬಗೆಗೆ ಈಸಭೆ ತನ್ನ ಅತೀವ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತದೆ; ಮತ್ತು ಪ್ರತಿಷ್ಠಾನದ ಸಂಸ್ಥಾಪಕ ಕಾರ್ಯದರ್ಶಿ ಪೊ.ಎಂ.ವಿ.ಸೀತಾರಾಮಯ್ಯ ಅವರಿಗೆ ತನ್ನ ಅಭಿನಂದನೆಗಳನ್ನು ಸಲ್ಲಿಸುತ್ತದೆ.

16. ಬೆಂಗಳೂರಿನ ಮಿಥಿಕ್ ಸೊಸೈಟಿ, ಕರ್ನಾಟಕ ವಿಶ್ವವಿದ್ಯಾಲಯಗಳು, ರಾಜ್ಯ ಸರ್ಕಾರ ಮತ್ತು ಸಾಹಿತ್ಯ ಅಕಾಡೆಮಿಗಳನ್ನು ಬಿ.ಎಂ.ಶ್ರೀ ಪ್ರತಿಷ್ಠಾನವು ಪ್ರಾರ್ಥಿಸಿಕೊಂಡು ಅಗತ್ಯವಾದ ಧನ ಸಹಾಯ ಪಡೆದು, ಎರಡು ವಾರಗಳ ಕಾಲ ಹಸ್ತಪ್ರತಿ ಶಾಸ್ತ್ರದಲ್ಲಿ ಆಸಕ್ತನಾದ ಹತ್ತು ಅಥವಾ ಹದಿನೈದು ಜನ ಯುವಕರಿಗೆ ಒಂದು ಶಿಕ್ಷಣ ಶಿಬಿರವನ್ನು ಏರ್ಪಡಿಸಿ, ಹಸ್ತಪ್ರತಿಗಳನ್ನು ಓದುವ ವಿದ್ಯೆಯನ್ನು ಹೇಳಿಕೊಡುವಂತಹ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಈ ಸಭೆ ತೀರ್ಮಾನಿಸುತ್ತದೆ.

17. ಹಸ್ತಪ್ರತಿಶಾಸ್ತ್ರ ಹಾಗೂ ಗ್ರಂಥಸಂಪಾದನೆಗೆ ಸಂಬಂಧಿಸಿದ ಎಲ್ಲ ಚಟುವಟಿಕೆಗಳಿಗೂ ಪ್ರತಿಷ್ಠಾನದ ಜೊತೆ ಹಾರ್ದಿಕವಾಗಿ ಸಹಕರಿಸಲು ಇಲ್ಲಿ ಸೇರಿರುವ ವಿದ್ವಾಂಸರು ಎಂಬ ಆಶ್ವಾಸನೆಯನ್ನು ನೀಡಲು ಈ ಸಭೆ ಸಂತೋಷಿಸುತ್ತದೆ".[1]

ಹೀಗೆ 1981ರಲ್ಲಿ ನಡೆದ ಸಭೆಯಲ್ಲಿ ತೆಗೆದುಕೊಂಡ ಎಲ್ಲಾ ನಿರ್ಧಾರಗಳು ಹಸ್ತಪ್ರತಿಗಳ ಸಂಗ್ರಹಕ್ಕೆ ಹಾಗೂ ಅವುಗಳು ನಾಶವಾಗುತ್ತಿರುವುದನ್ನು ತಡೆಗಟ್ಟುವುದಕ್ಕೆ ಬಹಳ ಉಪಯುಕ್ತ ಮಾದರಿಗಳಾಗಿವೆ. ಅಲ್ಲದೆ ಅಂದು ತೆಗೆದುಕೊಂಡ ಹಲವು ನಿರ್ಧಾರಗಳು ಇಂದು ಹಲವು ಸಾಕಾರಗೊಂಡಿವೆ. ಅಂದು ಹಿರಿಯರು ತೆಗೆದುಕೊಂಡು ಹಲವಾರು ವಿಚಾರಗಳಿಂದ ಇಂದು ಹಸ್ತಪ್ರತಿಗಳ ಸಂರಕ್ಷಣೆಗೆ ಮಹತ್ವದ ಪ್ರೇರಣೆಯಾಗಿವೆ. ಆದ್ದರಿಂದ ಈ ಮೇಲಿನ ವಿಚಾರಗಳು ಪ್ರಾಚೀನ ಹಸ್ತಪ್ರತಿಗಳಿಗೆ ಮತ್ತೆ ಮರುಹುಟ್ಟನ್ನು

ಕೊಡಲು ಬಹಳಷ್ಟು ಅನುಕೂಲವಾಗಿವೆ. ಜೊತೆಗೆ ಸರ್ಕಾರದ ನೆರವು ಸಹ ಸಿಕ್ಕಿರುವುದರಿಂದ ಇಂದು ಹಸ್ತಪ್ರತಿಯ ಸೇವಾಕಾರ್ಯ ನಾಡಿನಾದ್ಯಂತ ವಿಶೇಷವಾದ ರೀತಿಯಲ್ಲಿ ನಡೆಯುತ್ತಿರುವುದು ಕೂಡ ಮೆಚ್ಚುಗೆಯ ವಿಚಾರವಾಗಿದೆ. ಮೇಲಿನ ಎಲ್ಲಾ ನಿರ್ಧಾರಗಳು ಬಿ.ಎಂ.ಶ್ರೀ ಪ್ರತಿಷ್ಠಾನಕ್ಕೂ ಹೆಚ್ಚಿನ ಜವಾಬ್ದಾರಿಯನ್ನು ತಂದುಕೊಟ್ಟಿವೆ ಎಂದರೆ ತಪ್ಪಾಗಲಾರದು. ಅದನ್ನು ಪ್ರತಿಷ್ಠಾನ ಚಾಚು ತಪ್ಪದೇ ಮಾಡಿಕೊಂಡು ಬರುತ್ತಿದೆ.

ಇ) ಸೂಚಿ ಮಾಡಿರುವ, ಮಾಡಬೇಕಿರುವ ಹಸ್ತಪ್ರತಿಗಳು :-

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಈವರೆಗೆ ಸಿದ್ಧಪಡಿಸಿರುವ ಸೂಚಿಗಳು ಐದಾದರೂ ಪ್ರಕಟಿಸಿರುವುದು ಮೂರು ಮಾತ್ರ. ಈ ಕಾರ್ಯವನ್ನು ಕೆಳದಿ ಗುಂಡಾಜೋಯಿಸ್ ಮತ್ತು ಪ್ರೊ.ನಾ.ಗೀತಾಚಾರ್ಯ ಸಂಪಾದಕತ್ವದಲ್ಲಿ ನಡೆದ ಕಾರ್ಯವಾಗಿದೆ. ಪ್ರತಿಷ್ಠಾನ ನಿಷ್ಠೆಯಿಂದ ಸಾಧಿಸಿರುವ ಪಾಂಡಿತ್ಯದ ಕೆಲಸಗಳು ಹಲವು ಅವುಗಳಲ್ಲಿ ಪ್ರಮುಖವಾದದ್ದು ಮೌಲಿಕವಾದ ಪ್ರಕಟನೆಗಳು. ಈವರೆಗೆ ಪ್ರತಿಷ್ಠಾನ ಎಪ್ಪತ್ತಕ್ಕು ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದೆ. ಪ್ರಾಚೀನ ಹಸ್ತಪ್ರತಿಗಳ ಸಂಗ್ರಹಣೆ-ಸಂರಕ್ಷಣೆ ಪ್ರತಿಷ್ಠಾನದ ಬಹುಮುಖ್ಯವಾದ ಕಾರ್ಯ ನಿರಂತರವಾಗಿ ಈ ಕಾರ್ಯವನ್ನು ಪ್ರತಿಷ್ಠಾನ ನಡೆಸಿಕೊಂಡು ಬರುತ್ತಿದೆ.

ಸೂಚಿ ಎಂಬ ಪದ ಪ್ರಾರಂಭವಾದ ಹಿನ್ನೆಲೆ ಎಂದರೆ "ಎಚ್.ಎಚ್.ವಿಲ್ಸನ್ ಎಂಬ ಪಾಶ್ಚಾತ್ಯ ವಿದ್ವಾಂಸರಿಂದ ಸಂಪಾದಿತವಾದ "Mackengie collection: a Descriptive catalogne of the oriental Manuscrifts vol-1" ಎಂಬುದು 1828ರಲ್ಲಿ ಪ್ರಕಟ ವಾಗಿದೆ".[2] ಈ ಸೂಚಿಗಳಾದ ಯಾವುದೇ ಒಂದು ಕೃತಿಯ ಹಸ್ತಪ್ರತಿ ಎಲ್ಲೆಲ್ಲಿ ದೊರೆಯುತ್ತೆಂಬುದನ್ನು ತಿಳಿಯಬಹುದು.

ಸೂಚಿಯಲ್ಲಿ ಬಹಳ ಮುಖ್ಯವಾಗಿ ಎರಡು ರೀತಿಯಲ್ಲಿ ವಿಂಗಡಿಸುತ್ತಾರೆ. ಮೊದನೆಯದು ಸಾಮಾನ್ಯ ಸೂಚಿ, ಎರಡನೆಯದು ವರ್ಣನಾತ್ಮಕ ಸೂಚಿ ಎಂದು ಕರೆಯಲಾಗಿದೆ. ಸಾಮಾನ್ಯಸೂಚಿಯಲ್ಲಿ ಕೇವಲ ಕೃತಿ, ಕೃತಿಕಾರ, ಪತ್ರ್ಯ, ವಿಷಯಗಳನ್ನು ಮಾತ್ರ ಒಳಗೊಂಡಿರುತ್ತವೆ ಆದರೆ ವರ್ಣನಾತ್ಮಕ ಸೂಚಿಯಲ್ಲಿ ಒಂದು ಸಂಸ್ಥೆಯಲ್ಲಿ ಇರುವ ಎಲ್ಲ ಕೃತಿಗಳ ಒಟ್ಟು ವಿವರಗಳು ಅಂದರೆ 15ಕ್ಕೂ ಹೆಚ್ಚು ಮಾಹಿತಿಗಳನ್ನು ಈ ಸೂಚಿ ಕೊಡುತ್ತದೆ. ಇಂತಹ ವಿವರಪೂರ್ಣ ಸೂಚಿಗೆ ವರ್ಣನಾತ್ಮಕ ಸೂಚಿ ಎಂದು ಕರೆಯಲಾಗುತ್ತದೆ. ಇಂತಹ ವರ್ಣನಾತ್ಮಕ ಸೂಚಿಗಳನ್ನು ಇಲ್ಲಿಯವರೆಗೆ ಮೂರನ್ನು ಪ್ರತಿಷ್ಠಾನ ಪ್ರಕಟಿಸಿದೆ. ಇನ್ನು ಎರಡು ಪ್ರಕಟವಾಗಬೇಕಾಗಿದೆ. ಪ್ರಕಟವಾಗಿರುವ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ ಭಾಗ-1ರಲ್ಲಿ (1987) 79 ಓಲೆಗರಿ ಹಸ್ತಪ್ರತಿ ಕಟ್ಟುಗಳಲ್ಲಿರುವ 96 ಕೃತಿಗಳ ಎಲ್ಲಾ ವಿವರಗಳು ಅಡಕವಾಗಿದೆ.

ಪ್ರತಿಷ್ಠಾನದ ಹಸ್ತಪ್ರತಿ ಸಂಗ್ರಹದ ಸುಮಾರು ಒಂದು ನೂರು ಕೃತಿಗಳು ವಿವರಗಳನ್ನು ಈ ಪ್ರಥಮ ಸೂಚಿಯಲ್ಲಿ ಅಳವಡಿಸಲಾಗಿದೆ. ಇದರ ಸ್ವರೂಪ ಬಹಳ ವಿಶೇಷವಾಗಿದೆ. ಭಾಗ–2ರಲ್ಲಿ 80 ಕಾಗದ ಹಸ್ತಪ್ರತಿಗಳಿದ್ದು 104 ಕೃತಿಗಳು ದಾಖಲಾಗಿದೆ. ಈ ಸೂಚಿಯ ಸಂಪಾದಕರು ಪ್ರೊ.ನಾ.ಗೀತಾಚಾರ್ಯರವರು. ಇವರ ಈ ವರ್ಣನಾತ್ಮಕ ಸೂಚಿಯಲ್ಲಿ ಸಂಪೂರ್ಣವಾದ ಎಲ್ಲ ಮಾಹಿತಿಗಳನ್ನು ಕಲೆಹಾಕಿರುವುದು ಬಹಳ ವಿಶೇಷವಾದ ಸಾಧನೆಯಾಗಿದೆ.

ಭಾಗ–3ರಲ್ಲಿ 90 ಹಸ್ತಪ್ರತಿ ಕಟ್ಟುಗಳಲ್ಲಿರುವ 150 ಕೃತಿಗಳ ಸೂಚಿ ಪ್ರಕಟಣೆಗೆ ಸಿದ್ಧವಾಗುತ್ತಿವೆ. ಇದನ್ನು ಪ್ರೊ.ನಾ.ಗೀತಾಚಾರ್ಯ, ಎನ್.ಎಸ್.ರಾಮಸ್ವಾಮಿ ಅಯ್ಯರ್, ಜಿ.ಶಂಭಣ್ಣ ಅವರ ಮಾರ್ಗದರ್ಶನದಲ್ಲಿ ಹಸ್ತಪ್ರತಿಗಳ ಸಿದ್ಧಪಡಿಸುತ್ತಿದ್ದಾರೆ. ಇವುಗಳೇ ಅಲ್ಲದೆ ಅಲಿಗೆ ಮೇಲಿನ ಮನೆಯ ಹಸ್ತಪ್ರತಿಗಳು ಮತ್ತು ಅಲಿಗೆ ಕೆಳಗಣ ಮನೆಯ ಹಸ್ತಪ್ರತಿಗಳನ್ನು ಎ.ಆರ್.ಗುರುರವರು ಸಿದ್ಧಪಡಿಸಿದ ನಂತರ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಪ್ರಕಟಿಸಿದೆ.

ಇಷ್ಟೇ ಅಲ್ಲದೆ 1998ರ ದಶವಾರ್ಷಿಕ ವಿಶೇಷಾಂಕವಾಗಿ ಪ್ರಕಟಿಸಿ ಅದರಲ್ಲಿ ಸಂಕಲಿಸಲಾಗಿದ್ದ 1983ರಿಂದ 1998ರ ವರೆಗಿನ ಹದಿನಯದು ವರ್ಷಗಳ ಲೇಖನ ಸೂಚಿಯನ್ನು ಪ್ರಸ್ತುತ ಗ್ರಂಥದಲ್ಲಿ ವಿದ್ವಾಂಸರಿಗೆ ಸುಲಭವಾಗಿ ದೊರೆಯಲಿ ಎಂಬ ಆಶಯದಿಂದ ಪ್ರತ್ಯೇಕವಾಗಿ ಪ್ರಕಟಿಸಲಾಗಿದೆ. ವಾಸ್ತವವಾಗಿ ಲೋಚನಕ್ಕೆ ಹದಿನೈದು ವರ್ಷಗಳಾಗಿದ್ದರು 1998ನ್ನು ದಶವಾರ್ಷಿಕ ವಿಶೇಷಾಂಕವೆಂದು ಕರೆದ ಕಾರಣ 1987ರಿಂದ “ಕರ್ನಾಟಕ ಲೋಚನ” ಎಂಬ ಹೆಸರಿನಲ್ಲಿ ನೂತನ ಸಂಚಿಕೆಯ ಎಣಿಕೆಯುಲ್ಲಿ ಅದು ಪ್ರಕಟವಾಗಿರುವುದರಿಂದ 1998ಕ್ಕೆ ಹತ್ತುವರ್ಷಗಳ ಎಣಿಕೆಯಿರುವುದರಿಂದ; ಮತ್ತು ಈ ಎಣಿಕೆಯೇ ಅಧಿಕೃತ ಮಾಹಿತಿಯನ್ನು ಒದಗಿಸುವ ಸೂಚಿಯಾಗಿದೆ. ಹೀಗೆ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಒಟ್ಟು ಮೂರು ಸೂಚಿಗಳನ್ನು ಪ್ರಕಟಿಸಿದೆ. ಇನ್ನೂ ಎರಡು ಸೂಚಿಗಳನ್ನು ಮಾಡಬೇಕಾಗಿದೆ. ಒಟ್ಟಾರೆ ಹಸ್ತಪ್ರತಿ ಭಂಡಾರದ ಎಲ್ಲ ಪ್ರತಿಗಳ ಕೈಪಿಡಿಯಂತಿರುವ ಸೂಚಿಗಳು ಓದುಗರಿಗೆ ಬಹಳ ಮುಖ್ಯವಾದ ಮಾಹಿತಿಯನ್ನು ಕೊಡುತ್ತವೆ. ಇನ್ನೂ ಹಲವು ಪ್ರತಿಗಳ ಸೂಚಿ ಮಾಡಬೇಕಾಗಿದೆ. ಅ ಕಾರ್ಯದ ವಿಚಾರವಾಗಿ ಹಲವು ರೀತಿಯ ಚರ್ಚೆಗಳು ರೂಪುಗೊಳ್ಳುತ್ತಿರುವುದು ವಿಶೇಷವಾಗಿದೆ.

ಈ) ಹಸ್ತಪ್ರತಿ ತರಗತಿಗಳು :–

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಇಡೀ ಕರ್ನಾಟಕದಲ್ಲಿ ಮೊದಲನೇ ಪ್ರಯತ್ನ

ಪೂರ್ವಕ ದಾಖಲೆಯ ಕಾರ್ಯವೆಂದರೆ ತಪ್ಪಾಗಲಾರದು. ಕರ್ನಾಟಕದ ಏಕೈಕ ಪ್ರಯತ್ನವಾಗಿ ನಡೆಯುತ್ತಿರುವ ಈ ತರಗತಿಯನ್ನು 1990ರಿಂದ ಪ್ರತಿಷ್ಠಾನದಲ್ಲಿ ನಡೆಸಲಾಗುತ್ತಿದೆ. 1991ರಲ್ಲಿ ನಡೆಸಿದ ರಾಷ್ಟ್ರಮಟ್ಟದ "ಹಸ್ತಪ್ರತಿಶಾಸ್ತ್ರ" ವಿಚಾರಗೋಷ್ಠಿಯ ನಿರ್ಣಯದ ಭಾಗವಾಗಿ ನಡೆಯುತ್ತಿರುವ ಈ ತರಗತಿಯಲ್ಲಿ ಪ್ರತಿವರ್ಷ ಗರಿಷ್ಠ 10ಜನ ವಿದ್ಯಾರ್ಥಿಗಳಿಗೆ ಓಲೆಗರಿ, ಕಾಗದ ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ, ಸಂಪ್ರತಿ, ದಾಖಲೀಕರಣ ಮತ್ತು ಗ್ರಂಥ ಸಂಪಾದನಾ ಕೌಶಲದಲ್ಲಿ ಪರಿಣತಿಯನ್ನು ನೀಡಲಾಗುವುದು. ಅಳಿಸಿಹೋಗಿರುವ ಈ ಕಲೆಯನ್ನು ಉಳಿಸುವ ಮುಂದಿನ ಪೀಳಿಗೆಗೆ ಪರಿಚಯಿಸುವ ಉದ್ದೇಶದಿಂದ ಮತ್ತು ಸಂಗ್ರಹವಾಗಿರುವ ಕರ್ನಾಟಕ ಹಸ್ತಪ್ರತಿಗಳ ವೈಜ್ಞಾನಿಕ ಸಂರಕ್ಷಣೆಯ ವಿಧಿವಿಧಾನಗಳಿಂದ ಸಂರಕ್ಷಿಸುವುದಕ್ಕೆ ಅರ್ಹರನ್ನು ತಯಾರುಮಾಡುವ ಉದ್ದೇಶದಿಂದ ಈ ತರಗತಿಗಳನ್ನು ನಡೆಸಿಕೊಂಡು ಬರಲಾಗುತ್ತಿದೆ. ಆಸಕ್ತರನ್ನು ಆಕರ್ಷಿಸುವ ಉದ್ದೇಶದಿಮದ ಕನಿಷ್ಠ ಎಸ್.ಎಸ್.ಎಲ್.ಸಿ ಅರ್ಹತೆ ಹೊಂದಿರುವ ವಿದ್ಯಾರ್ಥಿಗಳಿಗೆ ಪ್ರತಿವರ್ಷ ಅಕ್ಟೋಬರ್‌ನಿಂದ ಜೂನ್‌ವರೆಗೆ 4 ತಿಂಗಳ ಡಿಪ್ಲೊಮೊ ಪ್ರಾರಂಭಿಸಿ ಅದರ ಮೂಲಕ ತರಬೇತಿ ನೀಡುವ ತರಗತಿಗಳನ್ನು ನಡೆಸುತ್ತಿರುವುದು ಬಹಳ ವಿಶೇಷವಾದ ಕೆಲಸವಾಗಿದೆ.

ಪ್ರತಿಷ್ಠಾನದ ಪ್ರಾರಂಭದ ದಿನಗಳಿಂದಲೂ ಪ್ರತಿವರ್ಷ "ಸರಸ್ವತಿ ಪೂಜಾ" ದಿನದಂದು 3–4 ದಿನಗಳವರೆಗೆ ಪ್ರತಿಷ್ಠಾನದಲ್ಲಿ ಹಸ್ತಪ್ರತಿದರ್ಶನವನ್ನು ತಪ್ಪದೇ ನಡೆಸಲಾಗುತ್ತಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಸಾಹಿತ್ಯ ಸಮ್ಮೇಳನಗಳಲ್ಲೂ ಹಸ್ತಪ್ರತಿ ಪುಸ್ತಕ ಪ್ರದರ್ಶನ ಮಳಿಗೆ ತೆರೆಯುವುದರ ಮೂಲಕ ಪ್ರದರ್ಶನ ಮಳಿಗೆಯನ್ನು ಇಡಲಾಗುತ್ತಿದೆ. ಇದೀಗ ರಜತೋತ್ಸವ ವರ್ಷದಲ್ಲಿ "ಮನೆಬಾಗಿಲಿಗೆ ಹಸ್ತಪ್ರತಿ ದರ್ಶನ" ಎಂಬ ವಿಶೇಷ ಯೋಜನೆ ರೂಪಿಸಿ ಕರ್ನಾಟಕದಾದ್ಯಂತ ಕರೆದಲ್ಲಿಗೆ ಹೋಗಿ ಶಾಲೆ–ಕಾಲೇಜು–ಸಂಘ ಸಂಸ್ಥೆಗಳಲ್ಲಿ ಈ ಪ್ರದರ್ಶನಗಳನ್ನು ನಡೆಸಲಾಗುತ್ತಿದೆ. ಈ ಪ್ರದರ್ಶನಗಳು ಜನರಲ್ಲಿ ಅಚ್ಚರಿಯ ಜಾಗೃತಿ ಮೂಡಿಸುವಲ್ಲಿ ಸಫಲವಾಗಿದೆಯಲ್ಲದೆ ಅನೇಕ ಹಸ್ತಪ್ರತಿಗಳು ಹೊರಬರಲು ಪ್ರತಿಷ್ಠಾನ ಮತ್ತು ಇತರ ಭಂಡಾರಗಳನ್ನು ಸೇರಲು ಸಹಾಯಕವಾಗಿವೆ. ಈ ಮೂಲ ನಿರಂತರವಾಗಿ ಜಾಗೃತಿ ಕಾರ್ಯವನ್ನು ಪ್ರತಿಷ್ಠಾನ ಸಣ್ಣ ಪ್ರಮಾಣದಲ್ಲಾದರೂ ನಡೆಸುತ್ತಲೇ ಬಂದಿದೆ.

ಒಂದು ವಾರ ಅಥವಾ ಮೂರು ದಿನಗಳ ಹಸ್ತಪ್ರತಿ ಕಾರ್ಯಗಾರ ಹಾಗೂ ಶಿಬಿರಗಳನ್ನು 'ಸಿರಿಕಂಟ' ವೇದಿಕೆ ಇದರಿಂದಲೂ ಜಾಗೃತಿಕಾರ್ಯ ನಡೆಯುತ್ತಿದೆ. ನಾಡಿನ ಬೇರೆ ಬೇರೆ ಭಾಗದ ಆಸಕ್ತರೂ ಇದರ ಪ್ರಯೋಜನ ಪಡೆಯುತ್ತಿದ್ದಾರೆ. ಪ್ರತಿವರ್ಷ ಕರ್ನಾಟಕದ ಬೇರೆ ಬೇರೆ ಜಿಲ್ಲೆ ಅಥವಾ ಹಸ್ತಪ್ರತಿಗಳಿರುವ ಊರುಗಳಲ್ಲಿ ಹಸ್ತಪ್ರತಿಗಳ

ವಿಚಾರವಾಗಿಯೇ ಪ್ರತ್ಯೇಕ ಸಮ್ಮೇಳಗಳನ್ನು ನಡೆಸಲು ಸಿರಿಕಂಟ ಆಲೋಚಿಸುತ್ತಿದೆ. ಪ್ರತಿಷ್ಠಾನ ನಡೆಸುತ್ತಿರುವ ಹಸ್ತಪ್ರತಿಶಾಸ್ತ್ರ ತರಗತಿಯ ಹತ್ತು ವರ್ಷಗಳ ನೆನಪಿಗಾಗಿ ಹಸ್ತಪ್ರತಿ ವಿದ್ಯಾರ್ಥಿಗಳ ವೇದಿಕೆ "ಸಿರಿಕಂಠ" ವನ್ನು 2000ದಿಂದ ಆರಂಭಿಸಿದೆ. ಇದು ಮುಖ್ಯವಾಗಿ ಈ ಕೆಲವು ಚಟುವಟಿಕೆಗಳನ್ನು ನಡೆಸುತ್ತಿದೆ. ಇದರಲ್ಲಿ ಪ್ರಾಚೀನ ಹಸ್ತಪ್ರತಿಗಳ ಅಧ್ಯಯನದಲ್ಲಿ ನುರಿತ 50ಕ್ಕೂ ಹೆಚ್ಚಿನ ಆಸಕ್ತರು ತಜ್ಞರಿದ್ದಾರೆ.

(ಅ) ಹಳಗನ್ನಡ ಕಾವ್ಯಾಭ್ಯಾಸ ಶಿಬಿರ :- ಹಳಗನ್ನಡ ಕಾವ್ಯಗಳ ಓದು, ಅರ್ಥಗ್ರಹಿಕೆ ಬೋಧನೆ ಅಧ್ಯಯನಗಳ ಅನುಕೂಲಕ್ಕಾಗಿ ಪುನರ್ಮನನ ಮತ್ತು ಅಭ್ಯಾಸ ತರಗತಿಗಳಂತೆ ನಡೆಯುವ ಈ ಶಿಬಿರವು ಒಂದು ತಿಂಗಳ ಅವಧಿಯದಾಗಿರುತ್ತದೆ.

(ಆ) ಹಸ್ತಪ್ರತಿ ಸೇವಾ ಕೇಂದ್ರ :- ಅಪೇಕ್ಷಿಸಿದವರಿಗೆ ತಮ್ಮಲ್ಲಿರುವ ಪ್ರಾಚೀನ ಹಸ್ತಪ್ರತಿಗಳನ್ನು ವೈಜ್ಞಾನಿಕವಾಗಿ ಸಂರಕ್ಷಿಸಿ ಕೊಡುವುದಲ್ಲದೆ ಸೂಚಿ, ಸಂಪ್ರತಿ, ಸಂಪಾದನೆ ಇತ್ಯಾದಿ ಸೇವೆಯನ್ನು ನುರಿತ ತಜ್ಞರಿಂದ ಒದಗಿಸಲಾಗುತ್ತದೆ.

(ಇ) ಹಸ್ತಪ್ರತಿ ಕಾರ್ಯಗಾರ :- ಹಸ್ತಪ್ರತಿ ಸಂರಕ್ಷಣೆ ಮತ್ತು ತಿಳುವಳಿಕೆ ಕುರಿತ ಅಲ್ಪಾವಧಿಯ ಕಾರ್ಯಗಾರಗಳನ್ನು ಆಹ್ವಾನಿಕ ಸಂಸ್ಥೆಗಳ ನೆರವಿನೊಂದಿಗೆ ನಡೆಸುತ್ತಿದೆ.

(ಈ) ಮನೆಬಾಗಿಲಿಗೆ ಹಸ್ತಪ್ರತಿ ದರ್ಶನ :- (ಚಿತ್ರ ಮೂರು ನೋಡಿ) ಇದರ ವಿವರ ಮೇಲೆ ಕೊಟ್ಟಿದೆ".[3]

ಇಷ್ಟೇ ಅಲ್ಲದೆ ಹಸ್ತಪ್ರತಿಶಾಸ್ತ್ರ ಇಂದು ಬಹುಶಾಸ್ತ್ರೀಯ ಅಧ್ಯಯನವಾಗಿ ರೂಪುಗೊಳ್ಳುತ್ತಿದ್ದು ಅದನ್ನು ಇನ್ನಷ್ಟು ಬೆಳೆಸುವ ಸಲುವಾಗಿ ಈ ಸಮಾವೇಶಗಳನ್ನು ನಡೆಸಲಾಗುತ್ತಿದೆ. ಇದು ಪ್ರತಿಷ್ಠಾನದ ರಜತೋತ್ಸವ ಯೋಜನೆಗಾಗಿ ಜನ್ಮ ತಾಳಲಿದೆ. ಹಸ್ತಪ್ರತಿಗಳ ಸಂಗ್ರಹಾನುಭವ, ಶೋಧಕಾರ್ಯ, ದೊರೆತ ಹಸ್ತಪ್ರತಿಗಳ ಪರಿಚಯ, ಹಸ್ತಪ್ರತಿಗಳ ಸಂರಕ್ಷಣೆ; ಹಸ್ತಪ್ರತಿ ವಿಚಾರ, ಹಸ್ತಪ್ರತಿಗಳಲ್ಲಿರುವ ವಸ್ತು ವಿವೇಚನೆ, ಪರಿಷ್ಕಾರಣೆ, ಪುನರ್‌ಪರಿಷ್ಕಾರಣೆ, ಪಾಠಂತರಗಳು, ಸಾಹಿತ್ಯಗಳು, ಕವಿಕಾವ್ಯ ವಿಚಾರ, ಹಸ್ತಪ್ರತಿಗಳಲ್ಲಿರುವ ಭಾಷೆ, ಸಂಸ್ಕೃತಿ, ಲಿಪಿ, ಚಿತ್ರಗಳ ವಿವರಣೆ, ಸಾಹಿತ್ಯ ಇತಿಹಾಸ, ಸಾಮಾಜಿಕ, ರಾಜಕೀಯ, ವೈದ್ಯ, ವಿಜ್ಞಾನ, ತಂತ್ರಜ್ಞಾನ, ಶಿಕ್ಷಣ ವಿಚಾರಗಳತ್ತ ಬೆಳಕು ಚೆಲ್ಲುವಂತಹ ಲೇಖನ ಟಿಪ್ಪಣಿಗಳನ್ನು ಮಂಡಿಸುವ ಆಸಕ್ತರಿಗೆ ವೇದಿಕೆ ರೂಪಿಸುವುದು ಇದರ ಉದ್ದೇಶವಾಗಿರುತ್ತದೆ. ಹೀಗೆ ಪ್ರತಿಷ್ಠಾನ ಬಹುಮುಖ ಸೇವೆಯಿಂದ ಇಂದು ನಾಡಿನಾದ್ಯಂತ ತನ್ನದೇ ಆದ ರೀತಿಯಲ್ಲಿ ಹಸ್ತಪ್ರತಿಗಳ ರಕ್ಷಣೆಯ ಸೇವೆಯನ್ನು ಮಾಡುತ್ತಾ ಇರುವುದು ಶ್ಲಾಘನೀಯವಾದ ಕೆಲಸ ಎಂದು ಹೇಳಬಹುದು. ಶ್ರೀವಾಣಿಯ

ಸಾರ್ಥಕತೆಯನ್ನು ನಾವು ಇಂದು ಪ್ರತಿಷ್ಠಾನದ ಕಾರ್ಯಕ್ರಮಗಳನ್ನು ಕಂಡು ಮನತುಂಬಿ ನುಡಿಯಬಹುದು.

ಉ) ಸಂಚಾರಿ ಹಸ್ತಪ್ರತಿ ಸೇವೆ :-

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ "ರಜತಮಹೋತ್ಸವದ" ಅಂಗವಾಗಿ ಪ್ರಾರಂಭವಾಗಿರುವ "ಮನೆಬಾಗಿಲಿಗೆ ಪ್ರಾಚೀನ ಹಸ್ತಪ್ರತಿ ಪ್ರದರ್ಶನ" ಎಂಬ ನೂತನ ಕಾರ್ಯಕ್ರಮವನ್ನು ಕರ್ನಾಟಕಾದಾದ್ಯಂತ ಕರೆದಲ್ಲಿಗೆ ಹೋಗಿ ಶಾಲೆ-ಕಾಲೇಜು-ಸಂಘ-ಸಂಸ್ಥೆಗಳಲ್ಲಿ ಈ ಹಸ್ತಪ್ರತಿ ಪ್ರದರ್ಶನಗಳನ್ನು ನಡೆಸಲಾಗುತ್ತಿದೆ. ಈ ಪ್ರದರ್ಶನಗಳು ಜನರಲ್ಲಿ ವಿಶೇಷವಾದ ಅಚ್ಚರಿಯ ಜಾಗೃತಿಯನ್ನು ಮೂಡಿಸುವಲ್ಲಿ ಸಫಲವಾಗಿದೆ. ಅಷ್ಟೇ ಅಲ್ಲದೆ ಮನೆಯೊಳಗೆ ಅವಿತುಕುಳಿತಿದ್ದ ಹಸ್ತಪ್ರತಿಗಲು ಹೊರಬರಲು ಕಾರಣವಾದ ಒಂದು ಮಹತ್ವದ ಕಾರ್ಯವಾಗಿದೆ.

ಈ ಮಹತ್ಕಾರ್ಯಕ್ಕೆ ಪ್ರೇರಣೆ ಡಾ.ಟಿ.ವಿ. ವೆಂಕಟಾಚಲಶಾಸ್ತ್ರಿಗಳು ತಮ್ಮ ಸಾರಥ್ಯದಲ್ಲಿ 'ಪುಸ್ತಕಶಕ್ತಿ'ಯವರು ಸಾಹಿತಿಗಳ ಪತ್ರಕರ್ತರ, ಚಿತ್ರಕಾರರ, ಗಮಕಿಗಳ ಒಂದು ತಂಡವನ್ನು ರಚಿಸಿ "ಕವಿನಮನ ಪ್ರವಾಸ" ಹೊರಡಲು ಯೋಜಿಸಿದ್ದರು. ಇದನ್ನೇ ಪೂರಕವಾಗಿ ಇಟ್ಟುಕೊಂಡು ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಗೌರವ ಕಾರ್ಯದರ್ಶಿಗಳಾದ ಪ್ರೊ.ನಾ.ಗೀತಾಚಾರ್ಯರು ಈ ಕವಿನಮನದ ಜೊತೆಗೆ ನಮ್ಮ ಪ್ರತಿಷ್ಠಾನದ ರಜತ ಮಹೋತ್ಸವದ ಅಂಗವಾಗಿ "ಮನೆ ಬಾಗಿಲಿಗೆ ಪ್ರಾಚೀನ ಹಸ್ತಪ್ರತಿ ಪ್ರದರ್ಶನ" ಎಂಬ ಕಾರ್ಯಕ್ರಮವನ್ನು ಪ್ರಾರಂಭಿಸಿದರು".[4] ಈ ಕಾರ್ಯಕ್ರಮದಿಂದ ಕರ್ನಾಟಕದ ಬೇರೆ ಬೇರೆ ಸ್ಥಳಗಳಲ್ಲಿ ಅಜ್ಞಾತವಾಗಿ, ಮೌಢ್ಯದ ನಂಬಿಕೆಯಲ್ಲಿ ಅವಿತುಕೊಂಡಿರುವ ಪುರಾತನ ಪ್ರಾಚೀನ ಹಸ್ತಪ್ರತಿಗಳ ಹೊರಬಂದು ಅವುಗಳಲ್ಲಿರುವ ವಿದ್ವತ್ ಇಡೀ ನಾಡಿಗೆ ಪರಿಚಯವಾಗಲು ಕಾರಣವಾಗುತ್ತದೆ. ಆದ್ದರಿಂದ ಇಂತಹ ಸೇವಾ ಕಾರ್ಯದಿಂದ ನಮ್ಮ ನಾಡಿನ ಪ್ರಾಚೀನ ಸಂಪತ್ತನ್ನು ಉಳಿಸಿದಂತಾಗುತ್ತದೆ. ಇದು ನಿಜವಾಗಿಯೂ ಮಹತ್ವದ ಕೆಲಸವಾಗಿದೆ.

(ಅ) ಸಂಚಾರಿ ಹಸ್ತಪ್ರತಿ ಅನುಭವ :- ಹಸ್ತಪ್ರತಿಗಳು ನಮ್ಮ ನಾಡಿನ ಆಸ್ತಿ ಮತ್ತು ಜ್ಞಾನದ ಗಣಿ ಇವುಗಳ ಬಗ್ಗೆ ಜನರಿಗೆ ಸರಿಯಾದ ತಿಳುವಳಿಕೆ ಇಲ್ಲದ್ದು ಬಹಳ ವಿಷಾದನೀಯ ಪ್ರದರ್ಶನಗಳನ್ನು ವೀಕ್ಷಿಸಿದವರಲ್ಲಿ ಅನೇಕ ಜನರು ನಮ್ಮನ್ನು ಭವಿಷ್ಯ ಹೇಳುವವರೂ ಎಂದೂ, ಮನೆ ಮದ್ದುಗಳನ್ನು ಮಾರುವ ನಾಟಿವೈದ್ಯರೆಂದು ಭಾವಿಸಿದರೆ, ಇನ್ನೂ ಕೆಲವರು ಇಂತಹ ಅಮೂಲ್ಯ ವಸ್ತುಗಳ ಮಾರಾಟಗಾರರು ಎಂದು ಭಾವಿಸುವ

ಸಂಭವಗಳು ಹೆಚ್ಚು ಅದಕ್ಕಿಂತ ಮುಖ್ಯವಾಗಿ ಹಸ್ತಪ್ರತಿಗಳನ್ನು ಹೊಂದಿರುವವರ ಆಲೋಚನೆಯೇ ಭಿನ್ನವಾಗಿರುತ್ತದೆ. ಅವರುಗಳ ಮನಸ್ಸಿನಲ್ಲಿ ಅವುಗಳಲ್ಲಿ ನಿಧಿಯ ರಹಸ್ಯವಿರುತ್ತದೆ ಎಂದೋ, ಅವುಗಳಿದ್ದಾರೆ ಅದೃಷ್ಟವೆಂತಲೋ, ಭಾವಿಸುವ ಮೂಲಕ ಅವುಗಳನ್ನು ತಮ್ಮ ಅಲ್ಪಜ್ಞಾನದ ತಿಳುವಳಿಕೆಯಿಂದ ಪೂಜೆಯ ಗೂಡುಗಳಲ್ಲಿ ಇಟ್ಟು ಪೂಜಿಸುವುದರ ಮೂಲಕ ಅ ಗರಿಗಳಿಗೆ ಹೊಗೆ ತುಂಬಿಕೊಂಡು ಕಪ್ಪಾಗುವಂತೆ ಮಾಡಿರುವ ಸಾಕ್ಷಿಗಳು ಬೇಕಾದಷ್ಟಿವೆ. ಇನ್ನೂ ಕೆಲವರು ನಮ್ಮ ತಾತನ ಆಸ್ತಿ ಎನ್ನುವಂತೆ ಭಾಗ ಮಾಡಿಕೊಂಡ ಸಾಕ್ಷಿಗಳು ಇವೆ. ಆದರೆ ಇವರ್‍ಯಾರು ಅವುಗಳ ರಕ್ಷಣೆ–ಸಂರಕ್ಷಣೆಯ ಬಗೆಗಾಗಲಿ, ಕಾಪಾಡುವ ಬಗೆಗಾಗಲಿ ಆಲೋಚಿಸುತ್ತಿದ್ದು ತುಂಬಾ ಅಪರೂಪವಾದ ವಿಚಾರವಾಗಿತ್ತು. ಇದಕ್ಕಾಗಿ ಸಂಚಾರಿ ಹಸ್ತಪ್ರತಿ ಸೇವೆ ತುಂಬಾ ಉಪಯೋಗವಾಗುತ್ತಿತ್ತು ಎಂದು ಹೇಳಬಹುದು. ಇದರಿಂದ ಅಂತಹ ಮೌಢ್ಯರ ಮನಸ್ಸು ಚಿಂತನೆಮಾಡಿ ಅವುಗಳ ಸಾರ್ಥಕತೆಗೆ ಅವಕಾಶ ಮಾಡಿಕೊಡುತ್ತದೆ ಎಂದು ಹೇಳಬಹುದು.

ಉದಾಹರಣೆಗೆ ಬೆಳ್ಳೂರಿನ ಬಿ.ಎಂ.ಶ್ರೀ ವೃತ್ತದಲ್ಲಿ ಅವರ ಪ್ರತಿಮೆಯ ಸುತ್ತಲೂ ಹಸ್ತಪ್ರತಿ ಸಾಮಾಗ್ರಿಗಳನ್ನು ಇಟ್ಟು ಪ್ರದರ್ಶನ ನಡೆಸಿದಾಗ ಅಲ್ಲಿ ನೂರಾರು ಜನ ಸೇರಿ ಅವುಗಳನ್ನು ನೋಡಿ ಸಂತೋಷ ವ್ಯಕ್ತಪಡಿಸಿದ್ದು ನೆನೆಯಬಹುದು. ಅಂದಿನ ಪ್ರದರ್ಶನದ ವೀಕ್ಷಕರಲ್ಲಿ ಒಬ್ಬರಾದ ಮಹಮ್ಮದ್ ಹಿದಾಯತುಲ್ಲಾ ಅವರು ನೋಡಿ ಹೇಳಿದ ಮಾತು "ಇಂತಹ ವಸ್ತು ಪ್ರದರ್ಶನ ನಿಜಕ್ಕೂ ಈಗಿನ ಕಾಲಕ್ಕೂ ಒಳ್ಳೆಯದು ಆಗಿದೆ. ಆದ್ದರಿಂದ ಇನ್ನೂ ಹೆಚ್ಚಿನ ಜನರಿಗೆ ಹಿಂದಿನ ಕಾಲದ ವಿಚಾರವನ್ನು ತಿಳಿದುಕೊಳ್ಳುವಲ್ಲಿ ಅವಕಾಶವಾಗುತ್ತದೆ. ಇಂತಹ ವಸ್ತುಪ್ರದಶ್ನಗಳಿಮದ ನಾಡಿನ ಕವಿಗಳ ಬರವಣಿಗೆಯ ಕಾಲವು ನಮ್ಮ ಮುಂದೆ ನಡೆದಂತೆ ಕಾಣುತ್ತದೆ".[5] ಎಂದು ಹೇಳಿದಾಗ ತಾವು ಮಾಡಿದ ಕೆಲಸ ಸಾರ್ಥಕವಾಯಿತು ಎಂದೆನ್ನಿಸಿತು.

ಇನ್ನೊಮ್ಮೆ ಶಿಶುನಾಳ ಷರಿಫರ ತಂದೆ ತಾಯಿಗಳ ಸಮಾಧಿಯ ಹತ್ತಿರ ಹಸ್ತಪ್ರತಿ ಪ್ರದರ್ಶನ ನಡೆಸಿದಾಗ ಅಲ್ಲಿನ ಊರಿನ ಗಣ್ಯರು ಶಾಲೆಯ ಅಧ್ಯಾಪಕರು ನೋಡಿ ಪುಳಕಿತರಾಗಿ ನಮ್ಮ ಶಾಲೆಯಲ್ಲಿ ಇಂತಹ ಒಂದು ಪ್ರದರ್ಶನ ಮಾಡಿ ಎಂದಾಗ ಅಲ್ಲಿಯೂ ಹಸ್ತಪ್ರತಿ ದರ್ಶನ ಮಾಡಿದರು. ಆಗ ಅಧ್ಯಾಪಕ ವೃಂದದ ಅಭಿಪ್ರಾಯ ಹೀಗಿತ್ತು– "ಪುರಾತನ ಹಸ್ತಪ್ರತಿ ಪ್ರದರ್ಶಿಸಿ ಮಹದುಪಕಾರ ಮಾಡಿದ್ದಾರೆ ನಮ್ಮ ಪುರಾತನ ಸಾಂಪ್ರದಾಯಿಕ ಸಾಹಿತ್ಯದ ಅರಿವು ಇಂದಿನವರೆಗೆ ಅಗತ್ಯ"[6] ಎಂದು ಹೇಳಿದರು. ಪ್ರಾಚೀನ ಹಸ್ತಪ್ರತಿಗಳ ಸಂಗ್ರಹ–ಸಂರಕ್ಷಣೆ ಪ್ರತಿಷ್ಠಾನದ ಬಹುಮುಖ್ಯ ಚಟುವಟಿಕೆ. ನಾಡಿನ ಅಮೂಲ್ಯ ಆಸ್ತಿಯಾದ ಈ ಹಸ್ತಪ್ರತಿಗಳು, ಓಲೆಗರಿ, ಕಾಗದ,

ಪತ್ರಗಳ ರೂಪದಲ್ಲಿರುತ್ತದೆ. ಇವುಗಳಿಂದ ಪ್ರಾಚೀನ ಸಾಹಿತ್ಯ ಸಂಸ್ಕೃತಿಯ ಅಧ್ಯಯನ ಸಾಧ್ಯವಾಗುತ್ತದೆ. ಇವುಗಳನ್ನು ಮುಂದಿನ ಪೀಳಿಗೆಗೆ ಉಳಿಸಿಬೆಳೆಸುವ ಜವಾಬ್ದಾರಿ ಇಂದಿನ ಪೀಳಿಗೆಯವರಾದ ನಮ್ಮ ಮೇಲಿರುತ್ತದೆ. ಆದ್ದರಿಂದ ಹಸ್ತಪ್ರತಿಗಳನ್ನು ಅವುಗಳ ಮೂಲರೂಪದಲ್ಲೇ ಉಳಿಸಿರಕ್ಷಿಸುವ ಕಾರ್ಯವನ್ನು ಪ್ರತಿಷ್ಠಾನ ನಿಷ್ಠೆಯಿಂದ ಮಾಡುತ್ತಿದೆ. ಜನರ ಅಜ್ಞಾನದಿಂದ ದೇವರ ಗೂಡುಗಳಲ್ಲಿ ಪೂಜೆ ಮಾಡಿಸಿಕೊಳ್ಳುತ್ತಿರುವ ಪುರಾತನ ಹಸ್ತಪ್ರತಿಗಳು ಹೊರಬಂದು ಅಧ್ಯಯನಕ್ಕೆ ಸಂಶೋಧನೆಗೆ ಒಳಗಾಗಲು ಸಹಕಾರವಾಗಬೇಕು ಎಂದು ಆಶಿಸೋಣ. ಈ ಸೇವೆ ಸಾರ್ಥಕವಾದರೆ ಅದು ಇಡೀ ನಾಡಿನ ಪ್ರಾಚೀನ ಸಂಪತ್ತನ್ನು ಉಳಿಸಿ ಮುಂದಿನ ಪೀಳಿಗೆಗೆ ಕೊಡುವ ಹೊಣೆಗಾರಿಕೆ ನಮ್ಮ ಮೇಲಿದೆ. ಅದನ್ನು ಪ್ರತಿಷ್ಠಾನ ತಪ್ಪದೇ ಮಾಡುತ್ತಿದೆ. ಅದಕ್ಕೆ ಸಾರ್ವಜನಿಕರ ಸಹಕಾರ ಮುಖ್ಯವಾಗುತ್ತದೆ. ಅದಕ್ಕೆ ಸಹಕರಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ ಹಾಗೂ ಜವಬ್ದಾರಿ ಕೂಡ ಆಗಿದೆ ಎಂದು ಹೇಳಬಹುದು.

ಅಡಿಟಿಪ್ಪಣಿಗಳು

1. ಪ್ರೊ.ನಾ.ಗೀತಾಚಾರ್ಯ, ಹಸ್ತಪ್ರತಿಶಾಸ್ತ್ರ-ವಿವೇಚನೆ, ಬೆಂಗಳೂರು, 2000, ಪುಟ-70-71-72.
2. ಬಿ.ಎಸ್.ಸಣ್ಣಯ್ಯ, ಪೀಠಿಕೆ, ಪ್ರಾಕೃತ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ:ಸಂ-2, ಶ್ರವಣಬೆಳಗೊಳ.
3. ಪರಿಚಯ ಪುಸ್ತಕ, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಪುಟ-4.
4. ವಿ.ವಿ.ಜಾಗೀರ್‌ದಾರ್-ಜೆ.ಎಸ್.ಎಸ್.ರಾವ್- ದೀರೇಂದ್ರ, ಮನೆಬಾಗಿಲಿಗೆ ಹಸ್ತಪ್ರತಿ ದರ್ಶನ, ರಜತಸಿರಿ, 2004, ಪುಟ-43.
5. ವಿ.ವಿ.ಜಾಗೀರ್‌ದಾರ್-ಜೆ.ಎಸ್.ಎಸ್.ರಾವ್- ದೀರೇಂದ್ರ, ಮನೆಬಾಗಿಲಿಗೆ ಹಸ್ತಪ್ರತಿ ದರ್ಶನ, ರಜತಸಿರಿ, 2004, ಪುಟ-43.
6. ವಿ.ವಿ.ಜಾಗೀರ್‌ದಾರ್-ಜೆ.ಎಸ್.ಎಸ್.ರಾವ್- ದೀರೇಂದ್ರ, ಮನೆಬಾಗಿಲಿಗೆ ಹಸ್ತಪ್ರತಿ ದರ್ಶನ, ರಜತಸಿರಿ, 2004, ಪುಟ-45.

ಅಧ್ಯಾಯ - 5

ಬಿ.ಎಂ.ಶ್ರೀ ಪ್ರತಿಷ್ಠಾನದ ಹಸ್ತಪ್ರತಿ ಗ್ರಂಥಗಳು

ಅ) ಸೂಚಿಗ್ರಂಥಗಳು :-

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನವು ಹಲವಾರು ಪ್ರಾಚೀನ ಗ್ರಂಥಗಳನ್ನು ಸಂಪಾದಿಸಿ, ಪರಿಷ್ಕರಿಸಿ, ಪ್ರಕಟಿಸಿದೆ. ಅಲ್ಲದೆ ಪ್ರತಿಷ್ಠಾನದಲ್ಲಿರುವ ಹಸ್ತಪ್ರತಿಗಳು, ತಾಡಓಲೆಗಳ ಸೂಚಿಗಳನ್ನು ಅದರಲ್ಲೂ ವರ್ಣನಾತ್ಮಕ ಹಸ್ತಪ್ರತಿ ಸೂಚಿಯನ್ನು ಪ್ರಕಟಿಸಿದೆ. ಹಸ್ತಪ್ರತಿ ಸಂಶೋಧನ ಸಂಸ್ಥೆ ಸೂಚಿಗಳ ಸಿದ್ಧತೆ ಎಂದರೇನು? ಸೂಚಿಗಳ ಮಹತ್ವವೇನು? ಎಂಬ ವಿಷಯದ ಬಗ್ಗೆ ಮುಂದೆ ಚರ್ಚಿಸಲಾಗಿದೆ. ಪ್ರತಿಷ್ಠಾನದ ಸೂಚಿ ಗ್ರಂಥಗಳಲ್ಲಿ ಮುಖ್ಯವಾಗಿ 1. ಪ್ರಕಟಿತ ಸೂಚಿಗಳು 2. ಅಪ್ರಕಟಿತ ಸೂಚಿಗಳು ಎಂದು ಎರಡು ಭಾಗವಾಗಿ ವಿಂಗಡಿಸಬಹುದು. ಪ್ರಕಟಿತ ಸೂಚಿಗಳು ಯಾವುವೆಂದರೆ (ಅ) ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ (ಆ) ಅಲಿಗೆ ಮೇಲಿನ ಮನೆಯ ಹಸ್ತಪ್ರತಿಗಳು (ಇ) ಅಲಿಗೆ ಕೆಳಗಣ ಮನೆಯ ಹಸ್ತಪ್ರತಿಗಳು. ಅಪ್ರಕಟಿತ ಸೂಚಿಗಳೆಂದರೆ (ಅ) ವರ್ಣನಾತ್ಮಕ ಭಾಗ-2 (ಆ) ವರ್ಣನಾತ್ಮಕ ಸೂಚಿ ಭಾಗ-3 ಇವುಗಳು ಪ್ರಕಟಣೆ ಆಗಬೇಕಾಗಿದೆ ಪ್ರತಿಷ್ಠಾನ ತನ್ನ ಸತತ ಪ್ರಯತ್ನದಿಂದ ಹಸ್ತಪ್ರತಿಗಳ ಸಂಗ್ರಹದ ಜೊತೆಗೆ ಸೂಚಿ ಮಾಡುವ ಕೆಲಸವನ್ನು ಶ್ರದ್ಧೆಯಿಂದ ಮಾಡುತ್ತಲಿದೆ.

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಹಸ್ತಪ್ರತಿಗಳ ಭಂಡಾರದಲ್ಲಿರುವ ತಾಡವೋಲೆ ಹಸ್ತಪ್ರತಿಗಳ ಪೈಕಿ 96 ಹಸ್ತಪ್ರತಿಗಳ ವರ್ಣನಾತ್ಮಕ ವಿವರಗಳನ್ನು ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ ಸಂಪುಟ-1 ರಲ್ಲಿ ತರಲಾಗಿದೆ. ಪ್ರತಿಷ್ಠಾನದ ಭಂಡಾರದಲ್ಲಿರುವ ಕನ್ನಡ ಹಸ್ತಪ್ರತಿಗಳ ವಿಷಯವನ್ನು ಮಾತ್ರ ಈ ಸಂಪುಟದಲ್ಲಿ ಅಡಕಗೊಳಿಸಲಾಗಿದೆ. ಕಾಗದದ ಹಸ್ತಪ್ರತಿಗಳ ಜೊತೆಗೆ ಸಂಸ್ಕೃತ ಭಾಷೆಯ ಹಾಗೂ ತಮಿಳು, ತೆಲುಗು, ತಿಗಳಾರಿ ಲಿಪಿಗಳು ಗ್ರಂಥಗಳು ಪ್ರತಿಷ್ಠಾನದ ಹಸ್ತಪ್ರತಿ ಭಂಢಾರದಲ್ಲಿ ಇರುವುದು ವಿಶೇಷ.

ಭಾರತೀಯ ಸಂಸ್ಕೃತಿಯ ಬಹುಮುಖವಾದ ಅಧ್ಯಯನವು ನಮ್ಮ ಪ್ರಾಚೀನ ಬರವಣಿಗೆಗಳಿಂದ ಪ್ರಾರಂಭವಾಗುತ್ತದೆ ಎನ್ನಬಹುದು. ಅಂತಹ ಬರವಣಿಗೆಗಳುಳ್ಳ ಹಸ್ತಪ್ರತಿಗಳ ಪರಿಷ್ಕಾರಣ ಮತ್ತು ಪರಿಶೀಲನೆಗೆ ಮೊದಲು ಅವುಗಳನ್ನು ಕಲೆಹಾಕಿ

ಪಟ್ಟಿಯನ್ನು ಸಿದ್ಧಪಡಿಸುವುದು ಅತ್ಯಗತ್ಯ. ಬರವಣಿಗೆಯ ಬಳಕೆಯು ಪ್ರಾರಂಭವಾದಾರಭ್ಯ ನಮ್ಮ ಪೂರ್ವಿಕರು ಹಸ್ತಪ್ರತಿಗಳ ವಿಚಾರದಲ್ಲಿ ತೋರಿದ ಗೌರವದಿಂದಾಗಿ ಇಂದು ನಮ್ಮ ಸಾಂಸ್ಕೃತಿಕ ಜೀವನವು ಬಹುತೇಕ ಸಾಧ್ಯವಾಗಿದೆಯೆಂದು ಹೇಳಬಹುದು. ಅಂದರೆ, ನಮ್ಮ ದೇಶದಲ್ಲಿ ಅನಾದಿ ಕಾಲದಿಂದಲೂ ಖ್ಯಾತಿ ಹೊಂದಿದ್ದ ಉಚ್ಚತರ ಸಂಸ್ಕೃತಿಯು ಇಂದಿನವರೆಗೆ ಅನೂಚಾನವಾಗಿ ನಡೆದು ಬರುವುದಕ್ಕೆ ಕಾರಣ ನಮ್ಮ ಪ್ರಾಚೀನ ಗ್ರಂಥಗಳ ಅಧ್ಯಯನದಿಂದ ಕಂಡುಕೊಂಡ, ಅದರಂತೆ ನಡೆದುಕೊಂಡು ಇಂದಿನವರಿಗೂ ಅನುಸರಿಸಿ ಬಂದಿರುವ ಭಾರತೀಯ ಸಂಸ್ಕೃತಿಯ ಮಹತ್ವ ನಮಗೆ ತಿಳಿಯುತ್ತಿರಲಿಲ್ಲ. ಬರವಣಿಗೆಗೂ ಮೊದಲು ಕೇವಲ ಮೌಖಿಕವಾಗಿ ಪ್ರಕಟವಾಗುತ್ತಿದ್ದ ಬುದ್ಧಿ ವಿಷಯಗಳು ಕ್ರಮಬದ್ಧವಾಗಿ ಪೂರ್ವಿಕರಿಂದ ಬರೆಯಲ್ಪಟ್ಟ ಕಾರಣದಿಂದ ಮುಂದಿನ ಪೀಳಿಗೆಗೆ ಅದರ ಲಾಭ ದೊರೆಯುವಂತಾಯಿತು. ಪ್ರಪಂಚದ ಅತ್ಯಂತ ಪ್ರಾಚೀನ ಗ್ರಂಥವಾದ ಋಗ್ವೇದವೂ ಈ ಗುಂಪಿಗೆ ಸೇರುತ್ತದೆ. ಗಹನವಾದ ವಿಷಯ-ವಿಚಾರಗಳನ್ನು ಯಾವುದೇ ಒಂದು ಬರವಣಿಗೆಯ ಸಾಧನದಿಂದ ದಾಖಲೆಯಾಗಿ ಪರಿವರ್ತಿಸುವುದೇ ವೈಶಿಷ್ಟ್ಯವಾಯಿತು. ಹಸ್ತಪ್ರತಿಗಳ ಬರವಣಿಗೆ ಕ್ರಿಸ್ತಶಕೆಗೂ ಮುಂಚೆ ಪ್ರಾರಂಭವಾಗಿರಬೇಕು. ಆದರೆ ಆ ಭಾಗದ ಯಾವ ಕಾಲದಲ್ಲಿ ಪ್ರಾರಂಭವಾಯಿತೆಂದು ನಿರ್ದಿಷ್ಟವಾಗಿ ಹೇಳುವುದು ಕಷ್ಟ. ಆದಾಗ್ಯೂ ಕೂಡ, ಕ್ರಿಸ್ತಶಕೆಗೆ ನಂತರ ಪ್ರಾರಂಭವಾದ ಕಾಲವನ್ನು ನಮಗೆ ದೊರೆತಿರುವ ಕೆಲವು ಹಸ್ತಪ್ರತಿಗಳ ಆಧಾರದ ಮೇಲೆ ನಿರ್ದಿಷ್ಟವಾಗಿ ಹೇಳಬಹುದು. "ಭೂರ್ಜಪತ್ರ, ತಾಳಪತ್ರ ಇತ್ಯಾದಿ ಬರವಣಿಗೆಯ ಸಾಧನಗಳಲ್ಲದೆ ಚಿನ್ನವನ್ನು ಬಳಸಿದ ನಿದರ್ಶನವಿದೆ. 1926-27ನೇ ಸಾಲಿನ ಭಾರತೀಯ ಪ್ರಾಕ್ತನಶಾಸ್ತ್ರ ವಿಭಾಗದ ವರದಿಯ ಪ್ರಕಾರ 20 ಚಿನ್ನದ ಪತ್ರಗಳ ಮೇಲೆ ಬರವಣಿಗೆಯನ್ನು ಕೆತ್ತಿರುವ ಹಸ್ತಪ್ರತಿ ಬರ್ಮದೇಶದಲ್ಲಿ ದೊರೆತಿದೆ. ಇದರ ಉದ್ದ ಆರುವರೆ ಅಂಗುಲ, ಅಗಲ ಒಂದುಕಾಲು ಅಂಗಲ. ಈ ಹಸ್ತಪ್ರತಿಯ ವಿನಯ ಪಿಟಕ. ಮತ್ತು ಅಭಿಧಮ್ಮ ಪಿಟಕಗಳಿಗೆ ಸಂಬಂಧಿಸಿದ ವಿಷಯಗಳನ್ನು ಒಳಗೊಂಡಿದೆ. ಚಿನ್ನವು ಬಳಕೆಯಲ್ಲಿದ್ದ ಆ ಕಾಲದಲ್ಲಿ ಚೀನೀಯರು ಕಾಗದವನ್ನು ಬರವಣಿಗೆಗೆ ಬಳಸುತ್ತಿದ್ದಾರೆಂದೂ ತಿಳಿದು ಬರುತ್ತದೆ. ಈ ಹಸ್ತಪ್ರತಿಯೂ ಕ್ರಿ.ಶ.ಸುಮಾರು 6 ಅಥವಾ 7ನೇ ಶತಮಾನಕ್ಕೆ ಸೇರಿದ್ದೆಂದು ನಿರ್ಧರಿಸಿದ್ದಾರೆ".[1]

ಇಂಥ ಅಪರೂಪದ ವಸ್ತುಗಳಿಂದ ನಮ್ಮ ಪೂರ್ವಿಕರು ಹಸ್ತಪ್ರತಿಗಳಿಗೆ ನೀಡಿದ್ದ ಸ್ಥಾನಮಾನಗಳು ಎಷ್ಟೆಂದು ವ್ಯಕ್ತವಾಗುತ್ತದೆ. ಹೀಗೆ ಪ್ರಾಚೀನ ಕಾಲದಲ್ಲಿ ಹಸ್ತಪ್ರತಿಗಳ ವಿಷಯದಲ್ಲಿ ಭಾರತೀಯರು ವಹಿಸಿದ್ದ ಆಸ್ಥೆ ಮತ್ತು ರಕ್ಷಣಾಕ್ರಮವಿದ್ದಾಗ್ಯೂ ನಮ್ಮ ದೇಶದ ಮೇಲೆ ಆದ ಪರಕೀಯರ ಧಾಳಿಗೆ ಸಿಕ್ಕು ನಮ್ಮ ಗ್ರಂಥಗಳಿಗೆ ಆದ ನಷ್ಟಕ್ಕಿಂತಲೂ ನಮ್ಮವರೇ ತೋರಿದ ಉದಾಸೀನದಿಂದ ನಶಿಸಿಹೋದ ಹಸ್ತಪ್ರತಿಗಳಿಗೆ

ಲೆಕ್ಕವಿಲ್ಲ. ನಮ್ಮದೇ ಆದ ಗ್ರಂಥಗಳನ್ನು ಲೆಕ್ಕಹಾಕಿ, ಪರಿಷ್ಕರಿಸಿ, ಮುದ್ರಿಸಿ, ಆಧುನಿಕ ಯುಗದ ಆದಿಯಲ್ಲಿ ಭಾರತೀಯ ಸಂಸ್ಕೃತಿಯ ಅಧ್ಯಯನಕ್ಕೆ ನಾಂದಿ ಹಾಕಿದ ಯುರೋಪಿಯನ್ನರಿಗೆ ನಾವು ಋಣಿಯಾಗಲೇಬೇಕು. ವಿಲಿಯಂಜೋನ್ಸ್, ಮ್ಯಾಕ್ಸ್‌ಮುಲ್ಲರ್, ಕೋಲ್‌ಬ್ರೂಕ್‌ರವರ ಆದಿಯಾಗಿ ಹಲವು ಯುರೋಪಿಯನ್ನರು ಹಸ್ತಪ್ರತಿಗಳ ಪರಿಷ್ಕರಣ ಪಾಂಡಿತ್ಯಕ್ಕೆ ಭದ್ರವಾದ ತಳಹದಿ ಹಾಕಿದರು.

ಪುರಾತತ್ವ ಶೋಧನೆಗಳಿಂದಲೂ, ಪಂಡಿತರುಗಳ ವೈಯಕ್ತಿಕ ಸಂಗ್ರಹಗಳಿಂದಲೂ ಮತ್ತು ಇತರ ಕಡೆಗಳಿಂದಲೂ ಸಂಗ್ರಹಿಸಿದ ಪ್ರಾಚೀನ ಹಸ್ತಪ್ರತಿಗಳನ್ನು ಪಟ್ಟಿಮಾಡಿಕೊಳ್ಳುವುದು ಮೊದಲ ಕರ್ತವ್ಯ. ಹೀಗೆ ದೊರಕಿದ ಪ್ರಾಚೀನ ಹಸ್ತಪ್ರತಿಗಳು ಭಾರತೀಯ ಅಧ್ಯಯನದ ಯಾವ ಭಾಗಕ್ಕೆ ಸಂಬಂಧಿಸಿದವು, ಅವುಗಳ ಬರವಣಿಗೆಗೆ ಉಪಯೋಗಿಸಿರುವ ಸಾಧನಗಳೇನು, ಪತ್ರಸಂಖ್ಯೆ, ಲಿಪಿ, ಅವನ್ನು ರಚಿಸಿದ ಕರ್ತೃ, ಅವನ ದೇಶ, ಕಾಲಗಳನ್ನು ಪಟ್ಟಿ ಮಾಡುವುದಕ್ಕೆ "ಪ್ರಾಚೀನ ಹಸ್ತಪ್ರತಿಗಳ ವಿವರಣಾತ್ಮಕ ಗ್ರಂಥ ಸೂಚಿ" [Descriptive catalogue of Manuscripts] ಎಂದು ಹೆಸರು.

ಈಗ ನಮಗೆ ವಿವಿಧ ಕಡೆಗಳಿಂದ ಸಂಗ್ರಹಿಸಿದ ಒಂದು ಮೂಟೆ ಪ್ರಾಚೀನ ಹಸ್ತಪ್ರತಿಗಳು ದೊರಕಿದವೆಂದು ಇಟ್ಟುಕೊಳ್ಳೋಣ. ಆ ಗಂಟನ್ನು ಬಿಚ್ಚಿದಾಗ ವಿಧವಿಧವಾದ ವಸ್ತುಗಳ ಮೇಲೆ ವಿಧವಿಧವಾದ ಲಿಪಿಗಳಿಂದ ಬರೆಯಲಾದ ಹಸ್ತಪ್ರತಿಗಳು ನಮ್ಮ ಕಣ್ಣಿಗೆ ಗೋಚರವಾಗುತ್ತವೆ. ಒಂದೊಂದನ್ನೇ ತೆಗೆದು ಮೊದಲು ಕೆಲವು ಭಾಗಗಳನ್ನು ಪರಿಶೀಲಿಸಿದಾಗ ನಮಗೆ ಅದು ಯಾವ ಶಾಸ್ತ್ರಕ್ಕೆ ಸಂಬಂಧಿಸಿದುದೆಂದು ತಿಳಿಯುತ್ತದೆ. ಉದಾಹರಣೆಗೆ ದರ್ಶನ, ಧರ್ಮ, ವ್ಯಾಕರಣ ಇತ್ಯಾದಿ ಶಾಸ್ತ್ರಗಳು ಆಯಾ ಶಾಸ್ತ್ರಕ್ಕೆ ಸಂಬಂಧಿಸಿದಂತೆ ಹಸ್ತಪ್ರತಿಗಳ ಹೆಸರುಗಳನ್ನು ಪಟ್ಟಿ ಮಾಡೋಣ. ಎರಡನೆಯದಾಗಿ ಆಯಾ ಶಾಸ್ತ್ರಗಳಲ್ಲಿ ಯಾವ ಭಾಗವನ್ನು ಆ ಹಸ್ತಪ್ರತಿಯಲ್ಲಿ ಪ್ರತಿಪಾದಿಸಿದೆ ಎಂಬುದನ್ನು ನಿರ್ಧರಿಸಬೇಕು. ಉದಾಹರಣೆಗೆ ದರ್ಶನಶಾಸ್ತ್ರದಲ್ಲಿ ನ್ಯಾಯ, ವೈಶೇಷಿಕ, ಸಾಂಖ್ಯ ಇತ್ಯಾದಿ. ಮೂರನೆಯದಾಗಿ ಆ ಹಸ್ತಪ್ರತಿಯ ವ್ಯಾಪ್ತಿ, ಅಳತೆ, ಮೊದಲಾದುವನ್ನು ತಿಳಿಯುವುದು. ಆ ಮೇಲೆ ಗ್ರಂಥವನ್ನು ರಚಿಸಿದ ಕರ್ತೃವಿನ ಹೆಸರು, ಅದನ್ನು ಯಾವ ಕಾಲದಲ್ಲಿ ಬರೆಯಲಾಯಿತು ಇತ್ಯಾದಿಗಳನ್ನು ಪಟ್ಟಿಮಾಡುವುದು. ಇದರ ಉದ್ದೇಶವೇನೆಂದರೆ ಪ್ರತಿ ಹಸ್ತಪ್ರತಿಯನ್ನು ಜಾಗರುಕತೆಯಿಂದ ಪರಿಷ್ಕರಿಸಿ, ತುಲನೆಮಾಡಿ, ಪ್ರಕಟಮಾಡುವಾಗ ಅದಕ್ಕೆ ಸಹಾಯವಾಗುವ ಇತರ ಹಸ್ತಪ್ರತಿಗಳು ಇದ್ದಲ್ಲಿ, ಪರಿಷ್ಕಾರಿಸುವ ಹಸ್ತಪ್ರತಿಯ ಉಪಯುಕ್ತತೆ ಮತ್ತು ನಿಖರತೆ ಹೆಚ್ಚುತ್ತದೆ. ಅದಕ್ಕಾಗಿ ಪ್ರತಿ ಹಸ್ತಪ್ರತಿಯನ್ನು ನೋಡಿ ಅದರ ಉಪಯುಕ್ತತೆಯನ್ನು ನಿರ್ಧರಿಸುವ ಬದಲು ವಿವರಣಾತ್ಮಕ ಗ್ರಂಥ

ಸೂಚಿಯ ಸಲಹೆಯನ್ನು ಪಡೆದರೆ ಇದರ ಹಸ್ತಪ್ರತಿಗಳನ್ನು ಕುರಿತು ಬೇಕಾದ ವಿಚಾರಗಳ ನಮಗೆ ಸಿದ್ಧವಾಗುತ್ತವೆ. ಹೀಗೆ ಒಂದು ಗಂಟಿನಲ್ಲಿ ಹರಡಿ ಹಂಚಿಹೋಗಿದ್ದ ಹಸ್ತಪ್ರತಿಗಳನ್ನು ಮೇಲೆ ಹೇಳಿದ ಒಂದು ಕ್ರಮದಲ್ಲಿ ವಿಂಗಡಿಸಿ ಪಟ್ಟಿಮಾಡುವುದು ಅತ್ಯವಶ್ಯಕವಾಗುತ್ತದೆ.

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ತನ್ನ ಗ್ರಂಥ ಭಂಡಾರದಲ್ಲಿರುವ ತಾಡವೋಲೆ, ಹಸ್ತಪ್ರತಿ, ಕಾಗದ ಪ್ರತಿಗಳ ವಿವರಗಳನ್ನೊಳಗೊಂಡ 'ವರ್ಣನಾತ್ಮಕ ಸೂಚಿ'ಯನ್ನು ಹೊರತಂದಿದೆ. ಪ್ರತಿಷ್ಠಾನದಲ್ಲಿ ಕನ್ನಡ ಹಸ್ತಪ್ರತಿಗಳಷ್ಟೇ ಅಲ್ಲದೆ ಸಂಸ್ಕೃತ, ತಮಿಳು, ತೆಲುಗು, ತಿಗಳಾರಿಲಿಪಿಗಳ ಹಸ್ತಪ್ರತಿಗಳು ಗ್ರಂಥಭಂಡಾರದಲ್ಲಿವೆ. ಬೇರೆ ಬೇರೆ ಖಾಸಗಿ ಸಂಸ್ಥೆಗಳ ಸೂಚಿಗಳಿಗೂ, ವಿಶ್ವವಿದ್ಯಾನಿಲಯಗಳ ಸೂಚಿಗಳಿಗೂ ಪ್ರತಿಷ್ಠಾನದ ಸೂಚಿಗಳಿಗೂ ಇರುವ ವಿಶೇಷವಾದ ಅಂಶಗಳನ್ನು ಕಾಣಬಹುದು.

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಸೂಚಿಯ ಬಗ್ಗೆ ಸಂಸ್ಥಾಪಕರಾದ ಎಂ.ವಿ.ಸೀತಾರಾಮಯ್ಯನವರ ಪ್ರೋತ್ಸಾಹದ ನುಡಿ ಇದು. "ಪ್ರತಿಷ್ಠಾನ ಈಗ ಹೊರತರುತ್ತಿರುವ ಈ ಗ್ರಂಥ ಸೂಚಿಗೂ ಮೇಲ್ಕಂಡ ಸಂಪುಟ (ದೇವೀರಪ್ಪ ನವರು ರಿಸರ್ಚ್ ಇನ್‌ಸ್ಟಿಟ್ಯೂಟ್‌ನ ನಿರ್ದೇಶಕರಾಗಿದ್ದ ಕಾಲದಲ್ಲೇ ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಗ್ರಂಥ ಸೂಚಿಯನ್ನು ಗಮನಿಸಿ)"ಗಳು ಮಾದರಿಯಾಗಿವೆ, ಮಾರ್ಗದರ್ಶಕವಾಗಿವೆ. ಪ್ರತಿಷ್ಠಾನದ ಹಸ್ತಪ್ರತಿ ಸಂಗ್ರಹದ ಸುಮಾರು ಒಂದು ನೂರು ಕೃತಿಗಳ ವಿವರಗಳನ್ನು ಈ ಪ್ರಥಮ ಸೂಚಿಯಲ್ಲಿ ಅಳವಡಿಸಲಾಗಿದೆ. ಇದರ ಸ್ವರೂಪದ ಬಗೆಗೆ ಸಂಪಾದಕದ್ವಯರು ಅಗತ್ಯ ವಿವರಣೆಗಳನ್ನು ಒದಗಿಸಿರುವುದರಿಂದ ಆ ಬಗೆಗೆ ನಾನು ಹೇಳುವುದು ಏನೂ ಉಳಿದಿಲ್ಲ. ಕನ್ಯಾಪಿತೃ ತನ್ನ ಮಗಳನ್ನು ಒಳ್ಳೆಯ ವರನಿಗೆ ಕೊಟ್ಟರೆ ಯಾವ ಸಂತೃಪ್ತಿಯುಂಟಾಗುವುದೋ ಆ ಸಂತೃಪ್ತಿ ನನಗೆ ಉಂಟಾಗಿದೆ".[2] ಎಂಬ ಮೆಚ್ಚುಗೆಯ ಮಾತನ್ನಾಡಿದ್ದಾರೆ. ಅಂದರೆ ಈ ಸೂಚಿಯನ್ನು ಬಹಳ ಜಾಗರುಕತೆಯಿಂದ ವಿಶೇಷವಾಗಿ ರಚಿಸಿದ್ದಾರೆ ಎಂದರ್ಥ.

ಪ್ರತಿಷ್ಠಾನದ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಯ, ಸುಮಾರು ಹದಿನೇಳು ವಿವರಗಳನ್ನೊಳಗೊಂಡ ಸವಿಸ್ತಾರವಾದ ಸೂಚಿಯಾಗಿದೆ. ಹದಿನೇಳು ವಿವರಗಳನ್ನು ಐದು ಸಾಲುಗಳಲ್ಲಿ ಪಟ್ಟಿ ಮಾಡಲಾಗಿದೆ.–ಮೊದಲನೆಯ ಸಾಲಿನಲ್ಲಿ ಗ್ರಂಥದ ಹೆಸರು, ಎರಡನೆಯ ಸಾಲಿನಲ್ಲಿ– ಇಂಗ್ಲೀಷ್ ಅಂಕಿ: ಹಸ್ತಪ್ರತಿಯ ಸಂಖ್ಯೆ, ಕವಿಯ ಹೆಸರು; ಪ್ರತಿಪುಟದಲ್ಲಿಯ ಸಾಲುಗಳ ಅಂದಾಜು ಸಂಖ್ಯೆ. ಮೂರನೆಯ ಸಾಲಿನಲ್ಲಿ ಹಸ್ತಪ್ರತಿಯ ಉದ್ದ ಮತ್ತು ಅಗಲವಾದ ಅಳತೆ; ಕವಿಯ ಅಥವಾ ಕೃತಿಯ ಕಾಲ; ಪ್ರತಿಪುಟದ

ಪ್ರತಿಯೊಂದು ಸಾಲಿನಲ್ಲಿರುವ ಸರಾಸರಿ ಅಕ್ಷರಗಳ ಸಂಖ್ಯೆ ನಾಲ್ಕನೆಯ ಸಾಲಿನಲ್ಲಿ ಗ್ರಂಥದ (ಓಲೆಗರಿಕಟ್ಟಿನ) ಪತ್ರ (ಗರಿ)ಗಳ ಸಂಖ್ಯೆ: ಲಿಪಿಕಾರನ ವಿವರ; ಗ್ರಂಥದ ಭಾಷೆ ಐದನೇ ಸಾಲಿನಲ್ಲಿ ಕೃತಿಯ ರೂಪಾಂಶ ಅಥವಾ ಪ್ರಕಾರ; (ಅಂದರೆ-ಗದ್ಯವೇ, ಪದ್ಯವೇ, ಪದ್ಯವಾದರೆ ಪದ್ಯದ ಛಂದಸ್ಸು) ಪ್ರತಿ ಮಾಡಿರುವ ಕಾಲ, ಸಂದರ್ಭ; ಲಿಪಿ ಅಂದರೆ ಯಾವ ಶೈಲಿ ಎಂಬ ವಿವರಗಳು ಈ ವರ್ಣಸೂಚಿಯ ಪಟ್ಟಿಯಲ್ಲಿ ಅಡಗಿವೆ.

ಅನಂತರ ಮುಂದಿನ ಸಾಲಿನಲ್ಲಿ ವಿಷಯ:- ಎಂದು ಕೊಟ್ಟಿದೆ. ಅದರಲ್ಲಿ ಪ್ರತಿಯಲ್ಲಿರುವ ವಸ್ತುವಿನ ವಿವರಕೊಡಲಾಗಿದೆ. ಆನಂತರ ಆದಿ:ಎಂದು ಕೊಟ್ಟಿದೆ ನಂತರ ಅಂತ್ಯ: ಎಂದೂ ಕೊಟ್ಟಿದೆ. ಆದಿ ಮತ್ತು ಅಂತ್ಯ ವಿಭಾಗಗಳಲ್ಲಿ ಗ್ರಂಥದ ಸ್ವರೂಪ ತಿಳಿಯಲಾಗುವಂತೆ ಯಥಾವತ್ತಾಗಿ ಗ್ರಂಥ ಪಾಠವನ್ನು ಉದ್ಧರಿಸಲಾಗಿದೆ.

ಗ್ರಂಥದ ಸ್ವರೂಪ ವಿವರಗಳನ್ನು ನೀಡುವಾಗ ಅಂಕಿಗಳನ್ನೇ ಬಳಸಿದೆ. ಪ್ರತಿಯ ಉದ್ದಾಗಲವನ್ನು ದಶಮಾನ ಪದ್ಧತಿಯ ಅಳತೆಯಲ್ಲಿ (ಸೆಂ.ಮೀ)ಕೊಟ್ಟಿದೆ. ಮೊದಲನೆಯ ಅಂಕಿ ಉದ್ದದ ಅಳತೆ; ಎರಡನೆಯದು ಅಗಲದ ಅಳತೆ.

"ಕೆಲವು ಸಂಕೇತಾಕ್ಷರಗಳ ವಿವರಣೆ:- ಓ-ಓಲೆಗರಿಯ ಪ್ರತಿ; ಕಾ-ಕಾಗದದ ಪ್ರತಿ; (ಕಾ.ದೊ ಕಾಗದದ ಪ್ರತಿ ದೊಡ್ಡ ಪ್ರಮಾಣದ್ದು; ಕಾ.ಚಿ-ಕಾಗದದ ಪ್ರತಿ ಚಿಕ್ಕ ಪ್ರಮಾಣದ್ದು) ಈ ಸಂಕೇತಾಕ್ಷರಗಳ ಬಳಿಕ ಓರೆಗೆರೆಯಳೆದು ಹಸ್ತಪ್ರತಿಯ ಸಂಕೇತಾಂಕವನ್ನು ನೀಡಿದೆ. ಒಂದೇ ಓಲೆಗರಿ ಕಟ್ಟಿನಲ್ಲಿ ಅಥವಾ ಕಾಗದದ ಹಸ್ತಪ್ರತಿಯಲ್ಲಿ ಬೇರೆ ಬೇರೆ ಕೃತಿಗಳು ಇದ್ದರೆ ಆ ಕೃತಿ ಆ ಕಟ್ಟಿನಲ್ಲಿ ಎಷ್ಟನೆಯದು ಎಂಬುದನ್ನು ತಿಳಿಸುವುದಕ್ಕಾಗಿ ಪ್ರತಿಯ ಸಂಕೇತಾಂಕದ ಮುಂದೆ ಇನ್ನೊಂದು ಓರೆಗೆರೆ ಎಳೆದು ಆ ಗ್ರಂಥದ ಸಂಖ್ಯೆಯನ್ನು ಕೊಟ್ಟಿದೆ".[3]

ಕವಿಯ ಕಾಲಗಳು ತಿಳಿಯದಿದ್ದಾಗ ಆ ಸ್ಥಳಗಳಲ್ಲಿ ಪ್ರಶ್ನೆ ಚಿಹ್ನೆ (?) ಬಳಸಲಾಗಿದೆ. ಕೆಲವು ಕಡೆ ಪತ್ರ ಸಂಖ್ಯೆಯ ಮುಂದೆ "+" ಚಿಹ್ನೆಯ ಮುಂದೆ ಕೆಲವು ಸಂಖ್ಯೆಗಳನ್ನು ಕೊಡಲಾಗಿದೆ; ಅಂತಹ ಸಂದರ್ಭದಲ್ಲಿ "+" ಚಿಹ್ನೆಯ ನಂತರದ ಸಂಖ್ಯೆ ಪತ್ರಗಳು ಆ ಗ್ರಂಥಕ್ಕೆ ಸೇರದ, ಆದರೆ ಆ ಕಟ್ಟಿನಲ್ಲೇ ಇರುವ, ಪ್ರತ್ಯೇಕ ಗರಿಗಳು ಎಂದು ತಿಳಿಯಬೇಕು.

ವಿಷಯ ವಿಭಾಗದಲ್ಲಿ, ಕೃತಿಯ ವಸ್ತು ವಿಷಯವನ್ನು ಒಂದೊಂದು ವಾಕ್ಯದಲ್ಲಿ ಸಂಗ್ರಹಿಸಿಕೊಡಲಾಗಿದೆ. ಅನಂತರ ಆದಿ, ಅಂತ್ಯ ವಿಭಾಗಗಳಲ್ಲಿ ಕೃತಿಯ ಆಯಾಭಾಗಗಳ ಬರಹವನ್ನು ಯಥಾ ಲಿಖಿತವಾಗಿ ಕೊಟ್ಟಿದೆ. ಇಲ್ಲಿ ಆ ಭಾಗವಿರುವ ಗರಿಗಳು ಆ

ಕಟ್ಟಿನಲ್ಲಿ ಎಲ್ಲಿವೆ ಎಂದು ಸೂಚಿಸಲು ಅವು ಲಿಖಿತವಾಗಿರುವ ಪುಟ ಸಂಖ್ಯೆಯನ್ನು ನಿರ್ದೇಶಿಸಿದೆ. (ಪುಟಸಂಖ್ಯೆ ಎಂದರೆ ಆ ಗ್ರಂಥದ ಪತ್ರ ಸಂಖ್ಯೆ) ಪತ್ರಸಂಖ್ಯೆ ಇರುವ ಪತ್ರದ ಪಾರ್ಶ್ವವನು ಮುಂಭಾಗವೆಂದೂ ಪತ್ರ ಸಂಖ್ಯೆಯಿಲ್ಲದ ಪಾರ್ಶ್ವವನ್ನು ಹಿಂಭಾಗವೆಂದೂ ಸೂಚಿಸಿದೆ.

" 'ಆದಿ', 'ಅಂತ್ಯ'ಗಳ ಮುಂದೆ ಓಲೆಪುಟವನ್ನು ಅದರ ಮುಂದೆ ಸಾಲಿನ ಸಂಖ್ಯೆಯನ್ನು ಸೂಚಿಸಲಾಗಿದೆ. ಸಾಲಿನ ಸಂಖ್ಯೆಯನ್ನು ಸೂಚಿಸಿರುವ ಕಡೆ ಉದ್ಧೃತ ಭಾಗವು ಆ ಸಂಖ್ಯೆಯ ಸಾಲಿನಿಂದ ಪ್ರಾರಂಭವಾಗಿದೆಯೆಂದೂ, ಸಾಲಿನ ಸಂಖ್ಯೆಯನ್ನು ಸೂಚಿಸಿಲ್ಲದ ಕಡೆ ಪತ್ರದ ಮೊದಲನೆಯ ಸಾಲಿನಿಂದಲೇ ಆರಂಭವಾಗುತ್ತದೆಂದೂ ತಿಳಿಯ ತಕ್ಕದು. ಆದಿ ಮತ್ತು ಅಂತ್ಯ ವಿಭಾಗಗಳಲ್ಲಿ ಗ್ರಂಥದ ಸ್ವರೂಪ ತಿಳಿಯಲಾಗುವಂತೆ ಯಥಾವತ್ತಾಗಿ ಗ್ರಂಥ ಪಾಠವನ್ನು ಉದ್ಧರಿಸಲಾಗಿದೆ. ಈ ಉದ್ಧೃತ ಭಾಗಗಳಲ್ಲಿ ಇರುವ "xx" ಚಿಹ್ನೆಗಳು ಗರಿ ತ್ರುಟಿತವಾಗಿರುವುದನ್ನು, "xx......." ಈ ಚಿಹ್ನೆ ತ್ರುಟಿತವಾಗಿರುವ ಭಾಗ ಮುಂದುವರಿದಿರುವುದನ್ನು ಸೂಚಿಸುತ್ತದೆ. "..........."ಈ ಚಿಹ್ನೆಯು ಗ್ರಂಥಪಾಠದ ಮುಂದುವರಿಕೆಯನ್ನು ಸೂಚಿಸುತ್ತದೆ. ಮತ್ತು ಕೆಲವು ಕಡೆ "[ ]" ಈ "ಚೌಕ" ಕಂಸವನ್ನು ಬಳಸಿದ್ದು ಈ ಕಂಸದೊಳಗೆ ಇರುವ ಪಾಠವನ್ನು ಭಾಗದ ಗರಿ ತ್ರುಟಿತವಾಗಿದ್ದು ಅಥವಾ ಅಸ್ಪಷ್ಟವಾಗಿದ್ದು ಸಂಪಾದಕರು ಊಹಿಸಿ ನಿರ್ಧರಿಸಿರುವ ಪಾಠವಾಗಿರುತ್ತದೆ.

ವಿಶೇಷ ವಿವರಣೆ ವಿಭಾಗದಲ್ಲಿ ಗ್ರಂಥಪಾಠಕ್ಕೆ ಮತ್ತು ಹಸ್ತಪ್ರತಿ ಸ್ವರೂಪಕ್ಕೆ ಸಂಬಂಧಪಟ್ಟಂತೆ ಲಿಪಿಯ ಸ್ವರೂಪ, ಪ್ರತಿಯ ಸ್ಥಿತಿಗತಿ, ಶಕಟರೇಫದ ಬಳಕೆ, ಪಾಠದ ಸಮಗ್ರತೆ, ಲುಪ್ತಗರಿಗಳ ವಿವರ, ಲಿಪಿಗಾರರು, ಅಂಕಿತಗಳು ಇತ್ಯಾದಿ ವಿವರಗಳನ್ನು ಕೊಟ್ಟಿದೆ. ಕೆಲವು ಕಟ್ಟುಗಳಲ್ಲಿರುವ ಕನ್ನಡ ಲಿಪಿಯ ಸಂಸ್ಕೃತ ಅಥವಾ ತೆಲುಗು ಭಾಷೆಗಳ ಗ್ರಂಥಗಳನ್ನು ಅನುಬಂಧದಲ್ಲಿ ಪ್ರತ್ಯೇಕ ಪಟ್ಟಿ ಮಾಡಲಾಗಿದೆ".[4]

"ಉದಾಹರಣೆಗೆ ಬಿ.ಎಂ.ಶ್ರೀ ಪ್ರತಿಷ್ಠಾನದ ಹಸ್ತಪ್ರತಿ ಭಂಡಾರದಲ್ಲಿರುವ "ಕರ್ನಾಟಕದ ಭಾರತ ಕಥಾಮಂಜರಿ"ಯ ವಿರಾಟಪರ್ವ ಮತ್ತು ಉದ್ಯೋಗ ಪರ್ವಗಳನ್ನೊಳಗೊಂಡ ಹಸ್ತಪ್ರತಿಯ ವರ್ಣನಾತ್ಮಕ ಸೂಚಿಯ ವಿವರಗಳನ್ನು ಗಮನಿಸೋಣ–

ಗ್ರಂಥದ ಹೆಸರು

ಕರ್ನಾಟಕದ ಭಾರತ ಕಥಾಮಂಜರಿ

ಹಸ್ತಪ್ರತಿ ಸಂಖ್ಯೆ	ಕವಿ	ಸಾಲುಗಳು
ಸಂಖ್ಯೆ 69/2	ಕುಮಾರವ್ಯಾಸ	10 ಸಾಲು
ಪ್ರಮಾಣ	ಕೃತಿಯಕಾಲ	ಅಕ್ಷರ
38–4x5ಸೆಂ.ಮೀ	ಕ್ರಿ.ಶ.1430	76
ಪತ್ರಗಳು	ಲಿಪಿಕಾರ	ಭಾಷೆ
96+2 ಪತ್ರ		ಕನ್ನಡ
ಪ್ರಕಾರ	ಪ್ರತಿಯಕಾಲ	ಲಿಪಿ
ಪದ್ಯ (ಭಾಮಿನಿಷಟ್ಪದಿ)		ಕನ್ನಡ

ವಿಷಯ:– ಮಹಾಭಾರತದ ವಿರಾಟ ಪರ್ವ ಮತ್ತು ಉದ್ಯೋಗ ಪರ್ವಗಳು

ಆದಿ : ಓಲೆ ಪುಟ–1

ಶ್ರೀ ಗಣಾಧಿ ಪತಯೇ ನಮಃ ಶ್ರೀ ಶಾರದಾಂಬಾಯ ನಮಃ। ವಿರಾಟ ಪರ್ವ ಬರೆಯುವುದಕ್ಕೆ ಶುಭಮಸ್ತು॥

ಸೂಚನೆ:– ಕಾಯಿದರು ಸತ್ಯವನು ವನವಾ
ಸಾಯುತ ನೆಲೆಗೆಲಿದು ಪಾಂಡವ
ರಾಯರೋಲೈಸಿದರು ಒಂದು ವಿರಾಟ ನಗರಿಯಲಿ
ಕೇಳು ಜನಮೇಜಯ ಧರಿತ್ರೀ
ಪಾಲ ಮುನಿಜನ ನೃಪದನಂಗಳ
ಬೀಳುಗೊಟ್ಟನು ಭೂಮಿ ಪತಿ ಬಲವಂದು ಹುತವಹನಾ
ಮೇಲು ಶಕುನದ ಚಾರು ನಿನದವ
ನಾಲಿಸುತ ಸೋದರು ಸಹಿತವ
ನಾಲಯದ ಹೊರವಯ ಸಾರಿದರೊಂದು ವಟಕುಜವಾ

ಅಂತ್ಯ :– ಓಲೆ ಪುಟ 86 (ಹಿಂಭಾಗ) ಸಾಲು 6
ಕರಸಿದೃಷ್ಟದ್ಯು [ಮ್ನ] ನುಸಂ

ಗರಕೆ ಸೇನಾ ಪತ್ಯವನು ವಿ
ಸ್ತರಿಸಲೆಳವಡಿಸಿದರು ಸುಮುಹೂರ್ತದ ಸರಾಗದಲಿ
ಪುರದೊಳಗೆ ಗುಡಿನೆಗಹಿದವು ಭೂ
ಸುರರ ವಿಮಳಾಮ್ನಾಯ ರವ ವಿ
ಸ್ತರಿ ಸಲಳ ವಡಸಿದರು ಮxxಳ ವಿಹಿತ ವಸ್ತುಗಳ ॥33॥
ಸೂಳವಿಸಿದವು ಕಟಕದಲಿ ನಿ
ಸ್ಸಾರ ಕೋಡಿಗಳಳ್ಳಿರಿಯೆ ಹೆ
ಗ್ಗಾಳೆಗಳು ಸಾರಿದವು ಭಟರು ಭಟೆಯ ಬಿದಿರುಗಳು
ಬಾಲಕೆಯ ರಾರತಿ xxx

ವಿ.ವಿ : ಅಸಮಗ್ರ, ವಿರಾಟಪರ್ವ ಪೂರ್ತಿ ಮತ್ತು ಉದ್ಯೋಗ ಪರ್ವತದ 11ನೇ ಸಂಧಿಯ 34ನೇ ಪದ್ಯದ ವರೆಗೆ ಮಾತ್ರ ಇದೆ. ಅಂತ್ಯ ಗರಿಗಳು ಇಲ್ಲ. ಕೊನೆಯಗರಿ ನಡುನಡುವೆ ತ್ರುಟಿತವಾಗಿರುವುದರಿಂದ ಪ್ರತಿಸಾಲಿನ ಒಂದೊಂದು ಅಕ್ಷರ ಭಾಗಶಃ ಅದೃಶ್ಯ, 85ನೇ ಗರಿಯಿಂದ ಬಲಬದಿ ಅಂಚುಗಳು ಜೀರ್ಣಾವಸ್ಥೆಯಲ್ಲಿವೆ. 93ನೇ ಗರಿಯ ಕೆಲವು ಭಾಗಗಳೂ ಮುರಿದಿವೆ. ಇದೇ ಕಟ್ಟಿನಲ್ಲಿ ಕರ್ನಾಟಕ ಭಾರತ ಕಥಾ ಮಂಜರಿಯ ಇನ್ನೊಂದು ಗ್ರಂಥವಿದೆ.

ಈ ಕಟ್ಟಿನಲ್ಲಿ ಇನ್ನೂ ಮೂರು ಬಿಡಿಗರಿಗಳಿದ್ದು ಒಂದಕ್ಕೆ ಮಾತ್ರ ಪುಟಸಂಖ್ಯೆಯಿದೆ. ಇವು ಉದ್ಯೋಗಪರ್ವದ ಕಥಾ ಭಾಗಗಳನ್ನೊಳಗೊಂಡಿದೆ. ಆದರೆ ವಿರಾಟಪರ್ವ ಗ್ರಂಥದ ಬರಹಕ್ಕೂ ಉದ್ಯೋಗ ಪರ್ವ ಭಾಗದ ಗರಿಗಳ ಬರಹಕ್ಕೂ ವ್ಯತ್ಯಾಸವಿದೆ. ಪುಟಸಂಖ್ಯೆ ಇರುವ ಗರಿಯಲ್ಲಿ 46ನೇ ಪದ್ಯದ ನಂತರ 'ಅಂತೂ ಅದ್ಯಾಯ 12 ಕಂ ಪದನು 75 ಕಂ ಮಂಗಳ ಮಹಾ ಶ್ರೀ ಶ್ರೀ..... ಉದ್ಯೋಗ ಪರ್ವ ಮಂಗಳ ಮಹಾ ಶ್ರೀ ಶ್ರೀ ಅಂತೂ ಅಧ್ಯಾಯ "99 ಪದ 995 ಕಂ ಮಂಗಳ ಮಹಾಶ್ರೀ........ಶ್ರೀ ರಾಮಾನುನಮ: ಎಂದಿದೆ. ಪುಟ ಸಂಖ್ಯೆಯಿಲ್ಲದ ಇನ್ನೊಂದು ಗರಿಯಲ್ಲೂ ಅಧ್ಯಾಯ ಉದ್ಯೋಗಪರ್ವ ಸಂಪೂರ್ಣ ಎಂದಿದೆ. ಇನ್ನೊಂದು ಗರಿಯಲ್ಲಿ ಕೆಲವು ಪದ್ಯಗಳಿವೆ. ಅವುಗಳಲ್ಲಿ ಒಂದು–

ನಕುಲ ಸಹದೇವಾರ್ಜುನರ ಮಣಿ
ಮಗುಟ ಕರ್ಣಾಭರಣ ಪದಕಾ
ಧಿಕ ಸಮಸ್ತಾಭರಣ ಶೃಂಗಾರ ಡಿಕುಕೂಲ ನೆಯೊಂದರಲಿ

ನಿಕಟ ಮಾಯಾ ಷವಂತ ಕರ್ಮ

ನಿಕಟ ಬಲ್ಲರೆ ಸಾಧುಜನ ಸೇ

ವಕನು ಸೋತನು ಸೌಖ್ಯವಾವುದೊ ವಿವಿಧ ಗಣನೆಯಲಿ॥5॥10॥

ಮೇಲಿನ ಬಿ.ಎಂ.ಶ್ರೀ ಹಸ್ತಪ್ರತಿ ಭಂಡಾರದಲ್ಲಿರುವ 'ಹಸ್ತಪ್ರತಿ ವರ್ಣನಾತ್ಮಕ ಸೂಚಿ'ಯನ್ನು ನೋಡಿದಾಗ ಅದರಲ್ಲಿ ಎಲ್ಲ ವಿವರಗಳನ್ನು ಅಂದರೆ ಹಸ್ತಪ್ರತಿಯನ್ನು ನೋಡದೇ ತಿಳಿದುಕೊಳ್ಳುವಷ್ಟು ವಿವರಗಳ ವಿವರಣಾತ್ಮಕವಾದ ಸೂಚಿಯನ್ನು ತಯಾರಿಸಿದ್ದಾರೆ. ಆದರೆ ಅದಕ್ಕಿಂತ ಭಿನ್ನವಾದ ಮತ್ತೊಂದು ಸುಚಿಯನ್ನು "ಪೂನಾದ ಭಂಡಾರ್ಕರ್ ಓರಿಯಂಟಲ್ ರಿಸರ್ಚ್ ಇನ್ಸ್‌ಟಿಟ್ಯುಟಿನಲ್ಲಿ ಪ್ರಕಟವಾದ 'ಮಹಭಾರತದ' "ಆದಿಪರ್ವದ" ವಿಮರ್ಶಾತ್ಮಕ ಅಧ್ಯಯನದಲ್ಲಿ ಪ್ರೊಫೆಸರ್ ವಿ.ಎಸ್.ಸುಕ್‌ಥಂಕರ್‌ರವರು ತಮ್ಮ "ಪ್ರಾಲೆಗೋಮಿನ"ದಲ್ಲಿ ಸೂಚಿಸಿರುವ ಒಂದು ಹಸ್ತಪ್ರತಿಯ ವಿವರಣೆಯನ್ನು ಗಮನಿಸೋಣ.

ಗ್ರಂಥದ ಹೆಸರು : ಆದಿಪರ್ವ (ಮಹಾಭಾರತ)

ಸಂಕೇತ : K_2

ಸ್ಥಳ : ಪೂನಾ (ಬೊಂಬಾಯಿ ಸರ್ಕಾರದ ಸಂಗ್ರಹ : ಭಂಡಾರ್ಕರ್ ಓರಿಯಂಟಲ್ ರಿಸರ್ಚ ಇನ್ಸ್‌ಟಿಟ್ಯೂಟಿನಲ್ಲಿ ರಕ್ಷಿಸಲಾಗಿದೆ)

ಕ್ರಮಸಂಖ್ಯೆ : 192 (1891-95)

ಪುಟಸಂಖ್ಯೆ : 296 (ಇದರಲ್ಲಿ 220-30, 232-33, 236-40ಈ ಪುಟಗಳ ಬರವಣಿಗೆಯು ಬೇರೆಯವರಿಂದ ಬರೆದಂತಿದೆ)

ವ್ಯಾಪ್ತಿ : ಒಂದು ಪುಟದಲ್ಲಿ ಹನ್ನೊಂದು ಸಾಲುಗಳಿವೆ

ಅಳತೆ : 10.8 "X 4.8"

ಲಿಪಿ : ದೇವನಾಗರೀ (ಪೃಷ್ಠ ಮಾತ್ರೆಗಳೊಡನೆ)

ಕಾಲ : ವಿಕ್ರಮ ಸಂವತ್ಸರ 1964 (ಕ್ರಿ.ಶ.1938)

ಸಾಮಾಗ್ರಿ : ಭಾರತೀಯ ಕಾಗದ

ಟಿಪ್ಪಣಿ : 1. ಗ್ರಂಥದಲ್ಲಿ ಸಂಭವಿಸಿದ ತಪ್ಪುಗಳನ್ನು ಪರಿಸರದಲ್ಲೂ (ಮಾರ್ಜಿನ್), ಹಾಗೂ ಗ್ರಂಥಭಾಗದಲ್ಲೂ ತಿದ್ದಲೂ ಒಂದು ಬಗೆಯ ಹಳದಿ ಬಣ್ಣವನ್ನು ಉಪಯೋಗಿಸಿರುವಂತಿದೆ.

2. ಗ್ರಂಥದ ಅಂತ್ಯ ಭಾಗದಲ್ಲಿ (ಕೋಲೋಪೋನ್) ಉಪಪರ್ವಗಳ ಹೆಸರುಗಳಲ್ಲಿ ಅಧ್ಯಾಯಗಳ ಹೆಸರುಗಳೂ ಮತ್ತು ಅವುಗಳ ಸಂಖ್ಯೆಯನ್ನು ನಮೂದಿಸಲಾಗಿದೆ.

3. ಪರಿಸರದ (ಮಾರ್ಜಿನ್)ಲ್ಲಿರುವ ಟಿಪ್ಪಣಿಗಳಲ್ಲಿ ಪದಗಳು ಅನೇಕ ಪಾಠಾಂತರಗಳಿವೆ. ಹಾಗೂ ಮತ್ತೊಂದು ಹಸ್ತಪ್ರತಿಯಲ್ಲಿನ ಸಾಲುಗಳನ್ನು ಸೇರಿಸಲಾಗಿದೆ.

4. ಮೊದಲನೆಯ ಪತ್ರ ಹಾಗೂ ಎರಡನೆಯ ಪತ್ರದ ಸ್ವಲ್ಪ ಭಾಗವು (ಇದು ಮೊದಲನೆಯ ಪತ್ರಕ್ಕೆ ಅಂಟಿಕೊಂಡು ಹರಿದಿದೆ) ಬೇರೆ ಹಸ್ತದಿಂದ ಬರೆದಂತಿದೆ.

5. 186 ಬಿ ಸಂಖ್ಯೆಯ ಪತ್ರದಲ್ಲಿ ಮೂರು ಸಾಲುಗಳನ್ನು ಬರವಣಿಗೆಕಾರನು (ಸ್ಕ್ರೈಬ್) ಖಾಲಿಯಾಗಿ ಬಿಟ್ಟಿದ್ದಾನೆ.

6. ಫಲಶ್ರುತಿಗಳ ನಾಲ್ಕು ಶ್ಲೋಕಗಳ ಕೊನೆಯಲ್ಲಿ ಪರ್ವ ಸಂಗ್ರಹವನ್ನು ಎರಡು ಶ್ಲೋಕಗಳಲ್ಲಿ ಕೊಟ್ಟಿದೆ. ಅದರಲ್ಲಿ ಅಧ್ಯಾಯಗಳ ಸಂಖ್ಯೆ (218), ಶ್ಲೋಕಗಳ ಸಂಖ್ಯೆ (8984) ಹಾಗೂ ಹಸ್ತಪ್ರತಿಯು ಬರೆಯಲ್ಪಟ್ಟ ಕಾಲವನ್ನು "ಸಂವತ್" 1694 ವರ್ಷ ಮಾಘಶುದ್ಧಿ 10ರ ಲಿಖಿತ್ ಮಿದಮ್" ಎಂದು ಹೇಳಿದೆ. ಇದರಲ್ಲಿ ಬರವಣಿಗೆಕಾರನ ಹೆಸರಾಗಲೀ ಕುಲಗೋತ್ರಗಳಾಗಲಿ ಇಲ್ಲ".[6]

ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚ್ಯ ವಿದ್ಯಾ ಸಂಶೋಧನಾಲಯವು 1962ರಲ್ಲಿ ಪ್ರಕಟಿಸಿದ "ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ" ಎಂಬ ಗ್ರಂಥದಲ್ಲಿ ಒಂದು ಹಸ್ತಪ್ರತಿಯ ಮುಖ್ಯ ಅಂಶಗಳನ್ನು ಹೇಗೆ ವಿಭಾಗಿಸಿ ಅದರ ವಿವರಣೆಯನ್ನು ಕೊಡಬಹುದು ಎಂಬುದನ್ನು ವಿವರಿಸಿರುವ ಒಂದು ಉದಾಹರಣೆಯನ್ನು ಪರಿಶೀಲಿಸಿದಾಗ ನಮಗೆ ಬಿ.ಎಂ.ಶ್ರಿ ಸ್ಮಾರಕ ಪ್ರತಿಷ್ಠಾನಕ್ಕಿಂತ ಹೆಚ್ಚು ವಿವರವಾದ ವಿವರಗಳೇನೂ ಕಂಡು ಬರಲಿಲ್ಲ. ಏಕೆಂದರೆ ಬಿ.ಎಂ.ಶ್ರೀ ಪ್ರತಿಷ್ಠಾನದ ಸೂಚಿಯಲ್ಲಿ ಬೇರೆಲ್ಲ ಸಂಘಸಂಸ್ಥೆಗಳ, ವಿಶ್ವವಿದ್ಯಾನಿಲಯಗಳಿಗಿಂತ ಭಿನ್ನವಾಗಿದೆ, ವಿವರವಾಗಿ ಸೂಚೀ ತಯಾರಿಸಿರುವುದೇ ಒಂದು ವಿಶೇಷ.

ಮದ್ರಾಸಿನ ಗೌರ್ನಮೆಂಟ್ ಓರಿಯಂಟಲ್ ಹಸ್ತಪ್ರತಿ ಗ್ರಂಥಾಲಯದಲ್ಲಿರುವ "A Descriptive catalogue kannarese Manuscripts" ಸೂಚೀಯನ್ನು ನೋಡಿದಾಗ ಅದರಲ್ಲಿ ಎಲ್ಲ ವಿವರಗಳೊಂದಿಗೆ ಕಂಡುಕೊಂಡ ದಿನಾಂಕ ಮತ್ತು ಸ್ಥಳ, ಭಾಷಾಂತರಿಸಿದವರ ವಿವರಗಳು ಮತ್ತು ದಿನಾಂಕ ಕಂಡುಬಂತು. ಆ ನಂತರ ಬಿ.ಎಂ.ಶ್ರೀ ಹಸ್ತಪ್ರತಿಯ ವರ್ಣನಾತ್ಮಕ ಸೂಚಿಯ ಪಟ್ಟಿ"ಯನ್ನು ನೋಡಿದಾಗ

ಮೇಲಿನ ವಿವರಗಳೊಂದಿಗೆ ದಾನಿಗಳ ಹೆಸರು ವಿಳಾಸ ಮತ್ತು ಪ್ರಕಟಣೆಯ ವಿವರಗಳೂ ಸಹ ಕಂಡುಬಂದಿವೆ. ಒಂದು ಪರಿಪೂರ್ಣ ಮಾಹಿತಿಯನ್ನು ಕೊಡುವ ಸೂಚಿಯನ್ನು ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದಲ್ಲಿ ತುಂಬಾ ಪರಿಣಿತರ ಶ್ರಮದಿಂದ ತಯಾರು ಮಾಡಿರುವುದು ಇಲ್ಲಿ ಗಮನಿಸಬೇಕಾದ ಅಂಶವಾಗಿದೆ.

ಇಷ್ಟೇ ಅಲ್ಲದೆ "ಕನ್ನಡ ವಿಶ್ವವಿದ್ಯಾಲಯ", "ಮೈಸೂರು ವಿಶ್ವವಿದ್ಯಾಲಯ", "ಬೆಂಗಳೂರು ವಿಶ್ವವಿದ್ಯಾಲಯ", ಖಾಸಗಿ ಸಾಹಿತ್ಯಿಕ ಸಂಘ ಸಂಸ್ಥೆಗಳಾದ 'ವೀರಶೈವ ಅಧ್ಯಯನ ಸಂಸ್ಥೆ' (ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠಗದಗ), ಕೊಲ್ಲಾಪುರ ಶ್ರೀ ಲಕ್ಷ್ಮೀಸೇನಾ ಭಟ್ಟಾರಕ ಜೈನಬಸದಿ, ಕೆಳದಿ ಸಂಗ್ರಹಾಲಯ- ಹೀಗೆ ಹಲವಾರು ಸೂಚಿಗಳನ್ನು ಪರಿಶೀಲಿಸಿದಾಗ ಮೇಲಿನ ಹಸ್ತಪ್ರತಿ ವರ್ಣನಾತ್ಮಕ ಸೂಚಿಗಳಿಗಿಂತ ಬಹಳ ವಿಶೇಷವಾದ ಸೂಚಿಯನ್ನು ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ತನ್ನ ಪ್ರಕಟಣೆಯಲ್ಲಿ ವರ್ಣನಾತ್ಮಕ ಸೂಚಿಯನ್ನು ಪ್ರಕಟಿಸಿದೆ. ಈ ಸೂಚಿಯಲ್ಲಿ ಒಟ್ಟು 19 ವಿವರಗಳನ್ನು ಒಳಗೊಂಡ ವಿವರಣಾತ್ಮಕ ಸೂಚಿಯಾಗಿರುವು ವಿಶೇಷವೇ ಸರಿ.

ಒಟ್ಟಾರೆ ಪ್ರಾಚೀನ ಹಸ್ತಪ್ರತಿಗಳ ವಿವರಣಾತ್ಮಕ ಗ್ರಂಥಸೂಚಿಯನ್ನು ತಯಾರು ಮಾಡಲು ಪಡಬೇಕಾದ ಶ್ರಮ, ಕಾಲವ್ಯಯ ಮುಂತಾದವು ಅರ್ಥವಿಹೀನವೆಂದು ಬಗೆಯುತ್ತಿದ್ದ ವಿದ್ವಾಂಸರೂ ಇದ್ದರು. ಅಷ್ಟೇ ಅಲ್ಲದೆ ಗ್ರಂಥ ಸೂಚಿಯ ಕಾರ್ಯ ನಮ್ಮದಲ್ಲವೆಂಬ ಬಿಗುಮಾನವೂ ಅವರಲ್ಲಿತ್ತು. ಈ ಕಾರಣದಿಂದ ಅವಶ್ಯಕವಾದ ಒಂದು ಕಾರ್ಯ ನಮ್ಮ ದೇಶದಲ್ಲಿ ಹಿಂದೆ ಉಳಿಯಿತು. ಇದರ ಪರಿಣಾಮವಾಗಿ ಪ್ರಾಚೀನ ಹಸ್ತಪ್ರತಿಗಳ ಅಧ್ಯಯನ ಪರಿಷ್ಕರಣಾದಿಗಳೂ ಸಮರ್ಪಕವಾಗಿ ನಡೆಯುವುದು ದುಸ್ಸಾಧ್ಯವಾಯಿತು. ಈ ಕಾರಣಗಳಿಂದ ಇಂದು ಪ್ರಾಚ್ಯ ವಿದ್ಯಾಲಯದ ಸಂಶೋಧಕರಲ್ಲಿ ಹಸ್ತಪ್ರತಿಗಳ ವೈಜ್ಞಾನಿಕ ವಿವರಣಾತ್ಮಕ ಗ್ರಂಥ ಸೂಚಿಯ ಸಂಕಲನವನ್ನು ಎಷ್ಟೇ ಕಷ್ಟದ ಕೆಲಸವಾದರು ಕೈಗೊಳ್ಳಬೇಕೆಂಬ ನಿರ್ಧಾರವು ಉಂಟಾಗಿದೆ.

ಇಂಥ ಗ್ರಂಥ ಸೂಚಿಗಳನ್ನು ಸಿದ್ಧಪಡಿಸುವಾಗ ಅದಕ್ಕೆ ಬೇಕಾಗುವ ಕಾಲ, ಪ್ರತಿಯೊಂದು ಹಸ್ತಪ್ರತಿಯನ್ನು ತುಲನೆಮಾಡಿ ವಿಷಯವನ್ನು ಸಂಗ್ರಹಿಸುವದರಲ್ಲಿ ಇರುವ ಕಠಿಣ ಶ್ರಮದಿಂದಾಗಿ ಈ ಕೆಲಸ ಪೂರೈಸುವುದು ಬಹಳ ನಿಧಾನವಾಗುತ್ತದೆ. ಆದ್ದರಿಂದ ಈ ಕಾರ್ಯದಲ್ಲಿ ಆಸ್ಥೆಯುಳ್ಳ ವಿದ್ವಾಂಸರು ಕೆಲವು ಮಂದಿ ಮಾತ್ರ. ಮೊದಲು ಮೇಲ್ನೋಟಕ್ಕೆ ಬಹು ಉಪಯುಕ್ತವೂ, ಪುರಾತನವೂ, ಆದಕ್ಕಾಗಿ ಗೋಚರಿಸುವ ಒಂದು ಹಸ್ತಪ್ರತಿಯು ಅದರ ವಿಷಯ ವಿಶೇಷವನ್ನು ಪರಿಶೀಲಿಸಿ ದೇಶಕಾಲಗಳನ್ನು ನಿರ್ಧರಿಸುವ ವೇಳೆಗೆ ಅದೇ ಹಸ್ತಪ್ರತಿಯು ಆಗಲೇ ಪ್ರಕಟವಾಗಿರುವ ಪರಿಷ್ಕೃತ ಗ್ರಂಥ ಒಂದರ ಒಂದು ಭಾಗವಾಗಿರುವುದು ಸಹಜ.

ಹೀಗೆ ನಿರುತ್ಸಾಹದಾಯಕವಾದ ಕೆಲಸವಾದರೂ ಅದರಿಂದ ಪ್ರಾಚೀನ ಹಸ್ತಪ್ರತಿಗಳ ಅಧ್ಯಯನ ಪರಿಷ್ಕರಣಗಳಿಗೆ ಆಗುವ ಉಪಯೋಗ ಅಷ್ಟಿಷ್ಟಲ್ಲ. ನಶಿಸಿ ಹೋಗಿರುವ ಹಸ್ತಪ್ರತಿಗಳಲ್ಲಿ ಅದರ ಕರ್ತೃವಿನ ಹೆಸರಾಗಲೀ ಅಥವಾ ಗ್ರಂಥದ ಹೆಸರಾಗಲೀ ಗೊತ್ತು ಪಡಿಸುವುದು ಅತಿ ಕಷ್ಟದ ಕೆಲಸ, ಕೆಲವು ವೇಳೆ ಒಂದೇ ಹೆಸರಿನ ಅನೇಕ ಹಸ್ತಪ್ರತಿಗಳಿರುವುದೂ ಉಂಟು, ಅಥವಾ ನಾನಾ ಹೆಸರುಗಳುಳ್ಳ ಒಬ್ಬನೇ ಗ್ರಂಥ ಕರ್ತೃವಿರುವುದೂ ಉಂಟು. ಉದಾಹರಣೆಗೆ, ಒಂದು ಪ್ರತಿಯಲ್ಲಿ "ಕುಜಪೇಡ" ಎಂದು ಕರ್ತೃವಿನ ಹೆಸರಾಗಿದ್ದಿತು. ಆದರೆ ಇದೇ ಹೆಸರೆಂದು ನಿರ್ಧರಿಸುವುದು ಹೇಗೆ? ಅಲ್ಲದೆ, ಇಂಥ ಹೆಸರನ್ನು ಇಟ್ಟುಕೊಳ್ಳುವುದೂ ಅಸಂಭವೇ. ಆದರೆ ಅದೇ ಹಸ್ತಪ್ರತಿಯ ಮತ್ತೊಂದು ಭಾಗದಲ್ಲಿ ಅದರ ಕರ್ತೃವು ತನ್ನ ನಾಮಧೇಯ "ರಾಮಲೋಚನ" ಎಂದು. ಹೀಗೆಯೇ "ರಾಮಚರಣ" ನೆಂಬುವನು 'ರಘುಪತಿಪಾದ', 'ಸೀತಾಪತಿಪಾದ' ಇತ್ಯಾದಿ ಒಂದೇ ಅರ್ಥದಲ್ಲಿ ನಾಲ್ಕಾರು ಹೆಸರುಗಳನ್ನು ಹೊಂದಿರುವುದು ಸಹಜ. ಹೀಗಿರುವಾಗ ನಿರ್ದಿಷ್ಟವಾಗಿ ಇಂಥವನೇ ಗ್ರಂಥದ ಕರ್ತೃವೆಂದು ಸಿದ್ಧಪಡಿಸುವುದು ಬಹುಕಠಿಣ. ಅಂಥಹ ಕೆಲಸವನ್ನು ಸೂಚಿಮಾಡುವುದರ ಮೂಲಕ ಮೂಲವನ್ನು ತಿಳಿಯಲು ಸಾದ್ಯ.

ಹಸ್ತಪ್ರತಿಯು ಯಾವ ಶಾಸ್ತ್ರಕ್ಕೆ ಸಂಬಂಧಿಸಿದುದು, ಯಾವ ವಿಷಯವನ್ನು ನಿರೂಪಿಸುವುದು ಮುಂತಾಗಿ ನಿರ್ಧರಿಸಿ ವಿವರಣೆಯಲ್ಲಿ ಸೂಚಿಸುವಾಗ, ವಿದ್ವಾಂಸರು ಕೇವಲ ಉದಾಸೀನ ಭಾವದಿಂದ ಹಸ್ತಪ್ರತಿಯ ಶೀರ್ಷಿಕೆಯ ಆಧಾರದ ಮೇಲೆ ವಿಷಯವನ್ನು ನಿರ್ಧರಿಸಿ ಬಿಡುತ್ತಾರೆ. ಹೀಗೆ ನಾನಾ ರೀತೀಯ ಕಷ್ಟಗಳನ್ನು ಎದುರಿಸಿ, ಯಾವ ಪ್ರತಿಫಲವೂ ಇಲ್ಲದೆ ಈ ಕಾರ್ಯವನ್ನು ಸಾಧಿಸಲು ಬಹಳ ಜನ ವಿದ್ವಾಂಸರು ಹಿಂದೆಗೆಯುತ್ತಾರೆ. ಆದ್ದರಿಂದ ಪ್ರಾಚೀನ ಹಸ್ತಪ್ರತಿಗಳ ವಿವರಣಾತ್ಮಕ ಗ್ರಂಥ ಸೂಚಿಯನ್ನು ಪರಿಷ್ಕಾರಿಸುವಾಗ ಎದುರಾಗಬಹುದಾದ ವಿಘ್ನಗಳ ಪಟ್ಟಿಯೊಂದನ್ನು ಕೀಲ್‌ಹಾರ್ನ್‌ರವರು 1870ರಲ್ಲಿ ಪ್ರಕಟಿಸಿ, ವಿದ್ವಾಂಸರನ್ನು ಎಚ್ಚರಿಸಿದರು. ಅಲ್ಲಿಂದ ಇಂದಿಗೆ ನೂರು ವರ್ಷಗಳು ಕಳೆದರೂ ಇಂಥ ವಿಘ್ನಗಳನ್ನು ನಿವಾರಿಸುವ ಗೋಜಿಗೆ ಯಾವ ವಿದ್ವಾಂಸರೂ ಕೈಹಾಕದಿರುವುದು ದುರದೃಷ್ಟವೇ ಸರಿ.

ಸೂಚಿ ಮಾಡುವ ಸಂದರ್ಭದಲ್ಲಿ ಆಗುವ ದೋಷಗಳನ್ನು ಸರಿಪಡಿಸಿಕೊಳ್ಳಲು ಅಜ್ಞಾತ ಲಿಪಿಕಾರನ ಬಿನ್ನಹವನ್ನು ಇಲ್ಲಿ ಗಮನಿಸಬಹುದು.

ತಪ್ಪಂ ಬರೆದಂ ಕಡುಜಡ
ನಪ್ಪಂ ಬರೆದಾತನೆಂದು ಬಯ್ಯಲುವೇಡ

ತಪ್ಪಕ್ಕು ಶುದ್ಧಮಕ್ಕು

ತಪ್ಪುಳ್ಳರೆ ತಿದ್ದಿಕೊಳ್ಳುವುದುತ್ತಮ ಪುರುಷರ್."

ಹೀಗೆ ಒಂದು ವರ್ಣನಾತ್ಮಕ ಸೂಚಿ ಒಂದು ಕಾಲದ ಸಂಸ್ಕೃತಿ, ಸಾಮಾಜಿಕ , ಧಾರ್ಮಿಕ, ವಿಚರಗಳನ್ನೊಳಗೊಂಡಿರುವ ಹಸ್ತಪ್ರತಿಗಳಲ್ಲಿರುವ ವಿವರಗಳನ್ನು ನೀಡುವ ಒಂದು ಕೈಪಿಡಿ ಎಂದರೆ ತಪ್ಪಾಗಲಾರದು, ಇಂತಹ ಸೂಚಿಯನ್ನು ಮೊದಲು ಎಚ್.ಎಚ್.ವಿಲ್ಸನ್ ಎಂಬ ಪಾಶ್ಚತ್ಯ ವಿದ್ವಾಂಸ ಮೊಟ್ಟ ಮೊದಲಿಗೆ 1828ರಲ್ಲಿ "Mackengie collection:a Descriptive catalogue of the oritental Manuscripts vol-1" ಪ್ರಕಟಿಸಿದ್ದೇ ಮೊದಲ ಆರಂಭವಾಗಿದೆ.

ಆ) ಸಂಪಾದಿತ ಗ್ರಂಥಗಳು :-

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನವು ಪ್ರಕಟಿಸಿರುವ ಈ ಗ್ರಂಥಗಳನ್ನು

1. ಪ್ರಾಚೀನ ಗ್ರಂಥಗಳ ಸಂಪಾದನೆ
2. ದತ್ತಿ ಉಪನ್ಯಾಸ ಮಾಲೆ
3. ತಿಮ್ಮಪ್ಪದಾಸ ಪ್ರಕಾಶನ ಮಾಲೆ
4. ಜನ್ಮಶತಾಬ್ಧಿ ಸ್ಮೃತಿಮಾಲೆ
5. ಸಹೃದಯ ಗೋಷ್ಠಿ ಕೃತಿಮಾಲೆ
6. ದಶಮನೋತ್ಸವ ಸ್ಮೃತಿಮಾಲೆ
7. ಎಂ.ವಿ.ಸೀ ಸಮಗ್ರ ಸಾಹಿತ್ಯ ಮಾಲೆ
8. ದ್ವಿದಶಮನೋತ್ಸವ ಗ್ರಂಥಮಾಲೆ
9. ರಜತೋತ್ಸವ ಗ್ರಂಥಮಾಲೆ

ಹೀಗೆ ಒಟ್ಟು ಒಂಬತ್ತು ವರ್ಗಗಳಲ್ಲಿ ವಿಂಗಡಿಸಬಹುದು. ಅದರಲ್ಲಿ "ಪ್ರಾಚೀನ ಗ್ರಂಥಗಳ ಸಂಪಾದನಾ ಮಾಲೆ"ಯಡಿಯಲ್ಲಿ ಪ್ರಕಟವಾಗಿರುವ ಗ್ರಂಥಗಳ ಪರಿಚಯವನ್ನು ಈ ಕೆಳಗೆ ಮಾಡಲಾಗಿದೆ.

ಇಲಿಯವರೆಗೆ 15ಕ್ಕೂ ಹೆಚ್ಚು ಪ್ರಾಚೀನ ಗ್ರಂಥಗಳನ್ನು ಸಂಪಾದಿಸಿ, ಪರಿಷ್ಕರಿಸಿ, ಪ್ರಕಟಿಸಲಾಗಿದೆ. ಪ್ರತಿಷ್ಠಾನದ ಗ್ರಂಥ ಭಂಡಾರದಲ್ಲೇ ಇದ್ದ ಮತ್ತು ವಿದ್ವಾಂಸರು ಸಂಪಾದಿಸಿ ಸಿದ್ಧಪಡಿಸಿದ್ದಾ ಈ ಕೆಳಕಂಡ ಅಪ್ರಕಟಿತ ಗ್ರಂಥಗಳನ್ನು ಪ್ರತಿಷ್ಠಾನ ಪ್ರಕಟಿಸಿದೆ. ಅವುಗಳಲ್ಲಿ ಮುಖ್ಯವಾಗಿ

1. ಕೀರ್ತನ ಕುಸುಮಾಂಜಲಿ – ಎಂ. ವಿ. ಸೀತಾರಾಮಯ್ಯ

2. ಕುಮಾರವ್ಯಾಸ ಭಾರತ ಸಂಗ್ರಹ – ಎಂ. ವಿ. ಸೀತಾರಾಮಯ್ಯ

3. ಶ್ರೀಕೃಷ್ಣ ಬಾಲಲೀಲೆ – ಎಂ. ವಿ. ಸೀತಾರಾಮಯ್ಯ

4. ತಿಮ್ಮಪ್ಪದಾಸರ ಕೀರ್ತನೆಗಳು – ನಾ. ಗೀತಾಚಾರ್ಯ

5. ವೆಂಕಟಪ್ಪದಾಸರ ಮತ್ತು ಇತರ ಅಜ್ಞಾತ ಹರಿದಾಸರ ಕೀರ್ತನೆಗಳು – ನಾ. ಗೀತಾಚಾರ್ಯ

6. [illegible] – ಎಂ. ವಿ. ಸೀತಾರಾಮಯ್ಯ

7. ಸೂತಭಾರತ – ಜಿ.ಎಂ.ಹೆಗಡೆ

8. ಚಂದ್ರಚೂಡಾಮಣಿ ಶತಕ – ಎಂ.ವಿ.ಸೀತಾರಾಮಯ್ಯ

9. ಧ್ರುವಚರಿತ್ರೆ– ಎನ್. ಎಸ್. ಲಕ್ಷ್ಮೀನಾರಾಯಣಭಟ್

10. ಶ್ರೀನಿವಾಸ ಕಲ್ಯಾಣ – ಕೆ.ಎಂ.ಕೃಷ್ಣರಾವ್

11. ಶ್ರೀ ಕೃಷ್ಣದೇವರಾಯ ದಿನಚರಿ (ಗದ್ಯ-ಕೈಫಿಯತ್ತು) – ಸಂಪತ್ಕುಮಾರಾಚಾರ್ಯ

12. ಪದ್ಮಿನೀಕಲ್ಯಾಣ – ಎಸ್.ಶಿವಣ್ಣ (ಸಾಂಗತ್ಯ ಕಾವ್ಯ)

ಮೇಲಿನ ಎಲ್ಲ ಗ್ರಂಥಗಳನ್ನು ಗ್ರಂಥಸಂಪಾದನಾ ಶಿಸ್ತಿಗೆ ಅನುಗುಣವಾಗಿ ಸಂಪಾದಿಸಲಾಗಿದ್ದು ಪಾಠಾಂತರಗಳ ನಿಷ್ಕರ್ಷೆ, ವಿಸ್ತೃತ ಪ್ರಸ್ತಾವನೆ, ಕವಿಕಾವ್ಯ ವಿಚಾರ ಮತ್ತು ಸೂಕ್ತ ಅನುಬಂಧಗಳೊಂದಿಗೆ ಶಾಸ್ತ್ರೀಯವಾಗಿ ಸಿದ್ಧಪಡಿಸಲಾಗಿದೆ.

1. ಸೂತಭಾರತ :– ಅಪ್ರಕಟಿತ ಪ್ರಾಚೀನ ಹಸ್ತಪ್ರತಿಗಳ ಪ್ರಕಟನಾ ಕಾರ್ಯಕ್ಕೆಂದು ಕೇಂದ್ರ ಸರ್ಕಾರವು ನೀಡಿದ್ದ ಧನಸಹಾಯ ಯೋಜನೆಗೆ ಒಳಪಟ್ಟಂತೆ ಈ 'ಸೂತಭಾರತ' ಕೃತಿಯನ್ನು ಪ್ರಕಟಿಸಲಾಗಿದೆ. ಸೂತಭಾರತದ ಕವಿ ಯಾರೆಂಬುದು ತಿಳಿದುಬಂದಿಲ್ಲ. ಈತ ಕುಮಾರವ್ಯಾಸನಿಂದ ಪ್ರಭಾವಿತನಾಗಿರುವುದನ್ನು ಸಂಪಾದಕರಾದ ಡಾ॥ ಶ್ರೀಕೃಷ್ಣಭಟ್ ಅರ್ತಿಕಜೆ ಮತ್ತು ಎಂ.ಜಿ.ಹೆಗಡೆ ಹಲಸಿಗೆಯವರು ಗ್ರಂಥದ ಪೀಠಿಕೆಯಲ್ಲಿ ಸೋದಾಹರಣವಾಗಿ ತಿಳಿಸಿದ್ದಾರೆ ಹಾಗೂ ಅನೇಕಾಂಶಗಳಲ್ಲಿ ಸಂಸ್ಕೃತ ಮೂಲ ವ್ಯಾಸ ಭಾರತದಿಂದ ಭಿನ್ನವಾಗಿರುವುದನ್ನು ಸವಿವರವಾಗಿ ತೋರಿಸಿಕೊಟ್ಟಿದ್ದಾರೆ. ಕಾವ್ಯದ ಸ್ವೋಪಾಜ್ಞತೆಯನ್ನು ಮನವರಿಕೆ ಮಾಡಿಕೊಳ್ಳಲು ಸಂಪಾದಕರ ಶ್ಲಾಘ್ಯವಾದ ಈ ಸಮತೋಲನ ವಿಮರ್ಶೆ ಸಾರ್ಥಕವಾಗಿದೆ. ಅನುಬಂಧಗಳನ್ನು ಕೂಡ ಬಹುಶ್ರಮವಹಿಸಿ

ತಯಾರಿಸಿದ್ದಾರೆ. ಸೂತಭಾರತದ ಕರ್ತೃವು ವೀರನಾರಾಯಣನ ಅಂಕಿತವನ್ನು ಬಳಸಿಕೊಂಡಿದ್ದಾನೆ. ಕವಿಯ ಕಾಲ ಸು.17-18ನೆಯ ಶತಮಾನದ ಎಂದು ಶ್ರೀ ವೆಂಕಟರಾಯಾಚಾರ್ಯರು ಊಹಿಸುತ್ತಾರೆ. ಕವಿ ಆರಂಭದಲ್ಲಿ 'ಸ್ವರ್ಗಾರೋಹಣ ಬರೆವುದಕ್ಕೆ ಶುಭಮಸ್ತು' ಎಂದೂ ಹದಿಮೂರನೇ ಸಂಧಿಯ ಕೊನೆಯಲ್ಲಿ 'ಸ್ವರ್ಗಾರೋಹಣ ಸಮಾಪ್ತ' ಎಂದು ಹೇಳಿಕೊಂಡಿದ್ದಾರೂ ಕೃತಿಯ ಕೊನೆಯಲ್ಲಿ ಸೂತಭಾರತ ಸಮಪ್ತ ಎಂದು ಹೇಳಿದ್ದಾನೆ. ಹದಿನಾಲ್ಕನೇಯ ಸಂಧಿಯಲ್ಲಿ ಮಹಾಭಾರತದ ಹದಿನೆಂಟು ಪರ್ವಗಳ ಕಥೆಯನ್ನು ಹದಿನೆಂಟು ಪದ್ಯಗಳಲ್ಲಿ ಸಂಕ್ಷಿಪ್ತವಾಗಿ ಹೇಳಿದ್ದಾನೆ ಕವಿ.

2. ಚಂದ್ರ ಚೂಡಾಮಣಿ ಶತಕ:- ಛಂದೋಂಬುಧಿಕಾರ ನಾಗವರ್ಮನಿಂದ ರಚಿತವಾದ ಈಕೃತಿ "ಜ್ಞಾನಸಾರಂ" ಎಂಬ ನಾಮಾಂತರವನ್ನು ಹೊಂದಿದೆ. ಪ್ರೊ.ಎಂ.ವಿ.ಸೀತಾರಾಮಯ್ಯರವರು ಈ ಕೃತಿಯನ್ನು ಸಂಪಾದಿಸಿದ್ದಾರೆ. 1989ರಲ್ಲಿ ಸಂಪಾದಿಸಿ, ಪ್ರಕಟಿಸಲಾಗಿದೆ. ಕೃತಿಯ ಪ್ರಾರಂಭದಲ್ಲಿ ಶ್ರೀಲಕ್ಷ್ಮೀಯನ್ನು, ಮೋಕ್ಷಲಕ್ಷ್ಮೀಯನ್ನು ಬಯಸುವ ಪ್ರಾರ್ಥನಾಪದ್ಯ ಇದ್ದು ಜೀವ-ಜಗತ್ತು ಈಶ್ವರ ಇವುಗಳ ಓತಪ್ರೋತವಾದ ಸಂಬಂಧದ ವಿಮರ್ಶೆ ಕೃತಿಯ ಉದ್ದಕ್ಕೂ ಸಾರವತ್ತಾಗಿ ಬಂದಿದೆ. ಈ ಕೃತಿಯ ಪಾಠವನ್ನು ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದಲ್ಲಿದ್ದ kB 734 ನೇ ಕ್ರಮ ಸಂಖ್ಯೆ ಹಸ್ತಪ್ರತಿಯನ್ನು ಬಳಸಿಕೊಂಡು ಸಿದ್ಧಪಡಿಸಲಾಗಿದೆ. ಹಳಗನ್ನಡದಲ್ಲಿ ಪ್ರವೇಶವಿಲ್ಲದ ಓದುಗರ ಅನುಕೂಲಕ್ಕಾಗಿ ಪ್ರತಿಪದ್ಯಕ್ಕೂ ಸರಳವಾದ ಗದ್ಯಾನುವಾದವನ್ನು ಕಠಿಣ ಪದಗಳ ಅರ್ಥವನ್ನು ಕೊಟ್ಟಿದೆ.

3. ಧ್ರುವ ಚರಿತ್ರೆ:- ತಿಮ್ಮಪ್ಪದಾಸ ವಿರಚಿತ ಧ್ರುವಚರಿತ್ರೆಯನ್ನು 1983ರಲ್ಲಿ ಪ್ರೊ.ಎಂ.ವಿ.ಸೀ ಶಿಷ್ಯರಾದ ಡಾ.ಎನ್.ಎಸ್.ಲಕ್ಷ್ಮೀನಾರಾಯಣಭಟ್ಟರವರು ಸಂಪಾದಿಸಿದರು. ಸಾಂಗತ್ಯದ ಶೈಲಿಯಲ್ಲಿರುವ ಈ ಕೃತಿ ದಾಸರ ಇತರ ಕೃತಿಗಳ ಕರ್ತೃತ್ವವನ್ನು ನಿಶ್ಚಯಿಸುವಲ್ಲಿ ಧ್ರುವಚರಿತ್ರೆ ಒಂದು ಪ್ರಬಲವಾದ ಬಾಹ್ಯ ಪ್ರಮಾಣವನ್ನು ಒದಗಿಸಿದೆ. ಕವಿಯ ಹುಟ್ಟೂರಾದ ಚಿಕ್ಕನಾಯಕನಹಳ್ಳಿ, ಕವಿಯ ಹೆಸರು, ಕವಿಗೆ ಪ್ರಿಯವಾದ ದೇವತಾ ಮುದ್ರಿಕೆ, ಇವು ಈ ಕೃತಿಯಲ್ಲಿ ಮೊತ್ತಮೊದಲಿಗೆ ಒಂದೇ ಕಡೆ ಕಂಡುಬಂದವು.

ಧ್ರುವಚರಿತ್ರೆ ಈ ಕಾರಣಕ್ಕಾಗಿ ಮಾತ್ರವಲ್ಲದೆ ಬೇರೆಯ ಕಾರಣಗಳಿಗಾಗಿಯೂ ಪ್ರಮುಖವಾದ ಕೃತಿ. ಕನ್ನಡದಲ್ಲಿ ಸಾಂಗತ್ಯ ಕಾವ್ಯಗಳ ಪರಂಪರೆ ಪ್ರಾಚೀನವಾದುದು. ಈ ಪರಂಪರೆಯಲ್ಲಿ ಧ್ರುವಚರಿತ್ರೆಗೆ ಒಂದು ವಿಶಿಷ್ಟ ಸ್ಥಾನವಿದೆ. ಧ್ರುವನ ಕಥೆ ಹೇಳುವ ಸಣ್ಣ ಪ್ರಮಾಣದ ಕೃತಿಗಳು ಕೆಲವಿವೆ. ಆದರೆ ಮಹಾಕಾವ್ಯ ಸಂಪ್ರದಾಯದಲ್ಲಿ ಹೇಳಬೇಕೆಂದು ಹೊರಟ ದೀರ್ಘಕಾವ್ಯ ಇದೊಂದೇ

ಧ್ರುವಚರಿತ್ರೆ ತಿಮ್ಮಪ್ಪದಾಸರಿಂದ ರಚಿತವಾದ ಒಂದು ಸಮಗ್ರಕಾವ್ಯ. ಈಗ ದೊರೆತಿರುವ ಒಟ್ಟು 22 ಸಂಧಿಗಳಿರುವ ಈ ಸಾಂಗತ್ಯ ಕಾವ್ಯದಲ್ಲಿ ಮಧ್ಯೆ ಕೆಲವು ಓಲೆಗರಿಗಳು ಬಿಟ್ಟು ಹೋಗಿವೆ. ಇದನ್ನು ಬಿಟ್ಟರೆ ಕನ್ನಡದಲ್ಲಿ ಅಚ್ಚಾಗಿರುವ ಧ್ರುವಕಥೆ ದೊರೆಯುವುದು ಚಾಟುವಿಟ್ಟಲನಾಥನ ಕನ್ನಡ ಭಾಗವತದಲ್ಲಿ ಮಾತ್ರ. ತಿಮ್ಮಪ್ಪ ದಾಸರ ಈ ಕೃತಿ ಇಪ್ಪತ್ತೆರಡು ಅಧ್ಯಾಯಗಳಿಂದ ಕೂಡಿ ಸುಮಾರು ಒಂಬೈನೂರು ಪದ್ಯಗಳವರೆಗೆ ಬೆಳೆದಿದೆ. ಪದ್ಯಗಳ ಸಂಖ್ಯೆಯನ್ನು ಅಲಕ್ಷಿಸಿದರೂ ತಿಮ್ಮಪ್ಪದಾಸರ ಕೃತಿ ತನ್ನ ಸಾವಧಾನಗತಿಯಿಂದ ವಿವರಗಳ ಪೂರೈಕೆಯಿಂದ ಮತ್ತು ಸ್ವತಂತ್ರ ಕೃತಿಗೆ ಸಹಜವಾದ ದೀರ್ಘವರ್ಣನೆಗಳಿಂದ ಕೂಡಿ ಒಂದು ಸಮಗ್ರ ಕೃತಿಯ ಸ್ವರೂಪವನ್ನು ಪಡೆದುಕೊಂಡಿದೆ. ಕನ್ನಡದಲ್ಲಿ ಹೀಗೆ ಇಡಿಯಾಗಿ, ಇಷ್ಟು ದೀರ್ಘವಾಗಿ, ಒಂದು ಪ್ರತ್ಯೇಕ ಕೃತಿಯಾಗಿ ರಚಿತವಾಗಿರುವ ಧ್ರವಕೃತಿ ಸಧ್ಯಕ್ಕೆ ತಿಳಿದಂತೆ ಇದೊಂದೇ ಎಂದು ಹೇಳಬಹುದು.

ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಯನ ಸಂಸ್ಥೆಯು ಹಸ್ತಪ್ರತಿಭಂಡಾರದಲ್ಲಿ ಧ್ರುವನ ಕಥೆಯನ್ನೆ ವಸ್ತುವಾಗಿ ಪಡೆದ ಬೇರೆ ಮೂರು ಹಸ್ತಪ್ರತಿಗಳಿವೆ. ಆದರೆ ಅವು ಪ್ರಮಾಣದಲ್ಲಿ ತೀರ ಚಿಕ್ಕವೂ ಮತ್ತು ಇನ್ನೂ ಪ್ರಕಟವಾಗದೇ ಇರುವಂತಹವುಗಳಾಗಿವೆ.

4. <u>ಶ್ರೀನಿವಾಸ ಕಲ್ಯಾಣ</u>:– ಏರಿ ಶೇಷಚಾರ್ಯ ವಿರಚಿತ ಈ ಕೃತಿಯನ್ನು ಡಾ.ಕೆ.ಎಂ.ಕೃಷ್ಣರಾವ್ ಸಂಪಾದಿಸಿದ್ದಾರೆ. 1988ರಲ್ಲಿ ಗ್ರಂಥ ಪ್ರಕಟಣೆಗೊಂಡಿದೆ. ಭವಿಷ್ಯೋತ್ತರ ಪುರಾಣದಲ್ಲಿನ ಶ್ರೀ ವೆಂಕಟೇಶ್ವರ ಕಲ್ಯಾಣದ ಕತೆಯನ್ನಾಧರಿಸಿ ರಚಿಸಿದ ಕೃತಿಯಾಗಿದೆ. ಕೆಲವೆಡೆ ಸಂಸ್ಕೃತ ಪ್ರಾಕೃತ ಶ್ಲೋಕಗಳಿವೆ. ಬೇರೆ ಬೇರೆ ರಾಗಗಳನ್ನು ಸೂಚಿಸಲಾಗಿದೆ. ಪದ್ಯಶ್ಲೋಕಗಳ ಮಧ್ಯೆ ವಚನಗಳೂ ಇವೆ. ಹನ್ನೆರಡು ಅಧ್ಯಾಯಗಳಲ್ಲಿ ಕಥೆ ಹರಡಿದೆ. ಹದಿನೈದು ಶ್ಲೋಕಗಳು, ಹನ್ನೊಂದು ದ್ವಿಪದಿಗಳು, ಅರವತ್ತಾರು ಪದಗಳು, ಹದಿನೈದು ಪದ್ಮಗಳು, ಐವತ್ತಾರು ವಚನಗಳು, ಹದಿನಾರು ಪ್ರಾಕೃತ ಶ್ಲೋಕಗಳೂ ಇವೆ ಎಂದು ಕೃತಿಕಾರರೇ ಹೇಳಿದ್ದಾರೆ.

5. <u>ಶ್ರೀಕೃಷ್ಣದೇವರಾಯದಿನಚರಿ</u>:– (ಚಿತ್ರ ಒಂದರಲ್ಲಿ ಇದರ ಹಸ್ತಪ್ರತಿ ಇದೆ) ಈಕೃತಿ 1983ರಲ್ಲಿ ಪ್ರಕಟವಾಯಿತು. ಮುಖ್ಯ ಸಂಪಾದಕರು ಪ್ರೊ.ಎಂ.ವಿ.ಸೀ ರವರು, ಸಂಪಾದಕರು ಡಾ.ವಿ.ಎಸ್.ಎಸ್.ಆಚಾರ್ಯ ಇದು ವಿಜಯನಗರಗದ ಸಾಮ್ರಾಜ್ಯಾಧಿಪತಿಯಾಗಿದ್ದ ಕೃಷ್ಣದೇವರಾಯನ ದಿನಚರಿಯ ವಿವರಗಳನ್ನೊಳಗೊಂಡ ಬಖೈರು ರೂಪದ ತಾಳೆಗರಿ ಹಸ್ತಪ್ರತಿ. ದೊರೆಯ ಅಪ್ಪಣೆಯಂತೆ ಮುಕ್ಕುತಿಮ್ಮ ಮತ್ತು ಮಾದಯ್ಯಗಾರ ಮಲ್ಲಯ್ಯ ಎಂಬುವರು ಬರೆದಿಟ್ಟ ಅರವತ್ತಮೂರು ತಾಳೆಗರಿಗಳ ಗ್ರಂಥವಾಗಿದೆ. ಶ್ರೀರಾಮಾನುಜಾಚಾರ್ಯರ ವಂದನೆಯಿಂದ ಗ್ರಂಥವು ಪ್ರಾರಂಭಗೊಂಡು ದೊರೆಯ ಪ್ರತಿದಿನ ಕಾರ್ಯಗಳನ್ನು ತಿಳಿಸುತ್ತದೆ. ಕೃಷ್ಣದೇವರಾಯನು ಸಿಂಹಾಸನಕ್ಕೆಬಂದ ವಿಷಯ,

ದಿಗ್ವಿಜಯಗಳು, ಕೈಗೊಂಡ ತೀರ್ಥಯಾತ್ರೆಗಳು, ದೈನಂದಿನ ಕಾರ್ಯಗಳು, ಒಡ್ಡೋಲಗದ ವಿವರಗಳು, 'ಆಮುಕ್ತಮೌಲ್ಯ'ದ ರಾಜನೀತಿಯ ಕೆಲವು ಅಂಶಗಳು ಈ ಕೃತಿಯಲ್ಲಿ ವಿವರಿಸಲ್ಪಟ್ಟಿವೆ. ಆ ಕಾಲದ ಆಡುಭಾಷೆಯ ಗದ್ಯವೇ ಬಳಕೆಯಾಗಿದ್ದರೂ ನೀತಿ ಪದ್ಯಗಳು ಉದಾಹೃತಶ್ಲೋಕಗಳೂ ಇರುವುದರಿಂದ ಒಂದೆರಡು ಕಡೆ ಚಂಪೂ ಕಾವ್ಯಗಳು ಸಂಸ್ಕೃತ ಸಮಾಸ ಭೂಯಿಷ್ಠಶೈಲಿಯ ವಾಕ್ಯಗಳಿರುವುದರಿಂದ ಇಬ್ಬರು ಕವೀಶ್ವರರಲ್ಲಿ ಒಬ್ಬರು ಹೇಳಿ ಬರೆಯಿಸಿದ್ದು ಎಂಬುದರಲ್ಲಿ ಸಂದೇಹವಿಲ್ಲ. ಹಸ್ತಪ್ರತಿಯಲ್ಲಿ ಲಿಪಿಕಾರ ಸ್ಖಾಲಿತ್ಯಗಳು, ವೈಲಕ್ಷಣ್ಯಗಳೂ ಹೇರಳವಾಗಿವೆ. ಆದ್ದರಿಂದ ಕೃತಿ ಕೃಷ್ಣದೇವರಾಯನ ಕಾಲದ್ದಾದರೂ ಪ್ರಕಟಣೆಗೆ ದೊರೆತ ಹಸ್ತಪ್ರತಿಯು ಬಹುಶಃ 17–18ನೇ ಶತಮಾನಕ್ಕೆ ಸೇರುತ್ತದೆಂದು ಹೇಳಬಹುದು. ಆದರೂ ಕೃಷ್ಣ ದೇವರಾಯನ ವ್ಯಕ್ತಿತ್ವ, ಕಾರ್ಯಗಳು ಮತ್ತು ಸಾಧನೆಗಳು ಬಗ್ಗೆ ಈ ಗ್ರಂಥವು ಅತ್ಯಂತ ಅಮೂಲ್ಯ ಮಾಹಿತಿ ನೀಡುವ ಐತಿಹಾಸಿಕ ಆಕರವೆಂದು ಪರಿಗಣಿಸಬಹುದಾಗಿದೆ.

6. **<u>ಪದ್ಮಿನೀ ಕಲ್ಯಾಣ</u>:–** ಮೈಸೂರಿನ ಚಿಕ್ಕ ದೇವರಾಜ ಒಡೆಯರ ಆಸ್ಥಾನದಲ್ಲಿದ್ದು ಅವರಿಂದ ಸಂತವಿಸಲ್ಪಟ್ಟು ಪೋಷಿತಳಾದ ಶೃಂಗಾರಮ್ಮ ರಚಿಸಿದ ಕೃತಿಯೇ ಪದ್ಮಿನೀ ಕಲ್ಯಾಣ. ಇದೊಂದು ಸಾಂಗತ್ಯ ಕೃತಿಯಾಗಿದೆ. ಈ ಕೃತಿಯ ಸಂಪಾದಕರು ಎಸ್.ಶಿವಣ್ಣ 1995 ರಲ್ಲಿ ಪ್ರಕಟಗೊಂಡಿದೆ. ಪ್ರಸ್ತುತ ಕೃತಿಯಲ್ಲಿ 177ಪದ್ಯಗಳಿವೆ. ಈ ಕೃತಿಯು ಉಪಲಬ್ಧ ಹಸ್ತಪ್ರತಿಯ ಅಂತ್ಯದಲ್ಲಿ 189 ಪದ್ಯಗಳಿರುವುದಾಗಿ ತಿಳಿಸಿದ್ದಾರೆ. ಹೀಗಾಗಿ ಒಟ್ಟು ಹನ್ನೆರಡು ಪದ್ಯಗಳು ಈ ಕೃತಿಯಲ್ಲಿ ಇಲ್ಲವಾಗಿವೆ. ಪದ್ಮನೀ ಕಲ್ಯಾಣ ಎಂಬ ಹೆಸರಿನಲ್ಲಿ ಪ್ರಕಟವಾಗಿರುವ ಈ ಕೃತಿ ವೆಂಕಟೇಶಕಲ್ಯಾಣ, ಶ್ರೀನಿವಾಸಕಲ್ಯಾಣ, ಪದ್ಮಾವತೀಪರಿಣಯ ಮುಂತಾದ ಹೆಸರುಗಳಿಂದಲೂ ಪ್ರಚಲಿತವಾಗಿದೆ.

ಇ) ಹಸ್ತಪ್ರತಿಶಾಸ್ತ್ರ ಗ್ರಂಥಗಳು :–

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಸಂಶೋಧನಾ ಚಟುವಟಿಕೆಗಳಲ್ಲಿ ಕಾಲಕಾಲಕ್ಕೆ ಆವಿಷ್ಕಾರಗೊಳ್ಳುವ ನೂತನ ಅಧ್ಯಯನ ಶಿಸ್ತುಗಳಿಗೆ ಅಗತ್ಯ ಲಕ್ಷಣ ಗ್ರಂಥಗಳನ್ನು ಸಿದ್ದಪಡಿಸುವುದು ಕೂಡ ಒಂದು ಕ್ರಿಯಾಶೀಲ ಕಾರ್ಯವಾಗಿವೆ. ಶಿಸ್ತುಗಳಲ್ಲಿ ಪ್ರಕಟವಾದ ಕೃತಿ ಮತ್ತು ಅವುಗಳ ಪರಿಚಯ ಈ ಕೆಳಗೆ ಕಾಣಬಹುದು. ಕೃತಿಗಳೆಂದರೆ–

1. ಹಸ್ತಪ್ರತಿಶಾಸ್ತ್ರ ಸಂ : ಎಂ.ವಿ. ಸೀತಾರಾಮಯ್ಯ
2. ಹಸ್ತಪ್ರತಿಶಾಸ್ತ್ರ ಪರಿಚಯ – ಬಿ.ಎಸ್. ಸಣ್ಣಯ್ಯ
3. ಮಣಿಹ – ಪ್ರ. ಸಂ – ಸಿದ್ಧಯ್ಯ ಪುರಾಣಿಕ

1. **ಹಸ್ತಪ್ರತಿಶಾಸ್ತ್ರ :-** ಬಿ.ಎಂ.ಶ್ರೀ ಸ್ಮಾರಕಪ್ರತಿಷ್ಠಾನ ತನ್ನ ಗ್ರಂಥ ಭಂಡಾರದಲ್ಲಿ ಬಿ.ಎಂ.ಶ್ರೀರವರ ವಾಣಿಯಂತೆ ಹಸ್ತಪ್ರತಿಗಳನ್ನು ಸಂಗ್ರಹಿಸಿ, ಸಂರಕ್ಷಿಸಿ, ಪೋಷಿಸಿಕೊಂಡು ಬರುತ್ತಿದೆ. 1981ರಲ್ಲಿ "ಹಸ್ತಪ್ರತಿಶಾಸ್ತ್ರ"ದ ವಿಷಯವಾಗಿ ನಡೆದ ಮೂರು ದಿನಗಳ ವಿಚಾರ ಗೋಷ್ಠಿಯಲ್ಲಿ ವಿವಿದ ವಿದ್ವಾಂಸರು ಮಂಡಿಸಿದ 14 ಪ್ರಬಂಧಗಳನ್ನೊಳಗೊಂಡಿದೆ. ಈ ಗ್ರಂಥದ ಸಂಪಾದಕರು ಪ್ರೊ.ಎಂ.ವಿ.ಸೀ ಮತ್ತು ಡಾ.ಎಂ.ಚಿದಾನಂದ ಮೂರ್ತಿಯವರು ಈ ಗ್ರಂಥವು 1983ರಲ್ಲಿ ಪ್ರಕಟಗೊಂಡಿದೆ.

* 'ಕನ್ನಡ ಸಂಶೋಧನೆಯಲ್ಲಿ ಮುಂದಿನ ಹೆಜ್ಜೆ'–ಡಾ॥ ರಂ.ಶ್ರೀ ಮುಗಳಿ
* 'ಹಸ್ತಪ್ರತಿ ಶಾಸ್ತ್ರದ ಸಮಸ್ಯೆಗಳು – ಪ್ರೊ.ಎಂ.ವಿ.ಸೀ
* ಕನ್ನಡ ಹಸ್ತಪ್ರತಿಗಳ ಚರಿತ್ರೆ –ಶ್ರೀ.ಎಚ್.ದೇವೀರಪ್ಪ
* ಹಸ್ತಪ್ರತಿಶಾಸ್ತ್ರ; ಅದರ ವಿವಿಧ ಮುಖಗಳು – ಡಾ॥ ಎಂ.ಎ.ಕಲಬುರ್ಗಿ
* ಸಂಸ್ಕೃತದಲ್ಲಿ ಹಸ್ತಪ್ರತಿಶಾಸ್ತ್ರ ಮತ್ತು ಸಂರಕ್ಷಣೆ – ಡಾ॥ ಕೆ.ಕೃಷ್ಣಮೂರ್ತಿ
* ಹಸ್ತಪ್ರತಿಗಳ ಸಂಗ್ರಹಕಾರ್ಯ ಮತ್ತು ಸಂರಕ್ಷಣೆ –ಡಾ॥ ಜಿ.ವರದರಾಜರಾವ್
* ಕನ್ನಡ ಹಸ್ತಪ್ರತಿಗಳ ಸಮಗ್ರ ಗ್ರಂಥಸೂಚಿ ನಿರ್ಮಾಣ – ಶ್ರೀ.ಎಸ್.ಶಿವಣ್ಣ
* ಹಸ್ತಪ್ರತಿಗಳನ್ನು ಓದುವಿಕೆ – ಶ್ರೀ.ಎನ್.ಬಸವರಾಧ್ಯ.
* ಕನ್ನಡ ಹಸ್ತಪ್ರತಿಗಳ ಭಂಡಾರಗಳು – ಶ್ರೀ.ಬಿ.ಎಸ್.ಸಣ್ಣಯ್ಯ.
* ಕಾವ್ಯ ಗ್ರಂಥಗಳ ಸಂಪಾದನೆ – ಶ್ರೀ.ಬಿ.ಜೆ.ಮಂಜುನಾಥ್.
* ಲಕ್ಷಣ ಗ್ರಂಥಗಳ ಸಂಪಾದನೆ – ಡಾ॥ ಜೆ.ವಿ.ವೆಂಕಟಾಚಲಶಾಸ್ತ್ರೀ
* ಶಾಸ್ತ್ರ ಗ್ರಂಥಗಳ ಸಂಪಾದನೆ – ವಿದ್ವಾನ್ ಎಸ್.ಎನ್.ಕೃಷ್ಣಜೋಯಿಸ್.
* ಪಾಠ ಪರಿಷ್ಕರಣ ಮತ್ತು ಉನ್ನತ ವಿಮರ್ಶೆ – ಡಾ॥ ಎಂ.ಚಿದಾನಂದಮೂರ್ತಿ
* ಕನ್ನಡ ಗ್ರಂಥ ಸಂಪಾದನೆಗೆ ಹಿರಿಯ ವಿದ್ವಾಂಸರ ಕೊಡುಗೆ
  ಡಾ॥ ಎಸ್.ವಿದ್ಯಾಶಂಕರ.

ಹೀಗೆ ಸುಮಾರು ಹದಿನಾಲ್ಕು ಮೌಲ್ಯಯುತ ಪ್ರಬಂಧಗಳು ಹಿರಿಯ ವಿದ್ವಾಂಸರಿಂದ ನಡೆದ ವಿಚಾರ ಗೋಷ್ಠಿಯ ಫಲವಾಗಿ 'ಹಸ್ತಪ್ರತಿಶಾಸ್ತ್ರ' ಎಂಬ ಗ್ರಂಥದಲ್ಲಿ ಸ್ಥಾನ ಪಡೆದುಕೊಂಡಿವೆ. ಈ ಗ್ರಂಥ ಹಸ್ತಪ್ರತಿಗಳ ಜೊತೆಗೆ ಗ್ರಂಥ ಸಂಪಾದನೆಯಲ್ಲಿ ತೊಡಗಿಸಿಕೊಂಡು ಸಂಶೋಧನೆಯ ಕಾರ್ಯ ಕೈಗೊಳ್ಳುವವರಿಗೆ ಅತ್ಯುತ್ತಮ ಮಾರ್ಗದರ್ಶಿ ಗ್ರಂಥವಾಗಿದೆ.

2. ಮಣಿಹ :- ಇದೊಂದು ಅಭಿನಂದನಾಗ್ರಂಥ. ಡಾ.ಫ.ಗು. ಹಳಕಟ್ಟಿಯವರ ವಚನಶಾಸ್ತ್ರ, ಹಸ್ತಪ್ರತಿಗಳ ಸೇವೆಯ ನೆನಪಿಗಾಗಿ ಪ್ರತಿಷ್ಠಾನ ಹೊರತಂದ ಅಭಿನಂದನಾಗ್ರಂಥ. ಜನ್ಮಶತಾಬ್ಧಿ ಸ್ಮೃತಿ ಮಾಲೆಯಲ್ಲಿ ಕರ್ನಾಟಕದ ಗಣ್ಯ ಸಾಹಿತಿಗಳ ಜೀವನ, ಸಾಧನೆಗಳನ್ನು ಕುರಿತಂತೆ ಅನೇಕ ಗ್ರಂಥಗಳನ್ನು ಬಿ.ಎಂ.ಶ್ರೀ ಪ್ರತಿಷ್ಠಾನ ಪ್ರಕಟಿಸಿದೆ. ಈ ಮಾಲೆಯಲ್ಲಿ ಪ್ರಕಟಗೊಂಡ ಮೊದಲನೇ ಕೃತಿಯೇ ಡಾ.ಫ.ಗು.ಹಳಕಟ್ಟಿರವರ ಸಂಸ್ಮರಣಸಂಪುಟ "ಮಣಿಹ" ಇದು 1982ರಲ್ಲಿ ಪ್ರಕಟಗೊಂಡಿರು. ಈ ಕೃತಿಯ ಪ್ರ. ಸಂ : ಸಿದ್ಧಯ್ಯ ಪುರಾಣಿಕ, ಸಂಪಾದಕರು ಎಂ.ವಿ.ಸೀತಾರಾಮಯ್ಯ ಮತ್ತು ಆರ್.ಶೇಷಶಾಸ್ತ್ರಿ ಈ ಗ್ರಂಥದಲ್ಲಿ ಫ.ಗು.ಹಳಕಟ್ಟಿ–ಬದುಕು, ಬರೆಹ ಎಂಬ ಭಾಗದಲ್ಲಿ ಏಳು ಲೇಖನಗಳು; ಹಸ್ತಪ್ರತಿಗಳ ಸಂಗ್ರಹಣ ಮತ್ತು ಗ್ರಂಥ ಸಂಪಾದನ ಅನುಭವ ನಿವೇಧನ ಎಂಬ ಎರಡನೇ ಭಾಗದಲ್ಲಿ ಏಳು ಲೇಖನಗಳು; ಗ್ರಂಥ ಸಂಪಾದನೆ: ಕೇಂದ್ರ ಮುಖಗಳು ವಿಭಾಗದಲ್ಲಿ ಐದು ಲೇಖನಗಳು; ಹಸ್ತಪ್ರತಿಗಳು; ನಾಡಿನ ಆಸ್ತಿ ವಿಭಾಗದಲ್ಲಿ ಹನ್ನೊಂದು ಲೇಖನಗಳು; ಹಸ್ತಪ್ರತಿಗಳು; ನಾಡಿನ ಲಿಪಿ ವೈವಿಧ್ಯ ವಿಭಾಗದಲ್ಲಿ ಐದು ಲೇಖನಗಳು; ಗ್ರಂಥ ಸಂಪಾದನೆ: ಪೂರ್ವ ವಿದ್ವಾಂಸರ ಕೊಡುಗೆ ವಿಭಾಗದಲ್ಲಿ ಹದಿನಾಲ್ಕು ಲೇಖನಗಳಿವೆ. ಅಲ್ಲದೆ ಅನುಬಂಧದಲ್ಲಿ ಫ.ಗು.ಹಳಕಟ್ಟಿಯವರ ಜೀವನದ ಮಹತ್ವದ ಘಟನೆಗಳನ್ನು ಪಟ್ಟಿಮಾಡಲಾಗಿದೆ. ಒಟ್ಟು ಏಳು ವಿಭಾಗಗಳಲ್ಲಿ ಪ್ರಕಟಗೊಂಡಿರುವ ಮಣಿಹ ಶಾಸ್ತ್ರಗ್ರಂಥ ಹಾಗೂ ಅದರಲ್ಲಿರುವ ವಿದ್ವಜರ ಲೇಖನಗಳು ಒಂದೊಂದು ಹಸ್ತಪ್ರತಿಶಾಸ್ತ್ರ ಅಧ್ಯಯನ ಮಾಡುವ ವಿದ್ಯಾರ್ಥಿಗೆ ಅತ್ಯಂತ ಉಪಯುಕ್ತವಾಗುವುದರಿಂದ 'ಮಣಿಹ' ಅತ್ಯಂತ ಮಹತ್ವ ಪೂರ್ಣ ಗ್ರಂಥವಾಗಿದೆ.

3. ಹಸ್ತಪ್ರತಿ ಶಾಸ್ತ್ರ ಪರಿಚಯ :- 1992ರಲ್ಲಿ ಪ್ರಕಟಣೆಗೊಂಡ, ದಶಮಾನೋತ್ಸವ ಮಾಲೆಯಲ್ಲಿ ಬಿ.ಎಸ್.ಸಣ್ಣಯ್ಯರವರು ಸಂಪಾದಿಸಿದ ಒಂದು ಶಾಸ್ತ್ರ ಗ್ರಂಥವಾಗಿದೆ. ಈ ಗ್ರಂಥವು ಒಂದು ವಿಶೇಷವಾದ ವಿಷಯವನ್ನು ಪ್ರತಿಪಾದಿಸುವ ಗ್ರಂಥವಾಗಿದೆ. ಗ್ರಂಥ ಸಂಪಾದನಾ ಶಾಸ್ತ್ರದಲ್ಲಿ ಹಸ್ತಪ್ರತಿಶಾಸ್ತ್ರದ ವ್ಯಾಪ್ತಿಯಿದ್ದರೂ ಅದನ್ನು ಪ್ರತ್ಯೇಕವಾದ ಸ್ವತಂತ್ರ ಶಾಸ್ತ್ರವನ್ನಾಗಿ ಅಭ್ಯಾಸ ಮಾಡುವ ಅಗತ್ಯವಿದೆ. ಗ್ರಂಥ ಸಂಪಾದನೆಗೆ ಹಸ್ತಪ್ರತಿಗಳು ಶುದ್ಧವಾಗಿಯೂ, ಸ್ವಚ್ಛವಾಗಿಯೂ ಲಭ್ಯವಾಗುವಂತಿರಬೇಕು. ಈ ಹಿನ್ನಲೆಯಲ್ಲಿ ಹಸ್ತಪ್ರತಿಶಾಸ್ತ್ರವನ್ನು ಒಂದು ಪ್ರತ್ಯೇಕ ಶಾಸ್ತ್ರವನ್ನಾಗಿ ರೂಪಿಸುವುದಕ್ಕಾಗಿ ಈ ಗ್ರಂಥವನ್ನು ಅದರ ಮೊಟ್ಟಮೊದಲ ಕ್ರಮಬದ್ಧವಾದ ಶಾಸ್ತ್ರಗ್ರಂಥವನ್ನಾಗಿ ಹೊರತರಲಾಗಿದೆ. ಈ ಕೃತಿಯಲ್ಲಿ ಹಸ್ತಪ್ರತಿಶಾಸ್ತ್ರ, ಲೇಖನ ವಸ್ತುಗಳು, ಹಸ್ತಪ್ರತಿ ಸ್ವರೂಪ ಮತ್ತು ವಿಂಗಡಣೆ, ಸಂಗ್ರಹ, ಹಸ್ತಪ್ರತಿ ಸೂಚಿಗಳು, ಹಸ್ತಪ್ರತಿ ಸಂರಕ್ಷಣೆ, ನಿವಾರಣೋಪಾಯಗಳು, ಪರಿಚಲನೆ, ಅಕ್ಷರ ಸ್ಖಾಲಿತ್ಯಗಳು, ಗ್ರಂಥ ಸಂಪಾದನೆಗೆ ಹಸ್ತಪ್ರತಿ ತಯಾರಿಕೆ, ಪಾಠ ಪರಿಷ್ಕರಣ, ಕೇಂದ್ರ ಹಸ್ತಪ್ರತಿ ಭಂಡಾರ ಎಂಬ ವಿವಿಧ ಹಸ್ತಪ್ರತಿ ಅಧ್ಯಯನ ಶಿಸ್ತುಗಳನ್ನೊಳಗೊಂಡ ಅಧ್ಯಾಯಗಳಿವೆ.

ವಿದ್ವಾಂಸರು, ಸಂಘಸಂಸ್ಥೆಗಳು ಈ ಕ್ಷೇತ್ರದಲ್ಲಿ ವಿಶೇಷ ಆಸಕ್ತಿ ತೋರಿದುದರ ಪರಿಣಾಮವಾಗಿ ಗ್ರಂಥಸಂಪಾದನಾ ಶಾಖೆ ಇನ್ನೂ ವಿಸ್ತಾರಗೊಂಡು ವಿಶಾಲವಾದ ಅಧ್ಯಯನ ವ್ಯಾಪ್ತಿಯನ್ನು ಒಳಗೊಂಡು 80ರ ದಶಕದಲ್ಲಿ ಇನ್ನೊಂದು ಶಾಖೆಯ ಹುಟ್ಟಿಗೆ ಕಾರಣವಾಗಿದೆ. ಈವರೆಗೆ ಹಸ್ತಪ್ರತಿಗಳನ್ನು ಬಳಸಿಕೊಂಡು ಗ್ರಂಥಗಳ ಸಂಪಾದನೆಗೆ ಮಹತ್ತ್ವ ನೀಡಲಾಗುತ್ತಿತ್ತೇ ವಿನಾ ಅವುಗಳ ಸಂಗ್ರಹ ಸಂರಕ್ಷಣೆಗೆ ಅಷ್ಟು ಮಹತ್ವ ಇರಲಿಲ್ಲ. ಈ ಬಗ್ಗೆ ವಿಶೇಷ ಗಮನ ಹರಿಸಿದ ವಿದ್ವಾಂಸರ ವರ್ಗ ಮತ್ತು ಸಂಘಸಂಸ್ಥೆಗಳ ಕಾರ್ಯಶೀಲತೆಯ ಫಲವಾಗಿ ಗ್ರಂಥಸಂಪಾದನೆಗೆ ಪೂರ್ವಭಾವಿಯಾದ ಈ ಹಸ್ತಪ್ರತಿಗಳ ಸಂಗ್ರಹಣ ಸಂರಕ್ಷಣ ಸಂಪ್ರತಿ ವಿಧಾನವನ್ನೇ ಮುಖ್ಯವಾಗಿ ಒಳಗೊಂಡ ಹಸ್ತಪ್ರತಿ ಶಾಸ್ತ್ರ'ದ ನಿರ್ಮಾಣವಾಯಿತು. 1981ರಲ್ಲಿ ನಡೆದ 'ವಚನಸಾಹಿತ್ಯ ಪಿತಾಮಹ' ಫ.ಗು.ಹಳಕಟ್ಟಿ ಅವರ ಶತಮಾನೋತ್ಸವ ಸಂದರ್ಭದಲ್ಲಿ ಈ ಬಗ್ಗೆ ವ್ಯಾಪಕ ಚರ್ಚೆ ನಡೆದು ಈ ಶಾಖೆಯ ಉದಯಕ್ಕೆ ನಾಂದಿ ಹಾಕಲಾಯಿತು. ಇಂಗ್ಲೀಷ್ ನಿಘಂಟಿಗೆ 'ಹಸ್ತಪ್ರತಿಶಾಸ್ತ್ರ'ಎಂಬ ನೂತನ ಪದದ ಸೃಷ್ಟಿಯಲ್ಲಿಯೂ ಕರ್ನಾಟಕದ ಕೊಡುಗೆಯಾಯಿತು. ಈ ಶಾಸ್ತ್ರವನ್ನು ಕುರಿತಂತೆ ಪ್ರಮುಖವಾಗಿ ಎರಡು ಕೃತಿಗಳು ಈ ಅವಧಿಯಲ್ಲಿ ಪ್ರಕಟವಾದವು. ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಪ್ರಕಟಣೆಗಳಾದ 'ಮಣಿಹ' ಮತ್ತು 'ಹಸ್ತಪ್ರತಿಶಾಸ್ತ್ರ' ಎಂಬ ಈ ಎರಡು ಕೃತಿಗಳಲ್ಲಿ ಹಸ್ತಪ್ರತಿಶಾಸ್ತ್ರದ ಎಲ್ಲ ಮುಖಗಳ ಪರಿಚಯ ವಿಶ್ಲೇಷಣೆಯನ್ನೊಳಗೊಂಡ ವಿವಿಧ ವಿದ್ವಾಂಸರ ಲೇಖನಗಳಿವೆ. ಇಂದು ಈ ಕ್ಷೇತ್ರವನ್ನು ಕುರಿತಂತೆ ಪಿ.ಎಚ್‌ಡಿ, ಎಂ.ಫಿಲ್ ಅಧ್ಯಯನ, ತರಭೇತಿ ತರಗತಿಗಳು, ಗ್ರಂಥ ಪ್ರಕಟಣೆ ಮುಂತಾದ ಅಧ್ಯಯನಕಾರ್ಯಗಳು ನಡೆಯುತ್ತಿವೆ. ಈ ಅಧ್ಯಯನ ಶಾಖೆಯ ಶಿಸ್ತುಬದ್ಧ ಅಧ್ಯಯನಕ್ಕೆ ಬಿ.ಎಂ.ಶ್ರೀ ಪ್ರತಿಷ್ಠಾನದ ತನ್ನದೇ ಆದ ವಿಶಿಷ್ಟ ಕೊಡುಗೆಯನ್ನು ಸಲ್ಲಿಸಿದೆ. ಹಸ್ತಪ್ರತಿ ಶಾಸ್ತ್ರದಲ್ಲಿ 4 ತಿಂಗಳ ಅಲ್ಪಾವಧಿ ತರಭೇತಿ ಶಾಲೆಯನ್ನು 1990ರಿಂದ ನಡೆಸುತ್ತಿದ್ದು ಅನೇಕ ಆಸಕ್ತರನ್ನು ಈ ಕ್ಷೇತ್ರದತ್ತ ಬರಮಾಡುತ್ತಿವೆ. ಬಿ.ಎಸ್. ಸಣ್ಣಯ್ಯರವರ 'ಗ್ರಂಥಸಂರಕ್ಷಣೆ', ಎಚ್. ದೇವೀರಪ್ಪ ರಚಿಸಿರುವ 'ಹಸ್ತಪ್ರತಿಗಳ ಇತಿಹಾಸ' ಕೃತಿಗಳು ಹಸ್ತಪ್ರತಿಶಾಸ್ತ್ರಕ್ಕೆ ಪೂರಕವಾಗಿವೆ. ಡಾ.ಎಂ.ಎಂ. ಕಲಬುರ್ಗಿ ಅವರು 'ಕನ್ನಡ ಹಸ್ತಪ್ರತಿಶಾಸ್ತ್ರ' ಎಂಬ ಪುಸ್ತಕವನ್ನು ಪ್ರಕಟಿಸುವ ಮೂಲಕ ಈ ಶಿಸ್ತಿಗೆ ಒಂದು ಅಧಿಕೃತತೆಯನ್ನು ಕೊಟ್ಟರೆ ಹಂಪಿ ಕನ್ನಡ ವಿಶ್ವವಿದ್ಯಾಲಯ 'ಹಸ್ತಪ್ರತಿಶಾಸ್ತ್ರ ವಿಭಾಗ'ವನ್ನೇ ತೆರೆದು ವ್ಯಾಪಕ ಅಧ್ಯಯನಕ್ಕೆ ದಾರಿ ಮಾಡಿಕೊಟ್ಟಿದೆ. ಈ ನಿಟ್ಟಿನಲ್ಲಿ ಬಿ.ಎಂ.ಶ್ರೀ ಪ್ರತಿಷ್ಠಾನದಲ್ಲಿ ಹಸ್ತಪ್ರತಿಶಾಸ್ತ್ರ ತರಗತಿಯು ಆರಂಭದಿಂದ ಆ ವಿಭಾಗದ ನಿರ್ದೇಶಕರಾಗಿ ಅತ್ಯಂತ ಶ್ರದ್ಧೆ ಮತ್ತು ಪರಿಶ್ರಮದಿಂದ ಈ ಕ್ಷೇತ್ರದ ಬೆಳವಣಿಗೆಯಲ್ಲಿ ಸಕ್ರಿಯವಾಗಿ ತೊಡಗಿರುವ ಪ್ರೊ. ನಾ.ಗೀತಾಚಾರ್ಯರ 'ಹಸ್ತಪ್ರತಿಶಾಸ್ತ್ರ ವಿವೇಚನೆ' ಈ ಶಾಸ್ತ್ರಕ್ಕೊಂದು ನಿರ್ದಿಷ್ಟ ಸ್ವರೂಪವನ್ನು ಕೊಡುವ ಗ್ರಂಥವಾಗಿದೆ.

ಅಡಿಟಿಪ್ಪಣಿಗಳು

1. ಎಚ್.ಎಲ್.ಎನ್.ಭಾರತಿ, ಪ್ರಾಚೀನ ಹಸ್ತಪ್ರತಿಗಳು, ಮೈಸೂರು, 1971, ಪುಟ–12
2. ಎಂ.ವಿ.ಸೀತಾರಾಮಯ್ಯ, ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ, ಸಂಪುಟ–1 ಮುನ್ನುಡಿ, ಬೆಂಗಳೂರು, 1987.
3. ಎಂ.ವಿ.ಸೀತಾರಾಮಯ್ಯ, ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ, ಸಂಪುಟ–1 ಮುನ್ನುಡಿ, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, 1987 ಪುಟ–ix
4. ಎಂ.ವಿ.ಸೀತಾರಾಮಯ್ಯ, ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ, ಸಂಪುಟ–1 ಮುನ್ನುಡಿ, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, 1987 ಪುಟ–ix
5. ಎಂ.ವಿ.ಸೀತಾರಾಮಯ್ಯ, ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ, ಸಂಪುಟ–1 ಮುನ್ನುಡಿ, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, 1987 ಪುಟ–14,15.
6. ಎಚ್.ಎಲ್.ಎನ್.ಭಾರತಿ, ಪ್ರಾಚೀನ–ಹಸ್ತಪ್ರತಿಗಳು, ಮೈಸೂರು, 1971 ಪುಟ– 15,16.

ಅಧ್ಯಾಯ - 6

ಸಮಾರೋಪ

ಅ) ತೌಲನಿಕ ನೋಟ :-

ಪ್ರಾಚೀನ ಹಸ್ತಪ್ರತಿಗಳು ಪುರಾತನ ಕಾಲದ ಸಂಸ್ಕೃತಿ, ಪರಂಪರೆಯನ್ನು ಬಿಂಬಿಸುವ ನಿಧಿಗಳು. ಇಂತಹ ಹಸ್ತಪ್ರತಿಗಳ ಸಂಗ್ರಹ ವಿದ್ವಾಂಸರ ಅನುಕೂಲಕ್ಕೆ ತಕ್ಕಂತೆ ತಮ್ಮ ತಮ್ಮ ಇತಿ-ಮಿತಿಗಳಲ್ಲಿಯೇ ಮಾಡಿಕೊಳ್ಳುತ್ತಿದ್ದರು. ಇದು ಮುದ್ರಣದ ಅನುಕೂಲ ಇಲ್ಲದಿದ್ದಾಗ ಹಸ್ತಪ್ರತಿಗಳು ದೊರೆಯುತ್ತಿದ್ದ ಕಾಲದ ಮಾತು, ದಿನಕಳೆದಂತೆ ಹಸ್ತಪ್ರತಿಗಳು ಕ್ರಮೇಣ ಆಸಕ್ತರ ಅನುಕೂಲಕ್ಕೆ ತಕ್ಕಂತೆ ಸಂಗ್ರಹವಾದವು. ಅವುಗಳನ್ನು ನೋಡುವುವರಿರಲಿ ಇಲ್ಲದಿರಲಿ, ಒಳಗಿನ ವಿಷಯ ತಿಳಿಯಲಿ ತಿಳಿಯದಿರಲಿ, ಒಟ್ಟಿನಲ್ಲಿ ಸಂಗ್ರಹ ಮಾಡುವ ಒಂದು ಹವ್ಯಾಸ ಕೆಲವರಲ್ಲಿ, ಕೆಲವು ಸಂಸ್ಥೆಗಳಲ್ಲಿ ಪ್ರಾರಂಭವಾಯಿತು. ಕೆಲವು ಸಂದರ್ಭದಲ್ಲಿ ಉಚಿತವಾಗಿ ಪಡೆಯುತ್ತಿದ್ದರು. ಆದರೆ ಕೆಲವು ಸಂದರ್ಭದಲ್ಲಿ ಹಣಕೊಟ್ಟು ಸಂಗ್ರಹಿಸಿದ ಉದಾಹರಣೆಗಳಿವೆ. ಇಲ್ಲದಿದ್ದರೆ ಹಸ್ತಪ್ರತಿಗಳು ಹೇಳ ಹೇಸರಿಲ್ಲದೆ ನಾಶವಾಗುತ್ತಿದ್ದುದು ಸತ್ಯ. ಇಂತಹ ಕಾರ್ಯದಿಂದಲೇ ಕನ್ನಡದ ಹಸ್ತಪ್ರತಿಗಳ ಭಾರತದ ಹಲವೆಡೆಗಳಲ್ಲದೇ ವಿದೇಶಗಳಲ್ಲಿಯೂ ಕ್ರೈಸ್ತಮಿಶನರಿಗಳ ಮೂಲಕ ಹೋಗಿರುವ ಸಂಗತಿಗಳಿವೆ. 1871ರಲ್ಲಿ ಭಾರತದ ಪ್ರಪ್ರಥಮ ಸರ್ವೇಯರ್ ಜನರಲ್ ಆಗಿ ನೇಮಕಗೊಂಡು ಬಂದ ಕರ್ನಲ್ ಮೆಕೆಂಜಿಯೇ ಹಸ್ತಪ್ರತಿಗಳ ಸಂಗ್ರಹದ ಕೆಲಸ ಮಾಡಿದ ಮೊಟ್ಟಮೊದಲಿಗ ಎಂದೂ ಈತನ ಸಂಗ್ರಹದಲ್ಲಿ ಸೇರಿದ ಕನ್ನಡ ಹಸ್ತಪ್ರತಿಗಳು "1858ರಲ್ಲಿ ಸ್ಥಾಪಿತವಾದ ಮದರಾಸು ಸರ್ಕಾರಿ ಹಸ್ತಪ್ರತಿ ಭಂಡಾರಕ್ಕೆ ಸೇರ್ಪಡೆಯಾದ ಮೇಕೆಂಜಿ ಸಂಗ್ರಹವೇ ಪ್ರಪ್ರಥಮ ಸಾರ್ವಜನಿಕ ಕನ್ನಡ ಹಸ್ತಪ್ರತಿ ಭಂಡಾರ"[1] ಎಂದು ಗುರುತಿಸಲಾಗುತ್ತದೆ.

ಮೈಸೂರಿನಲ್ಲಿ 1891ರಲ್ಲಿ ಸ್ಥಾಪಿತವಾದ ಗೌರ್ನಮೆಂಟ್ ಓರಿಯಂಟಲ್ ಲೈಬ್ರರಿಯೇ ಕರ್ನಾಟಕದಲ್ಲಿ ಹಸ್ತಪ್ರತಿಗಳನ್ನು ಸಂಗ್ರಹಿಸುವ ಮೊದಲ ಸಂಸ್ಥೆಯಾಯಿತು. ಇದನ್ನು ಬಿಟ್ಟರೆ ಸರ್ಕಾರದ ವತಿಯಿಂದ ಪ್ರಾರಂಭವಾದ ಇನ್ನೊಂದು ಸಂಸ್ಥೆಯೆಂದರೆ 1939ರಲ್ಲಿ ಸ್ಥಾಪನೆಗೊಂಡ ಧಾರವಾಡದ ಕನ್ನಡ ಸಂಶೋಧನ ಸಂಸ್ಥೆ. 1980ರ ಸಂದರ್ಭದಲ್ಲಿ ಕರ್ನಾಟಕದಲ್ಲಿ ಆಗತಾನೇ ಅಸ್ತಿತ್ವಕ್ಕೆ ಬಂದಿದ್ದ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ತನ್ನದೇ ಆದ ಕೊಡಗೆಯನ್ನು ನೀಡಿದೆ. "ಹಸ್ತಪ್ರತಿಶಾಸ್ತ್ರ" ಎಂಬ ಪದದ ನಿಷ್ಪತ್ತಿಯಿಂದ

ಹಿಡಿದು ಈ ಶಿಸ್ತಿನ ಅಧ್ಯಯನ ಸ್ವರೂಪದ ನಿಷ್ಕರ್ಷೆ, ಶಾಸ್ತ್ರಗ್ರಂಥ ಸಿದ್ಧತೆ, ನಾಡಿನಾದ್ಯಂತ ವಿಚಾರ ಗೋಷ್ಠಿಗಳ ಮೂಲಕ ಹಸ್ತಪ್ರತಿ ಶಾಸ್ತ್ರಕ್ಕೆ ಹೊಸ ರೂಪವನ್ನು ಕೊಟ್ಟು, ಶಿಸ್ತುಬದ್ಧ ಅಧ್ಯಯನಕ್ಕೆ, ಅಧ್ಯಯನ ವಸ್ತುವಾಗಿ ಹಸ್ತಪ್ರತಿಗಳನ್ನು ಬಳಸಿಕೊಳ್ಳುವಂತೆ ಮಾಡಿದೆ. ಹಸ್ತಪ್ರತಿಭಂಡಾರಗಳ ಮುಖ್ಯ ಕಾರ್ಯವೇ ಸಂಗ್ರಹ–ಸಂರಕ್ಷಣೆ–ಸಂಪ್ರತಿಯಾಗಿದ್ದು ಆ ಕಾರ್ಯವನ್ನು ಸಂಸ್ಥೆಗಳು ಯಾವ ರೀತಿಯಲ್ಲಿ ಮಾಡುತ್ತಿವೆ. ಬೇರೆಲ್ಲವುಗಳಿಗಿಂತ ಬೆಂಗಳೂರಿನ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಹೇಗೆ ಅದರ ಕಾರ್ಯವನ್ನು ಬೇರೆ ಬೇರೆ ನಿಟ್ಟಿನಲ್ಲಿ ಮಾಡುತ್ತಿದೆ ಎನ್ನುವ ಪರಾಮರ್ಶೆ ಇಲ್ಲಿದೆ.

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ 'ವಚನಶಾಸ್ತ್ರ ಪಿತಾಮಹ' ಡಾ.ಫ.ಗು.ಹಳಕಟ್ಟಿಯವರ ಜನ್ಮಶತಮನೋತ್ಸವವದ ನೆನಪಿಗಾಗಿ 1981ನೇ ವರ್ಷವನ್ನು 'ಹಸ್ತಪ್ರತಿವರ್ಷ' ವನ್ನಾಗಿ ಆಚರಿಸಿ ಕನ್ನಡ ನಾಡಿನಾದ್ಯಂತ ಒಂದು ಆಂದೋಲನವನ್ನೇ ಉಂಟುಮಾಡಿತು. ಹಾಗಾದರೆ ಇಂತಹ ಹೆಗ್ಗಳಿಕೆಯನ್ನು ಪಡೆದಿರುವ ಬಿ.ಎಂ.ಶ್ರೀ ಪ್ರತಿಷ್ಠಾನ ಆರಂಭಕ್ಕೂ ಮುಂಚೆ ನಾಡಿನಲ್ಲಿದ್ದ ಹಸ್ತಪ್ರತಿ ಭಂಡಾರಗಳ ಕಾರ್ಯವೈಖರಿ ಹಾಗೂ ಬಿ.ಎಂ.ಶ್ರೀ ಪ್ರತಿಷ್ಠಾನ ಆರಂಭವಾದ ನಂತರ ಪ್ರಾರಂಭವಾದ ಹಸ್ತಪ್ರತಿ ಭಂಡಾರಗಳ ಕಾರ್ಯವೈಖರಿಯ ಒಂದು ತೌಲನಿಕ ನೋಟವನ್ನು ಈ ಕೆಳಗೆ ನೋಡಲಾಗಿದೆ.

ಆ) ಪ್ರತಿಷ್ಠಾನಕ್ಕಿಂತ ಮುಂಚಿನ ಹಸ್ತಪ್ರತಿ ಭಂಡಾರಗಳು :–

(ಅ) ಓರಿಯಂಟಲ್ ರೀಸರ್ಚ್ ಇನ್‌ಸ್ಟಿಟ್ಯೂಟ್, ಮೈಸೂರು :– ಇದೊಂದು ಸ್ವತಂತ್ರ ಸಂಸ್ಥೆಯಾಗಿ ಪ್ರಾರಂಭವಾಗಿ, ಮೈಸೂರಿನಲ್ಲಿ ಹಸ್ತಪ್ರತಿಗಳ ಸಂಗ್ರಹದ ಬಗ್ಗೆ ನಾಂದಿ ಆಡಿದ ಮೊಟ್ಟಮೊದಲ ಸಂಸ್ಥೆ. ಇದು ಮಹಾರಾಜ ಚಾಮರಾಜ ಓಡೆಯರ್ ಅವರು ಬಿ.ಎಲ್.ರೈಸ್ ಅವರ ನೇತೃತ್ವದಲ್ಲಿ 1884ರಲ್ಲಿ ಸ್ಥಾಪಿಸಿದ ಪುರಾತತ್ವ ಇಲಾಖೆಯಾಗಿ ಅಸ್ತಿತ್ವದಲ್ಲಿದ್ದರೂ ಹಸ್ತಪ್ರತಿಗಾಗಿಯೇ 1891ರಲ್ಲಿ "ಗವರ್ನಮೆಂಟ್ ಓರಿಯಂಟಲ್ ಲೈಬ್ರರಿ' ಹೆಸರಿನಲ್ಲಿ ಈ ಸಂಸ್ಥೆಯನ್ನು ಸ್ಥಾಪಿಸಿದರು. ಆಗ ಇದರ ಮುಖ್ಯ ಉದ್ದೇಶ ಹಸ್ತಪ್ರತಿಗಳನ್ನು ಸಂಗ್ರಹಿಸಿ ಪರಿಶೋಧಿಸಿ ಪ್ರಕಟಿಸುವುದಾಗಿತ್ತು. ನಂತರ ಈ ಸಂಸ್ಥೆಗೆ ಆರ್ಕಿಯಾಲಾಜಿಕಲ್ ವಿಭಾಗವೂ ಸೇರ್ಪಡೆಯಾಗಿ, ಇದರ ಪ್ರಥಮ ಕ್ಯೂರೇಟರ್ ಆಗಿ ಆಯ್ಕೆಯಾದವರು ಪಂಡಿತ್.ಎ.ಮಹದೇವಶಾಸ್ತ್ರಿ. ಕೌಟಿಲ್ಯನ ಅರ್ಥಶಾಸ್ತ್ರದ ಅಮೂಲ್ಯ ಹಸ್ತಪ್ರತಿಯನ್ನು ಸಂಪಾದಿಸಿದ ಅರ್ಥಶಾಸ್ತ್ರದ ಖ್ಯಾತಿಯ ಡಾ.ಆರ್.ಶಾಮಶಾಸ್ತ್ರಿ ಅವರು ಪ್ರಕಟಣೆಗಳನ್ನು ಆರಂಭಿಸಿದರು. 1966ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಗೆ ಇದರಲ್ಲಿದ್ದ ಕನ್ನಡ ಹಸ್ತಪ್ರತಿ ವಿಭಾಗವನ್ನು ಸೇರಿಸಲಾಯಿತು. ಪಾಳಿ, ಸಂಸ್ಕೃತ, ಉರ್ದು, ಪರ್ಶಿಯನ್ ಮುಂತಾದ ಅನ್ಯಭಾಷೆಯ 1000 ಅಪೂರ್ವ

ಹಸ್ತಪ್ರತಿಗಳೊಂದಿಗೆ 30 ಸಾವಿರಕ್ಕೂ ಅಧಿಕ ಸಂಸ್ಕೃತ ಹಸ್ತಪ್ರತಿಗಳನ್ನು ಹೊಂದಿರುವ ದೇಶದ ಅತಿ ದೊಡ್ಡ ಹಸ್ತಪ್ರತಿ ಭಂಡಾರವೆನಿಸಿದೆ.

(ಆ) ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ :- 1939ರಲ್ಲಿ ಸ್ಥಾಪಿತವಾದ ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯು ಸುಮಾರು 3000ಕ್ಕೂ ಅಧಿಕ ಹಸ್ತಪ್ರತಿಗಳನ್ನು ಸಂಗ್ರಹಿಸಿರುವುದಾಗಿ ತಿಳಿದಿದೆ. ಉತ್ತರ ಕರ್ನಾಟಕದಲ್ಲಿ ಮೊಟ್ಟಮೊದಲು ಪ್ರಾರಂಭಗೊಂಡ ಸ್ವತಂತ್ರ ಸಂಸ್ಥೆ ಎಂಬ ಗೌರವ ಇದಕ್ಕಿದೆ ಇದರ ಪ್ರಥಮ ನಿರ್ದೇಶಕರನ್ನಾಗಿ ಆರ್.ಎಸ್.ಪಂಚಮುಖಿಯವರನ್ನು ನೇಮಿಸಿತು. ಇವರು ವಿಶೇಷ ಆಸಕ್ತಿಯಿಂದ ಭಂಡಾರವನ್ನು ಇನ್ನಷ್ಟು ಅಭಿವೃದ್ಧಿಪಡಿಸಿದರು. ಡಾ.ಫ.ಗು.ಹಳಕಟ್ಟಿಯವರ ಕಾರ್ಯ ಈ ಸಂಸ್ಥೆಯ ಮೇಲೆ ಪ್ರಭಾವ ಬೀರಿದೆ.

(ಇ) ಕನ್ನಡ ಅಧ್ಯಯನ ಪೀಠ, ಧಾರವಾಡ ವಿಶ್ವವಿದ್ಯಾಲಯ :- ಕರ್ನಾಟಕದಲ್ಲಿರುವ ವಿಶ್ವವಿದ್ಯಾನಿಲಯಗಳ ಕನ್ನಡ ವಿಭಾಗಗಳು ಹಸ್ತಪ್ರತಿಗಳ ಸಂಗ್ರಹವನ್ನು ಒಂದು ಮುಖ್ಯ ಚಟುವಟಿಕೆಯಾಗಿ ಹೊಂದಿವೆ. ಹಸ್ತಪ್ರತಿ ಸಂಪಾದನಾ ವಿಭಾಗವನ್ನು ತೆರೆದು ಹಸ್ತಪ್ರತಿ ಸಂಗ್ರಹ ಕಾರ್ಯದಲ್ಲಿ ತೊಡಗಿ ಈ ಕ್ಷೇತ್ರ ಜೀವಂತವಾಗಿರುವಂತೆ ಮಾಡಿರುವುದಕ್ಕೆ ಸಾಕ್ಷಿಯಾಗಿವೆ. 1962ರಲ್ಲಿ ಆರಂಭವಾದ ಕರ್ನಾಟಕ ವಿಶ್ವವಿದ್ಯಾಲಯದ ಪ್ರಥಮ ವಿಭಾಗವಾಗಿ ಕಾರ್ಯ ಪ್ರಾರಂಭಿಸಿದ ಕನ್ನಡ ಅಧ್ಯಯನ ಪೀಠ, 'ವಚನ ಸಾಹಿತ್ಯ ಪ್ರಕಟಣೆ ಯೋಜನೆ'ಯೊಂದನ್ನು ಕೈಗೆತ್ತಿಕೊಂಡು ಅದರ ಅಂಗವಾಗಿ ಹಸ್ತಪ್ರತಿ ಸಂಗ್ರಹ ಕಾರ್ಯವನ್ನು ನಡೆಸಿವೆ. ಡಾ.ಫ.ಗು ಹಳಕಟ್ಟಿಯವರು ವೈಯಕ್ತಿಕವಾಗಿ ಸಂಪಾದಿಸಿದ್ದ 1000 ಹಸ್ತಪ್ರತಿಗಳನ್ನು ಪಡೆದು ಅದರೊಂದಿಗೆ ಬೇರೆ ಬೇರೆ 4000 ಹಸ್ತಪ್ರತಿಗಳೂ ಸೇರಿ ಒಟ್ಟು 5000 ಹಸ್ತಪ್ರತಿಗಳನ್ನು ತನ್ನಲ್ಲಿ ಹೊಂದಿದೆ. 1992ರಲ್ಲಿ ಕನ್ನಡ ಸಂಶೋಧನ ಸಂಸ್ಥೆಯಲ್ಲಿ ಧೂಳು ಹಿಡಿಯುತ್ತಿದ್ದ 3000 ಹಸ್ತಪ್ರತಿಗಳನ್ನು ವಿಶ್ವವಿದ್ಯಾಲಯ ಹಸ್ತಪ್ರತಿ ಭಂಡಾರಕ್ಕೆ ಸೇರಿಸಿಕೊಳ್ಳುವ ಮೂಲಕ ಒಟ್ಟು 8000 ಹಸ್ತಪ್ರತಿಗಿಂತ ಹೆಚ್ಚು ಸಂಗ್ರಹಿಸಿದ ಕೀರ್ತಿ ಪಡೆದಿದೆ. ವಿಭಾಗದ ಮುಖ್ಯಸ್ಥರಾಗಿ ಡಾ.ಆರ್.ಸಿ.ಹಿರೇಮಠರವರು, ಡಾ.ಎಂ.ಎಸ್.ಸುಂಕುಪುರ, ಡಾ.ಎಂ.ಎಂ.ಕಲಬುರ್ಗಿ ಮುಂತಾದ ವಿದ್ವಾಂಸರ ಅವಿರತ ಶ್ರಮ, ಸೇವೆ, ಮತ್ತು ಸಾಧನೆಗಳಿಂದ ಈ ಹಸ್ತಪ್ರತಿ ವಿಭಾಗ ಶ್ರೀಮಂತವಾಗಿ ಬೆಳೆದಿದೆ. ದಾಸಸಾಹಿತ್ಯವನ್ನು ಅಧ್ಯಯನ ಸಂಸ್ಥೆ ಕೇಂದ್ರವಾಗಿಟ್ಟುಕೊಂಡರೆ, ವಚನ ಸಾಹಿತ್ಯವನ್ನು ಅಧ್ಯಯನ ಪೀಠ ಕೇಂದ್ರವಾಗಿಟ್ಟುಕೊಂಡು ಜಾಗೃತಿ ಕಾರ್ಯ ಮಾಡುತ್ತಿದೆ.

(ಈ) ಕನ್ನಡ ಅಧ್ಯಯನದ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ :- ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆ 1966ರಲ್ಲಿ ವಿದ್ಯಾ ಇಲಾಖೆಯಿಂದ

ಬಂದ ಕನ್ನಡ ಹಸ್ತಪ್ರತಿಗಳಿಂದ ಆರಂಭವಾದ ಇಲ್ಲಿಯ ಸಂಪಾದನಾ ವಿಭಾಗ ಪ್ರತ್ಯೇಕ ಅಧ್ಯಯನ ವಿಭಾಗವಾಗಿ ಅನೇಕ ಸಂಶೋಧನಾ ಚಟುವಟಿಕೆಗಳನ್ನು ಕೈಗೊಂಡಿದೆ. ಕ್ಷೇತ್ರ ಕಾರ್ಯದ ಮೂಲಕ ಇನ್ನಷ್ಟು ಹಸ್ತಪ್ರತಿಗಳನ್ನು ಸಂಗ್ರಹಿಸಿತು. ಒಟ್ಟು 5000ಕ್ಕೂ ಹೆಚ್ಚು ಹಸ್ತಪ್ರತಿಗಳನ್ನು ಸಂಗ್ರಹಿಸಿದೆ. 150ಕ್ಕೂ ಹೆಚ್ಚು ಗ್ರಂಥಗಳ ಸಂಪಾದನಾ ಕಾರ್ಯ ಶ್ರೀ.ಹೆಚ್.ದೇವೀರಪ್ಪ, ಬಿ.ಎಸ್.ಸಣ್ಣಯ್ಯ, ಎನ್.ಬಸವರಾಧ್ಯ ಮುಂತಾದವರ ಪ್ರೋತ್ಸಾಹದಿಂದ ಮೌಲ್ಯಯುತ ಗ್ರಂಥಗಳನ್ನು ಸಂಪಾದಿಸಲು ಕಾರಣವಾಗಿದೆ. 'ದಾಸಸಾಹಿತ್ಯ ಪ್ರಕಟನಾ ಯೋಜನೆ' ಯನ್ನು ಕೈಗೊಂಡು ಸಮಗ್ರ ಕೀರ್ತನೆ ಸಂಪುಟಗಳನ್ನು ಪ್ರಕಟಿಸಿದ ಹೆಮ್ಮೆಯಿದೆ. ಈ ಸಂಸ್ಥೆಯಲ್ಲಿ ಅಮೂಲ್ಯ ಹಸ್ತಪ್ರತಿಗಳಿವೆ. ಅತ್ಯಂತ ಪ್ರಾಚೀನ ಹಸ್ತಪ್ರತಿಯಾದ ಲಿಂಗಾನುಶಾಸನಟೀಕೆ (ಕ್ರಿ.ಶ.1130) ಈ ಹಸ್ತಪ್ರತಿ ಭಂಡಾರದಲ್ಲಿದೆ.

(ಉ) ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ :- ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರ ಅಸ್ತಿತ್ವಕ್ಕೆ ಬಂದದ್ದು 1964ರಲ್ಲಿ ಆದರೆ ಅದರಲ್ಲಿ ಪ್ರಾಚೀನ ಹಸ್ತಪ್ರತಿಗಳ ವಿಭಾಗ ಪ್ರಾರಂಭಗೊಂಡಿದ್ದು 1971ರಲ್ಲಿ ಪಂಡಿತರತ್ನ ಡಾ.ಬಿ.ಶಿವಮೂರ್ತಿಶಾಸ್ತ್ರೀಯವರು ದಾನಕೊಟ್ಟ ಹಸ್ತಪ್ರತಿಗಳಿಂದ ಆರಂಭವಾಯಿತು. ಸುಮಾರು 2000 ಹಸ್ತಪ್ರತಿಗಳನ್ನು ಒಳಗೊಂಡಿರುವ ಈ ಸಂಸ್ಥೆ ಪ್ರಕಟನಾ ಕಾರ್ಯವನ್ನು ಕೈಗೆತ್ತಿಕೊಂಡಿಲ್ಲ. ಮುದ್ದಣ್ಣನ "ರಾಮಾಶ್ವಮೇಧ"ದ ಸ್ವಹಸ್ತಪ್ರತಿ ಇರುವುದು ಇಲ್ಲಿನ ಹಸ್ತಪ್ರತಿಭಂಡಾರದ ವಿಶೇಷವಾಗಿದೆ.

(ಊ) ಮೈಸೂರಿನ ಸಂಸ್ಕೃತ ಮಹಾಪಾಠಶಾಲೆ :- ಮೈಸೂರಿನ ಸಂಸ್ಕೃತ ಮಹಾ ಪಾಠಶಾಲೆ 1876ರಲ್ಲಿ ಚಾಮರಾಜ ಒಡೆಯರ್ ಅವರ ಆಸಕ್ತಿಯಿಂದ ಆರಂಭವಾದ ಈ ಪಾಠಶಾಲೆಗೆ ಪ್ರಾರಭಿಕ ಆಸ್ತಿಯಾಗಿ ಆ ಕಾಲದ ಬ್ರಿಟಿಷ್ ಅಧಿಕರಿಯಾಗಿದ್ದ ಕರ್ನಲ್ ಜಿ.ಬಿ.ಮ್ಯಾರಿಸನ್‌ನಿಂದ ಅರಮನೆಯ ಭಂಡಾರದಲ್ಲಿದ್ದ ಪ್ರಾಚೀನ ಹಸ್ತಪ್ರತಿಗಳು ವರ್ಗಾವಣೆಯಾಗಿ 'ಸರಸ್ವತಿ ಭಂಡಾರ' ಸ್ಥಾಪನೆಯಾಯಿತು. 2500ಕ್ಕೂ ಹೆಚ್ಚು ಹಸ್ತಪ್ರತಿಗಳನ್ನು ಒಳಗೊಂಡಿದೆ.

(ಋ) ಸಂಸ್ಕೃತ ಪಾಠಶಾಲೆ, ಮೇಲುಕೋಟೆ :- ಮೇಲುಕೋಟೆಯ ಸಂಸ್ಕೃತ ಪಾಠಶಾಲೆಯು 1878 ಕ್ಕಿಂತ ಹಿಂದೆಯೇ ಆರಂಭವಾದ ಸರ್ಕಾರಿ ಸಂಸ್ಕೃತ ಕಾಲೇಜಿನಲ್ಲಿ 1000ಕ್ಕೂ ಅಧಿಕ ಹಸ್ತಪ್ರತಿಗಳಿವೆ. ಆದರೆ ಇಲ್ಲಿ ಸರಿಯಾದ ಆರೈಕೆಯಿಲ್ಲದೆ ಇದು ಅವನತಿಯ ಕಡೆ ತನ್ನ ಹೆಜ್ಜೆ ಇಟ್ಟಿದೆ.

ಮೇಲಿನ ಎಲ್ಲ ಹಸ್ತಪ್ರತಿ ಭಂಡಾರಗಳೂ ಬಿ.ಎಂ.ಶ್ರೀ ಪ್ರತಿಷ್ಠಾನಕ್ಕಿಂತ ಮುಂಚೆಯೇ ಪ್ರಾರಂಭವಾಗಿದ್ದರೂ ಅವುಗಳ ಇಂದಿನ ಕಾರ್ಯ ವೈಖರಿಯನ್ನು ನೋಡಿದರೆ

ಕೇವಲ ಒಂದೆರಡನ್ನು ಬಿಟ್ಟರೆ ಉಳಿದ ಯಾವುದೇ ಸಂಸ್ಥೆಗಳು ಹಸ್ತಪ್ರತಿಗಳ ಬಗ್ಗೆ ಸರಿಯಾದ ರೀತಿಯಲ್ಲಿ ಗಮನಕೊಡುತ್ತಿಲ್ಲ ಎಂಬ ಅಂಶ ಗೋಚರವಾಗುತ್ತದೆ.

ಇ) ಪ್ರತಿಷ್ಠಾನ ಪ್ರಾರಂಭವಾದ ನಂತರದ ಹಸ್ತಪ್ರತಿ ಭಂಡಾರಗಳು:-

ಬಿ.ಎಂ.ಶ್ರೀಯವರ ವಾಣಿಯಿಂದ ಉತ್ತೇಜಿತರಾದ ಎಂ.ವಿ.ಸೀತಾರಾಮಯ್ಯರವರು 1979ರ ಮೇ 6ರಂದು ಪ್ರಾರಂಭಿಸಿದ ಈ ಸಂಸ್ಥೆಯೇ ಉದ್ದೇಶವೇ ಪ್ರಾಚೀನ ಹಸ್ತಪ್ರತಿಗಳನ್ನು ಸಂಗ್ರಹಿಸುವುದು, ಸಂರಕ್ಷಿಸುವುದು ಮತ್ತು ಸಂಪಾದಿಸಿ ಪ್ರಕಟಿಸುವುದು. ಇಂತಹ ಧ್ಯೆಯೋದ್ದೇಶ ಹೊಂದಿರುವ ಸಂಸ್ಥೆ ಪ್ರಾರಂಭವಾದ ನಂತರ ಇದರ ಪ್ರಭಾವದಿಂದ ಪ್ರೇರಣೆಯಾದ ಕರ್ನಾಟಕದಲ್ಲಿ ಕೆಲವು ಹಸ್ತಪ್ರತಿ ಸಂಸ್ಥೆಗಳು ಪ್ರಾರಂಭವಾಗಿ ಕಾರ್ಯನಿರ್ವಹಿಸುತ್ತಿವೆ. ಅವುಗಳ ಕಾರ್ಯವೈಖರಿಯ ಒಂದು ಕಿರುನೋಟ.

(ಅ) ಮಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗ :- ಮಂಗಳೂರು ವಿಶ್ವವಿದ್ಯಾಲಯದ 1982ರಲ್ಲಿ ಅಸ್ತಿತ್ವಕ್ಕೆ ಬಂದಿತು. ಪ್ರಾರಂಭದಲ್ಲೇ ಹಸ್ತಪ್ರತಿ ವಿಭಾಗವನ್ನು ತನ್ನ ಅಂಗವನ್ನಾಗಿ ಮಾಡಿಕೊಂಡು ಕರಾವಳಿ ಪ್ರದೇಶದಲ್ಲೆಲ್ಲ ಕ್ಷೇತ್ರ ಕಾರ್ಯನಡೆಸಿ ಸುಮಾರು 500ಕ್ಕೂ ಹೆಚ್ಚು ಹಸ್ತಪ್ರತಿಗಳನ್ನು ಸಂಗ್ರಹಿಸಿದೆ. ಪ್ರಕಟ ಕಾರ್ಯವನ್ನು ಪ್ರಾರಂಭಿಸಿ, ನಾ ಅದರ ಮೂಲಕ 'ಶ್ರೀಭಾಗವತೋ' ಎಂಬ ಒಂದು ಕೃತಿ ಪ್ರಕಟಿಸಿದೆ.

(ಆ) ಗುಲ್ಬರ್ಗ ವಿಶ್ವವಿದ್ಯಾಲಯ ಕನ್ನಡ ವಿಭಾಗ :- ಗುಲ್ಬರ್ಗ ವಿಶ್ವವಿದ್ಯಾಲಯದ ಕನ್ನಡ ವಿಭಾಗ 1980 ಸುಮಾರಿನಲ್ಲಿ ವಿಶ್ವವಿದ್ಯಾನಿಲಯದ ಸ್ವತಂತ್ರ ಭಾಗವಾಗಿ ಪರಿವರ್ತನೆಗೊಂಡ ಕನ್ನಡ ವಿಭಾಗ, ವಾಸ್ತವವಾಗಿ 1970ರ ಸುಮಾರಿನಿಂದಲೂ ಕರ್ನಾಟಕ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತಿತ್ತು. ಸ್ವತಂತ್ರ ಅಸ್ತಿತ್ವ ಮತ್ತು ಅಗತ್ಯ ಅನುಕೂಲಗಳು ಪ್ರಾರಂಭವಾದ ನಂತರ 1985ರಿಂದ ಗ್ರಂಥ ಸಂಪಾದನೆಯೊಂದಿಗೆ ಹಸ್ತಪ್ರತಿ ಶಾಸ್ತ್ರವನ್ನು ಸೇರಿ ಎಂ.ಎ.ವ್ಯಾಸಂಗದಲ್ಲಿ ಪ್ರಾರಂಭಿಸಿದೆ. ಕೇವಲ 250 ಹಸ್ತಪ್ರತಿಗಳನ್ನೊಳಗೊಂಡಿದೆ.

(ಇ) ಹಂಪಿ ಕನ್ನಡ ವಿಶ್ವವಿದ್ಯಾಲಯ :- ಕನ್ನಡ ಭಾಷೆಯನ್ನು ಕನ್ನಡ ವಿಶ್ವವಿದ್ಯಾಲಯದಲ್ಲಿ ನೋಡು ಎಂಬ ಮಾತಿನಂತೆ ಕನ್ನಡ ವಿಶ್ವವಿದ್ಯಾಲಯ ಕರ್ನಾಟಕದ ಸಂಸ್ಕೃತಿ ಶೋಧನೆ ಮತ್ತು ಪ್ರಸಾರಕ್ಕಾಗಿ ಆರಂಭವಾದ ವಿಶಿಷ್ಟ ವಿಶ್ವವಿದ್ಯಾನಿಲಯ 1996ರಲ್ಲಿ 'ಹಸ್ತಪ್ರತಿ ವಿಭಾಗ'ವನ್ನು ಪ್ರಾರಂಭಿಸುವ ಮೂಲಕ, ಬಳ್ಳಾರಿ ಜಿಲ್ಲೆಯಾಧ್ಯಾಂತ ಕ್ಷೇತ್ರಕಾರ್ಯದ ಮೂಲಕ ಒಂದು ಸಾವಿರಕ್ಕೂ ಅಧಿಕ ಹಸ್ತಪ್ರತಿಗಳನ್ನು ಸಂಗ್ರಹಿಸಿದೆ. ಇಡೀ ಕರ್ನಾಟಕದ ಹಸ್ತಪ್ರತಿ ಗ್ರಂಥಾಲಯಗಳಿಗೆಲ್ಲ ಇದು ಮಾತೃ ಸಂಸ್ಥೆಯಾಗಬಲ್ಲ ಸಾಮಾರ್ಥ್ಯವೂ ಇದಕ್ಕಿದೆ.

ಕರ್ನಾಟಕದದಲ್ಲಿರುವ ಮೇಲಿನ 9 ಸರ್ಕಾರಿ ಹಸ್ತಪ್ರತಿ ಭಂಡಾರಗಳನ್ನು ಬಿಟ್ಟರೆ ಇನ್ನು 20 ಹಸ್ತಪ್ರತಿಭಂಡಾರಗಳಿವೆ. ಇವುಗಳಲ್ಲಿ ಅನೇಕವು ಸೊರಗುತ್ತಿವೆ. ಕೆಲವು ಸಂಸ್ಥೆಗಳಿಗೆ ಕನಿಷ್ಠ ಆರ್ಥಿಕ ಸೌಲಭ್ಯವೂ ಇಲ್ಲದೆ ಸಿಬ್ಬಂದಿಯೂ ಇಲ್ಲದೆ ಮೇಲೇಳಲಾಗದೆ ಕಷ್ಟಪಡುತ್ತಿವೆ. ಆದರೂ ಸರ್ಕಾರಿ ಕ್ಷೇತ್ರಕ್ಕಿಂತ ಖಾಸಗಿ ಕ್ಷೇತ್ರವೇ ಉತ್ತಮ ಸ್ಥಾನದಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಮೈಸೂರು ಮತ್ತು ಧಾರವಾಡ ವಿಶ್ವವಿದ್ಯಾನಿಲಯಗಳು ಪ್ರಾಚೀನ ಹಾಗೂ ಆಕರ ಸಾಹಿತ್ಯ ನಿರ್ಮಾಣದಲ್ಲಿ ಮುಂಚೂಣಿಯಲ್ಲಿದ್ದರೆ ಬೆಂಗಳೂರು ವಿಶ್ವವಿದ್ಯಾಲಯ ಆಧುನಿಕ ಸಾಹಿತ್ಯದ ಬೆನ್ನೆಲುಬಾಗಿ ನಿಂತಿದೆ. ವಿಮರ್ಶೆ ಮತ್ತು ವೈಚಾರಿಕ ಸಾಹಿತ್ಯಕ್ಕೆ ವೇದಿಕೆಯನ್ನು ಒದಗಿಸಿ ಕನ್ನಡ ಸಾಹಿತ್ಯದಲ್ಲಿ ವಿಭಿನ್ನ ವಾಗ್ವದಗಳು ಬೆಳೆಯಲು, ಉತ್ತಮ ಸಾಹಿತ್ಯ ನಿರ್ಮಾಣವಾಗಲು ಬೆಂಗಳೂರು ವಿಶ್ವವಿದ್ಯಾನಿಲಯ ಪಣತೊಟ್ಟುದರ ಫಲವಾಗಿ ಪ್ರಾಚೀನ ಸಾಹಿತ್ಯ ಸಂಪಾದನೆಗೆ ತೊಡಗಲಿಲ್ಲ ಎನ್ನಬಹುದು."[2]

ಕರ್ನಾಟಕದಲ್ಲಿ ಸರ್ಕಾರಿ ಹಸ್ತಪ್ರತಿ ಭಂಡಾರಗಳೇ 9 ಇವೆ. ಇವಾದರೂ ಸರ್ಕಾರದ ಆರ್ಥಿಕ ಅನೂಕೂಲ ಪಡೆದು ತಜ್ಞರನ್ನು ನೇಮಿಸಿ, ವ್ಯವಸ್ಥಿತವಾಗಿ, ವೈಜ್ಞಾನಿಕ ಮಾದರಿಯಲ್ಲಿ ಹಸ್ತಪ್ರತಿ ಸಂಗ್ರಹ ಸಂರಕ್ಷಣೆ ಸಂಪ್ರತಿ ಮಾಡುವ ಕಾರ್ಯದ ಕಡೆ ಸ್ವಇಚ್ಛೆಯಿಂದ ಆಸಕ್ತಿ ವಹಿಸಿದರೆ ಇನ್ನಷ್ಟು ಕರ್ನಾಟಕದ ಸಂಸ್ಕೃತಿಯನ್ನು ಉಳಿಸಲು ಸಾಧ್ಯವಾಗುತ್ತದೆ.

ಈ) ಬಿ.ಎಂ.ಶ್ರೀ ಪ್ರತಿಷ್ಠಾನದ ಹಸ್ತಪ್ರತಿಭಂಡಾರ :–

ಮೇಲಿನ ಸರ್ಕಾರಿ, ಸರ್ಕಾರೇತರ ಹಸ್ತಪ್ರತಿಗಳ ಒಂದು ಕಿರುಪರಿಚಯವನ್ನು ನೋಡಿದಾಗ ಅವೆಲ್ಲವುಗಳಿಗಿಂತ ಭಿನ್ನವಾಗಿ ತನ್ನ ಕಾರ್ಯವನ್ನು ಕರ್ತವ್ಯದಂತೆ ಮಾಡುತ್ತಿರುವ ಖಾಸಗಿ ಸಂಸ್ಥೆ ಎಂದರೆ ಬಿ.ಎಂ.ಶ್ರೀ ಪ್ರತಿಷ್ಠಾನ. ಹೇಗೆಂದರೆ 1981ನೇ ವರ್ಷ ಡಾ.ಫ.ಗು.ಹಳಕಟ್ಟಿಯವರ ಜನ್ಮ ಶತಮನೋತ್ಸವದ ಸ್ಮರಣೆಗಾಗಿ ನಡೆಸಿದ ಹಸ್ತಪ್ರತಿ ವಿಚಾರ ಗೋಷ್ಠಿಗಳ ಮೂಲಕ 'ಮಣಿಹ' ಎಂಬ ಅಭಿನಂದನ ಗ್ರಂಥ ಪ್ರಕಟಿಸಿ, 1981ನೇ ವರ್ಷವನ್ನು 'ಹಸ್ತಪ್ರತಿ ವರ್ಷ'ವಾಗಿ ಪ್ರಕಟಿಸಿತು. ಬಿ.ಎಂ.ಶ್ರೀ ಅವರ ಅಂತರಂಗದ ಮಾತನ್ನು ಕೇಳಿದ ಎಂ.ವಿ.ಸೀತಾರಾಮಯ್ಯನವರು ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಎಂಬ 'ಗುರುಸ್ಮಾರಕ ಕಟ್ಟುವ' ಮೂಲಕ ಅವರ ಮನಸ್ಸಿನ ಆಸೆಯನ್ನು ಈಡೇರಿಸುವ ಚಿಂತನೆಯಿಂದ ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತಲಿರುವ ನಿಸ್ವಾರ್ಥ ಏಕೈಕ ಖಾಸಗಿ ಸಾಂಸ್ಕೃತಿಕ ಸಂಸ್ಥೆಯಾಗಿದೆ.

ಬೇರೆ ಯಾವುದೇ ಸಂಸ್ಥೆ ಮಾಡದಷ್ಟು ಕಾರ್ಯವನ್ನು ಈ ಸಂಸ್ಥೆ ಮಾಡಿದೆ. 'ಹಸ್ತಪ್ರತಿಶಾಸ್ತ್ರ' (1983) ಈ ಕ್ಷೇತ್ರದಲ್ಲಿ ಪ್ರತಿಷ್ಠಾನ ಪ್ರಕಟಿಸಿದ ಪ್ರಮುಖ ಕೃತಿಯಾಗಿದೆ.

ಈ ಸಂಸ್ಥೆಯು ತನ್ನ ಕಾರ್ಯವನ್ನು ಅತ್ಯಂತ ಜಾಗರೂಕತೆಯಿಂದ ಮಾಡುತ್ತಿದೆ. ಯಾವ ಸಂಸ್ಥೆಯೂ ಮಾಡದ ಕಾರ್ಯ 'ಮನೆಬಾಗಿಲಿಗೆ ಹಸ್ತಪ್ರತಿ ಪ್ರದರ್ಶನ' ಎಂಬ ನೂತನ ಕಾರ್ಯಕ್ರಮವನ್ನು ಕೈಗೊಳ್ಳುವ ಮೂಲಕ ಜನರಲ್ಲಿ ಅದರ ಬಗ್ಗೆ ಅರಿವು ಮೂಡಿಸುವ ಕೆಲಸ ಮಾಡುತ್ತಿದೆ. ಪ್ರತಿಷ್ಠಾನವು ಹಸ್ತಪ್ರತಿಭಂಡಾರದಲ್ಲಿರುವ ಗ್ರಂಥಗಳು ಈಗಾಗಲೇ ಗಮನಿಸಿದಂತೆ ಬಹುಬಗೆಯ ವಸ್ತುವಿನಿಂದ ಗಮನಸೆಳೆಯುವಂತಿವೆ. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಕಾಲದಿಂದ ಕಾಲಕ್ಕೆ ನಡೆದಂತ ಸಾಹಿತ್ಯಿಕ ಚಳುವಳಿಗೆ ಇಲ್ಲಿನ ಹಸ್ತಪ್ರತಿಗಳು ಸಾಕ್ಷಿಯಾಗಿವೆ. ಹಸ್ತಪ್ರತಿಗಳ ಸ್ವರೂಪದಲ್ಲಿ, ವಸ್ತುವಿನಲ್ಲಿ ವಿಶೇಷವೇನಿಸುವ ಕೆಲವು ಪ್ರತಿಗಳು ಈ ಹಸ್ತಪ್ರತಿ ಭಂಡಾರದ ಘನತೆಯನ್ನು ವೃದ್ಧಿಸಿವೆ. ಪ್ರತಿಷ್ಠಾನದ ಹಸಪ್ರತಿ ಭಂಡಾರದಲ್ಲಿರುವ ಅತಿಸಣ್ಣ ಹಸ್ತಪ್ರತಿಯಾದ 'ಗೌಳಿ ಶಕುನ' (ಓ–475) ಎಂಟು ಸೆಂ.ಮೀ ಉದ್ದ, ಎರಡೂವರೆ ಸೆಂ.ಮೀ ಅಗಲವಿದೆ. ಅತಿದೊಡ್ಡ ಹಸಪ್ರತಿ "ಶ್ರೀ ಮದ್ಭಾಗವತ ಭಾವಾರ್ಥ ದೀಪಿಕಾ ಶ್ರೀಧರೀಯ ವ್ಯಾಖ್ಯಾನ" (ಓ–511) ಇದ್ದು 90ಸೆಂ.ಮೀ ಉದ್ದ, 5 ಸೆಂ.ಮೀ ಅಗಲವಿದ್ದು ಸರಾಸರಿ ಒಂದು ಗರಿಯಲ್ಲಿ 9 ಸಾಲುಗಳು, ಒಂದು ಸಾಲಿನಲ್ಲಿ 195 ಅಕ್ಷರಗಳಿವೆ. ಅತ್ಯಂತ ಒತ್ತಟ್ಟಾದ ಆದರೆ ಸ್ಫುಟವಾದ ಸಣ್ಣ ಬರವಣಿಗೆ ಇರುವ ಹಸ್ತಪ್ರತಿ "ಶ್ರೀ ಮದ್ರಾಮಾಯಣ" (ಓ–517) 5 ಸೆಂ.ಮೀ ಅಗಲ, 24 ಸೆಂ.ಮೀ ಉದ್ದದ ಪ್ರತಿಗರಿಯಲ್ಲಿ 16 ಸಾಲುಗಳಲ್ಲಿ ಪ್ರತಿ ಸಾಲಿನಲ್ಲಿ 80 ಅಕ್ಷರಗಳೂ ಇವೆ.

ಪ್ರತಿಷ್ಠಾನದ ಹಸ್ತಪ್ರತಿ ಭಂಡಾರದಲ್ಲಿರುವ ಅನೇಕ ವಿಶೇಷ ಹಸ್ತಪ್ರತಿಗಳಿವೆ ಅಂತಹ ವಿಶೇಷ ಹಸ್ತಪ್ರತಿಗಳೆಂದರೆ –

1. ಕುಮಾರವ್ಯಾಸ ಭಾರತ ಸಂಗ್ರಹದ ಕಾಗದದ ಹಸ್ತಪ್ರತಿ (ಕಾ.67) ಇದರಲ್ಲಿ ಆಚಾರ್ಯ ಬಿ.ಎಂ.ಶ್ರೀ, ಟಿ.ಎಸ್.ವೆಂಕಣ್ಣಯ್ಯ, ಎ.ಆರ್.ಕೃಷ್ಣಶಾಸ್ತ್ರಿ, ಡಿ.ಎಲ್.ನರಸಿಂಹಾಚಾರ್ ಮುಂತಾದವರು ಪರಿಶೀಲಿಸಿರುವ ಪಾಠಾಂತರ ಸೂಚನೆಗಳಿವೆ.

2. ಮೈಸೂರು ಶೈಲಿಯ ವರ್ಣ ಚಿತ್ರಗಳಿರುವ ಹಸ್ತಪ್ರತಿ 'ಸ್ತೋತ್ರರತ್ನಾಕರ ಅಥವಾ ದೇವತಾನಾಮ ಕುಸುಮ ಮಂಜರಿ' (ಕಾ.138) ಇದರಲ್ಲಿ 98 ಪುಟಗಳಿದ್ದು 200ಕ್ಕೂ ಹೆಚ್ಚು ವರ್ಣ ಚಿತ್ರಗಳಿವೆ.

3. ತಿಮ್ಮಪ್ಪದಾಸರ ಸ್ವಹಸ್ತಾಕ್ಷರವಿರುವ 20 ಹಸ್ತಪ್ರತಿಗಳು ಪ್ರತಿಷ್ಠಾನದ ಹಸ್ತಪ್ರತಿ ಭಂಡಾರದ ಆಸ್ತಿಯಾಗಿದೆ. ಇವುಗಳಲ್ಲಿ ಇನ್ನು ಸುಮಾರು 500 ಕೀರ್ತನೆಗಳು ಮತ್ತು ಅವರ ಎಲ್ಲ ಕೃತಿಗಳೂ ಅಪ್ರಕಟಿತವಾಗಿವೆ. ಕೀರ್ತನೆಗಳನ್ನು ಪೂರ್ತಿಪ್ರತಿಮಾಡಲಾಗಿದ್ದು ಕೀರ್ತನೆಗಳ ಹಸ್ತಪ್ರತಿಯನ್ನು ಪ್ರಕಟಿಸಲಾಗಿದೆಯಲ್ಲದೆ ಸರ್ಕಾರದ ಸಮಗ್ರ ದಾಸಸಾಹಿತ್ಯ ಪ್ರಕಟನೆ ಯೋಜನೆಯಲ್ಲಿ ನೀಡಿ ಕೃತಿ ಮುದ್ರಣವಾಗಿದೆ.

4. "ಶ್ರೀ ಕೃಷ್ಣದೇವರಾಯ ದಿನಚರಿ" ಓಲೆಗರಿಯಲ್ಲಿರುವ ಕೈಫಿಯತ್ತಿನ ರೂಪದ ಹಸ್ತಪ್ರತಿಯಾಗಿದ್ದು ವಿಶೇಷವಾಗಿದೆ. ಈಗಾಗಲೇ ಈ ಕೃತಿ ವಿದ್ವಾಂಸರ ಅಭಿಪ್ರಾಯದಲ್ಲಿ ವಿಜಯನಗರದ ಕಾಲದ ಇತಿಹಾಸ ಪುನಾರಚನೆಗೆ ಒಂದು ಮುಖ್ಯ ಆಕಾರವಾಗಿ ಪರಿಗಣನೆಗೆ ಬಂದಿದೆ. ಇದನ್ನು ಡಾ.ಎಂ.ವಿ.ಸೀತಾರಾಮಯ್ಯನವರ ಪ್ರ. ಸಂಪಾದಕತ್ವದಲ್ಲಿ ಮತ್ತು ಡಾ.ವಿ.ಎಸ್.ಆಚಾರ್ಯರವರು 1983 ರಲ್ಲಿ ಕೃತಿಯ ರೂಪದಲ್ಲಿ ಸಂಪಾದಿಸಿ ಪ್ರಕಟಿಸಿದ್ದಾರೆ.

ದಂತದ ಕೆತ್ತನೆಯಿರುವ, ವರ್ಣಚಿತ್ರಗಳಿರುವ ಪಟ್ಟಿಕೆಗಳು; ವೈವಿಧ್ಯಮಯ ಕಂಠಗಳು; ಗ್ರಂಥ, ಅರವ, ತಿಗಳಾರಿ, ಮೋಡಿ, ನಾಗರಿ, ತಮಿಳು, ತೆಲುಗು ಲಿಪಿಯಲ್ಲಿರುವ ಹಸ್ತಪ್ರತಿಗಳು; ಕಡತ ಸನ್ನದು, ನಿರೂಪಗಳು ಹೇಗೆ ವೈವಿಧ್ಯಮಯವಾದ ಹಸ್ತಪ್ರತಿಗಳು ಬಿ.ಎಂ.ಶ್ರೀ ಪ್ರತಿಷ್ಠಾನದ ಹಸ್ತಪ್ರತಿ ಭಂಡಾರದಲ್ಲಿವೆ.

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಹಸ್ತಪ್ರತಿ ಭಂಡಾರ ತಕ್ಕ ಮಟ್ಟಿಗೆ ಸುಸಜ್ಜಿತವಾಗಿದೆ. ಹಸ್ತಪ್ರತಿಗಳನ್ನು ಸಂಗ್ರಹಿಸಲು ವಿಶೇಷ ತಂತ್ರಜ್ಞಾನದಿಂದ ತಯಾರಿಸಿರುವ ಬೀರುಗಳು, ಹಸ್ತಪ್ರತಿಗಳಿಗೆ ರಾಸಾಯನಿಕ ಚಿಕಿತ್ಸೆ ನೀಡುವ ವೈಜ್ಞಾನಿಕ ಸಾಧನವಾದ ಫ್ಯೂಮಿಗೇಷನ್ ಛೇಂಬರ್ (ಪ್ರಧೂಮನ ಕಪಾಟು), ಮೈಕ್ರೊ ಫಿಲಂ ರೀಡರ್‌ಗಳ ಸೌಲಭ್ಯಗಳಿದ್ದು ಹಸ್ತಪ್ರತಿಗಳನ್ನು ಸಂರಕ್ಷಿಸಲು ಆಧುನಿಕವಾದ ಸಿಟ್ರೆನಲ್ ಆಯಿಲ್‌ನ್ನು ಉಪಯೋಗಿಸಲಾಗುತ್ತಿದೆ. ಇದೀಗ ಸ್ವಂತ್ರ ಕಟ್ಟಡ "ಬಿ.ಎಂ.ಶ್ರೀ ಕಲಾಭವನ"ವು ಸಿದ್ಧವಾಗಿದ್ದು ಅದರಲ್ಲಿ ಪ್ರತ್ಯೇಕ ಸುಸಜ್ಜಿತ ಹಸ್ತಪ್ರತಿ ಸಂಗ್ರಹಾಲಯ ವ್ಯವಸ್ಥೆಗೊಳಿಸಲು ಯೋಚಿಸಲಾಗಿದೆ. ಇದಕ್ಕೆ ಅತ್ತಿಮಬ್ಬೆ ಹಸ್ತಪ್ರತಿ ಸಂಗ್ರಹಾಲಯ ಎಂದು ಹೆಸರಿಸಲು ಕಾರ್ಯಕಾರಿ ಸಮಿತಿಯಲ್ಲಿ ನಿರ್ಧಾರ ತೆಗೆದುಕೊಳ್ಳಲಾಗಿದೆ. ಇದನ್ನು ಸಂಪೂರ್ಣ ಸಜ್ಜುಗೊಳಿಸಲು ಅತ್ತಿಮಬ್ಬೆ ಪ್ರತಿಷ್ಠಾನದ ಶ್ರೀಮತಿ ಮನೋಹರಿ ಪಾರ್ಥಸಾರಥಿ ಅವರು ಮುಂದೆ ಬಂದಿರುವುದು ಸ್ವಾಗತಾರ್ಹ ವಿಷಯವಾಗಿದೆ.

ಅಲ್ಲದೆ ಯಾವುದೇ ಸರ್ಕಾರಿ ಹಸ್ತಪ್ರತಿ ಸಂಸ್ಥೆ ಅಥವಾ ಖಾಸಾಗಿ ಹಸ್ತಪ್ರತಿ ಭಂಡಾರ ಮಾಡದೇ ಇರುವ ಒಂದು ವಿಶೇಷ ಕಾರ್ಯವನ್ನು ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಮಾಡುತ್ತಿದೆ. ಅದೇನೆಂದರೆ ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಮತ್ತು ನಿದೇಶಕರಾದ ಪ್ರೊ.ನಾ. ಗೀತಾಚಾರ್ಯರವರ ಕಾರ್ಯವೈಖರಿಯಿಂದ ರಜತ ಮಹೋತ್ಸವ ಅಂಗವಾಗಿ "ಮನೆಬಾಗಿಲಿಗೆ ಪ್ರಾಚೀನ ಹಸ್ತಪ್ರತಿ ಪ್ರದರ್ಶನ" ಎಂಬ ಹೊಸ, ವಿಶೇಷ ಕಾರ್ಯಕ್ರಮವನ್ನು ಮಾಡುತ್ತಿದೆ. ಅಲ್ಲದೆ 'ಸಿರಿಕಂಟ' ವೇದಿಕೆಯಡಿಯಲ್ಲಿ ಹಸ್ತಪ್ರತಿ ಕಾರ್ಯಗಾರ ಹಾಗೂ ಶಿಬಿರಗಳನ್ನು ನಡೆಸುತ್ತಿರುವುದು ಸಹ ವಿಶೇಷವಾದ ಕಾರ್ಯವಾಗಿದೆ.

ಇದು ಪ್ರತಿಷ್ಠಾನ ನಡೆಸುತ್ತಿರುವ ಹಸ್ತಪ್ರತಿಶಾಸ್ತ್ರ ತರಗತಿಯ ವಿದ್ಯಾರ್ಥಿಗಳ ಸಂಘಟನೆಯಾಗಿದೆ. "ಹಸ್ತಪ್ರತಿ ಸೇವಾ ಕೇಂದ್ರ"ದಲ್ಲಿ ಹಸ್ತಪ್ರತಿಗಳನ್ನು 'ಸಂರಕ್ಷಣೆಮಾಡಿ ಸಂಪ್ರತಿ ಮಾಡಿಕೊಡಲಾಗುತ್ತದೆ'. ಅಲ್ಲದೆ ಪ್ರತಿವರ್ಷ ಬೇರೆ ಬೇರೆ ಜಿಲ್ಲೆ ಅಥವಾ ಹಸ್ತಪ್ರತಿಗಳಿರುವ ಊರುಗಳಲ್ಲಿ ಹಸ್ತಪ್ರತಿಗಳ ವಿಚಾರವಾಗಿಯೇ ಪ್ರತ್ಯೇಕ ಸಮಾವೇಶಗಳನ್ನು ನಡೆಸಲು ಸಿರಿಕಂಟ ವೇದಿಕೆ ಆಲೋಚಿಸಿರುವುದು ವಿಶೇಷವಾಗಿದೆ. ಪ್ರಥಮ ಸಮಾವೇಶವನ್ನು ಬೆಂಗಳೂರಿನಲ್ಲೆ ನಡೆಸಿದೆ ಇವೆಲ್ಲಾ ಹಸ್ತಪ್ರತಿ ಕ್ಷೇತ್ರ ಬೆಳೆಯಲು ಪ್ರತಿಷ್ಠಾನ ಕೈಗೊಂಡಿರುವ ಕ್ರಿಯಾಯೋಜನೆಗಳಾಗಿವೆ.

ಒಟ್ಟಾರೆ ಬೇರೆಲ್ಲ ಹಸ್ತಪ್ರತಿ ಭಂಡಾರಗಳಿಗಿಂತ ಪ್ರತಿಷ್ಠಾನ ತನ್ನ ವಿಶೇಷ ಕಾರ್ಯವೈಖರಿಯಿಂದ ಕನ್ನಡ ನಾಡಿನಲ್ಲಿ ಹಿರಿಯ ಸಾಹಿತಿಗಳ, ಜನರ ಮನ್ನಣೆಗೆ ಪಾತ್ರವಾಗಿರುವ ಏಕೈಕ ಸಂಸ್ಥೆ ಎಂದು ಕರೆಸಿಕೊಳ್ಳುತ್ತದೆ.

"ಪ್ರಾಚೀನ ಹಸ್ತಪ್ರತಿಗಳನ್ನು ನೋಡುವುದೇ ಒಂದು ಭಾಗ್ಯ. ಅದನ್ನು ಹೊಂದಿರುವವರು ಪುಣ್ಯಶಾಲಿಗಳು. ಅಂಥವರು ಈ ಪುಣ್ಯವನ್ನು ತಾವೊಬ್ಬರೇ ಅನುಭವಿಸದೆ ಸಾರ್ವಜನಿಕರಿಗೂ ಹಂಚಬೇಕು. ಈ ಕೆಲಸವನ್ನು ಬಿ.ಎಂ.ಶ್ರೀಸ್ಮಾರಕ ಪ್ರತಿಷ್ಠಾನ ಕಳೆದ ಹಲವು ವರ್ಷಗಳಿಂದ ಮಾಡಿಕೊಂಡು ಬಂದಿದೆ. ಬರೀ ಹಂಚುತ್ತಿರುವುದಲ್ಲದೆ ಆಸಕ್ತರಿಗೂ ಉಣಬಡಿಸುತ್ತಿದೆ. ಪ್ರಾಚೀನ ಓಲೆಗರಿ ಗ್ರಂಥಗಳನ್ನು ಸಂರಕ್ಷಿಸುವ, ಓದುವ, ಪ್ರತಿಮಾಡುವ ಕಲೆಯನ್ನು ಭೋಧಿಸುತ್ತಿದೆ. ವಿಶ್ವವಿದ್ಯಾಲಯಗಳು ಮಾಡಲಾಗದ ಈ ಅಪರೂಪದ ಕಾರ್ಯವನ್ನು ಬಿ.ಎಂ.ಶ್ರೀ ಪ್ರತಿಷ್ಠಾನ ಶ್ರದ್ಧೆಯಿಂದ ಮಾಡುತ್ತಿದ್ದು ಇದು ನಾಡಿನ ಸಂಸ್ಕೃತಿಯನ್ನು ಕಟ್ಟುವ ನಿಜವಾದ ಕೆಲಸ"[4] ಎಂದು ವಿ.ಎಸ್.ಕೃಷ್ಣಯ್ಯರ್ ಹಸ್ತಪ್ರತಿ ತರಗತಿಗಳ ಹನ್ನೊಂದನೇ ತಂಡವನ್ನು ಉದ್ಘಾಟಿಸುತ್ತಾ ಹೇಳಿದ ಮಾತನ್ನು ನೋಡಿದರೆ ಬೇರೆ ಸಂಸ್ಥೆಗಳಿಗಿಂತ ಪ್ರತಿಷ್ಠಾನ ಹೇಗೆ? ಯಾವ ರೀತಿಯಲ್ಲಿ ವಿಶೇಷ ಎಂಬುದನ್ನು ನಾವು ಗಮನಿಸಬಹುದು.

ಅಡಿಟಿಪ್ಪಣಿಗಳು

1. ಪ್ರೊ.ಎಂ.ವಿ.ಸೀತಾರಾಮಯ್ಯ–ಡಾ.ಚಿದಾನಂದಮೂರ್ತಿ, ಹಸ್ತಪ್ರತಿಶಾಸ್ತ್ರ, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ 1981, ಪುಟ–33


2. ಪ್ರೊ.ನಾ.ಗೀತಾಚಾರ್ಯ, ಹಸ್ತಪ್ರತಿಶಾಸ್ತ್ರ–ವಿವೇಚನೆ, ಬೆಂಗಳೂರು, 2000, ಪುಟ–64

3. ವಿಶ್ವವಿದ್ಯಾಲಯಗಳ ಹಸ್ತಪ್ರತಿ ಭಂಡಾರಗಳ ಮಾಹಿತಿಯನ್ನು ಸಂಗ್ರಹಿಸುವಾಗ ಅಂಕಿ–ಅಂಶಗಳನ್ನು ಪ್ರೊ.ನಾ.ಗೀತಾಚಾರ್ಯರವರ 'ಹಸ್ತಪ್ರತಿಶಾಸ್ತ್ರ ವಿವೇಚನೆ' ಎಂಬ ಕೃತಿಯಲ್ಲಿರುವ "ಸರ್ಕಾರಿ ಹಸ್ತಪ್ರತಿಭಂಡಾರಗಳು" ಎಂಬ ಲೇಖನದಿಂದ ತೆಗೆದುಕೊಳ್ಳಲಾಗಿದೆ.

4. ವಿ.ಎಸ್.ಕೃಷ್ಣಯ್ಯರ್‌ರವರು–'ಹಸ್ತಪ್ರತಿ ತರಗತಿಗಳ ಹನ್ನೊಂದನೇ ತಂಡವನ್ನು ಉದ್ಘಾಟಿಸುವಾಗ ಹೇಳಿದ ಹೇಳಿಕೆ, ಪತ್ರಿಕಾ ವರದಿ.



ಚಿತ್ರ 1 : ಪುಟ 84 ರಲ್ಲಿ ಇದರ ವಿವರವಿದೆ. ಇದು ಶ್ರೀಕೃಷ್ಣದೇವರಾಯ ದಿನಚರಿ ಹಸ್ತಪ್ರತಿ.



ಚಿತ್ರ 2 : ಬಿ.ಎಂ.ಶ್ರೀ ಪ್ರತಿಷ್ಠಾನದಲ್ಲಿರುವ ಅತ್ಯಂತ ಉದ್ದವಾದ ಹಾಗೂ ಚಿಕ್ಕದಾದ ಹಸ್ತಪ್ರತಿಗಳು.





ಚಿತ್ರ 3 : ಪುಟ 63ರಲ್ಲಿ ಇದರ ವಿವರವಿದೆ. ಇದು ಸಂಚಾರಿ ಹಸ್ತಪ್ರತಿ ಪೆಟ್ಟಿಗೆ.



ಚಿತ್ರ 4 : ವರ್ಣಚಿತ್ರಗಳನ್ನೊಳಗೊಂಡ ಪುರಾತನ, ಅಪರೂಪದ ಹಸ್ತಪ್ರತಿ ಪ್ರತಿಷ್ಠಾನದಲ್ಲಿದೆ.



ಚಿತ್ರ 5 : ಮೇಲಿನ ಚಿತ್ರದಲ್ಲಿರುವ ಹಸ್ತಪ್ರತಿಯ ವಿಶೇಷವೆಂದರೆ ಅದರ ಎರಡೂ ಕಡೆಯಲ್ಲಿರುವ ಪಟ್ಟಿಗಳು ದಂತದ ಪಟ್ಟಿಗಳಾಗಿದ್ದು, ಅದರಲ್ಲಿ ಕೆತ್ತನೆಯ ಕೆಲಸವಿರುವ ಹಸ್ತಪ್ರತಿಯನ್ನು ಪ್ರತಿಷ್ಠಾನ ಒಳಗೊಂಡಿರುವುದು ವಿಶೇಷ.



ಚಿತ್ರ 6 : ಪ್ರತಿಷ್ಠಾನದಲ್ಲಿರುವ ಅತ್ಯಂತ ದೊಡ್ಡ ಹಸ್ತಪ್ರತಿ. ಕ್ರಮ-96 ನೋಡಿ

ಸ್ಥಾಪನೆ : 1979


ದೂರವಾಣಿ : 2661 5877

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ

ಕನ್ನಡ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಧ್ಯಯನ ಕೇಂದ್ರ

ಪರಿಚಯ ಮತ್ತು ಪುಸ್ತಕ ಪಟ್ಟಿ



ಬಿ.ಎಂ.ಶ್ರೀ. ಕಲಾಭವನ

3ನೇ ಮುಖ್ಯ ರಸ್ತೆ, ನರಸಿಂಹರಾಜ ಕಾಲೋನಿ, ಬೆಂಗಳೂರು-560 019.
E-mail : bmsri/trust@yahoo.com
Website : http:/in.members.tripodasia.com/bmsri
ಶಾಖೆ : ಬಿ.ಎಂ.ಶ್ರೀ. ಶತಮಾನ ಭವನ, ಬೆಳ್ಳೂರು, ನಾಗಮಂಗಲ ತಾ॥ ಮಂಡ್ಯ ಜಿಲ್ಲೆ.

ರಾಷ್ಟ್ರೀಯ ಹಸ್ತಪ್ರತಿ ಮಿಷನ್‌ನ ಮಾನ್ಯತೆಯ ಕೇಂದ್ರ

ರಾಷ್ಟ್ರೀಯ ಹಸ್ತಪ್ರತಿ ಮಿಷನ್‌ನಿಂದ ಮಾನ್ಯತೆ ಪಡೆದಿರುವ ಪ್ರತಿಷ್ಠಾನ ರಾಷ್ಟ್ರದ ಪ್ರತಿಷ್ಠಿತ ಹಸ್ತಪ್ರತಿ ಅಧ್ಯಯನ ಕೇಂದ್ರವಾಗಿದ್ದು ಅಮೂಲ್ಯ ಓಲೆಗರಿ ಗ್ರಂಥಗಳು, ಕಾಗದ ಪತ್ರಗಳು, ನಮ್ಮ ತಲೆಮಾರಿನ ಸಾಹಿತಿ-ಗಣ್ಯರ ಪತ್ರಗಳು ಮತ್ತು ಹಸ್ತಪ್ರತಿಗಳನ್ನು ಸಂರಕ್ಷಿಸುತ್ತ ನಾಡಿನ ಆಸ್ತಿಯನ್ನು ಉಳಿಸಲು ಶ್ರಮಿಸುತ್ತಿರುವ ಸೇವಾಸಂಸ್ಥೆಯಾಗಿದೆ.

ಬೆಳ್ಳೂರಿನಲ್ಲಿ ಬಿ.ಎಂ.ಶ್ರೀ. ಶತಮಾನ ಭವನ

೧೯೮೪ರಲ್ಲಿ ನಡೆದ ಆಚಾರ್ಯ ಬಿ.ಎಂ.ಶ್ರೀ. ಶತಮಾನೋತ್ಸವ ಸ್ಮರಣೆಗಾಗಿ ಬಿ.ಎಂ.ಶ್ರೀ.ಯವರ ಜನ್ಮಸ್ಥಳವಾದ ಬೆಳ್ಳೂರಿನಲ್ಲಿ 'ಶ್ರೀ ಶತಮಾನ ಭವನ' ವನ್ನು, ಪ್ರತಿಷ್ಠಾನ, ಸರ್ಕಾರದ ನೆರವಿನಿಂದ ಸ್ಥಳೀಯ ಸಮಿತಿಯು ಮತ್ತು ಮಹಾ ಪೋಷಕರಾದ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರ ಸಹಕಾರದಿಂದ ನಿರ್ಮಿಸಿದ್ದು, ೧೯೯೫ ರಿಂದ ಸಾರ್ವಜನಿಕರ ಸೇವೆಯಲ್ಲಿದೆ. ಪ್ರಸ್ತುತ "ಬಿ.ಎಂ.ಶ್ರೀ. ವಸ್ತು ಸಂಗ್ರಹಾಲಯ" ಮತ್ತು "ಶ್ರೀ ಶತಮಾನ ಗ್ರಂಥಾಲಯ" ವನ್ನು ನಡೆಸುತ್ತಿದ್ದು "ಶ್ರೀ ಸಭಾಂಗಣ" ದಲ್ಲಿ ಸಾಹಿತ್ಯ ಸಾಂಸ್ಕೃತಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

ಬೆಂಗಳೂರಿನಲ್ಲಿ ಬಿ.ಎಂ.ಶ್ರೀ. ಕಲಾಭವನ

ಬೆಂಗಳೂರಿನಲ್ಲಿ ಬಿ.ಎಂ.ಶ್ರೀ. ಸ್ಮಾರಕವನ್ನು, ಸಂಸ್ಥಾಪಕ ಸೀತಾರಾಮಯ್ಯನವರ ಪರಿಶ್ರಮದಿಂದ ಪಡೆಯಲಾಗಿದ್ದ ನಿವೇಶನದಲ್ಲಿ ೨೦೦೦ ರಿಂದ ಆರಂಭಿಸಿದೆ. ೩ ಮಹಡಿಗಳ ಭವ್ಯ ಬಿ.ಎಂ.ಶ್ರೀ. ಕಲಾ ಭವನವನ್ನು ಸಂಸದರ ನಿಧಿ ಮತ್ತು ದಾನಿಗಳ ನೆರವಿನಿಂದ ಕಟ್ಟಲಾಗಿದೆ. "ಎಂ.ವಿ.ಸೀ. ಸಭಾಂಗಣ", ಗ್ರಂಥಾಲಯ, ವಸ್ತು-ಹಸ್ತಪ್ರತಿ ಸಂಗ್ರಹಾಲಯ, ಉಪನ್ಯಾಸ ಕೊಠಡಿಗಳು ನಿರ್ಮಾಣವಾಗಿದ್ದು ಪ್ರತಿಷ್ಠಾನದ ರಜತೋತ್ಸವದ ಸಂದರ್ಭದಲ್ಲಿ (೧೩-೦೯-೨೦೦೪) ಮುಖ್ಯಮಂತ್ರಿಗಳಿಂದ ಲೋಕಾರ್ಪಣೆಯಾಗಿದೆ.

ಮುಖ್ಯ ಚಟುವಟಿಕೆಗಳು

೧. ಕರ್ನಾಟಕ ಲೋಚನ ವಿದ್ವತ್ ಪತ್ರಿಕೆ

ಕನ್ನಡದಲ್ಲಿರುವ ಕೆಲವೇ ಸಂಶೋಧನಾತ್ಮಕ ನಿಯತಕಾಲಿಕೆಗಳಲ್ಲಿ ಅತ್ಯಂತ ಮಹತ್ವದ ಸ್ಥಾನವನ್ನು ಪಡೆದಿರುವ "ಕರ್ನಾಟಕ ಲೋಚನ" ಪತ್ರಿಕೆಯನ್ನು ಪ್ರತಿಷ್ಠಾನ ೧೯೮೨ರಲ್ಲಿ ಆರಂಭಿಸಿತು. ಸಂಶೋಧನ ಕ್ಷೇತ್ರದ ವಿವಿಧ ಶಾಖೆಗಳಲ್ಲಿ ನುರಿತ ವಿದ್ವಾಂಸರು ಬರೆಯುವ ಸಂಶೋಧನ ಲೇಖನಗಳು, ಟಿಪ್ಪಣಿಗಳು, ಸಂಶೋಧನ ಗ್ರಂಥಗಳ ವಿಮರ್ಶೆ, ಟೀಕೆ-ಟಿಪ್ಪಣಿ ಇತ್ಯಾದಿ ಇದರಲ್ಲಿರುತ್ತವೆ. ನಿಯತವಾಗಿ ಪ್ರಕಟವಾಗುತ್ತಿರುವ ನಾಡಿನ ಏಕೈಕ ವಿದ್ವತ್ ಪತ್ರಿಕೆ ಎಂಬ ಹೆಗ್ಗಳಿಕೆ ಇದಕ್ಕಿದೆ. **ವಾರ್ಷಿಕ ಚಂದಾ** : ವ್ಯಕ್ತಿಗಳಿಗೆ ರೂ. ೪೦/-, ಆಜೀವ ರೂ. ೪೦೦/-, ಸಂಸ್ಥೆ ಗ್ರಂಥಾಲಯಗಳಿಗೆ ವಾರ್ಷಿಕ ೧೦೦-೦೦. **ಪ್ರತಿಷ್ಠಾನದ ಸದಸ್ಯರಿಗೆ ಉಚಿತ.**

೨. ಸಹೃದಯ ಗೋಷ್ಠಿ

ಆಧುನಿಕ ಸಾಹಿತ್ಯಕ್ಕೆ ಸಂಬಂಧಪಟ್ಟ ವೇದಿಕೆ "ಸಹೃದಯ ಗೋಷ್ಠಿ". ಪ್ರತಿಷ್ಠಾನ ಪ್ರಾರಂಭವಾದಂದಿನಿಂದಲೂ ಪ್ರತಿ ತಿಂಗಳೂ ಕಾರ್ಯಕ್ರಮವನ್ನು ನಡೆಸುತ್ತಿದೆ. ಸ್ವರಚಿತ ಕವಿತೆ ಕತೆ-ನಾಟಕ-ಪ್ರಬಂಧ-ಸಂಶೋಧನಾ ಲೇಖನಗಳ ವಾಚನ, ಇತರ ಗಣ್ಯರ ಕೃತಿ-ಕವನಗಳ ವಾಚನ, ವಿಮರ್ಶೆ-ಚರ್ಚೆ ಇಲ್ಲಿ ನಡೆಯುತ್ತದೆ. ಹೊಸದಾಗಿ ಸಾಹಿತ್ಯ ರಚನೆಯಲ್ಲಿ ತೊಡಗುವವರಲ್ಲಿ

ಧ್ಯೇಯ - ಉದ್ದೇಶ

'ಕನ್ನಡದ ಕಣ್ವ' ಆಚಾರ್ಯ ಬಿ.ಎಂ. ಶ್ರೀಕಂಠಯ್ಯನವರು ಹೊಸಗನ್ನಡದ ಯುಗಪುರುಷರು; ಇಂದು ಹೊಸಗನ್ನಡದ ಸಾಹಿತ್ಯ ಎಂದು ಯಾವುದನ್ನು ಕರೆಯುತ್ತೇವೆಯೋ ಅದೆಲ್ಲಕ್ಕೂ ಪ್ರೇರಕ ಶಕ್ತಿ. ಇಂದಿನ ಎಲ್ಲ ಹೆಸರಾಂತ ಸಾಹಿತಿಗಳೂ ಇವರ ಶಿಷ್ಯ - ಪ್ರಶಿಷ್ಯರೇ. ಇಂತಹ ಆಚಾರ್ಯ ಪುರುಷರ ಹೆಸರಿನ ಈ ಸಂಸ್ಥೆ ಸೃಜನ ಮತ್ತು ಸಂಶೋಧನ ಎರಡೂ ಸಾಹಿತ್ಯ ಕ್ಷೇತ್ರಗಳಲ್ಲಿ ದುಡಿಯುತ್ತಿದೆ. ಒಂದು ಪ್ರಾಚೀನ ಸಾಹಿತ್ಯದ ಪರಿಷ್ಕರಣ. ಇನ್ನೊಂದು ಆಧುನಿಕ ಸಾಹಿತ್ಯದ ಪುರಸ್ಕರಣ.

"ದೇಶದಲ್ಲಿ ಹುಳು ತಿಂದುಹೋಗದೆ ಇರುವ ಗ್ರಂಥಗಳನ್ನೆಲ್ಲ ಶೇಖರಿಸಿ ಒಂದನ್ನೂ ಬಿಡದಂತೆ ಅಚ್ಚುಹಾಕುವುದು. ಅಚ್ಚಾದ ಮೇಲೆ ಎಲ್ಲವನ್ನೂ ಕೊನೆಮುಟ್ಟ ಶೋಧಿಸಿ ಹೊಸದಾಗಿ ಲಕ್ಷಣ ಗ್ರಂಥಗಳನ್ನು ಕಾಲಕ್ಕೆ ತಕ್ಕಂತೆ ರಚಿಸುವುದು." ಇದು ಆಚಾರ್ಯ ಬಿ.ಎಂ. ಶ್ರೀಕಂಠಯ್ಯನವರು ೧೯೧೧ರಲ್ಲೇ ನುಡಿದ ವಾಣಿ. ಇದನ್ನೇ ಧ್ಯೇಯವಾಗಿಸಿಕೊಂಡು ಇದರ ಜೊತೆಗೆ ಸಂಶೋಧನಾ ಕ್ಷೇತ್ರಗಳಲ್ಲಿ ಅಳಿಸಿಹೋಗುತ್ತಿರುವ ಇತರ ಪೂರಕ ಸಂಶೋಧಕ ಪ್ರವೃತ್ತಿಗಳನ್ನು ಉಳಿಸಿ ಬೆಳೆಸುವ ಸಲುವಾಗಿ ಆಚಾರ್ಯರ ಹೆಸರಿನಲ್ಲಿ, ಈ ಸಂಸ್ಥೆ, ೧೯೭೯ ಮೇ ೬ ರಂದು ಪ್ರೊ|| ಎಂ.ವಿ. ಸೀತಾರಾಮಯ್ಯನವರಿಂದ ಸ್ಥಾಪನೆಯಾಗಿದೆ. ರಾಷ್ಟ್ರಕವಿ ಕುವೆಂಪುರವರಿಂದ ಉದ್ಘಾಟನೆಯಾಗಿದೆ. ಯಶಸ್ವೀ ೨೫ ವರ್ಷಗಳನ್ನು ಪೂರೈಸಿ ಇತ್ತೀಚೆಗೆ ರಜತೋತ್ಸವವನ್ನು ಆಚರಿಸಿದೆ.

ಸಂಸ್ಥಾಪಕರಾದ ದಿವಂಗತ ಪ್ರೊ|| ಎಂ.ವಿ. ಸೀತಾರಾಮಯ್ಯನವರು ತಮ್ಮ ತನುಮನಧನವನ್ನು ಸಮರ್ಪಿಸಿ ಪ್ರತಿಷ್ಠಾನವನ್ನು ಕಟ್ಟಿ ಬೆಳೆಸಿ ನಾಡಿನಲ್ಲೆ ಒಂದು ಪ್ರತಿಷ್ಠಿತ ಸಂಸ್ಥೆಯನ್ನಾಗಿ ಮಾಡಿದ್ದಾರೆ. ಅವರ ಸಾಧನೆಯ ಫಲವಾಗಿ ಬೆಳ್ಳೂರಿನಲ್ಲಿ 'ಬಿ.ಎಂ.ಶ್ರೀ. ಶತಮಾನ ಭವನ', ಬೆಂಗಳೂರಿನಲ್ಲಿ "ಬಿ.ಎಂ.ಶ್ರೀ. ಕಲಾಭವನ" ತಲೆಎತ್ತಿದೆ.

ಸಾಧನೆಗಳು

ಈಗಾಗಲೇ ಸಂಸ್ಥೆ ರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದೆ. ಕರ್ನಾಟಕದಲ್ಲಿ ಸಂಶೋಧನೆ ಮತ್ತು ಪಾಂಡಿತ್ಯ ಸಂವರ್ಧನೆಗಳಿಗೆ ಮೀಸಲಾದ ಪ್ರತಿಷ್ಠಿತ ಸಂಶೋಧನಾ ಕೇಂದ್ರವಾಗಿದೆ. ಈವರೆಗೆ ಸುಮಾರು ೭೫ ಪ್ರಕಟಣೆಗಳನ್ನು ಹೊರತಂದಿದೆ. ಸಂಶೋಧನ ಕಾರ್ಯಕ್ಕೆ ಅನುಕೂಲವಾಗುವಂತೆ ಹದಿನೈದು ಸಾವಿರಕ್ಕೂ ಅಧಿಕ ಅಮೂಲ್ಯ ಗ್ರಂಥಗಳ ಆಕರ ಗ್ರಂಥಾಲಯವನ್ನೂ ಸುಮಾರು ಮೂರು ಸಾವಿರಕ್ಕೂ ಅಧಿಕ ಪ್ರಾಚೀನ ಓಲೆಗರಿ ಗ್ರಂಥಗಳ ಹಸ್ತಪ್ರತಿ ಭಂಡಾರವನ್ನೂ ಹೊಂದಿರುವ ಪ್ರತಿಷ್ಠಾನ ಸದಸ್ಯರು, ಉದಾರ ದಾನಿಗಳು ಮತ್ತು ಅಭಿಮಾನಿಗಳಿಂದಲೇ ಬೆಳೆಯುತ್ತಿದೆ.

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ

ಹಂಪಿ ಕನ್ನಡ ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದಿರುವ ಸ್ನಾತಕೋತ್ತರ ಸಂಶೋಧನ ಕೇಂದ್ರವಾಗಿರುವ ಪ್ರತಿಷ್ಠಾನದಲ್ಲಿ ಗಣ್ಯ ವಿದ್ವಾಂಸರ ಮಾರ್ಗದರ್ಶನದಲ್ಲಿ ೧೮ ಜನ ಪಿ.ಎಚ್‌ಡಿ. ಅಧ್ಯಯನ ಮಾಡುತ್ತಿದ್ದಾರೆ. ಮತ್ತು ೨೦ ಜನ ಎಂ.ಫಿಲ್. ಅಧ್ಯಯನವನ್ನು ನಡೆಸುತ್ತಿದ್ದಾರೆ. ೨೦ ಜನ ನುರಿತ ಮಾರ್ಗದರ್ಶಕರ ಸಹಕಾರದಿಂದ ಈ ಅಧ್ಯಯನ ಕೇಂದ್ರವನ್ನು ನಡೆಸಲಾಗುತ್ತಿದೆ.

ಸಾಹಿತ್ಯಾಸಕ್ತಿ ಪ್ರಬಲಗೊಂಡು ಸಾಹಿತಿಗಳಾಗಿ ಬೆಳೆಯಲು ಈ ವೇದಿಕೆ ನೆರವಾಗುತ್ತದೆ. ಈ ವೇದಿಕೆಗೆ ಸದಸ್ಯತ್ವ : ವಾರ್ಷಿಕ ರೂ. ೫೦-೦೦.

೩. 'ಹಸ್ತಪ್ರತಿಶಾಸ್ತ್ರ' ಮತ್ತು 'ಹಸ್ತಪ್ರತಿ ಅಧ್ಯಯನ' ತರಗತಿ

ನಶಿಸುತ್ತಿರುವ ಪ್ರಾಚೀನ ಹಸ್ತಪ್ರತಿಗಳನ್ನು ಓದುವ, ಪ್ರತಿಮಾಡುವ ಕಲೆಯನ್ನು ಇದರಲ್ಲಿ ಕಲಿಸಿಕೊಡುವುದಲ್ಲದೆ, ವೈಜ್ಞಾನಿಕವಾಗಿ ಓಲೆಗರಿ ಗ್ರಂಥಗಳನ್ನು ಸಂರಕ್ಷಿಸುವುದರಲ್ಲೂ ಶಾಸ್ತ್ರೀಯವಾಗಿ ಸಂಪಾದಿಸುವುದರಲ್ಲೂ ತರಬೇತಿ ನೀಡುವ ನಾಲ್ಕು ತಿಂಗಳ ಪ್ರಶಿಕ್ಷಣವನ್ನು ಪ್ರತಿಷ್ಠಾನ ತನ್ನ ದಶಮಾನೋತ್ಸವ ಸ್ಮರಣೆಗಾಗಿ ೧೯೯೦ ರಿಂದ ನಡೆಸುತ್ತಿದೆ. **ಕರ್ನಾಟಕದಲ್ಲೇ ಪ್ರಾಯಶಃ ಭಾರತದಲ್ಲೇ ಏಕೈಕ ತರಬೇತಿ ಕೇಂದ್ರ ಇದಾಗಿದೆ.** ಕನಿಷ್ಠ ೧೦ ಜನ ವಿದ್ಯಾರ್ಥಿಗಳಿಗೆ ಹಸ್ತಪ್ರತಿಶಾಸ್ತ್ರವನ್ನು ಪ್ರತಿವರ್ಷ ಅಕ್ಟೋಬರ್‌ನಿಂದ 'ಹಸ್ತಪ್ರತಿ ಅಧ್ಯಯನ' ಡಿಪ್ಲೊಮ ತರಗತಿಗಳನ್ನು ೨೦೦೬ ರಿಂದ ನಡೆಸಲಾಗುತ್ತಿದೆ. ಇದು ನೂತನ ಅಧ್ಯಯ ವಿಷಯವಾಗಿದ್ದು ಇದರಲ್ಲಿ ಹಸ್ತಪ್ರತಿಗಳನ್ನು ಸಾಂಸ್ಕೃತಿಕವಾಗಿ ಅಭ್ಯಾಸಕ್ಕೆ ಒಳಪಡಿಸುವ ಚಿಂತನಕ್ರಮವಿರುತ್ತದೆ. ಪ್ರತಿವರ್ಷ ಜುಲೈನಿಂದ ತರಗತಿಗಳನ್ನು ಆರಂಭಿಸಲಾಗುತ್ತದೆ. ಇದರ ಪ್ರವೇಶ ಶುಲ್ಕ : ರೂ. ೧೦೦ ಮಾತ್ರ.

೪. "ಸಿರಿಕಂಠ" - ವಿದ್ಯಾರ್ಥಿಗೋಷ್ಠಿ

ಪ್ರತಿಷ್ಠಾನ ನಡೆಸುತ್ತಿರುವ ಹಸ್ತಪ್ರತಿಶಾಸ್ತ್ರ ತರಗತಿಯ ಹತ್ತು ವರ್ಷಗಳ ನೆನಪಿಗಾಗಿ ಹಸ್ತಪ್ರತಿ ವಿದ್ಯಾರ್ಥಿಗಳ ವೇದಿಕೆ "ಸಿರಿಕಂಠ" ವನ್ನು ೨೦೦೦ ದಿಂದ ಆರಂಭಿಸಿದೆ. ಇದು ಮುಖ್ಯವಾಗಿ ಈ ಕೆಲವು ಚಟುವಟಿಕೆಗಳನ್ನು ನಡೆಸುತ್ತಿದೆ. ಇದರಲ್ಲಿ ಪ್ರಾಚೀನ ಹಸ್ತಪ್ರತಿಗಳ ಅಧ್ಯಯನದಲ್ಲಿ ನುರಿತ ೫೦ಕ್ಕೂ ಹೆಚ್ಚಿನ ಆಸಕ್ತರು, ತಜ್ಞರಿದ್ದಾರೆ.

೧. **ಹಳಗನ್ನಡ ಕಾವ್ಯಾಭ್ಯಾಸ ಶಿಬಿರ** : ಹಳಗನ್ನಡ ಕಾವ್ಯಗಳ ಓದು, ಅರ್ಥಗ್ರಹಿಕೆ ಬೋಧನೆ ಅಧ್ಯಯನಗಳ ಅನುಕೂಲಕ್ಕಾಗಿ ಪುನರ್ಮನನ ಮತ್ತು ಅಭ್ಯಾಸ ತರಗತಿಗಳಂತೆ ನಡೆಯುವ ಈ ಶಿಬಿರವು ಒಂದು ತಿಂಗಳ ಅವಧಿಯದಾಗಿರುತ್ತದೆ.

೨. **ಹಸ್ತಪ್ರತಿ ಸೇವಾ ಕೇಂದ್ರ** : ಅಪೇಕ್ಷಿಸಿದವರಿಗೆ ತಮ್ಮಲ್ಲಿರುವ ಪ್ರಾಚೀನ ಹಸ್ತಪ್ರತಿಗಳನ್ನು ವೈಜ್ಞಾನಿಕವಾಗಿ ಸಂರಕ್ಷಿಸಿ ಕೊಡುವುದಲ್ಲದೆ ಸೂಚಿ, ಸಂಪ್ರತಿ, ಸಂಪಾದನೆ ಇತ್ಯಾದಿ ಸೇವೆಯನ್ನು ನುರಿತ ತಜ್ಞರಿಂದ ಒದಗಿಸಲಾಗುತ್ತದೆ.

೩. **ಹಸ್ತಪ್ರತಿ ಕಾರ್ಯಾಗಾರ** : ಹಸ್ತಪ್ರತಿ ಸಂರಕ್ಷಣೆ ಮತ್ತು ತಿಳುವಳಿಕೆ ಕುರಿತ ಅಲ್ಪಾವಧಿಯ ಕಾರ್ಯಾಗಾರಗಳನ್ನು ಆಹ್ವಾನಿತ ಸಂಸ್ಥೆಗಳ ನೆರವಿನೊಂದಿಗೆ ನಡೆಸುತ್ತದೆ.

೪. **ಮನೆಬಾಗಿಲಿಗೆ ಹಸ್ತಪ್ರತಿ ದರ್ಶನ** : ರಜತೋತ್ಸವದ ಸಂದರ್ಭದಲ್ಲಿ ಆರಂಭಿಸಿದ ಈ ಯೋಚನೆಯಲ್ಲಿ ನಾಡಿನಾದ್ಯಂತ ಶಾಲೆ-ಕಾಲೇಜು, ಸಂಘ ಸಂಸ್ಥೆಗಳು ಆಹ್ವಾನಿಸಿದಲ್ಲಿ ಅವರಲ್ಲಿಗೇ ಹೋಗಿ ಪ್ರಾಚೀನ ಹಸ್ತಪ್ರತಿ ಪ್ರದರ್ಶನವನ್ನು ನಡೆಸಿ ಜಾಗೃತಿ ಉಂಟುಮಾಡಲಾಗುತ್ತಿದೆ.

೫. ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆಯಲ್ಲಿ ಪಿ.ಎಚ್‌ಡಿ. ಮತ್ತು ಎಂ.ಫಿಲ್. ಪದವಿ

ಬಿ.ಎಂ.ಶ್ರೀ. ಪ್ರತಿಷ್ಠಾನದ ಸಂಶೋಧನ ಚಟುವಟಿಕೆಗಳನ್ನು ಗುರುತಿಸಿ ಹಂಪಿ ಕನ್ನಡ

ವಿಶ್ವವಿದ್ಯಾನಿಲಯವು ಸ್ನಾತಕೋತ್ತರ ಸಂಶೋಧನ ಕೇಂದ್ರವನ್ನಾಗಿ ೨೦೦೩ ರಿಂದ ಮಾನ್ಯ ಮಾಡಿದೆ. ಈ ಕೇಂದ್ರದ ಕನಸುಗಾರರೂ ಸಂಸ್ಥಾಪಕರೂ ಪ್ರಸಿದ್ಧ ಸಂಶೋಧಕರೂ ಆಗಿದ್ದ ಪ್ರೊ|| ಎಂ.ವಿ. ಸೀತಾರಾಮಯ್ಯನವರ ಹೆಸರಿನ ಈ ಸ್ನಾತಕೋತ್ತರ ಅಧ್ಯಯನ - ಸಂಶೋಧನ ಕೇಂದ್ರದಿಂದ ಪಿ.ಎಚ್‌ಡಿ. ಮತ್ತು ಎಂ.ಫಿಲ್. ಪದವಿಗಳ ಅಧ್ಯಯನಕ್ಕೆ ಅವಕಾಶ ಕಲ್ಪಿಸಲಾಗಿದೆ, ನಾಡಿನ ಪ್ರಸಿದ್ಧ ವಿದ್ವಾಂಸರ ಮಾರ್ಗದರ್ಶನದಲ್ಲಿ ಅಧ್ಯಯನ ತರಗತಿಗಳು ನಡೆಯುತ್ತಿವೆ. ಪ್ರತಿವರ್ಷ ಮೇ-ಜೂನ್‌ನಲ್ಲಿ ಅರ್ಜಿಗಳನ್ನು ಕರೆಯಲಾಗುವುದು.

೬. ದತ್ತಿ ಉಪನ್ಯಾಸಗಳು -

ಬಿ.ಎಂ.ಶ್ರೀ., ಟಿ.ಎಸ್. ವೆಂಕಣ್ಣಯ್ಯ, ತೀ.ನಂ.ಶ್ರೀ., ಆ.ನೇ. ಉಪಾಧ್ಯೆ, ಡಿ.ಎಲ್.ಎನ್., ಶಂ.ಬಾ. ಜೋಶಿ, ಸೋಸಲೆ ಅಯ್ಯಶಾಸ್ತ್ರಿ, ಎಂ.ವಿ.ಸೀ., ಎಸ್. ಶ್ರೀಕಂಠಯ್ಯ. ಬಿ.ರಾಮಸ್ವಾಮಿ, ಶಾಂತಾಪ್ರಭುಶಂಕರ, ಸಿ.ಕೆ. ನಾಗರಾಜರಾವ್, ಸಮೇತನಹಳ್ಳಿ ರಾಮರಾವ್, ಚಂದ್ರಶೇಖರ ಶರ್ಮ, ವೆಂಕಟರಂಗಪ್ಪ, ಸಾವಿತ್ರಮ್ಮ ಅನಂತರಂಗ ಪ್ರತಿಷ್ಠಾನ, ಟಿ.ಎನ್. ಮಹದೇವಯ್ಯ ಎಂ.ಜಿ. ನಂಜುಂಡಾರಾಧ್ಯ, ಎಂ.ಎ. ಜಯಚಂದ್ರ ಮುಂತಾದ ಗಣ್ಯರನೇಕರ ಹೆಸರಿನಲ್ಲಿರುವ ಸುಮಾರು ೩೦ ದತ್ತಿನಿಧಿಗಳಿಂದ ಪ್ರತಿವರ್ಷ ಸಾಹಿತ್ಯ - ಸಂಸ್ಕೃತಿ - ಸಂಶೋಧನೆ ಕುರಿತು ಮೌಲಿಕ ಉಪನ್ಯಾಸಗಳನ್ನು, ವಿಚಾರಗೋಷ್ಠಿಗಳನ್ನು ನಡೆಸಲಾಗುತ್ತಿದೆ.

೭. ಸಾಹಿತ್ಯ ಪ್ರಶಸ್ತಿಗಳು

ಪ್ರತಿಷ್ಠಾನದಲ್ಲಿರುವ ಕೆಲವು ದತ್ತಿ ನಿಧಿಗಳ ಮೂಲಕ ಈ ಕೆಳಕಂಡ ಸಾಹಿತ್ಯ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ.

೧. ಸಾವಿತ್ರಮ್ಮ ದತ್ತಿ ಮಹಿಳಾ ಮತ್ತು ಮಕ್ಕಳ ಸಾಹಿತ್ಯ ಪ್ರಶಸ್ತಿ : ಒಂದು ವರ್ಷ ಮಹಿಳಾ ಸೃಜನೇತರ ಸಾಹಿತ್ಯಕ್ಕೆ, ಇನ್ನೊಂದು ವರ್ಷ ಮಕ್ಕಳ ಸಾಹಿತ್ಯಕ್ಕೆ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ. ಪ್ರಶಸ್ತಿಯ ಮೊತ್ತ ರೂ. ೧,೦೦೦-೦೦. ಈ ಎರಡೂ ಸಾಹಿತ್ಯ ಪ್ರಕಾರಗಳ ಪುರಸ್ಕಾರಕ್ಕಾಗಿ ಎಂ.ವಿ.ಸೀ. ಅವರು ಇದನ್ನು ೧೯೮೮ರಲ್ಲಿ ಸ್ಥಾಪಿಸಿದ್ದಾರೆ.

೨. ರಾಸ ಸಾಹಿತ್ಯ ವಿಮರ್ಶಾಲೇಖನ ಪ್ರಶಸ್ತಿ : ಸಮೇತನಹಳ್ಳಿ ರಾಮರಾವ್ ಅವರ ಕೃತಿಗಳ ವಿಮರ್ಶೆಯ ಒಂದು ಉತ್ತಮ ಲೇಖನಕ್ಕೆ ಕೊಡುವ ೫೦೦-೦೦ ರೂ.ಗಳ ಈ ಪ್ರಶಸ್ತಿಯನ್ನು ಸ್ವತಃ ಲೇಖಕರು ೧೯೯೫ರಲ್ಲಿ ಸ್ಥಾಪಿಸಿದ್ದಾರೆ.

೩. ಅನಂತರಂಗ ಸಂಶೋಧನಾ ಸಾಹಿತ್ಯ ಪ್ರಶಸ್ತಿ : ಕಟ್ಟೆ ನಾಗರಾಜ್ ಅವರು ತಮ್ಮ ಅನಂತರಂಗ ಪ್ರತಿಷ್ಠಾನದ ಹೆಸರಿನಲ್ಲಿ ೧೯೯೮ರಲ್ಲಿ ಸ್ಥಾಪಿಸಿದ್ದಾರೆ. ಪ್ರತಿವರ್ಷ ಉತ್ತಮ ಸಂಶೋಧನ ಸಾಹಿತ್ಯ ಕೃತಿಗೆ ರೂ. ೧,೦೦೦-೦೦ದ ಮೊತ್ತ ಪ್ರಶಸ್ತಿ ನೀಡಲಾಗುವುದು.

೪. ಎಂ.ವಿ.ಸೀ. ಪುರಸ್ಕಾರ : ಎಂ.ವಿ. ಸೀತಾರಾಮಯ್ಯನವರ ಹೆಸರಿನಲ್ಲಿ ಅವರ ಮಕ್ಕಳು ೨೦೦೨ರಲ್ಲಿ ಸ್ಥಾಪಿಸಿರುವ ಈ ಪ್ರಶಸ್ತಿಯು ಮೊತ್ತ ೫,೦೦೦-೦೦ ರೂ.ಗಳು. ಸೀತಾರಾಮಯ್ಯನವರ ಮುಖ್ಯ ಕಾರ್ಯಕ್ಷೇತ್ರಗಳಾದ ಸೃಜನ ಸಾಹಿತ್ಯ, ಸಂಶೋಧನ ಸಾಹಿತ್ಯ ಮತ್ತು ಸಾಹಿತ್ಯ ಸಂಘಟನೆ - ಈ ಮೂರು ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿರುವ, ಮತ್ತು

ಯಾವುದೇ ಗಣ್ಯಪ್ರಶಸ್ತಿಯನ್ನು ಆ ವರೆಗೆ ಪಡೆಯದಿರುವ, ಅತ್ಯಂತ ಹಿರಿಯ ಸಾಹಿತಿಗಳಿಗೆ ಈ ಪ್ರಶಸ್ತಿಯನ್ನು, ಪ್ರತಿವರ್ಷ ಅನುಕ್ರಮವಾಗಿ ಒಂದು ವಿಭಾಗಕ್ಕೆ ನೀಡಲಾಗುವುದು.

೮. ಸಾಂಸ್ಕೃತಿಕ ಚಟುವಟಿಕೆಗಳು

ಪ್ರತಿಷ್ಠಾನದಲ್ಲಿ ಆಧುನಿಕ ಸಾಹಿತ್ಯವನ್ನು ಪರಿಚಯಿಸುವ ಮತ್ತು ಪ್ರೋತ್ಸಾಹಿಸುವ ಉದ್ದೇಶದಿಂದ ಈ ಕೆಲವು ಸಾಂಸ್ಕೃತಿಕ ಚುಟವಟಿಕೆಗಳನ್ನು ನಡೆಸಲಾಗುತ್ತಿದೆ.

೧. ಬಿ.ಎಂ.ಶ್ರೀ. ಮತ್ತು ಪಿ. ಕಾಳಿಂಗರಾವ್ ಸ್ಮಾರಕ ಅಖಿಲ ಕರ್ನಾಟಕ ಸುಗಮ ಸಂಗೀತ ಸ್ಪರ್ಧೆ : ಪಿ. ಕಾಳಿಂಗರಾವ್ ಬಳಗದ ಸಹಕಾರದೊಂದಿಗೆ ೨೦೦೦ ದಿಂದ, ಭಾವಗೀತೆ ಮತ್ತು ಜನಪದ ಗೀತೆಗಳಲ್ಲಿ ಹಿರಿಯರ ಹಾಗೂ ಕಿರಿಯರ ವಿಭಾಗದಲ್ಲಿ ಈ ಸ್ಪರ್ಧೆಯನ್ನು ನಡೆಸಲಾಗುತ್ತಿದ್ದು ಪ್ರತಿವರ್ಷ ಒಟ್ಟು ೧೬ ಬಹುಮಾನಗಳನ್ನು ನೀಡಲಾಗುತ್ತಿದೆ. ಪ್ರತಿವರ್ಷ ಜನವರಿಯಲ್ಲಿ ಈ ಸ್ಪರ್ಧೆ ನಡೆಯುತ್ತದೆ.

೨. ಸುಗಮ ಸಂಗೀತ ಶಾಲೆ : ಜನಪ್ರಿಯವಾಗಿರುವ ಸುಗಮ ಸಂಗೀತ ಕ್ಷೇತ್ರವನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ೨೦೦೪ ರಿಂದ ರಜತೋತ್ಸವದ ನೆನಪಿಗಾಗಿ ಈ ಸುಗಮ ಸಂಗೀತ ಶಾಲೆಯನ್ನು ಆರಂಭಿಸಲಾಗಿದೆ. ಆರು ತಿಂಗಳ ಅವಧಿಯಲ್ಲಿ ಪ್ರತಿವರ್ಷ ೨ ತಂಡಗಳಲ್ಲಿ ಭಾವಗೀತೆ ತರಗತಿ ನಡೆಯುತ್ತದೆ.

೩. "ತೋರಣ" ಮಕ್ಕಳ ಬೇಸಿಗೆ ಶಿಬಿರ : ಸಾಹಿತ್ಯ ಸಂಸ್ಕೃತಿ ಕಲೆಯಲ್ಲಿ ಅಭಿರುಚಿ ಮೂಡಿಸುವ ಉದ್ದೇಶದಿಂದ ೨೦೦೪ ರಿಂದ ಬೇಸಿಗೆ ರಜೆಯಲ್ಲಿ ಈ ಶಿಬಿರವನ್ನು ಮಕ್ಕಳಿಗಾಗಿ ನಡೆಸಲಾಗುತ್ತಿದೆ.

೪. ಸಿರಿಸಂಗೀತ : ರಜತೋತ್ಸವದ ನೆನಪಿಗಾಗಿ ೨೦೦೪ ರಿಂದ ಆರಂಭಮಾಡಿರುವ ಈ 'ಸಿರಿಸಂಗೀತ' ಪ್ರತಿ ತಿಂಗಳ ಸಂಗೀತ ಕಾರ್ಯಕ್ರಮ ವೇದಿಕೆ. ಜನಪ್ರಿಯವಾಗಿರುವ ಸುಗಮ ಸಂಗೀತ ಕ್ಷೇತ್ರಕ್ಕೆ ಸಾಹಿತ್ಯದ ವ್ಯಾಪಕತೆಯನ್ನು ಒದಗಿಸುವ ಉದ್ದೇಶದಿಂದ ಭಾವಗೀತೆ, ಜನಪದಗೀತೆ, ವಚನ, ಕೀರ್ತನೆ, ತತ್ವಪದ ಮತ್ತು ಗಮಕ ಸಂಗೀತ ಕಾರ್ಯಕ್ರಮಗಳನ್ನು ಅನುಕ್ರಮವಾಗಿ ತಿಂಗಳಿಗೊಂದರಂತೆ ನಡೆಸಲಾಗುವುದು. ಈ ಕಾರ್ಯಕ್ರಮ ಮಾಲೆಯಲ್ಲಿ ಹೊಸ ಹೊಸ ಸಾಹಿತ್ಯವನ್ನು ಸಂಗೀತಕ್ಕೆ ಅಳವಡಿಸುವ ಕಲಾ ತಂಡಗಳಿಗೆ, ವಿಶೇಷವಾಗಿ ಉದಯೋನ್ಮುಖ ಕಲಾವಿದರಿಗೆ ಆದ್ಯತೆ ನೀಡಲಾಗುವುದು.

೫. ಸಂಸ್ಕೃತಿ ಶಿಬಿರ : ಬೆಂಗಳೂರಿನ ಬಿ.ಎಂ.ಶ್ರೀ. ಶತಮಾನ ಭವನದಲ್ಲಿ ಮತ್ತು ಇತರೆಡೆಗಳಲ್ಲಿ ನಡೆಯುವ ಈ ಶಿಬಿರದಲ್ಲಿ ಕನ್ನಡ ನಾಡು ನುಡಿಯ ಬಗ್ಗೆ ಜಾಗೃತಿ ಮೂಡಿಸುವ ಮತ್ತು ಸಂಸ್ಕೃತಿಗಳನ್ನು ಪರಿಚಯಿಸುವ ವಿವಿಧ ಕಾರ್ಯಕ್ರಮಗಳನ್ನು ಒಂದು ವಾರದ ಅವಧಿಯಲ್ಲಿ ರೂಪಿಸಲಾಗುವುದು.

೬. ಬಿ.ಎಂ.ಶ್ರೀ. ವಿದ್ಯಾರ್ಥಿ ಸ್ಪರ್ಧೆಗಳು : ಬೆಳ್ಳೂರು ಶಾಖೆಯಲ್ಲಿರುವ 'ಬಿ.ಎಂ.ಶ್ರೀ. ಪರ್ಯಾಯ ಪಾರಿತೋಷಕ'ಕ್ಕಾಗಿ ಮಂಡ್ಯ ಜಿಲ್ಲೆ ನಾಗಮಂಗಲ ತಾಲೂಕು ಮಟ್ಟದಲ್ಲಿ ವಿದ್ಯಾರ್ಥಿಗಳಿಗಾಗಿ ಪ್ರಬಂಧ, ಚರ್ಚಾ ಸ್ಪರ್ಧೆ, ರಸಪ್ರಶ್ನೆ ಸ್ಪರ್ಧೆಗಳನ್ನು ಸ್ಥಳೀಯ ಸಮಿತಿ ನಡೆಸುತ್ತದೆ. ಪ್ರತಿ ವಿಭಾಗದಲ್ಲೂ ಪ್ರತ್ಯೇಕವಾಗಿ ಮೂರು ಬಹುಮಾನಗಳನ್ನು ನೀಡಲಾಗುತ್ತಿದೆ.

ಪ್ರತಿಷ್ಠಾನದ ಪ್ರಕಟಣೆಗಳು

೧. ಪ್ರಾಚೀನ ಗ್ರಂಥಗಳ ಸಂಪಾದನೆ

1.	ಸರ್ವಜ್ಞ ವಚನಗಳು*	15-00
2.	ಸೂತ ಭಾರತ	15-00
3.	ಶ್ರೀ ಕೃಷ್ಣದೇವರಾಯ ದಿನಚರಿ	10-00
4.	ಹಸ್ತಪ್ರತಿಶಾಸ್ತ್ರ	15-00
5.	ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ : ಭಾಗ-1	20-00
6.	ಮರುನ್ನಂದನ ಶತಕ	5-00
7.	ಚಂದ್ರಚೂಡಾಮಣಿ ಶತಕ	10-00
8.	ಶ್ರೀನಿವಾಸ ಕಲ್ಯಾಣ	10-00
9.	ಕನ್ನಡ ಸಾಹಿತ್ಯದಲ್ಲಿ ಅದ್ವೈತ*	10-00
10.	ಕುಮಾರವ್ಯಾಸ ಭಾರತ ಸಂಗ್ರಹ*	75-00
11.	ಪದ್ಮಿನೀ ಕಲ್ಯಾಣ	15-00
12.	ಅಲಿಗೆ ಕೆಳಗಣ ಮನೆಯ ಹಸ್ತಪ್ರತಿಗಳು*	50-00
13.	ವಾಸವಾಂಬಾ ಪುರಾಣ	150-00
14.	ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ - ಭಾಗ-2 (ಮುದ್ರಣದಲ್ಲಿ)	100-00
15.	ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ - ಭಾಗ-3 (ಮುದ್ರಣದಲ್ಲಿ)	100-00
16.	ಅಲಿಗೆ ಮೇಲಿನ ಮನೆಯ ಹಸ್ತಪ್ರತಿಗಳು	100-00

೨. ದತ್ತಿ ಉಪನ್ಯಾಸ ಮಾಲೆ

1.	ಮೂರು ದತ್ತಿ ಉಪನ್ಯಾಸಗಳು*	10-00
2.	ವೈವಸ್ವತ ಮನು*	5-00
3.	ಸ್ವಾಯಂಭುವ ಮನು : ವೈವಸ್ವತ ಮನು - ತೌಲನಿಕ ಅಧ್ಯಯನ*	5-00
4.	ಮೂರು ದತ್ತಿ ಉಪನ್ಯಾಸಗಳು -1984*	10-00
5.	ದತ್ತಿ ಉಪನ್ಯಾಸಗಳು 1986*	10-00
6.	ದತ್ತಿ ಉಪನ್ಯಾಸಗಳು 1988*	10-00
7.	ಕಾವ್ಯ - ಇತಿಹಾಸ*	10-00
8.	ಶಂಬಾ ಸಾಹಿತ್ಯದಲ್ಲಿ ಗ್ರಾಮದೇವತೆ	15-00
17.	ಮಧುರ ಸ್ಮೃತಿ (ಪ್ರೊ॥ ಬಿ. ರಾಮಸ್ವಾಮಿ ಸಂಸ್ಮರಣ ಸಂಪುಟ)	300-00

೩. ತಿಮ್ಮಪ್ಪದಾಸ ಪ್ರಕಾಶನ ಮಾಲೆ

1.	ಕೀರ್ತನ ಕುಸುಮಾಂಜಲಿ*	10-00
2.	ಧ್ರುವ ಚರಿತ್ರೆ	15-00
3.	ಬೇಟೆರಾಯ ದೀಕ್ಷಿತರ ದೇವರನಾಮಗಳು	25-00
4.	ತಿಮ್ಮಪ್ಪದಾಸರ ಕೀರ್ತನೆಗಳು	75-00
5.	ವೆಂಕಟದಾಸರು ಮತ್ತು ಇತರ ಅದ್ವೈತ ಹರಿದಾಸರ ಕೀರ್ತನೆಗಳು	75-00

೪. ಜನ್ಮಶತಾಬ್ದಿ ಸ್ಮೃತಿಮಾಲೆ

1.	ಮಣಿಹ (ಫ.ಗು. ಹಳಕಟ್ಟಿ ಸಂಸ್ಮರಣ ಸಂಪುಟ)*	50-00
2.	ಶ್ರೀವಾಣಿ (ಸೂಕ್ತಿ ಸಂಗ್ರಹ)*	1-00
3.	ಆಚಾರ್ಯ ಬಿ.ಎಂ.ಶ್ರೀ (ಜೀವನ ಚಿತ್ರ)	5-00
4.	ಕನ್ನಡ ಕಣ್ವ ಬಿ.ಎಂ.ಶ್ರೀ. (ಮಕ್ಕಳಿಗೆ)*	1-50
5.	ಶ್ರೀಯವರ ಆಯ್ದ ಕವನಗಳು*	2-00
6.	ಶ್ರೀನಿಧಿ (ಬಿ.ಎಂ.ಶ್ರೀ. ಸಂಸ್ಮರಣ ಸಂಪುಟ)*	60-00
7.	B.M.S. : The Man and his Mission	50-00
8.	ಶ್ರೀಗಂಧ (ಬಿ.ಎಂ.ಶ್ರೀ. ಶತಮಾನ ಸ್ಮರಣ ಸಂಚಿಕೆ)*	10-00
9.	ಇಂಗ್ಲಿಷ್ ಗೀತೆಗಳು (ಆಂಗ್ಲ ಮೂಲ ಕವನಗಳೊಂದಿಗೆ)	100-00
10.	ಅಶ್ವತ್ಥಾಮ ("ಶ್ರೀ" ನಾಟಕದ ಸರಳಾನುವಾದ)*	6-00
11.	The Improvement of Kannada - B.M.Sri.	6-00
12.	ಪ್ರೊಫೆಸರ್ ಟಿ.ಎಸ್. ವೆಂಕಣ್ಣಯ್ಯ (ಜೀವನ ಚಿತ್ರ)	4-00
13.	ಭಾರತದ ಶ್ರೀಕೃಷ್ಣ (ಎ.ಆರ್.ಕೃ. ಭಾಷಣ)	6-00
14.	Sovenior of Vijayanagar Seminar (ಎಸ್. ಶ್ರೀಕಂಠಯ್ಯ ಶತಾಬ್ದಿ)*	10-00
15.	Early Vijayanagar,Studies, its History & Culture --"--	60-00
16.	ಸಂಗಮರ ಕಾಲದ ವಿಜಯನಗರ (ಅನುವಾದ) --"--	75-00
17.	ಮಾಸ್ತಿ ವೆಂಕಟೇಶ ಅಯ್ಯಂಗಾರ್	15-00
18.	ಬಸವಪ್ಪ ಶಾಸ್ತ್ರಿಗಳು	25-00
19.	ಎಂ.ಆರ್.ಶ್ರೀ. (ಮುದ್ರಣದಲ್ಲಿ)	80-00
20.	ಶತಮಾನ ಸ್ಮರಣೆ - 2004 (ಮುದ್ರಣದಲ್ಲಿ)	80-00
21.	ಶತಮಾನ ಸ್ಮರಣೆ - 2006 (ಮುದ್ರಣದಲ್ಲಿ)	80-00

೫. ಸಹೃದಯಗೋಷ್ಠಿ ಕೃತಿಮಾಲೆ

1.	ಬೇಂದ್ರೆ ಸ್ಮೃತಿ*	5-00
2.	ಮಾಸ್ತಿ ಸ್ಮರಣೆ	15-00
3.	ಎಂ.ವಿ.ಸೀ. ಸಂಸ್ಮರಣೆ*	25-00
4.	ಶಂಬಾ ಕೃತಿ ಸಮೀಕ್ಷೆ	35-00
5.	ನವ್ಯ ಸ್ಫೂರ್ತಿ (ವಿ.ಕೃ. ಗೋಕಾಕ್ ಕುರಿತು)	35-00
6.	ಕಾರಂತ ಕಿರಣ	30-00
7.	ಕುವೆಂಪು ನಮನ (ಮುದ್ರಣದಲ್ಲಿ)	50-00

೬. ದಶಮಾನೋತ್ಸವ ಸ್ಮೃತಿಮಾಲೆ

1.	ಭಾಷಾಂತರ ಕಲೆ*	15-00
2.	ಸೃಜನಶೀಲತೆ ಮತ್ತು ಪಾಂಡಿತ್ಯ	10-00
3.	ಹೊಸಗನ್ನಡದ ವ್ಯಾಕರಣ (ದ್ವಿ.ಮು.)	50-00
4.	ವೈಚಾರಿಕ ಜಾಗೃತಿ (ದ್ವಿ.ಮು.)	21-00
5.	ಹಸ್ತಪ್ರತಿಶಾಸ್ತ್ರ ಪರಿಚಯ*	15-00
6.	ಸಂವಿಧಾನ ಮತ್ತು ಕಾನೂನು	20-00

೭. ಎಂ.ವಿ.ಸೀ. ಸಮಗ್ರ ಸಾಹಿತ್ಯಮಾಲೆ

1.	ಕದಂಬ (ಸಮಗ್ರ ಸಂಶೋಧನ ಲೇಖನಗಳ ಸಂಪುಟ)	100-00
2.	ಕವಿರಾಜಮಾರ್ಗ	100-00
3.	ಕವಿರಾಜಮಾರ್ಗ ವಿವಕ್ಷೆ (ಕವಿರಾಜಮಾರ್ಗ ಕುರಿತ ಲೇಖನಗಳು)	100-00
4.	ಶ್ರೀಕೃಷ್ಣ ಬಾಲಲೀಲೆ : ಭಾಗ-1	380-00
5.	ಶ್ರೀಕೃಷ್ಣ ಬಾಲಲೀಲೆ : ಭಾಗ-2	200-00
6.	ಆಧುನಿಕ ಸಾಹಿತ್ಯ ಸಮೀಕ್ಷೆ : ಭಾಗ-1	150-00
7.	ಪ್ರಾಚೀನ ಸಾಹಿತ್ಯ ಸಮೀಕ್ಷೆ (ಅಚ್ಚಿನಲ್ಲಿ)	200-00

೮. ದ್ವಿದಶಮಾನೋತ್ಸವ ಗ್ರಂಥಮಾಲೆ

1.	ಲೋಚನ ಲೇಖನ ಸೂಚಿ	15-00
2.	ಅಂತರಶಿಸ್ತೀಯ ಸಂಶೋಧನ ವಿಧಿವಿಧಾನ* (ಮುದ್ರಣದಲ್ಲಿ)	50-00
3.	ಸೋಸಲೆ ಅಯ್ಯಶಾಸ್ತ್ರಿಗಳು	25-00
4.	ಸೋಸಲೆ ಅಯ್ಯಶಾಸ್ತ್ರಿಗಳ ಸಾಹಿತ್ಯ	45-00
5.	ನಾಲ್ವರು ಸಾಹಿತ್ಯೋಪಾಸಕರು	40-00

೯. ರಜತೋತ್ಸವ ಗ್ರಂಥಮಾಲೆ

1.	ಸಾಹಿತ್ಯೋಪಾಸಕರು (19ನೇ ಶತಮಾನದ ಸಾಹಿತಿ ವಿದ್ವಾಂಸರ ಸಾಧನೆಗಳು)	200-00
2.	ಗ್ರಂಥಸಂಪಾದನ ಪರಿಭಾಷಾಕೋಶ	36-00
3.	ಶ್ರೀಕೃಷ್ಣ ಲೀಲಾಗಾನಂ	100-00
4.	ಕನ್ನಡ ತಿರುಕ್ಕುರಳ್ (ಅನುವಾದ)	100-00
5.	ರಜತಸಿರಿ (ಸ್ಮರಣ ಸಂಚಿಕೆ)*	-
6.	ಬಿ.ಎಂ.ಶ್ರೀ. (ಕಿರು ಪರಿಚಯ ಮತ್ತು ಸೂಕ್ತಿಗಳು)	20-00
7.	ಎಂ.ವಿ.ಸೀ. (ಕಿರು ಪರಿಚಯ ಮತ್ತು ಸೂಕ್ತಿಗಳು)	20-00
8.	ಬಿ.ಎಂ.ಶ್ರೀ. ಪ್ರತಿಷ್ಠಾನ - 25 (ಮುದ್ರಣದಲ್ಲಿ)	30-00

೧೦. ಇತರರ ಪ್ರಕಟಣೆಗಳು

(ಇವುಗಳು ದಾನವಾಗಿ ಬಂದಿದ್ದು, ಮಾರಾಟದ ಹಣ ಪೂರ್ತಿ ಪ್ರತಿಷ್ಠಾನಕ್ಕೆ ಸೇರುತ್ತದೆ)

2.	ಚಿಂತನ ಮಂಥನ - (ಎಚ್.ಎಸ್. ಪಾರ್ವತಿ ಅವರ ಕೊಡುಗೆ)	10-00
3.	ನವ ದಂಪತಿಗಳು - (ಕೈವಾರ ರಾಜಾರಾಯರ ಕೊಡುಗೆ)	10-00
6.	ಜಾಬಾಲಾ - (ಕೌಂಡಿನ್ಯ ಅವರ ಕಾದಂಬರಿ)	18-00
7.	ಬಾಳು (ಕೌಂಡಿನ್ಯ ಅವರ ಕಾದಂಬರಿ)	25-00
8.	ಕಾವ್ಯಶಾಸ್ತ್ರ ವಿನೋದ - (ವಿ.ಸೀ. ಸಂಪದ ಅವರ ಗ್ರಂಥದಾನ)	55-00

ಅ. ಪ್ರೊ॥ ಎಂ.ವಿ.ಸೀ. ಅವರ ಪುಸ್ತಕಗಳು

1.	ಶೃಂಗಾರ ವಿಹಾರ	10-00
2.	ಹಿತಚಿಂತನ	10-00
3.	ಜೈಮಿನಿ ಭಾರತ ಸಮೀಕ್ಷೆ	5-00
4.	ಕನ್ನಡಮ್ಮನ ಕೊರಗು	8-00
5.	ಸಾಹಿತ್ಯ ಮತ್ತು ಚಿತ್ರಕಲೆ	5-00
6.	ಹರಿದಾಸರು ಮತ್ತು ಅನುಭಾವ ಕವಿಗಳು	10-00
7.	ಪ್ರತಿಮಾಗೃಹ	20-00
8.	ಗೀತಭಾರತಿ	5-00
9.	ಮೊದಲ ಹೆಜ್ಜೆ	5-00
10.	ಮಾದನ ಮಗಳು	45-00
11.	ನಿಲ್ದಾಣಗಳ ನಡುವೆ	20-00
12.	ನಾಡೋಜ ಬಿ.ಎಂ.ಶ್ರೀ.	5-00
13.	ಕಾವ್ಯಾಲಾಪ	8-00
14.	ಕರುಣೆಯ ಕುಡಿ	8-00

ಆ. ಸಮೇತನಹಳ್ಳಿ ರಾಮರಾಯರ ಪುಸ್ತಕಗಳ ಕೊಡುಗೆ

1.	ಶಾಂತಲಾ	50-00
2.	ಪ್ರಾಣವೀಣೆ	5-00
3.	ಶಿಲ್ಪ ಸಂಗೀತ	5-00
4.	ತಲಕಾಡುಗೊಂಡ	5-00
5.	ಪರಶುರಾಮ	65-00
6.	ಈಸಬೇಕು	15-00
7.	ಅತ್ತಿಮಬ್ಬೆ	150-00
8.	ಉದಯೋದ್ಯಾನ	30-00
9.	ಶ್ರೀ ಕೃಷ್ಣ ಮಾನಸ	50-00

ಮಾರಾಟ ನಿಯಮಗಳು ಪುಸ್ತಕ ವ್ಯಾಪಾರಿಗಳಿಗೆ

2,000 ರೂ.ಗಳವರೆಗೆ	:	ಶೇ. 33 1/3ರಷ್ಟು ರಿಯಾಯಿತಿ
2,000 ರೂ.ಗಳ ಮೇಲ್ಪಟ್ಟು	:	ಶೇ. 40ರಷ್ಟು ರಿಯಾಯಿತಿ
5,000 ರೂ.ಗಳ ಮೇಲ್ಪಟ್ಟು	:	ಶೇ. 50ರಷ್ಟು ರಿಯಾಯಿತಿ

ಸಂಘ-ಸಂಸ್ಥೆ, ಗ್ರಂಥಾಲಯಗಳಿಗೆ

ಎಷ್ಟು ಕೊಂಡರೂ ಶೇ. 10 ರಿಂದ 15ರವರೆಗೆ ರಿಯಾಯಿತಿ ಇದೆ.

ಸೂಚನೆ : ಎಲ್ಲ ಪುಸ್ತಕಗಳಿಗೂ ಪ್ರತಿಷ್ಠಾನದ ಸದಸ್ಯರಿಗೆ ಶೇಕಡ 50ರಷ್ಟು ರಿಯಾಯಿತಿ
* ಪ್ರತಿಗಳು ಮುಗಿದಿವೆ.

ಬಿ.ಎಂ.ಶ್ರೀ. ಕಲಾಭವನದಲ್ಲೊಂದು ಸುಸಜ್ಜಿತ ಸಭಾಗೃಹ ಎಂ.ವಿ.ಸೀ. ಸಭಾಂಗಣ

150 ರಿಂದ 200 ಜನರಿಗೆ ಸ್ಥಳಾವಕಾಶ, ಧ್ವನಿ - ಬೆಳಕಿನ ಸೌಲಭ್ಯ ಇರುವ ಈ ಸಭಾ ಭವನ ಸಾಹಿತ್ಯ - ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಅನುಕೂಲಕರವಾಗಿದೆ.

ಉಪನ್ಯಾಸ, ವಿಚಾರಗೋಷ್ಠಿ, ಪುಸ್ತಕ ಬಿಡುಗಡೆ, ಕವಿಗೋಷ್ಠಿ, ಸಭೆ, ಸಂವಾದ, ಸಂಗೀತ, ನೃತ್ಯ ಮುಂತಾದ ವೈವಿಧ್ಯಮಯ ಕಾರ್ಯಕ್ರಮಗಳಿಗೆ ಸಾಂಕೇತಿಕ ಸೇವಾ ಶುಲ್ಕದ ಮೇರೆಗೆ ಸಾರ್ವಜನಿಕರು, ಸಂಘ-ಸಂಸ್ಥೆಗಳಿಗೆ ನೀಡಲಾಗುವುದು.

ಸೇವಾ ಶುಲ್ಕದ ವಿವರ

	ಸಾಹಿತ್ಯ ಕಾರ್ಯಕ್ರಮ	ಸಾಂಸ್ಕೃತಿಕ ಉದ್ದೇಶ
ಅರ್ಧ ದಿನಕ್ಕೆ	ರೂ. 750-00	ರೂ. 1,000-00
ಪೂರ್ತಿ ದಿನಕ್ಕೆ	ರೂ. 1,500-00	ರೂ. 2,000-00

-: ಸಂಪರ್ಕ ವಿಳಾಸ :-
ಗೌರವಕಾರ್ಯದರ್ಶಿ
ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
ಬಿ.ಎಂ.ಶ್ರೀ. ಕಲಾ ಭವನ
3ನೇ ಮುಖ್ಯ ರಸ್ತೆ, ನರಸಿಂಹರಾಜ ಕಾಲೋನಿ, ಬೆಂಗಳೂರು-560 019.
ದೂರವಾಣಿ : 2661 5877

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನಕ್ಕೆ ನೀವೂ ಈ ರೀತಿ ಸಹಾಯ ಮಾಡಬಹುದು.

ಅ. ಸದಸ್ಯರಾಗುವುದರ ಮೂಲಕ :

ವಾರ್ಷಿಕ ೫೦-೦೦ ರೂ. ಆಜೀವ ೫೦೦-೦೦ ರೂ.

ದಾನಿ ೫,೦೦೦-೦೦ ರೂ. ವಿಶೇಷ ದಾನಿ ೧೦,೦೦೦-೦೦ ರೂ.

ಆ. ದತ್ತಿನಿಧಿಗಳನ್ನು ಸ್ಥಾಪಿಸುವ ಮೂಲಕ : ಹಿರಿಯ ಸಾಹಿತಿ - ವಿದ್ವಾಂಸರ ಹೆಸರಿನಲ್ಲಿ ಸಾಹಿತ್ಯ - ಸಂಸ್ಕೃತಿ ಅಧ್ಯಯನ - ಉಪನ್ಯಾಸ - ಪ್ರಶಸ್ತಿಗಳಿಗಾಗಿ ಈ ದತ್ತಿನಿಧಿಗಳನ್ನು ಸ್ಥಾಪಿಸಬಹುದು. ಸದ್ಯದ ಬ್ಯಾಂಕ್‌ಗಳ ಬಡ್ಡಿದರದ ಹಿನ್ನೆಲೆಯಲ್ಲಿ ಕನಿಷ್ಠ ೫೦,೦೦೦-೦೦ ರೂ.ಗಳ ಠೇವಣಿ ಇಡಬೇಕಾಗುತ್ತದೆ.

ಇ. ಪ್ರತಿಷ್ಠಾನದ ಚಟುವಟಿಕೆಗಳಿಗೆ ಧನಸಹಾಯದ ಮೂಲಕ : ನೀವು ನೀಡಬಹುದಾದ ಯಾವುದೇ ಪ್ರಮಾಣದ ಯಥಾಶಕ್ತಿದಾನವನ್ನು ಕೃತಜ್ಞತೆಯಿಂದ ಸ್ವೀಕರಿಸುವುದಲ್ಲದೆ ಉದ್ದೇಶಿತ ಕಾರ್ಯಕ್ಕಾಗಿಯೇ ವಿನಿಯೋಗಿಸಲಾಗುವುದು.

ಈ. ಕಚೇರಿ-ಗ್ರಂಥಾಲಯಗಳಿಗೆ ಬೇಕಾಗುವ ಪೀಠೋಪಕರಣಗಳ ದಾನದ ಮೂಲಕ : ಪ್ರತಿಷ್ಠಾನ ಸಂಪೂರ್ಣ ಸ್ವಯಂ ಸೇವಾಸಂಸ್ಥೆಯಾಗಿದ್ದು ಕಚೇರಿ ಮತ್ತು ಭವನಗಳ ನಿರ್ವಹಣೆಯನ್ನು ಸ್ವಯಂ ಸೇವಕರ ಮತ್ತು ದಾನಿಗಳ ಸಹಾಯ ಸಹಕಾರಗಳಿಂದ ಮಾಡುತ್ತಿರುವುದರಿಂದ ಉಪಕರಣಗಳ ರೂಪದಲ್ಲೂ ದಾನಗಳನ್ನು ನೀಡಬಹುದು.

ಉ. ಪುಸ್ತಕ - ಹಸ್ತಪ್ರತಿ - ಪತ್ರಗಳ ದಾನದ ಮೂಲಕ : ಪ್ರಾಚೀನ ಹಸ್ತಪ್ರತಿಗಳ ಸಂಗ್ರಹ - ಸಂರಕ್ಷಣೆ ಪ್ರತಿಷ್ಠಾನದ ಬಹುಮುಖ್ಯ ಚಟುವಟಿಕೆ. ನಾಡಿನ ಅಮೂಲ್ಯ ಆಸ್ತಿಯಾದ ಈ ಹಸ್ತಪ್ರತಿಗಳು, ಓಲೆಗರಿ, ಕಾಗದ, ಪತ್ರಗಳ ರೂಪದಲ್ಲಿರುತ್ತದೆ. ಇವುಗಳಿಂದ ಪ್ರಾಚೀನ ಸಾಹಿತ್ಯ ಸಂಸ್ಕೃತಿಯ ಅಧ್ಯಯನ ಸಾಧ್ಯವಾಗುತ್ತದೆ. ಇವುಗಳನ್ನು ಮುಂದಿನ ಪೀಳಿಗೆಗೆ ಉಳಿಸಿ ಬೆಳೆಸುವ ಜವಾಬ್ದಾರಿ ಇಂದಿನ ಪೀಳಿಗೆಯವರಾದ ನಮ್ಮ ಮೇಲಿರುತ್ತದೆ. ಆದ್ದರಿಂದ ಹಸ್ತಪ್ರತಿಗಳನ್ನು ಅವುಗಳ ಮೂಲರೂಪದಲ್ಲೇ ಉಳಿಸಿ ರಕ್ಷಿಸುವ ಕಾರ್ಯವನ್ನು ಪ್ರತಿಷ್ಠಾನ ನಿಷ್ಠೆಯಿಂದ ಮಾಡುತ್ತಿದೆ. ಇಂತಹ ಹಸ್ತಪ್ರತಿಗಳು ನಿಮ್ಮಲ್ಲಿದ್ದರೆ, ಹಾಳುಮಾಡದೆ, ನಿರ್ಲಕ್ಷಿಸದೆ ದಾನವಾಗಿ ನೀಡಬಹುದು. ಮೌಲಿಕ ಪುಸ್ತಕಗಳನ್ನೂ ಸಾಹಿತಿ - ಗಣ್ಯರ ಪತ್ರ - ಹಸ್ತ ಪ್ರತಿಗಳನ್ನು ಪ್ರತಿಷ್ಠಾನಕ್ಕೆ ದಾನಮಾಡಬಹುದು.

ಊ. ಸ್ವಯಂಸೇವಕರಾಗಿ ಸಹಕರಿಸುವ ಮೂಲಕ : ಪ್ರತಿಷ್ಠಾನದಲ್ಲಿ ಕಚೇರಿ, ಗ್ರಂಥಾಲಯ, ಸಭಾಂಗಣ ಮತ್ತು ವಿವಿಧ ಕಾರ್ಯಕ್ರಮ ಚಟುವಟಿಕೆಗಳಲ್ಲಿ ಸ್ವಯಂಸೇವಕರಾಗಿ ಸಹಕರಿಸುವ ಮೂಲಕವೂ ಪ್ರತಿಷ್ಠಾನ ನಡೆಸುತ್ತಿರುವ 'ಕನ್ನಡ ಕೈಂಕರ್ಯ' ದಲ್ಲಿ ಸೇವೆಸಲ್ಲಿಸಬಹುದು.

ಋ. ಪುಸ್ತಕಗಳನ್ನು ಕೊಳ್ಳುವ ಮೂಲಕ : ಪ್ರತಿಷ್ಠಾನದ ಪ್ರಕಟನೆಗಳು ಕನ್ನಡ ಸಾಹಿತ್ಯ ಸಂಸ್ಕೃತಿಯ ಅಧ್ಯಯನದ ಮೌಲಿಕ ಗ್ರಂಥಗಳಾಗಿದ್ದು ಅವುಗಳನ್ನು ಸ್ವಂತಕ್ಕೆ, ಸ್ನೇಹಿತರಿಗೆ, ಸಂಘ - ಸಂಸ್ಥೆ, ಗ್ರಂಥಾಲಯಗಳಿಗೆ ಕೊಳ್ಳುವ ಮೂಲಕ ಸಹಕರಿಸಬಹುದು.

ಜಿ. ನಾರಾಯಣ ಗೌರವಾಧ್ಯಕ್ಷರು	ಡಾ॥ ಟಿ. ವಿ. ವೆಂಕಟಾಚಲಶಾಸ್ತ್ರಿ ಅಧ್ಯಕ್ಷರು
ಎಸ್.ವಿ. ಶ್ರೀನಿವಾಸರಾವ್ ವ್ಯವಸ್ಥಾಪಕ ಕಾರ್ಯದರ್ಶಿ	ಪ್ರೊ॥ ನಾ. ಗೀತಾಚಾರ್ಯ ಗೌರವಕಾರ್ಯದರ್ಶಿ

ಸತ್ಯಶ್ರೀ ಪ್ರಿಂಟರ್ಸ್ (ಪ್ರೈ) ಲಿ., ಬೆಂಗಳೂರು-560 018. ದೂರವಾಣಿ : 2242 5736

ಆಕರ ಗ್ರಂಥಗಳು

1. **ಹಸ್ತಪ್ರತಿ ಶಾಸ್ತ್ರ** : ಸಂ : ಪ್ರೊ.ಎಂ.ವಿ.ಸೀತಾರಾಮಯ್ಯ, ಡಾ॥ ಎಂ.ಚಿದಾನಂದ ಮೂರ್ತಿ
ಪ್ರ : ಬಿ.ಎಂ.ಶ್ರೀ ಪ್ರತಿಷ್ಠಾನ,
ವರ್ಷ : 1981

2. **ಹಸ್ತಪ್ರತಿಶಾಸ್ತ್ರ ವಿವೇಚನೆ** : ಲೇ : ಡಾ॥ ನಾ.ಗೀತಾಚಾರ್ಯ
ಪ್ರ : ಸ್ನೇಹನಿಧಿಬಳಗ,
ವರ್ಷ : 2000

3. **ರಜತಸಿರಿ : 1979-2004** : ಸಂ : ಎಸ್.ವಿ.ಶ್ರೀನಿವಾಸರಾವ್ ಡಾ॥ ನಾ.ಗೀತಾಚಾರ್ಯ
ಪ್ರ : ಬಿ.ಎಂ.ಶ್ರೀ ಪ್ರತಿಷ್ಠಾನ
ವರ್ಷ : 2004

4. **ಕನ್ನಡ ಹಸ್ತಪ್ರತಿಗಳ ಇತಿಹಾಸ** : ಲೇ : ಎಚ್.ದೇವೀರಪ್ಪ
ಪ್ರ : ಕನ್ನಡ ಸಾಹಿತ್ಯ ಪರಿಷತ್ತು
ವರ್ಷ : 2004

5. **ಮಣಿಹ** : ಪ್ರಧಾನ ಸಂ : ಡಾ॥ ಸಿದ್ಧಯ್ಯ ಪುರಾಣಿಕ
ಸಂ : ಡಾ॥ ಆರ್.ಶೇಷಾಶಾಸ್ತ್ರಿ ಮತ್ತು ಪ್ರೊ.ಎಂ.ವಿ.ಸೀ.
ಪ್ರ : ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ
ವರ್ಷ : 1981

6. **ಕನ್ನಡ ಗ್ರಂಥ ಸಂಪಾದನೆ** : ಲೇ : ಡಾ॥ ಡಿ.ಎಲ್.ಎನ್.
ಪ್ರ : ಡಿ.ವಿ.ಕೆ.ಪ್ರಕಾಶನ, ಮೈಸೂರು
ವರ್ಷ : 1964

7. **ಪ್ರಾಚೀನ ಹಸ್ತಪ್ರತಿಗಳು** : ಲೇ : ಎಚ್.ಎಲ್.ಎನ್.ಭಾರತಿ
ಪ್ರ : ಪ್ರಸಾರಾಂಗ, ಮೈಸೂರು, ವಿ.ವಿ.ಮೈಸೂರು
ವರ್ಷ : 1971

8. **ಹಸ್ತಪ್ರತಿಶಾಸ್ತ್ರ ಪರಿಚಯ** : ಲೇ : ಬಿ.ಎಸ್.ಸಣ್ಣಯ್ಯ
ಪ್ರ : ಬಿ.ಎಂ.ಶ್ರೀ
ವರ್ಷ : 1992

9. **ಗ್ರಂಥಸಂಪಾದನಾ ವಿವಕ್ಷೆ** : ಲೇ : ಡಾ॥ ವೈ.ಸಿ.ಭಾನುಮತಿ
ಪ್ರ : ರಾಜ್ ಪ್ರಕಾಶನ, ಮೈಸೂರು
ವರ್ಷ : 1992

10. **ಕನ್ನಡ ಹಸ್ತಪ್ರತಿಶಾಸ್ತ್ರ** : ಲೇ : ಡಾ॥ ಎಂ.ಎಂ.ಕಲಬುರ್ಗಿ
ಪ್ರ : ಸ್ನೇಹ ಪ್ರಕಾಶನ, ಬೆಂಗಳೂರು
ವರ್ಷ : 1993

11. **ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ** : ಲೇ : ಡಾ॥ ಬಿ.ಕೆ.ಹೀರೇಮಠ್

12. **ಭಾರತೀಯ ಗ್ರಂಥಸಂಪಾದನೆ** : ಲೇ : ಎಸ್.ಎಂ.ಕತ್ರೆ
ಪ್ರ : ವಸಂತ ಪ್ರಕಾಶನ, ಬೆಂಗಳೂರು
ವರ್ಷ : 2003

13. **ಗ್ರಂಥಸಂಪಾದನಾ ಪರಿಭಾಷಾಕೋಶ** : ಲೇ : ಡಾ॥ ಟಿ.ವಿ.ವೆಂಕಟಾಚಲಾಶಾಸ್ತ್ರಿ.
ಪ್ರ : ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ
ವರ್ಷ : 2004

14. **ಕನ್ನಡ ಹಸ್ತಪ್ರತಿ ರಚನೆ** : ಲೇ : ಎಸ್.ಎಸ್.ಅಂಗಡಿ
ವರ್ಷ : 2006

15. **ಹಸ್ತಪ್ರತಿ ವ್ಯಾಸಾಂಗ–1** : ಸಂ : ಪ್ರೊ. ಎ.ವಿ.ನಾವಡ
ಡಾ॥ ಎಸ್.ಎಸ್.ಅಂಗಡಿ
ಪ್ರ : ಪ್ರಸಾರಾಂಗ
ವರ್ಷ : 2002

16. **ಹಸ್ತಪ್ರತಿ ವ್ಯಾಸಾಂಗ–2** : ಸಂ : ಡಾ॥ ವಿರೇಶ್ ಬಡಿಗೇರ,
ಡಾ॥ ಕೆ.ರವೀಂದ್ರನಾಥ.
ಪ್ರ : ಪ್ರಸಾರಾಂಗ
ವರ್ಷ : 2002

17. ಹಸ್ತಪ್ರತಿ ವ್ಯಾಸಾಂಗ-3 : ಸಂ : ಡಾ.ವಿರೇಶ್ ಬಡಿಗೇರ,
ಎಸ್.ಆರ್.ಚನ್ನವೀರಪ್ಪ
ಪ್ರ : ಪ್ರಸಾರಾಂಗ
ವರ್ಷ : 2002

18. ಬಿ.ಎಂ.ಶ್ರೀ : ಲೇ : ಪ್ರೊ.ಡಿ.ಲಿಂಗಯ್ಯ
(ವ್ಯಕ್ತಿಚಿತ್ರ ಮತ್ತು ಸೂಚಿಗಳು) ಪ್ರ : ಬಿ.ಎಂ.ಶ್ರೀ
ವರ್ಷ : 2005

19. ಎಂ.ವಿ.ಸೀ : ಲೇ : ಎಸ್.ವಿ.ಶ್ರೀನಿವಾಸ ರಾವ್
(ವ್ಯಕ್ತಿ ಚಿತ್ರ ಮತ್ತು ಸೂಚಿಗಳು) ಪ್ರ : ಬಿ.ಎಂ.ಶ್ರೀ
ವರ್ಷ : 2006

20. ಗ್ರಂಥಋಣ : ಲೇ : ಬಿ.ಎಸ್.ಸಣ್ಣಯ್ಯ

21. ಗ್ರಂಥಾಲಯ ಒಂದು ಅಧ್ಯಯನ : ಲೇ : ಕೆ.ಎಸ್.ದೇಶಪಾಂಡೆ

22. ಗ್ರಂಥಸಂಪಾದನೆ : ಲೇ : ಸೀತರಾಮ್ ಜಾಗೀರ್‌ದಾರ್

23. ಭಾರತೀಯ ಗ್ರಂಥ ಸಂಪಾದನೆ-ಕನ್ನಡಕ್ಕೆ : ಮೂಲ ಲೇ : ಡಾ.ಡಿ.ಎಲ್.ಎನ್
ಡಾ॥ಎನ್.ಎಸ್.ಲಕ್ಷ್ಮೀನಾರಾಯಣಭಟ್

24. ಕಂಠಪತ್ರ : ಲೇ : ಎಫ್.ಟಿ.ಹಳ್ಳಿಕೇರಿ

25. ಅಲಿಗೆ ಕೆಳಗಣ ಮನೆಯ ಹಸ್ತಪ್ರತಿಗಳು : ಲೇ : ಎ.ಆರ್.ಗುರು
ಪ್ರ : ಬಿ.ಎಂ.ಶ್ರೀ

26. ಅಲಿಗೆ ಮೇಲಿನ ಮನೆಯ ಹಸ್ತಪ್ರತಿಗಳು : ಲೇ : ಎ.ಆರ್.ಗುರು
ಪ್ರ : ಬಿ.ಎಂ.ಶ್ರೀ

27. ಸುಕೃತಿ : ಲೇ : ಪ್ರೊ.ಟಿ.ಕೇಶವಭಟ್ಟರ ಸಂಸ್ಮರಣಗ್ರಂಥ
ಸಂ : ಡಾ॥ಪಾದೆಕಲ್ಲು ವಿಷ್ಣುಭಟ್ಟ
ವರ್ಷ : 2006